


ಉದಾರಚರಿತರು ಉದಾತ್ತಪ್ರಸಂಗಗಳು

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಉದಾರಚರಿತರು
ಉದಾತ್ತಪ್ರಸಂಗಗಳು

ಎಂ. ವಿ. ಸೀ. ಸಂಶೋಧನಾ ಕೇಂದ್ರ.

ಎಂ. ವಿ. ಅರುಣ ಸ್ವಂತ ಪ್ರತಿ

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

25-01-2023.

ವಿ. ಸೀ. ಸಂಪದ

ರಾಜೀವನಗರ, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085

UDĀRACHARITARU – UDĀTTAPRASANGAGALU : A collection of episodes from the lives of noble personalities, Retold by Dr. T. V. Venkatachala Sastry and Published by V. Si. Sampada No. 25, 'Vasundhara', 'C' Cross, Rajivnagar, Banashankari 3rd Stage, 4th Phase, Bangalore–560 085

Pages : xvi + 140

Price : Rs. 85/-

First Edition : August, 2002

ವಿ.ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ), ನಂ. 25, 'ವಸುಂಧರಾ'
'ಸಿ' ಕ್ರಾಸ್, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್
ಬೆಂಗಳೂರು–560 085

ಮುದ್ರಣ :
ನೇತ್ರಾ ಪ್ರಿಂಟರ್ಸ್
ಬೆಂಗಳೂರು–560 018

ಅರಿಕೆ

ಈ ಪುಟ್ಟ ಪುಸ್ತಕವನ್ನು 'ಉದಾರ ಚರಿತರು-ಉದಾತ್ತ ಪ್ರಸಂಗಗಳು' ಎಂಬುದಾಗಿ ಕರೆದಿದೆ. ಇದು ಒಂದು ಪ್ರಸಂಗ ಸಂಕಲನ. ಇದರ ಸಲುವಾಗಿ ೬೮ ಆಕರಗಳನ್ನು ಬಳಸಿದೆ. ಈ ಆಕರಗಳು ಕನ್ನಡ ನಾಡಿನ ಮಹನೀಯರ ವ್ಯಕ್ತಿಚರಿತ್ರೆಗಳು; ಇವುಗಳಲ್ಲಿ ಜೀವನಚರಿತ್ರೆಗಳಿವೆ, ಆತ್ಮಕಥೆಗಳಿವೆ, ಅಭಿನಂದನ ಮತ್ತು ಸ್ಮರಣಗ್ರಂಥಗಳಿವೆ. ಆಕರಗಳಿಗೆ ನಾನು ನನ್ನ ಸ್ವಂತ ಪುಸ್ತಕಭಂಡಾರವನ್ನೇ ವಿಶೇಷವಾಗಿ ಅವಲಂಬಿಸಿದ್ದೇನೆ. ಇಲ್ಲಿ ಸೇರಿರುವುವಲ್ಲದೆ ಇನ್ನೂ ಹಲವು ಪ್ರಸಂಗಗಳನ್ನು ಅನ್ಯ ಹಾಗೂ ಸಾರ್ವಜನಿಕ ಪುಸ್ತಕ ಭಂಡಾರಗಳಿಂದ ಸಂಕಲಿಸುವುದು ಸಾಧ್ಯವಿದ್ದಿತಾದರೂ ಅನಿರ್ದಿಷ್ಟಕಾಲದ ವರೆಗೆ ಈ ಸಂಕಲನಕಾರ್ಯವನ್ನು ನಾನು ಮುಂದುವರಿಸುವಂತಿರಲಿಲ್ಲ. ಈ ಪುಸ್ತಕ ಪುನರ್ಮುದ್ರಣದ ಯೋಗವನ್ನು ಪಡೆದಾಗ ಅದನ್ನು ಸ್ವಲ್ಪ ಮಟ್ಟಿಗೆ ಮಾಡಬಹುದಾಗಿದೆ.

ಪುಸ್ತಕದ ರಚನೆ ಮನಸ್ಸಿಗೆ ಬಂದ ಮೇಲೆ ಸಾಮಗ್ರಿಯ ಸಂಗ್ರಹ ಸಂಕಲನಗಳಿಗಾಗಿ ನಾನು ಆಮೂಲಾಗ್ರವಾಗಿ ಓದಿದ ಕೃತಿಗಳು ಸುಮಾರು ೧೫೦-೨೦೦ ಆದರೂ ಇರಬಹುದು. ಆದರೆ ಅವುಗಳಲ್ಲಿ ನನ್ನ ಉದ್ದೇಶಕ್ಕೆ ಒದಗಿದವು ೬೮ ಕೃತಿಗಳು ಮಾತ್ರ. ಸ್ವಾರಸ್ಯವೆಂದರೆ, ಸಂಕಲನಕಾರ್ಯವನ್ನು ಎಲ್ಲಿಯೋ ಒಂದು ಕಡೆ ನಿಲ್ಲಿಸಬೇಕೆಂದು ನಾನು ಯೋಚಿಸಿದಾಗ, ನನ್ನಲ್ಲಿದ್ದ ಆಕರಸಾಮಗ್ರಿಯೂ ಮುಗಿದಿತ್ತು; ವಯಸ್ಸು ೬೮ರ ಗಡಿಯನ್ನು ದಾಟಿತ್ತು; ಬರಹಗಳ ಮೊತ್ತ ೧೦೧ ಎಂಬ ಸಂಖ್ಯೆಯನ್ನು ಮುಟ್ಟಿತ್ತು.

ಈ ಸಂಕಲನದಲ್ಲಿಯ ಪ್ರಸಂಗಗಳಿಗೆ ಕಾರಣರಾದ ವ್ಯಕ್ತಿಗಳೆಲ್ಲ ಮಹನೀಯರು; ಇವರಲ್ಲಿ ಹಲವರು ಪರಿಚಿತರು, ಪ್ರಸಿದ್ಧರು; ಕೆಲವರು ಅಪರಿಚಿತರು, ಅಪ್ರಸಿದ್ಧರು. ಇಲ್ಲಿ ವ್ಯಕ್ತಿಗಳ ವಯಸ್ಸು ವಿದ್ಯೆ ಸ್ಥಾನ ಸಾಧನೆ ಖ್ಯಾತಿ ಇಂಥವುಗಳಿಗಿಂತ ಉದಾತ್ತ ಮಾನವೀಯ ಮೌಲ್ಯಗಳಿಗೆ ಪ್ರಾಶಸ್ತ್ಯ ದೊರೆತಿರುವ ಪ್ರಸಂಗಗಳೇ ಮುಖ್ಯವಾದವು. ಈ ಮೌಲ್ಯಗಳು ಪ್ರೀತಿ ವಿಶ್ವಾಸಗಳು, ಭಕ್ತಿ ವಾತ್ಸಲ್ಯಗಳು, ಶೀಲ ಶಿಸ್ತುಗಳು, ಪರಾನುಕಂಪೆ, ಕಷ್ಟಸಹಿಷ್ಣುತೆ, ಧರ್ಮಸಾಮರಸ್ಯ, ಸಹಾಯಬುದ್ಧಿ, ಸಭ್ಯತೆ, ಸಾತ್ತ್ವಿಕತೆ, ಸ್ನೇಹಪರತೆ, ಪ್ರಸನ್ನತೆ, ಸಂಯಮ, ಗುರು ಹಿರಿಯರಲ್ಲಿ ವಿನಯ ವಿಧೇಯತೆಗಳು, ಕಾಲನಿಷ್ಠೆ, ಸಾಮಾಜಿಕ ತತ್ತ್ವಬದ್ಧತೆ, ನಿರ್ಮೋಹಿತ್ವ, ನೈಚ್ಯಾನುಸಂಧಾನ, ವಿವಿಕ್ತತೆ, ಐಹಿಕ ಸುಖಲಾಲಸೆಗಳ ಜಿಹಾಸೆ, ವಿರಕ್ತಿ, ಆತ್ಮನಿಗ್ರಹ, ಪರೋಪಕಾರ ಹೀಗೆ ಹಲವು ಮುಖಗಳಲ್ಲಿ ಪ್ರಕಟವಾಗುತ್ತವೆ. ಈ ಮುಖಗಳಲ್ಲಿ ಯಾವುದೊಂದನ್ನಾಗಲಿ ಹಲವನ್ನಾಗಲಿ, ಏಕಕಾಲದಲ್ಲಿ ಆಗಲಿ ಬೇರೆಬೇರೆ ಸಂದರ್ಭಗಳಲ್ಲಿ ಆಗಲಿ ಬೆಳಗಿದ ಗುಣಸಂಪನ್ನರಾದ ಮಹನೀಯರು ಕರ್ನಾಟಕದ ಸುಪುತ್ರರಾಗಿದ್ದಾರೆ, ಭಾರತೀಯ ಸಂಸ್ಕೃತಿಯ ದೀಪಶಿಖೆಗಳಾಗಿದ್ದಾರೆ. ಅವರ ನಡೆ ನುಡಿಗಳನ್ನು ಪರಿಚಯ ಮಾಡಿಕೊಳ್ಳುವುದು ನಮ್ಮ ಶ್ರೇಯಸ್ಸಿಗೆ ಸಹಕಾರಿಯಾದುದಾಗಿದೆ. ಅದರಿಂದ ಬಹುವಾಗಿ ಪ್ರಯೋಜನವಿದೆ. ಈ ಸಂಕಲನವನ್ನು ಆ ಉದ್ದೇಶದಿಂದಲೇ ಸಿದ್ಧಪಡಿಸಿದೆ.

ಈಚಿನ ದಿನಗಳಲ್ಲಿ ಪರಭಾಷೆ ಸಂಸ್ಕೃತಿಗಳ ಅನುಕರಣೆ, ವಿದೇಶಗಳ ಪ್ರವಾಸ ನಿವಾಸಗಳ ಹೆಚ್ಚಳ, ವಿಜ್ಞಾನ ತಂತ್ರಜ್ಞಾನಗಳಿಗೆ ದೊರೆಯುತ್ತಿರುವ ಪ್ರಾಶಸ್ತ್ಯ, ಕಲೆ ಸಾಹಿತ್ಯ ಮಾನವಿಕವಿದ್ಯೆಗಳ ಬಗೆಗೆ ಅವಗಣನೆ, ಕ್ಲಬ್ಬು ಪಾರ್ಟಿಗಳ ಸ್ವಚ್ಛಂದ ಸಾಂಘಿಕ ಜೀವನ, ಮೇರೆಯರಿಯದ ಧನದಾಹ, ಭೋಗವಸ್ತುಗಳಿಂದ ಮನೆತುಂಬುವ ಉತ್ಕಂಠೆ ಇವು ಹೆಚ್ಚಾಗುತ್ತಿವೆ. ಈ ಭೋಗಯಜ್ಞದ ಅಗ್ನಿಕುಂಡಕ್ಕೆ ದೃಶ್ಯ-ಶ್ರವ್ಯ ಮಾಧ್ಯಮಗಳು ಅಸಭ್ಯತೆ ಅನೀತಿಗಳ ಆಜ್ಯವನ್ನು ಧಾರಾಳವಾಗಿ ಸುರಿಯುತ್ತಿವೆ. ನಮ್ಮ ಬದುಕು ಈಗ ಈ ಕಾರಣಗಳಿಂದಾಗಿ ಹೆಚ್ಚು ಹೆಚ್ಚು ವೈಯಕ್ತಿಕಸುಖವನ್ನು, ಸ್ಥಾನಮಾನಗಳ ಸ್ವಪ್ರತಿಷ್ಠೆಯನ್ನು, ಅನಾರೋಗ್ಯಕರ ಸ್ಪರ್ಧೆ-ಈರ್ಷ್ಯೆಗಳನ್ನು, ಲಾಭ-ಲೋಭಗಳ ಆಕರ್ಷಣೆಯನ್ನು ಇಷ್ಟಪಡುವಂತಾಗಿದೆ. ಪರಿಣಾಮವಾಗಿ, ಕೌಟುಂಬಿಕ ಮತ್ತು ಸಾಮಾಜಿಕ ಜೀವನಗಳಲ್ಲಿ ಸ್ವಚ್ಛಂದತೆ ಪ್ರತ್ಯೇಕತೆ ಛಿದ್ರಗಳು, ಮೇಲು ಕೀಳುಗಳು ಹೆಚ್ಚಾಗುತ್ತಿವೆ.

ಇವಕ್ಕೆ ಏನಾದರೂ ಚಿಕಿತ್ಸೆಯುಂಟೇ? ಅಂತಹ ಚಿಕಿತ್ಸೆಯನ್ನು ಸಕಾಲದಲ್ಲಿ ಮಾಡುವುದು ಸಾಮಾಜಿಕರ ಕರ್ತವ್ಯವಲ್ಲವೇ? ನಮ್ಮ ಯುವಪೀಳಿಗೆಗೆ ಒಳ್ಳೆಯ ಮಾದರಿಗಳೆನ್ನಬಹುದಾದ ಉದಾತ್ತಪ್ರಸಂಗಗಳನ್ನು ತಿಳಿಸಿದರೆ, ಅದು ಆ ದಿಕ್ಕಿನಲ್ಲಿ ಯೋಚಿಸುವುದೂ ಸಾಗುವುದೂ ಕೆಲಮಟ್ಟಿಗಾದರೂ ಸಾಧ್ಯವಾಗಬಹುದು.

ಇಂತಹ ಆಲೋಚನೆ ನನ್ನ ಮನಸ್ಸಿಗೆ ಬಂದಾಗ, ಈ ಸಂಕಲನದ ಹೊಳವು ಮೂಡಿತು. ೨೦೦೧ರ ಜುಲೈ ೧ ರಂದು ಸಂಕಲನದ ಕೆಲಸವನ್ನು ಆರಂಭಿಸಿ, ೨೦೦೨ರ ಜೂನ್ ೧೮ ರಂದು ಅದನ್ನು ಪೂರೈಸಿದ್ದೇನೆ. ದೈವವೆಂಬ ಅತೀತ ಮಹಾಶಕ್ತಿಯಲ್ಲಿಯೂ ಧರ್ಮವೆಂಬ ಉದಾತ್ತ ಮಾನವೀಯಮೌಲ್ಯಗಳಲ್ಲಿಯೂ ನಂಬಿಕೆಯುಳ್ಳವರು ಈ ಸಂಕಲನದ ಪ್ರಯೋಜನವನ್ನು ಪಡೆಯುವರೆಂಬ ದೃಢವಾದ ವಿಶ್ವಾಸ ನನಗಿದೆ. ವಯಸ್ಸಿನಿಂದ ಈಗ ನಾನು ಎಪ್ಪತ್ತರ ಗಡಿಗೆ ಬಂದಿದ್ದೇನೆ. ಅದರ ಕುರುಹಾಗಿ ಇದು ನನ್ನ ಕನ್ನಡ ಜನಕ್ಕೆ ನನ್ನ ಪ್ರೀತಿಯ ಒಂದು ಸಣ್ಣ ಕಾಣಿಕೆ.

ಪ್ರಸ್ತುತ ಸಂಕಲನಕ್ಕೆ ನಾನು ಬಳಸಿದ ಆಕರಗಳ ಕರ್ತೃಗಳಿಗೆ, ಸಂಪಾದಕರಿಗೆ ಹಾಗೂ ಪ್ರಕಾಶಕರಿಗೆ ನಾನು ಬಹುವಾಗಿ ಕೃತಜ್ಞ. ಮೂಲದ ಆಶಯ ಕೆಡದ ಹಾಗೆ ನನ್ನ ಮಾತುಗಳಲ್ಲಿ ಪ್ರಸಂಗವನ್ನು ನಿರೂಪಿಸುವ ಸ್ವಾತಂತ್ರ್ಯವಹಿಸಿದ್ದೇನೆ. ಉದ್ದೇಶ ಹಿರಿದೆಂಬುದನ್ನು ಲಕ್ಷಿಸಿ, ಅವರು ನನ್ನ ಸ್ವಾತಂತ್ರ್ಯವನ್ನು ಒಪ್ಪುವರೆಂದೂ ನ್ಯೂನಾತಿರೇಕಗಳಿಗೆ ಕ್ಷಮಿಸುವರೆಂದೂ ನಂಬಿದ್ದೇನೆ.

ಈ ಪುಸ್ತಕವನ್ನು ಪ್ರಕಾಶನಕ್ಕೆ ಕೃಪೆಯಿಟ್ಟು ಸ್ವೀಕರಿಸಿರುವ ವಿ.ಸೀ. ಸಂಪದದ ಪದಾಧಿಕಾರಿಗಳಿಗೆ, ವಿಶೇಷವಾಗಿ ನನ್ನ ಮಾನ್ಯಮಿತ್ರರಾದ ಶ್ರೀಮಾನ್ ಎಂ.ವಿ. ವೆಂಕಟೇಶ ಮೂರ್ತಿಗಳವರಿಗೆ, ಕರಡಚ್ಚು ಓದಲು ಸಹಕರಿಸಿದ ನನ್ನ ಪತ್ನಿ ಸೌ. ಲಕ್ಷ್ಮಿಗೆ ನನ್ನ ಕೃತಜ್ಞತೆಗಳು.

ಮೈಸೂರು

೨೭-೮-೨೦೦೨

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಎರಡು ಮಾತು

ಕನ್ನಡ ಸಂಶೋಧನಾಕ್ಷೇತ್ರದಲ್ಲಿ ಹಿರಿಯ ಹೆಸರಾಗಿರುವವರೂ ಹಳಗನ್ನಡ ಭಾಷೆ ಸಾಹಿತ್ಯಗಳ ಬಗೆಗೆ, ಶಾಸ್ತ್ರವಿಷಯಗಳಾದ ವ್ಯಾಕರಣ ಛಂದಸ್ಸು ಅಲಂಕಾರಗಳ ಬಗೆಗೆ ಅಧಿಕಾರವಾಣಿಯಿಂದ ನುಡಿಯಬಲ್ಲ ಶ್ರೇಷ್ಠವಿದ್ವಾಂಸರೂ ಆಗಿರುವ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ತಮ್ಮ 'ಉದಾರಚರಿತರು - ಉದಾತ್ತಪ್ರಸಂಗಗಳು' ಹೊತ್ತಗೆಯನ್ನು ಮುದ್ರಿಸಿ ಪ್ರಕಟಿಸುವ ಗೌರವವನ್ನು 'ವಿ.ಸೀ. ಸಂಪದ' ವೇದಿಕೆಗೆ ದಯಮಾಡಿ ದೊರಕಿಸಿಕೊಟ್ಟಿದ್ದಾರೆ. ಈ ಉಪಕಾರಕ್ಕಾಗಿ ಅವರಿಗೆ ನಮ್ಮ ಕೃತಜ್ಞತಾಪೂರ್ವಕ ನಮನಗಳು. ವಿಶೇಷವಾಗಿ, ಡಾ. ಶಾಸ್ತ್ರಿಗಳ ಎಪ್ಪತ್ತನೆಯ ಹುಟ್ಟುಹಬ್ಬದ ಸುಸಂದರ್ಭದಲ್ಲಿ ಇದನ್ನು ಪ್ರಕಟಿಸಿ, ಅವರಿಗೆ ನಮ್ಮ ಗೌರವಾದರಗಳನ್ನು ಸಮರ್ಪಿಸಲು ಅವಕಾಶವಾಗಿರುವುದು ಸಂತೋಷದ ಸಂಗತಿಯಾಗಿದೆ. ಡಾ. ಶಾಸ್ತ್ರಿಗಳವರ ಸಾಹಿತ್ಯ ಮತ್ತು ಶಾಸ್ತ್ರಸೇವೆ ನೂರ್ಕಾಲ ಹೀಗೆಯೇ ಮುಂದುವರಿಯಲೆಂದು ಹಾರೈಸುವ ಸೌಭಾಗ್ಯವೂ ನಮ್ಮದಾಗಿದೆ.

ಇದು ನೂರೊಂದು ಪ್ರಸಂಗಗಳ ಸಂಕಲನ. ನಮ್ಮ ಸಂಸ್ಕೃತಿಗೆ ತಳಹದಿಯಾಗಿರುವ ನಡೆವಳಿಕೆಯ ಯಾವ ಅಂಶಗಳನ್ನು ಜೀವನಮೌಲ್ಯಗಳೆಂದು ಗುರುತಿಸಿ ಸ್ವೀಕರಿಸಲಾಗಿದೆಯೊ ಅವನ್ನು ಇಲ್ಲಿನ ಪ್ರತಿಯೊಂದು ಪ್ರಸಂಗವೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಎತ್ತಿಕಾಣಿಸುತ್ತದೆ. ಬದುಕಿನಲ್ಲಿ ಅವನ್ನು ಅಳವಡಿಸಿಕೊಂಡಲ್ಲಿ ನಮ್ಮ ನಡೆವಳಿಕೆಗೆ ಸಂಸ್ಕಾರ ದೊರೆತು, ಬದುಕು ಸುಸಂಸ್ಕೃತಗೊಂಡು, ಬಾಳು ಬೆಳಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಓದುಗರಿಗೆ ಈ ಕೃತಿ ಪ್ರಿಯವಾಗುವುದೆಂದು ನಂಬಿದ್ದೇವೆ.

ಎಂ. ವಿ. ವೆಂಕಟೇಶಮೂರ್ತಿ

ವಿ.ಸೀ. ಸಂಪದ, ಬೆಂಗಳೂರು-85

"ಏತೇ ಯೇಷು ವಸಂತಿ ನಿರ್ಮಲಗುಣಾಸ್ತೇಭ್ಯೋ ಮಹದ್ಭ್ಯೋ ನಮಃ"

("ಈ ನಿರ್ಮಲಗುಣಗಳು ಯಾರಲ್ಲಿವೆಯೋ ಆ ಮಹಾತ್ಮರಿಗೆ ನಮಸ್ಕಾರ")

ಭರ್ತೃಹರಿ ನೀತಿಶತಕ, ೭೯

ಆಕರಗಳು

ಅಂಬಳೆ ಅಣ್ಣಯ್ಯ ಪಂಡಿತರ ಜೀವನಚರಿತ್ರೆ

—ಚಾಮರಾಜನಗರದ ವೆಂಕಟರಮಣ ಶಾಸ್ತ್ರೀ

ಅವಧೂತಗುರು ಶ್ರೀ ಚಂದ್ರಶೇಖರ ಭಾರತೀ

—ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ

ಆ. ನೇ. ಉಪಾಧ್ಯೆ

—ಎಂ. ಎ. ಜಯಚಂದ್ರ

ಎಲೆ ಮಲ್ಲಪ್ಪ ಶೆಟ್ಟರು

—ಜಯಾ ರಾಜಶೇಖರ್

ಎಂ. ಎಸ್. ಪುಟ್ಟಣ್ಣ

—ಎಚ್. ಎಸ್. ಸುಜಾತಾ

ಕರೂರು ಶ್ರೀ ಶ್ರೀನಿವಾಸಾಚಾರ್ಯರ ಚರಿತವು

—ತಿರು ಶ್ರೀನಿವಾಸಗೋಪಾಲಾಚಾರ್ಯ

ಕಲೆಯ ಕಾಣಿಕೆ

—ಗಮಕಿ ಎಂ. ರಾಘವೇಂದ್ರ ರಾವ್

ಕಾದಂಬರೀ ಸಂಗ್ರಹ

—ಸಂ. ಚಾಮರಾಜನಗರ ವೆಂಕಟರಮಣ ಶಾಸ್ತ್ರೀ

ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ

—ಎಂ. ಎಸ್. ಪುಟ್ಟಣ್ಣ

ಕೋಟೆಮನೆ

—ಸಮೇತನಹಳ್ಳಿ ರಾಮರಾಯ

ಗುರುದೇವ ಪಂಡಿತ ತಾರಾನಾಥ

—ಎಂ. ಜಿ. ಆರ್. ಅರಸು

ಗುರುದೇವ ಶ್ರೀ ವಿದ್ಯಾತೀರ್ಥ

—ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ

ಗುರು ಶ್ರೀ ಅಭಿನವ ವಿದ್ಯಾತೀರ್ಥರು: ನಾನು ಕಂಡಂತೆ

—ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ

ಚಿತ್ರಗಳು—ಪತ್ರಗಳು

—ಎ. ಎನ್. ಮೂರ್ತಿರಾವ್

ಚಿದಕ್ಕಮ್ಮನವರ ಶತಾಬ್ದಿ ಸಂಸ್ಮರಣಗ್ರಂಥ

—ಸಂ. ಮೈಥಿಲಿ ರಾಮಕೃಷ್ಣ

ಜನ–ಮನ

–ಪ್ರಭುಶಂಕರ

ಜ್ಞಾಪಕ ಚಿತ್ರಶಾಲೆ: ಸಂಪುಟ ೧–೭

–ಡಿ. ವಿ. ಜಿ.

ದಯಾಸಾಗರ ಎಂ. ವೆಂಕಟಕೃಷ್ಣಯ್ಯ

–ಪಿ. ಆರ್. ರಾಮಯ್ಯ

ದೀವಟಿಗೆಗಳು

–ಎನ್. ಆರ್. ರಾಮಸ್ವಾಮಿ

ದೇವುಡು ದರ್ಶನ

–ಸಂ. ಹೊ. ರಾ. ಸತ್ಯನಾರಾಯಣ ರಾವ್, ಗಂಗಾಧರ ದೇವುಡು

ಧನ್ಯಜೀವಿ

–ಸಂ. ತ. ಸು. ಶಾಮರಾಯ

ಧೀಮಂತ

–ಸಂ. ಎಂ. ವಿ. ಸೀತಾರಾಮಯ್ಯ

ನಂದನವನ

–ಸಂ. ತ. ಸು. ಶಾಮರಾಯ

ನಂದಾನೆನಪು

–ಕ. ವೆಂ. ರಾಘವಾಚಾರ್

ನಾ ಕಂಡ ಕಲಾವಿದರು

–ಕೆ. ವಾಸುದೇವಾಚಾರ್ಯ

ನಾ ಕಂಡ ಶ್ರೀಸಾಮಾನ್ಯರು

–ತೋವಿನಕೆರೆ ಸೀತಾರಾಮ ಜೋಯಿಸ್

ನೀರವ ಸಾಧಕ: ಉ ಕಾ ಸು ಸ್ಮರಣಸಂಪುಟ

–ಸಂ. ಸುಜನಾ, ಎಂ. ಕೃಷ್ಣೇಗೌಡ

ನೆನಪಿನ ಅಲೆಗಳು

–ತ. ಸು. ಶಾಮರಾಯ

ನೆನಪಿನ ತರಂಗ

–ತೋವಿನಕೆರೆ ಸೀತಾರಾಮ ಜೋಯಿಸ್

ನೆನಪಿನ ನಂದನ

–ಡಾ. ಎಚ್. ಕೆ. ರಂಗನಾಥ್

ನೆನಪಿನ ಸುರುಳಿ ತೆರೆದಾಗ
—ಎಚ್. ಎಸ್. ದೊರೆಸ್ವಾಮಿ
ನೆನಪಿನ ಸುಳಿಯಲ್ಲಿ
—ಜಿ. ವಿ. ಜಯಾ ರಾಜಶೇಖರ್
ನೆನಪುಗಳು
—ಕೆ. ವಾಸುದೇವಾಚಾರ್ಯ
ನೆನೆದವರು ಮನದಲ್ಲಿ
—ಡಾ. ಎಚ್. ಕೆ. ರಂಗನಾಥ್
ಪತ್ರೆ ಚನ್ನವೀರಪ್ಪಯ್ಯನವರು
—ಲಲಿತಾಂಬಾ ವೃಷಭೇಂದ್ರ ಸ್ವಾಮಿ
ಪ್ರೊ. ಕೆ. ಜಿ. ಕುಂದಣಗಾರರ ಬದುಕು ಮತ್ತು ಬರಹ
—ಸಂ. ಡಾ. ಎಂ. ಜಿ. ಬಿರಾದಾರ
ಪ್ರೊ. ವಿ. ಕೆ. ಆರ್. ವಿ. ರಾವ್: ಜೀವನ ಮತ್ತು ಸಾಧನೆ
—ಎಚ್ಚೆಸ್ಕೆ
ಬಾಳೆಹಳ್ಳಿ ರಂಗೇಗೌಡರು
—ಸಂ. ಚಂದ್ರಯ್ಯ ನಾಯ್ಡು
ಭಾರತದ ಕೃಷ್ಣರಾಯರು
—ಸಂ. ಕೃಷ್ಣಗಿರಿ ಮುರಳೀಧರ
ಭಾವ: ಸಂಪುಟ ೨, ೩
—ಮಾಸ್ತಿ ವೆಂಕಟೇಶ ಅಯ್ಯಂಗಾರ್
ಮಂಥನ: ತರಾಸು.
—ಸಂ. ನಾ. ಪ್ರಭಾಕರ್
ಮಹತೀ: ಪ್ರೊ. ಆರ್. ಎನ್. ದೊರೆಸ್ವಾಮಿ ಅಭಿನಂದನಗ್ರಂಥ
—ಸಂ. ಡಾ. ಪ್ರಣತಾರ್ತಿ ಹರನ್, ಎನ್. ಎಸ್. ಶಾರದಾಪ್ರಸಾದ್
ಮೂರು ತಲೆಮಾರು
—ತ. ಸು. ಶಾಮರಾಯ
ಯೇಗ್ದಾಗೆಲ್ಲಾ ಐತೆ
—ಬೆಳಗೆರೆ ಕೃಷ್ಣ ಶಾಸ್ತ್ರಿ
ವಾಗ್ಗೇಯಕಾರ ವಾಸುದೇವಾಚಾರ್ಯ
—ಎಸ್. ಕೃಷ್ಣಮೂರ್ತಿ
ವಿ. ಲಕ್ಷ್ಮೀಪತಯ್ಯನವರ ಆತ್ಮಚರಿತ್ರೆ (ಹಸ್ತಪ್ರತಿ)
—ಪ್ರೊ. ಎಂ. ಕೆ. ಎಲ್. ಎನ್. ಶಾಸ್ತ್ರಿಗಳ ಸಂಗ್ರಹ

ವಿ. ಸೀ. ನೂರರ ನೆನಪು
–ಸಂ. ಎಲ್. ಎಸ್. ಶೇಷಗಿರಿ ರಾವ್, ಎಂ. ವಿ. ವೆಂಕಟೇಶ ಮೂರ್ತಿ

ವ್ಯಕ್ತಿಚಿತ್ರ ಸಂಪುಟ–ಭಾಗ ೨
–ವಿ. ಸೀತಾರಾಮಯ್ಯ

ಶೃಂಗೇರಿಯ ರಾಜಯೋಗಿ ಶ್ರೀ ನರಸಿಂಹ ಭಾರತೀ
–ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ

ಶ್ರೀನಿಧಿ: ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ನೆನಪಿನ ಸಂಪುಟ
–ಸಂ. ಜಿ. ಎಸ್. ಶಿವರುದ್ರಪ್ಪ

ಸಂಗೀತ ಕಳಾನಿಧಿ
–ಎಸ್. ಕೃಷ್ಣಮೂರ್ತಿ

ಸಂಗೀತದ ಸಿರಿ ಎಚ್. ಯೋಗನರಸಿಂಹಂ
–ಸಂ. ಎಚ್. ವೈ. ಶಾರದಾಪ್ರಸಾದ್

ಸಂಗೀತ ಸಮಯ
–ಎಸ್. ಕೃಷ್ಣಮೂರ್ತಿ

ಸಂಜೆಗಣ್ಣಿನ ಹಿನ್ನೋಟ
–ಎ. ಎನ್. ಮೂರ್ತಿರಾವ್

ಸದ್ವೈದ್ಯ : ಬಿ. ವಿ. ಪಂಡಿತ್ ಶತಮಾನೋತ್ಸವ ಸ್ಮರಣಸಂಪುಟ
–ಸಂ. ಸಿ. ಸೀತಾರಾಮ್

ಸಂಭಾಷಣ ತರಂಗಿಣಿ
–ಅನು. ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ

ಸರ್ ವಿಶ್ವೇಶ್ವರಯ್ಯ
–ಸಂ. ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸವಿನೆನಪು: ದಿವಂಗತ ಟಿ.ಎಸ್. ವೆಂಕಣ್ಣಯ್ಯನವರ ಸ್ಮಾರಕಗ್ರಂಥ
–ಪ್ರ. ಸಂ. ಕುವೆಂಪು

ಸ್ವಾತಂತ್ರ್ಯದೆಡೆಗೆ: ಎಂ. ಎನ್. ಜೋಯಿಸ್ ಅಭಿನಂದನಗ್ರಂಥ
–ಸಂ. ಪ್ರೇಮಲತಾ ಸುಂದರೇಶನ್, ಅಗರಂ ರಂಗಯ್ಯ ಮುಂ.

ಹೃದಯಸಂಪನ್ನತೆ
–ಆರ್. ಕೆ. ಶ್ರೀಕಂಠ ಕುಮಾರಸ್ವಾಮಿ

Prof. M. Hiriyanna Birth Centenary Commemoration Volume
–Ed. Dr. V. Raghavan, Dr. G. Marulasiddaiah

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್।।

ಹಿತೋಪದೇಶ, ಸಂಧಿ ೧೩೧

ಇವನು ನನ್ನವನು, ಇವನು ಬೇರೆಯವನು ಎಂಬ ಎಣಿಕೆ ಹುಲುಮನಸ್ಸಿನವರದು; ಉದಾರ ಚರಿತರಿಗೆ ಈ ಭೂಮಂಡಲವೇ ತನ್ನ ಕುಟುಂಬವಾಗಿರುವುದು.

*

ಕಾತರಾಃ ಪರದುಃಖೇಷು ನಿಜದುಃಖೇಷ್ವಕಾತರಾಃ
ಅರ್ಥೇಷ್ವಲೋಭಾ ಯಶಸಿ ಸಲೋಭಾಃ ಸಂತಿ ಸಾಧವಃ।।

ರಸಗಂಗಾಧರ, ಆನನ ೨, ಪು. ೪೩೪

ಪರರಿಗೆ ದುಃಖ ಬಂದಾಗ ಸಜ್ಜನರು ವ್ಯಾಕುಲರಾಗುತ್ತಾರೆ, ತಮಗೆ ದುಃಖ ಬಂದಾಗ ವ್ಯಾಕುಲರಾಗುವುದಿಲ್ಲ. ಅವರಿಗೆ ಹಣದಲ್ಲಿ ಆಸೆಯಿಲ್ಲ, ಕೀರ್ತಿಯಲ್ಲಿ ಆಸೆ.

*

ದೀನಾನಾಂ ಕಲ್ಪವೃಕ್ಷಃ ಸ್ವಗುಣಫಲನತಃ ಸಜ್ಜನಾನಾಂ ಕುಟುಂಬೀ
ಆದರ್ಶಃ ಶಿಕ್ಷಿತಾನಾಂ ಸುಚರಿತನಿಕಷಃ ಶೀಲವೇಲಾಸಮುದ್ರಃ
ಸತ್ಕರ್ತಾ ನಾವಮಂತಾ ಪುರುಷಗುಣನಿಧಿರ್ದಕ್ಷಿಣೋದಾರಸತ್ತ್ವಃ
ಹ್ಯೇಕಃ ಶ್ಲಾಘ್ಯಃ ಸ ಜೀವತ್ಯಧಿಕಗುಣತಯಾ ಚೋಚ್ಛ್ವಸಂತೀವ ಚಾನ್ಯೇ।।

ಮೃಚ್ಛಕಟಿಕ, ೧-೪೮

ಬಡವರಿಗೆ ಕಲ್ಪವೃಕ್ಷದಂತೆ ಸಹಾಯಮಾಡುವವನು, ತನ್ನ ಒಳ್ಳೆಯ ಗುಣಗಳೆಂಬ ಹಣ್ಣಿನ ಭಾರದಿಂದ ಬಾಗಿದವನು, ಸಜ್ಜನರಿಂದಾದ ಕುಟುಂಬವುಳ್ಳವನು, ವಿದ್ಯಾವಂತರಿಗೆ ಮಾದರಿ, ಒಳ್ಳೆಯ ನಡತೆಗೆ ಒರೆಗಲ್ಲು, ಒಳ್ಳೆಯ ಸ್ವಭಾವಕ್ಕೆ ಸಮುದ್ರ, ಎಲ್ಲರನ್ನೂ ಸತ್ಕರಿಸುವವನು, ಯಾರನ್ನೂ ಅವಮಾನಗೊಳಿಸದವನು, ಸತ್ಪುರುಷನಲ್ಲಿರಬೇಕಾದ ಎಲ್ಲ ಗುಣಗಳಿಗೂ ನಿಧಿಯಾದವನು, ದಾಕ್ಷಿಣ್ಯ ಔದಾರ್ಯಗಳಿಂದ ಕೂಡಿದವನು. ಇವನು ಮಾತ್ರ ನಿಜವಾದ ಬದುಕನ್ನು ಬದುಕುತ್ತಾನೆ; ಉಳಿದವರು ಸುಮ್ಮನೆ ಉಸಿರಾಡುತ್ತಾರೆ.

*

ಮಾತೃವತ್ ಪರದಾರಾಣಿ ಪರದ್ರವ್ಯಾಣಿ ಲೋಷ್ಟವತ್
ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ॥

ಸುಭಾಷಿತ ರತ್ನಭಾಂಡಾಗಾರ, ೩-೨೫೪

ಪರಸ್ತ್ರೀಯರನ್ನು ತಾಯಿಯಂತೆ, ಪರಧನವನ್ನು ಮಣ್ಣಿನ ಹೆಂಟೆಯಂತೆ, ಸಕಲ ಜೀವ ರಾಶಿಯನ್ನೂ ತನ್ನಂತೆ ಯಾವನು ಕಾಣುತ್ತಾನೆಯೋ ಅವನೇ ನಿಜವಾಗಿ ದ್ರಷ್ಟಾರ (ಜ್ಞಾನಿ).

*

ಯಥಾ ಚಿತ್ತಂ ತಥಾ ವಾಚಃ ಯಥಾ ವಾಚಸ್ತಥಾ ಕ್ರಿಯಾಃ
ಚಿತ್ತೇ ವಾಚಿ ಕ್ರಿಯಾಯಾಂ ಚ ಸಾಧೂನಾಮೇಕರೂಪತಾ॥

ಸುಭಾಷಿತ ರತ್ನಭಾಂಡಾಗಾರ, ೨-೩೬

ಮನಸ್ಸಿನಂತೆ ಮಾತು, ಮಾತಿನಂತೆ ಕ್ರಿಯೆ; ಮನಸ್ಸು ಮಾತು ಕ್ರಿಯೆಗಳಲ್ಲಿ ಸತ್ಪುರುಷರು ಒಂದೇ ಬಗೆಯಾಗಿರುತ್ತಾರೆ.

*

ಯೇನ ಕೇನ ಪ್ರಕಾರೇಣ ಯಸ್ಯ ಕಸ್ಯಾಪಿ ದೇಹಿನಃ
ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರಪೂಜನಮ್॥

ಬುದ್ಧಿಶಾಲಿಯು ಯಾವುದೇ ಪ್ರಕಾರದಿಂದಾದರೂ ಯಾವ ಒಬ್ಬನಿಗಾದರೂ ಸಂತೋಷವನ್ನುಂಟುಮಾಡಬೇಕು. ಹೀಗೆ ಸಂತೋಷಗೊಳಿಸುವುದೇ ಈಶ್ವರಪೂಜೆ.

*

ಸ್ಮರಂತಿ ಸುಕೃತಾನ್ಯೇವ ನ ವೈರಾಣಿ ಕೃತಾನ್ಯಪಿ
ಸಂತಃ ಪರಾರ್ಥಂ ಕುರ್ವಾಣಾ ನಾವೇಕ್ಷಂತೇ ಪ್ರತಿಕ್ರಿಯಾಮ್॥

ಮಹಾಭಾರತ, ಸಭಾ ೭೩-೭

ಸಜ್ಜನರು ಒಳ್ಳೆಯದನ್ನು ಮಾತ್ರ ಸ್ಮರಿಸಿಕೊಳ್ಳುತ್ತಾರೆ; ಕೆಟ್ಟದನ್ನು ಇತರರು ಮಾಡಿದ್ದರೂ ನೆನಪಿಗೆ ತಂದುಕೊಳ್ಳುವುದಿಲ್ಲ. ಅವರು ಪರೋಪಕಾರಕ್ಕಾಗಿ ಕೆಲಸ ಮಾಡುವವರೇ ಹೊರತು ಪ್ರತ್ಯುಪಕಾರವನ್ನು ಬಯಸುವುದಿಲ್ಲ.

ಪರಿವಿಡಿ

೧. 'ಅದನ್ನು ಇನ್ನೊಂದು ಸಲ ಹೇಳು'

ಲೋಕಸೇವಾನಿರತ ಅಂಬಳೆ ಅಣ್ಣಯ್ಯ ಪಂಡಿತರು (೧೮೪೧-೧೯೩೨) ಹಳೆಯ ಪೀಳಿಗೆಯ ಪುರಪ್ರಮುಖರಲ್ಲಿ ಒಬ್ಬರಾಗಿ ಮೈಸೂರು ನಗರದಲ್ಲಿದ್ದರು. ಅವರು ಶ್ರೀಮಂತರು, ದಾನಿಗಳು, ದೊಡ್ಡ ಜಮೀನುದಾರರು, ಲೇವಾದೇವಿಯನ್ನು ಮಾಡುತ್ತಿದ್ದವರು.

ಅಣ್ಣಯ್ಯ ಪಂಡಿತರಿಂದ ಸಾಲ ಪಡೆದಿದ್ದ ಒಬ್ಬ ಬ್ರಾಹ್ಮಣನು ಅದನ್ನು ತೀರಿಸಲು ಬಂದನು. ತಂದಿದ್ದ ಹಣದ ಗಂಟನ್ನು ಹತ್ತಿರವಿಟ್ಟುಕೊಂಡು, ೨೫ ರೂ. ಬಡ್ಡಿಹಣ ಸಾಲದೆ ಇದೆಯೆಂದೂ ಅದನ್ನು ಸೋಡಿ ಬಿಡಬೇಕೆಂದೂ ಹಾಗೆ ಮಾಡಿದರೆ ತನ್ನ ಮಗನಿಗೆ ಧರ್ಮೋಪನಯನ ಮಾಡಿದ ಪುಣ್ಯ ಅವರಿಗೆ ಬರುವುದೆಂದೂ ಕೇಳಿಕೊಂಡನು. ಎಷ್ಟು ಬಗೆಯಲ್ಲಿ ಕೇಳಿಕೊಂಡರೂ ಪಂಡಿತರು "ಹಣ ತಂದ ಹೊರತು ಆಗುವುದಿಲ್ಲ" ಎಂದು ಆತನಿಗೆ ಖಂಡಿತವಾಗಿ ಹೇಳಿಬಿಟ್ಟರು. ಆ ಬ್ರಾಹ್ಮಣನು ಪೆಚ್ಚುಮೋರೆ ಹಾಕಿಕೊಂಡು, ಮನೆಗೆ ಹಿಂದಿರುಗಿ ಯಾರನ್ನೋ ಬೇಡಿ ೨೫ ರೂ. ಜೊತೆಮಾಡಿದನು. ಅಸಲು ಬಡ್ಡಿ ಪಾವತಿ ಮಾಡಿ ಸಾಲದ ಪತ್ರ ಹಿಂದಕ್ಕೆ ಕೊಡಬೇಕೆಂದು ಪಂಡಿತರ ಮನೆಗೆ ಹೋಗಿ ಪ್ರಾರ್ಥಿಸಿದನು.

ಪಂಡಿತರು ಹಣ ಸಂದಾಯವಾದ ಮೇಲೆ ಸಾಲಪತ್ರವನ್ನು ಬ್ರಾಹ್ಮಣನಿಗೆ ಹಿಂದಿರುಗಿಸಿದರು. ಬಳಿಕ, "ನೀನು ಬಡ್ಡಿ ಬಿಟ್ಟುಕೊಟ್ಟರೆ ಏನೋ ಸಹಾಯವಾಗುವುದೆಂದು ಹೇಳಿದೆಯಲ್ಲ, ಅದನ್ನು ಇನ್ನೊಂದು ಸಲ ಹೇಳು" ಎಂದರು. ಆ ಬ್ರಾಹ್ಮಣ "ಈಗ ಆ ಮಾತಿನಿಂದೇನು ಪ್ರಯೋಜನ? ನೀವು ಬಡ್ಡಿ ಬಿಟ್ಟುಕೊಟ್ಟಿದ್ದರೆ ಮಗನ ಉಪನಯನಕ್ಕೆ ಸಹಾಯವಾಗುವುದು ಎಂದು ನಂಬಿಕೊಂಡಿದ್ದೆ. ಈಗ ಆ ವಿಚಾರ ಯಾಕೆ?" ಎಂದು ಹೇಳಿ ಹೊರಡುವುದಕ್ಕೆ ಸಿದ್ಧವಾದನು. ಪಂಡಿತರು "ಅಯ್ಯಾ ನಿಲ್ಲು" ಎಂದು ಆತನನ್ನು ತಡೆದು, ಮಣೆಯ ಮೇಲೆ ಆತನನ್ನು ಕುಳ್ಳಿರಿಸಿ, ೫೦ ರೂ. ಗಳನ್ನು ತಾಂಬೂಲಸಹಿತವಾಗಿ ತಟ್ಟೆಯಲ್ಲಿಟ್ಟು ಆತನಿಗೆ ಕೊಟ್ಟರು. ಕೊಡುವಾಗ "ಇದನ್ನು ಮಗನ ಉಪನಯನಕ್ಕೆ ಉಪಯೋಗಿಸಿಕೋ" ಎಂದು ವಿಶ್ವಾಸಪೂರ್ವಕವಾಗಿ ಹೇಳಿದರು.

ಈಗ ಬ್ರಾಹ್ಮಣನ ಮುಖ ಊರಗಲವಾಯಿತು. ಆತನು ಪಂಡಿತರ ಎರಡು ಕಾಲುಗಳನ್ನೂ ಗಟ್ಟಿಯಾಗಿ ಹಿಡಿದುಕೊಂಡು ಅವರ ಉಪಕಾರಕ್ಕೆ ಕೃತಜ್ಞತೆ ಹೇಳಿದನು.

ಚಾಮರಾಜನಗರದ ವೆಂಕಟರಮಣ ಶಾಸ್ತ್ರೀ, 'ಅಂಬಳೆ ಅಣ್ಣಯ್ಯ ಪಂಡಿತರ ಜೀವನಚರಿತ್ರೆ', ಕಾದಂಬರೀ ಸಂಗ್ರಹ ಗ್ರಂಥಮಾಲಾ ಸಂಖ್ಯೆ ೯೬, ೧೯೩೫, ಪು. ೪೭-೪೮

೨. 'ಅದು ನಮಗೆ ಶ್ರೇಯಸ್ಸಲ್ಲ'

ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ಉತ್ಸಾಹ ತೋರಿದ್ದರಿಂದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿಯ ಇಲಾಖೆ ಹುಟ್ಟಿಕೊಂಡದ್ದು ತಿಳಿದ ವಿಷಯ. ಸಿ. ಕೆ. ವೆಂಕಟರಾಮಯ್ಯನವರ ಬಳಿಕ ಎ. ಎನ್. ಮೂರ್ತಿರಾಯರು ಆ ಇಲಾಖೆಯ ನಿರ್ದೇಶಕರಾದರು. ಹನುಮಂತಯ್ಯನವರು ಮುಖ್ಯಮಂತ್ರಿತ್ವವನ್ನು ಬಿಡುವುದಕ್ಕೆ ಕೆಲವು ತಿಂಗಳ ಮುಂಚೆ ನಡೆದ ಘಟನೆಯಿರಬಹುದೆಂದು ನೆನಪು ಮಾಡಿಕೊಂಡು ಮೂರ್ತಿರಾಯರು ಅದನ್ನು ಒಂದು ಕಡೆ ದಾಖಲಿಸಿದ್ದಾರೆ.

ಹನುಮಂತಯ್ಯನವರು ತಮ್ಮನ್ನು ಭೇಟಿ ಮಾಡುವ ಹಾಗೆ ಮೂರ್ತಿರಾಯರಿಗೆ ಹೇಳಿ ಕಳಿಸಿದ್ದರು. ರಾಯರು ಕಛೇರಿಗೆ ಹೋದಾಗ ಅವರು ಎಲ್ಲಿಗೋ ಆತುರದಲ್ಲಿ ಹೊರಡಲು ಸಿದ್ಧರಾಗಿದ್ದಂತೆ ತೋರಿತು. ರಾಯರನ್ನು ಉದ್ದೇಶಿಸಿ, "ಈಗ ಬಹಳ ಜರೂರಾದ ಕೆಲಸವಿದೆ. ನನ್ನೊಡನೆ ಬನ್ನಿ. ನನ್ನ ಕೆಲಸ ಮುಗಿದ ಮೇಲೆ ಕುಮಾರ ಕೃಪಕ್ಕೆ ಹೋಗಿ ಅಲ್ಲೇ ಮಾತಾಡೋಣ" ಎಂದರು.

ಇಬ್ಬರೂ ಹೊರಟರು. ವಾಹನ ಸರ್ ಎಂ. ವಿಶ್ವೇಶ್ವರಯ್ಯನವರ ಮನೆಯ ಮುಂದೆ ನಿಂತಿತು. ಹನುಮಂತಯ್ಯನವರು ಒಳಕ್ಕೆ ಹೋಗಿ ೧೦-೧೫ ನಿಮಿಷಗಳಾದ ಮೇಲೆ ಬಂದರು. ಮತ್ತೆ ಇಬ್ಬರೂ ಕಛೇರಿಗೆ ಮರಳುವಾಗ, ಹನುಮಂತಯ್ಯನವರು ಸಂದರ್ಭದ ಸೂಕ್ಷ್ಮತೆಯನ್ನು ಹೇಳಿದರು, ಮೂರ್ತಿರಾಯರಿಗೆ. ಯಾವುದೋ ವಿಷಯದಲ್ಲಿ ವಿಶ್ವೇಶ್ವರಯ್ಯನವರ ಸಲಹೆಯನ್ನು ಅವರು ಪಡೆಯಬೇಕಾಗಿತ್ತು. "ತಮ್ಮನ್ನು ನೋಡಬೇಕಾಗಿದೆ, ಯಾವಾಗ ಬರಲಿ" ಎಂಬುದಾಗಿ ದೂರವಾಣಿಯಲ್ಲಿ ಕೇಳಿದರಂತೆ; ಅದಕ್ಕೆ ವಿಶ್ವೇಶ್ವರಯ್ಯನವರು "ಈಗ ಸಮಯವೇನೋ ಇದೆ. ಆದರೆ ನೀವು ಇಲ್ಲಿಗೆ ಬರುವುದು ಸರಿಯಲ್ಲ. ನೀವು ಚರ್ಚಿಸಬೇಕೆಂದಿರುವುದು ರಾಜ್ಯದ ಯೋಗಕ್ಷೇಮಕ್ಕೆ ಸಂಬಂಧಿಸಿದ ವಿಷಯ. ನೀವು ಈಗ ರಾಜ್ಯದ ಪ್ರತಿನಿಧಿಗಳು. ಆದ್ದರಿಂದ ನಾನು ನಿಮ್ಮಲ್ಲಿಗೆ ಬರುವುದೇ ಕರ್ತವ್ಯ" ಎಂದರಂತೆ.

ಹನುಮಂತಯ್ಯನವರು ಈ ಸಂಗತಿಯನ್ನು ಮೂರ್ತಿರಾಯರಿಗೆ ತಿಳಿಸುತ್ತ, "ಅವರು ಇಂಥ ವಿಷಯಗಳಲ್ಲಿ ಪಟ್ಟುಹಿಡಿಯುತ್ತಾರೆ; ಬಂದೇಬಿಡುತ್ತಾರೆ. ಆದ್ದರಿಂದ ಅವರು ನನ್ನನ್ನು ಕಾಣಲು ಹೊರಡುವುದರೊಳಗೆ ನಾನೇ ಅವರ ಮನೆಯಲ್ಲಿರಬೇಕೆಂದು ನಿಶ್ಚಯಿಸಿದೆ. ಅದೇ ನಾನು ಹೇಳಿದ ಜರೂರು ಕೆಲಸ'. ಅಂಥ ಮಹಾತ್ಮರಿಗೆ ಇಲ್ಲಿಗೆ ಬರುವ ತೊಂದರೆ ಕೊಟ್ಟರೆ, ಅದು ನಮಗೆ ಶ್ರೇಯಸ್ಸಲ್ಲ".

ಎ. ಎನ್. ಮೂರ್ತಿರಾವ್, ಚಿತ್ರಗಳು-ಪತ್ರಗಳು', ಶಾರದಾ ಮಂದಿರ, ಮೈಸೂರು ೧೯೭೮, ಪು. ೧೮೪-೧೮೫

೩. 'ಅದು ಹೋಗಬೇಕಾದ ಜಾಗಕ್ಕೆ ಹೋಯಿತು'

ಪರೋಪಕಾರಿಗಳಾಗಿದ್ದ ಬೆಂಗಳೂರು ಎಲೆ ಮಲ್ಲಪ್ಪ ಶೆಟ್ಟರು ಮಹಾಶ್ರೀಮಂತರು; ಆದರೆ ಕೊನೆಗಾಲಕ್ಕೆ ಕಷ್ಟಗಳಿಗೆ ಸಿಕ್ಕಿದರು. ಬಡತನ ಅಡಸಿತು. ಇವರ ಕೊಡುಗೈದಾನದ ದುರುಪಯೋಗ ತಪ್ಪಿಸಲು ಮನೆಯವರು ಶೆಟ್ಟರು ಹೆಚ್ಚಾಗಿ ಕಾಲ ಕಳೆಯುತ್ತಿದ್ದ ಮಹಡಿಯ ಮೇಲಕ್ಕೆ ಅಪರಿಚಿತರನ್ನೆಲ್ಲ ಬಿಡದ ಹಾಗೆ ಕಾವಲುಹಾಕಿದ್ದರು. ಒಂದು ದಿನ ಶೆಟ್ಟರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ; ಮಹಡಿಯ ಮೇಲೆ ತಮ್ಮ ಕೋಣೆಯಲ್ಲಿ ಮಲಗಿ ವಿಶ್ರಮಿಸುತ್ತಿದ್ದರು.

ಒಬ್ಬ ಬ್ರಾಹ್ಮಣ ಗೃಹಸ್ಥರು ಕಾವಲುಗಾರನ ಕಣ್ಣು ತಪ್ಪಿಸಿ ಹೇಗೋ ನುಸುಳಿಕೊಂಡು ಶೆಟ್ಟರ ಮಹಡಿಯ ಕೋಣೆಗೆ ಬಂದನು. "ಯಾರಪ್ಪ ನೀನು, ಯಾಕೆ ಬಂದೆ?" ಎಂದು ಶೆಟ್ಟರು ಪ್ರಶ್ನಿಸಿದರು. ಆತನು ಅಳುತ್ತ, ಮಾತಾಡದೆ, ಅವರ ಕಾಲು ಹಿಡಿದುಕೊಂಡನು. "ಬೇಡಪ್ಪ ಬೇಡ, ಕಾಲು ಹಿಡಿಯಬೇಡ, ಕೂತುಕೋ, ಏನು ವಿಚಾರ, ಹೇಳು" ಎಂದು ಪ್ರಶ್ನಿಸಿ ತಮ್ಮ ಮಂಚದ ಬದಿಗೆ ಆತನನ್ನು ಕೂರಿಸಿಕೊಂಡರು. 'ಏನು ಹೇಳಲಿ ಶೆಟ್ಟರೇ, ಮಾತಾಡಲು ನನಗೆ ಬಾಯಿ ಬರುತ್ತಿಲ್ಲ. ನಿಮ್ಮ ಸ್ಥಿತಿ ತಿಳಿದೂ ವಿಧಿಯಿಲ್ಲದೆ ಬಂದಿದ್ದೇನೆ" ಎಂದು ಅಲವತ್ತುಕೊಂಡನು. "ವಿಷಯವೇನೆಂದು ಹೇಳಲೇ ಇಲ್ಲವಲ್ಲ" ಎಂದರು, ಶೆಟ್ಟರು.

ಬ್ರಾಹ್ಮಣ ಗೃಹಸ್ಥ ಅಳುತ್ತ ಹೇಳಿದನು: "ನಾನು ಬಡವ. ಹಿಂದೆ ಎಷ್ಟೋ ಸಲ ತಾವು ನನಗೆ ಸಹಾಯ ಮಾಡಿದ್ದೀರಿ. ತಮಗೆ ನನ್ನಂಥವರು ಎಷ್ಟೋ ಜನ. ತಮಗೆ ಮರೆತು ಹೋಗಿರುತ್ತದೆ. ತಾವು ಕೊಡುಗೈ ದೊರೆ. ತಮಗೆ ತೊಂದರೆಯಿದ್ದೂ ಬೇಡುವ ಅನಿವಾರ್ಯ ನನಗೆ ಬಂದಿದೆ. ನನ್ನ ಮಗಳ ಮದುವೆ ನಿಶ್ಚಯವಾಗಿದೆ. ಕಷ್ಟಪಟ್ಟು ಹೊಂದಿಸಿರುವ ಸಂಬಂಧ, ಹಣದ ಕೊರತೆಯಿಂದ ನಿಂತುಹೋಗುವ ಭಯ ಬಂದಿದೆ. ತಾವು ಸಹಾಯಮಾಡಿ ಪುಣ್ಯ ಕಟ್ಟಿಕೊಳ್ಳಬೇಕು".

ಮಲ್ಲಪ್ಪ ಶೆಟ್ಟರು ಚಿಂತಾಕ್ರಾಂತರಾದರು. "ನನ್ನಲ್ಲಿ ಕೊಡಲು ಏನೂ ಉಳಿದಿಲ್ಲವಲ್ಲಪ್ಪ" ಎಂದರು; 'ಕಷ್ಟ' ಎಂದು ಬೇಡಲು ಬಂದವರಿಗೆ ಏನೂ ಕೊಡಲಾಗದಂತೆ ಕೈ ಕಟ್ಟಿಹಾಕಿದೆಯಲ್ಲ, ಶಿವನೇ" ಎಂದು ಕೊರಗಿದರು. ಹೀಗೆನ್ನುತ್ತ ತಮ್ಮ ಕೈಯೆರಡನ್ನು ತಮಗೆ ತಿಳಿಯದಂತೆ ಎದೆಯ ಮೇಲಿಟ್ಟುಕೊಂಡರು. ಅವರ ಕೈಗಳಿಗೆ ಶಿವಪೂಜೆಯ ಕರಡಿಗೆ ಸೋಕಿತು. ಅವರಿಗೆ ಕೂಡಲೇ ಮಿಂಚು ಹೊಳೆದಂತಾಯಿತು!

ತತ್ ಕ್ಷಣ ಎದ್ದು ಕುಳಿತರು. "ಇಲ್ಲೇ ಕುಳಿತಿರು; ಈಗಲೇ ಬಂದು ಬಿಡುತ್ತೇನೆ" ಎಂದು ಹೇಳಿ ಬೇಗ ಬೇಗ ಮೆಟ್ಟಿಲಿಳಿದು, ಬಚ್ಚಲು ಮನೆಗೆ ಹೋಗಿ ಕೈ ಕಾಲು ಮುಖ ತೊಳೆದುಕೊಂಡರು. ದೇವರ ಮನೆಗೆ ಹೋದರು. ಅಲ್ಲಿ ಮಡಿಯಾಗಿದ್ದ ಒಂದು ಕೆಂಪು ವಸ್ತ್ರ ತೆಗೆದುಕೊಂಡರು. ತಮ್ಮ ಬಂಗಾರದ ಕರಡಿಗೆಯಲ್ಲಿದ್ದ ಲಿಂಗವನ್ನು ಆ ವಸ್ತ್ರದಲ್ಲಿ ಸುತ್ತಿ ಕಟ್ಟಿ ಕೊರಳಿಗೆ ಕಟ್ಟಿಕೊಂಡರು. ಬಂಗಾರದ ಕರಡಿಗೆಯನ್ನು ತೆಗೆದುಕೊಂಡು ಪುನಃ ಮಹಡಿಯೇರಿದರು.

ಆ ಬಂಗಾರದ ಕರಡಿಗೆ ಆ ಕಾಲದಲ್ಲಿ ಬಳಕೆಯಲ್ಲಿದ್ದ ತೊಟ್ಟಿಲು ಆಕಾರದಲ್ಲಿದ್ದು, ಸು. ೧ ೧/೨ -೨ ಸೇರು ತೂಕ ತೂಗುತ್ತಿತ್ತು. ಅದನ್ನು ಒಂದು ಬಟ್ಟೆಯಲ್ಲಿ ಸುತ್ತಿ ಬ್ರಾಹ್ಮಣ ಗೃಹಸ್ಥನ ಕೈಯಲ್ಲಿಟ್ಟು, ಹೇಳಿದರು: "ಅಪ್ಪ ಯಾರಿಗೂ ತೋರಿಸದೆ ತೆಗೆದುಕೊಂಡು ಹೋಗು. ಯಾರಾದರೂ ನೋಡಿದರೆ ಕಿತ್ತುಕೊಂಡಾರು. ಜೋಪಾನ. ಬೇಗ ಹೊರಟು ಬಿಡು. ಮಗಳ ಮದುವೆ ಚೆನ್ನಾಗಿ ನಡೆಯಲಿ. ದಂಪತಿಗಳು ನೂರ್ಕಾಲ ಚೆನ್ನಾಗಿರಲಿ".

ಮುಂದೆ ಕೆಲವು ದಿನ ಕರಡಿಗೆ ಕಾಣೆಯಾದ ವಿಷಯ ಮನೆಯವರಿಗೆ ತಿಳಿಯದ ಹಾಗೆ ಸದಾ ವಲ್ಲಿಯನ್ನು ಹೊದ್ದು ಓಡಾಡಿದರು. ೧೫ ದಿನಗಳಾದ ಮೇಲೆ ವಸ್ತ್ರದ ಲಿಂಗ ಕಟ್ಟಿಕೊಂಡಿದ್ದುದು ಮಗಳ ಕಣ್ಣಿಗೆ ಬಿತ್ತು. "ಇದೇಕೆ ಅಪ್ಪಾಜಿ, ವಸ್ತ್ರದಲ್ಲಿ ಲಿಂಗ ಕಟ್ಟಿಕೊಂಡಿದ್ದೀರಿ. ಕರಡಿಗೆ ಎಲ್ಲಿ?" ಎಂದು ಕೇಳಿದಳು. ಶೆಟ್ಟರು ನಗುತ್ತ, "ಅದು ಹೋಗಬೇಕಾದ ಜಾಗಕ್ಕೆ ಹೋಯಿತು" ಎಂದರು.

ಜಯಾ ರಾಜಶೇಖರ್, 'ಎಲೆ ಮಲ್ಲಪ್ಪ ಶೆಟ್ಟರು', ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ, ೧೯೮೨, ಪು. ೪೮-೫೨.

೪. 'ಅನುಪಸ್ಥಿತಿಯಲ್ಲಿ ಅಕಾಡೆಮಿಯ ಗೌರವ'

ಮದರಾಸಿನ (ಈಗ ಚೆನ್ನೈ) ಮಹಾಮಹೋಪಾಧ್ಯಾಯ ಪ್ರೊ. ಎಸ್. ಕುಪ್ಪಸ್ವಾಮಿ ಶಾಸ್ತ್ರಿಗಳಿಗೂ ಮೈಸೂರಿನ ಸಂಸ್ಕೃತ ಮತ್ತು ತತ್ತ್ವಶಾಸ್ತ್ರ ಪ್ರಾಧ್ಯಾಪಕರಾದ ಎಂ. ಹಿರಿಯಣ್ಣನವರಿಗೂ ಒಳ್ಳೆಯ ಸ್ನೇಹ. ಶಾಸ್ತ್ರಿಗಳಿಗೆ ಹಿರಿಯಣ್ಣನವರ ಪಾಂಡಿತ್ಯ ಮತ್ತು ಖಚಿತವಾದ ಅಭಿವ್ಯಕ್ತಿಸಾಮರ್ಥ್ಯಗಳ ಬಗೆಗೆ ವಿಶೇಷವಾದ ಗೌರವವಿದ್ದಿತು.

ಹಿರಿಯಣ್ಣನವರ ವ್ಯಕ್ತಿತ್ವ ಗಂಭೀರವಾದ್ದು, ಮಾತು ತುಂಬ ಮಿತವಾದ್ದು. ಅದಕ್ಕಿಂತ ಹೆಚ್ಚಾಗಿ, ತಮ್ಮ ದೊಡ್ಡಸ್ತಿಕೆಯನ್ನು ಎಲ್ಲಿಯೂ ಮೆರೆಸದ ವಿನಯವಂತಿಕೆ ಅವರ ಹಿರಿತನವಾಗಿತ್ತು. ಅಂತಹ ಒಂದು ಸಂದರ್ಭವಿದು.

ಮದರಾಸು ಸಂಸ್ಕೃತ ಅಕಾಡೆಮಿ ೧೯೩೮ರಲ್ಲಿ ಹಿರಿಯಣ್ಣನವರನ್ನು 'ಸಂಸ್ಕೃತ ಸೇವಾಧುರೀಣ' ಎಂಬ ಬಿರುದಿನೊಂದಿಗೆ ಸನ್ಮಾನಿಸಬೇಕೆಂದು ತೀರ್ಮಾನಿಸಿತು. ಈ ತೀರ್ಮಾನವನ್ನು ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರೀಸಮಿತಿಯಲ್ಲೇ ತೆಗೆದುಕೊಳ್ಳಲಾಯಿತು. ಒಂದು ವಿಶೇಷವಾದ ಸಮಾರಂಭವನ್ನೇರ್ಪಡಿಸಿ ಈ ಸನ್ಮಾನವನ್ನು ಅವರಿಗೆ ನೀಡಬೇಕೆಂದು ಸಹ ನಿರ್ಧರಿಸಲಾಯಿತು. ಕಾರ್ಯದರ್ಶಿಗಳು ಈ ಸಂಬಂಧದಲ್ಲಿ ಅವರಿಗೆ ಒಂದು ಪತ್ರವನ್ನು ಬರೆದರು. ಪತ್ರ ಕೈಸೇರಿದ ಕೂಡಲೇ ಹಿರಿಯಣ್ಣನವರಿಂದ ಮೊದಲು ಒಂದು ಟೆಲಿಗ್ರಾಂ, ಬಳಿಕ ಒಂದು ಪತ್ರ ಕಾರ್ಯದರ್ಶಿಗಳಿಗೆ ತಲುಪಿದುವು.

ಅಂತಹ ಸನ್ಮಾನವನ್ನು ಸ್ವೀಕರಿಸಲು ತಮ್ಮ ಅಸಮರ್ಥತೆಯನ್ನು ಸೂಚಿಸಿ, ತಮ್ಮನ್ನು ಕ್ಷಮಿಸುವಂತೆ ಅವುಗಳಲ್ಲಿ ಅವರು ಮನವಿಮಾಡಿದ್ದರು.

ಅಲ್ಲಿಗೇ ಸುಮ್ಮನಾಗಲಿಲ್ಲ. ಮೈಸೂರಿಂದ ಮದರಾಸಿಗೆ ಪ್ರಯಾಣ ಮಾಡಿದರು. ಅಧ್ಯಕ್ಷರನ್ನು ಕಂಡು, ಕೊಡಲಿದ್ದ ಬಿರುದು ಸ್ವೀಕರಿಸಲು ತಮಗೆ ಸಾಧ್ಯವಾಗದಿರುವುದಕ್ಕೆ ತಮಗಿದ್ದ ಕಾರಣಗಳನ್ನು ಸ್ವತಃ ವಿಶದಪಡಿಸಿದರು. ಪ್ರತ್ಯೇಕವಾಗಿ ಕಾರ್ಯದರ್ಶಿಗಳ ಮನೆಗೂ ಹೋಗಿ ಆ ಕಾರಣಗಳನ್ನು ಅವರಿಗೂ ವಿವರಿಸಿದರು. ಶಾಸ್ತ್ರಿಗಳಾದರೋ, ಸಮಿತಿ ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಬದಲಾಯಿಸಲು ಸಾಧ್ಯವಾಗದೆಂದು ಹೇಳಿ ನೋಡಿದರು. ಆದರೆ ಹಿರಿಯಣ್ಣನವರೂ ತಮ್ಮ ನಿರ್ಧಾರ ಬದಲಾಯಿಸಲಿಲ್ಲ.

ಕೊನೆಗೆ ಒಂದು ಬಗೆಯ ರಾಜಿಗೆ ಎಲ್ಲರೂ ಒಪ್ಪಿದರು. ಆ ವರ್ಷ ಕಾಳಿದಾಸ ದಿನಾಚರಣೆಯ ಸಂಬಂಧವಾದ ಉತ್ಸವಕಾರ್ಯಕ್ರಮಗಳು ನಡೆಯುವಾಗ ಹಿರಿಯಣ್ಣನವರ ಅನುಪಸ್ಥಿತಿಯಲ್ಲಿ ಅಕಾಡೆಮಿಯ ಗೌರವ ಅವರಿಗೆ ಸಲ್ಲುವುದಾಗಬೇಕು, ಅದನ್ನು ಅವರು ದಯೆಯಿಟ್ಟು ಒಪ್ಪಿಕೊಳ್ಳಬೇಕು ಎಂಬುದೇ ಆ ರಾಜೀಸೂತ್ರ. ಆ ಪ್ರಕಾರವೇ ಆಗಿನ ಮದರಾಸು ಉಚ್ಚನ್ಯಾಯಾಲಯದ ನ್ಯಾಯಧೀಶರಾಗಿದ್ದ ಎಸ್. ವರದಾಚಾರಿಯರ್ ಅವರ ಅಧ್ಯಕ್ಷತೆಯಲ್ಲಿ ಆ ಪ್ರಶಸ್ತಿಸಮಾರಂಭ ಜರುಗಿತು.

Dr. V. Raghavan, Dr. G. Marulasiddaiah (Ed.), Prof. M. Hiriyanna Birth Centenary Commemoration Volume, Mysore 1972, Pp. 10-11

೫. 'ಅಪರರಾತ್ರಿಯಲ್ಲಿ ಭಾರವಿ'

ಆಸ್ಥಾನ ವಿದ್ವಾನ್ ಬೆಟ್ಟ ಹಲಸೂರು ವೆಂಕಟರಾಮ ಶಾಸ್ತ್ರಿಗಳು (ಈಚೆಗೆ ಇವರನ್ನು ವ್ಯಧಿಕರಣಂ ವೆಂಕಟರಾಮ ಶಾಸ್ತ್ರಿಗಳೆಂದು ಕರೆಯುವುದೇ ರೂಢಿ) ಸು. ೧೮೮೪-೮೫ರಲ್ಲಿ ಮೈಸೂರಿನ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದರು. ಅಲ್ಲ ಅವರಿಗೆ ಚಾಮರಾಜನಗರ ಶ್ರೀಕಂಠಶಾಸ್ತ್ರಿಗಳು ಸಾಹಿತ್ಯದ ಉಪಾಧ್ಯಾಯರು. ಆಗ ಇವರು ವೆಂಕಟಾಧ್ವರಿಯ 'ವಿಶ್ವಗುಣಾದರ್ಶ ಚಂಪು'ವನ್ನು ಪಾಠ ಹೇಳುತ್ತಿದ್ದರು. ಆಗ ವೆಂಕಟರಾಮ ಶಾಸ್ತ್ರಿಗಳಿಗೆ ಸಹಪಾಠಿಗಳಾಗಿದ್ದವರು ಎಂದರೆ, ರುದ್ರಪಟ್ಣದ ಶಾಮ ಶಾಸ್ತ್ರಿಗಳು, ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯರು, ಎಸ್. ತಿಮ್ಮಪ್ಪಯ್ಯ ಶಾಸ್ತ್ರಿಗಳು ಮೊದಲಾದವರು.

ಪಾಠಶಾಲೆಯಲ್ಲಿ ನಡೆಯುವ ಪಾಠವಲ್ಲದೆ ಗುರುಗಳಾದ ಶ್ರೀಕಂಠ ಶಾಸ್ತ್ರಿಗಳಿಂದ ಪ್ರತ್ಯೇಕವಾಗಿ ಭಾರವಿಯ 'ಕಿರಾತಾರ್ಜುನೀಯ'ವನ್ನು ಕಲಿಯಬೇಕೆಂದು ವೆಂಕಟರಾಮ ಶಾಸ್ತ್ರಿಗಳೂ ಆರ್. ಶಾಮಶಾಸ್ತ್ರಿಗಳೂ ಅಪೇಕ್ಷಿಸಿದರು. ಇದು ಹೇಗೆ ನಡೆಯಿತು ಎಂಬುದನ್ನು

ಅವರು ಹೀಗೆ ವಿವರಿಸಿದ್ದಾರೆ; "ಈ ಕಾಲದ ಪುಸ್ತಕಪಾಠದ ವಿದ್ಯಾರ್ಥಿಗಳೂ ಗ್ರಹಿಸಿರಲೆಂದು ಭಾವಿಸಿ" ಅದನ್ನು ವಿವರಿಸಿರುವುದಾಗಿ ಅವರು ತಿಳಿಸಿದ್ದಾರೆ.

"ಆಗ ಶಾಸ್ತ್ರಿಗಳು ಕೋಟೆಯ ಬುಡದ ಕಂದುಕದ ಬೀದಿಯಲ್ಲಿ ವಾಸ ಮಾಡುತ್ತಿದ್ದರು. ಮುಂದಿನ ದಿವಸದ ಪಾಠವನ್ನು ನಾವು ಅದರ ಹಿಂದಿನ ರಾತ್ರೆಯೇ ಬರೆದುಕೊಂಡು, ಚೆನ್ನಾಗಿ ಬಾಯಿಗೆ ಬರುವಂತೆ ಘಟ್ಟಿಮಾಡಿಕೊಂಡು ಮಲಗಿಕೊಳ್ಳುತ್ತಿದ್ದೆವು. ಬೆಳಗಿನ ಝಾವ ಮೂರು ಘಂಟೆಯ ಕತ್ತಲಲ್ಲೇ ನಾವಿಬ್ಬರೂ ಎದ್ದು ಶಾಸ್ತ್ರಿಗಳ ಮನೆಗೆ ಹೋಗಿ ಕತ್ತಲಲ್ಲೇ ತಡವರಿಸಿಕೊಂಡು ಅವರ ಎದುರಿಗೆ ಕುಳಿತುಕೊಂಡು ಬಾಯಲ್ಲಿಯೇ ಶ್ಲೋಕವನ್ನು ಆರಂಭಿಸಿ ನಿಲ್ಲಿಸುತ್ತಿದ್ದೆವು. ಶಾಸ್ತ್ರಿಗಳೂ ನಮ್ಮಂತೆಯೇ ಆ ಕತ್ತಲಲ್ಲಿ ತಾವೂ ಬಾಯಲ್ಲಿಯೇ ಅನ್ವಯ ಅರ್ಥ ತಾತ್ಪರ್ಯ ಆಕಾಂಕ್ಷೆ ಸಮಾಸಗಳನ್ನು ಹೇಳಿ ಪಾಠವನ್ನು ಮುಗಿಸುತ್ತಿದ್ದರು.

ಇದೇ ಕ್ರಮದಿಂದಲೇ ಅವರ ಬಳಿಯಲ್ಲಿ ನಾವು ಪಾಠವನ್ನೆಲ್ಲಾ ಮುಗಿಸಿದೆವು. ಈ ಕ್ರಮದಿಂದ ಗುರುಕುಲವಾಸವನ್ನು ಮಾಡುತ್ತಿದ್ದಾಗ ಶಾಸ್ತ್ರಿಗಳು ಮಲಗಿಕೊಳ್ಳುವುದಕ್ಕಾಗಿ ಮಹಡಿಯ ಮೇಲೆ ಗೋಡೆ ಹಾಕಿ ಒಂದು ಕೊಠಡಿಯನ್ನು ಕಟ್ಟಿಕೊಟ್ಟೆವು."

ಇದು ಅಪರರಾತ್ರಿಯಲ್ಲಿ ಭಾರವಿಯನ್ನು ಕಲಿತದ್ದಕ್ಕೆ ಕೃತಜ್ಞತೆ.

ಸಂ. ಚಾ. ವೆಂಕಟರಮಣ ಶಾಸ್ತ್ರಿ, ಕಾದಂಬರೀ ಸಂಗ್ರಹ, ೨೧-೧-೩, ೧೯೩೪ (ಶ್ರೀಕಂಠ ಸ್ಮಾರಕಾಂಕವೆಂಬ ಸಂಚಿಕೆ), ಪು.೨೨

೬. 'ಅಯ್ಯೋ, ಹೀಗೆ ಮಾಡಿಬಿಟ್ಟೆನಲ್ಲ!'

ಎನ್. ನರಸಿಂಹಮೂರ್ತಿಗಳು ವಕೀಲರಾದ ನಂಜನಗೂಡು ಸುಬ್ಬರಾಯರ ಮಗ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾಗಿ ಪ್ರಸಿದ್ಧರಾಗಿದ್ದ ಎನ್. ಎಸ್. ಸುಬ್ಬರಾಯರ ಅಣ್ಣಂದಿರು. ಮೂರ್ತಿಗಳನ್ನು ಡಿವಿಜಿ ತಮ್ಮ ಆತ್ಮಗುರುಗಳೆಂದು ತಿಳಿದು ಗೌರವದಿಂದ ಕಾಣುತ್ತಿದ್ದರು. ಡಿವಿಜಿ ಅವರು ಗಣ್ಯ ಇಂಗ್ಲಿಷ್ ಗ್ರಂಥಗಳನ್ನು ವ್ಯಾಸಂಗ ಮಾಡಲು ಮಾರ್ಗದರ್ಶನಮಾಡಿದವರು ಇವರೇ. ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯಮೀಮಾಂಸೆ, ಕಾವ್ಯಸಾಹಿತ್ಯ ಎಲ್ಲವೂ ಆ ಗ್ರಂಥಗಳಲ್ಲಿ ಸೇರಿದ್ದುವು. ಅವರು ಬೆಂಗಳೂರಿನ ರೆಸಿಡೆಂಟರ ಕಛೇರಿಯಲ್ಲಿ ನ್ಯಾಯಶಾಸ್ತ್ರದ ಇಲಾಖೆಯಲ್ಲಿದ್ದರು. ರೆಸಿಡೆಂಟ್ ಫ್ರೇಸರ್ ಸಾಹೇಬರು ಮೂರ್ತಿಗಳ ಲಾ ಪಾಂಡಿತ್ಯವನ್ನು ಮೆಚ್ಚಿಕೊಂಡಿದ್ದರು. ಒಳ್ಳೆಯ ಸ್ನೇಹಗೋಷ್ಠಿಯ ಸಲ್ಲಾಪದ ಲಾಭ ಕಳೆದುಕೊಳ್ಳಬೇಕಾಗುತ್ತದಲ್ಲ ಎಂದು ತಮಗೆ ಶಿಫಾರಸು ಮಾಡಿದ್ದ ಬೇರೆ ಸ್ಥಳದ ಮುನ್ಸಿಫ್ ಅಥವಾ ಸಬ್ ಜಡ್ಜಿ ಪದವಿಯನ್ನು ನಿರಾಕರಿಸಿದ್ದ

ಮಹನೀಯರು, ಮೂರ್ತಿಯವರು. ರೆಸಿಡೆಂಟ್ ಫ್ರೇಸರ್ ತಾವು ನಿವೃತ್ತರಾಗಿ ತೆರಳುವಾಗ ಕೆಲವು ಅಮೂಲ್ಯವಾದ ಗ್ರಂಥಗಳನ್ನು ಮೂರ್ತಿಯವರಿಗೆ ನೆನಪಿನ ಕಾಣಿಕೆಯಾಗಿ ಕೊಟ್ಟರು. ಮೂರ್ತಿ ಸಾಧುಸ್ವಭಾವದವರು, ಸಜ್ಜನರು.

ಮೂರ್ತಿ ಕಂಟೋನ್ಮೆಂಟ್ ಕೋರ್ಟಿನಲ್ಲಿ ಕೆಲಸಮಾಡುತ್ತಿದ್ದಾಗ, ದೀಪಾವಳಿ ಹಬ್ಬದ ಪ್ರಯುಕ್ತ ಮಾರ್ವಾಡಿ ಗುಜರಾತಿ ಮೊದಲಾದ ಉತ್ತರದೇಶದ ಜನ ವಿಧ ವಿಧವಾದ ಸಿಹಿತಿಂಡಿಗಳನ್ನು ಮೂರ್ತಿಯವರಿಗೆ ತಂದು ಕೊಡುತ್ತಿದ್ದರು. ಅಂತಹ ಒಂದು ದೀಪಾವಳಿ ಹಬ್ಬದ ವರ್ಷ, ಡಿವಿಜಿ ಮತ್ತು ಅವರ ಮಿತ್ರರು ಮೂರ್ತಿಯವರ ಮನೆಯಲ್ಲಿ ಆ ತಿಂಡಿಗಳ ಸಮಾರಾಧನೆಗೆಂದು ಆಹ್ವಾನಿತರಾಗಿ ಸೇರಿದರು.

ಸಮಾರಾಧನೆ ತೊಡಗಿತು. ಜಮಾಖಾನದ ಮೇಲೆ ದೊಡ್ಡದೊಡ್ಡ ನ್ಯೂಸ್‌ಪೇಪರ್ ಹಾಳೆಗಳನ್ನು ಹರಡಿ ಅವುಗಳ ಮೇಲೆ ಸಿಹಿತಿಂಡಿ ಖಾರತಿಂಡಿಗಳನ್ನು ರಾಶಿಯಾಗಿ ಹಾಕಿಕೊಂಡು ಎಲ್ಲರೂ ಸಾವಧಾನವಾಗಿ ತಿಂದು ಮುಗಿಸಿದರು. ಕುಡಿಯುವ ನೀರು ಬೇಕಾಯಿತು. ಮೂರ್ತಿಗಳು ಅಡಿಗೆಯ ಆಚಾರ್‍ಯರಿಗೆ ನೀರು ತಂದುಕೊಡುವ ಹಾಗೆ ಕೇಳಿದರು; ನೀರು ಕುಡಿಯುವಷ್ಟರಲ್ಲಿ ಉಪಾಹಾರ ಸೇವನೆ ಪೂರೈಸಿತ್ತು. ಬಳಿಕ ಆಚಾರ್‍ಯರಿಗೆ ಹರಡಿದ್ದ ಹಾಳೆಗಳನ್ನು ತೆಗೆದು ಹೊರಗೆ ಹಾಕುವಂತೆ ಹೇಳಿದರು. ಅವರು ಹಾಗೆಯೇ ಮಾಡಿದರು. ಈಗ ಮೂರ್ತಿಯವರಿಗೆ ತಾವು ಮಾಡಿದ್ದು ಅಚಾತುರ್ಯವೆನಿಸಿತು. 'ಅಯ್ಯೋ, ಹೀಗೆ ಮಾಡಿಬಿಟ್ಟೆನಲ್ಲ!' ಎಂದು ಪಶ್ಚಾತ್ತಾಪಪಡಲು ಆರಂಭಿಸಿದರು. ಗುಂಡಪ್ಪನವರು "ಏನು ಮಾಡಿದಿರಿ? ಈಗ ಏನೂ ಆಗಲಿಲ್ಲವಲ್ಲ!" ಎಂದು ಕೇಳಿದರು. ಮೂರ್ತಿಯವರು ನೊಂದುಕೊಂಡು, "ಆಚಾರ್‍ಯರನ್ನು ಎಂಜಲುಕಾಗದ ತೆಗೆಯುವಂತೆ ಹೇಳಿದೆನಲ್ಲಾ, ನಾನೇ ತೆಗೆಯಬೇಕಾಗಿತ್ತು' ಎಂದರು. ಗುಂಡಪ್ಪನವರು, "ಬಿಡಿ ಮೂರ್ತಿ, ಅದೇನು ದೊಡ್ಡ ವಿಷಯ" ಎಂದು ಸಮಾಧಾನ ಹೇಳಿದರು. ಆಗ ಮೂರ್ತಿಯವರು "ಹಾಗಲ್ಲಪ್ಪ, ಅದು ಆಚಾರ್‍ಯರು ಮಾಡಬೇಕಾದ ಕೆಲಸವಲ್ಲ. ನಾನು ಬಾಯಿತಪ್ಪಿ ಹಾಗೆಂದು ಬಿಟ್ಟೆ. ಆಲೋಚನೆ ಮಾಡಿ ಆಡಿದ ಮಾತಲ್ಲ, ಅದು. ಈಗ ನಾನು ಈ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು" ಎಂದರು.

ಹೀಗೆ ಹೇಳಿ ಮೂರ್ತಿಯವರು ಅಡಿಗೆಯ ಆಚಾರ್‍ಯರನ್ನು ಕರೆದು ಕ್ಷಮಾಪಣೆ ಕೇಳಿಕೊಂಡರು. ಆಚಾರ್‍ಯರು ನಗುತ್ತಿದ್ದರು. "ಏನು ಸ್ವಾಮಿ ಇದು! ನಾವು ಹೀಗೆಯೇ ಎಲ್ಲ ಕಡೆಯೂ ಮಾಡುವುದಿಲ್ಲವೇ?" ಎಂದು ಹೇಳಿದರು ಸಮಾಧಾನವಾಗಿ.

ಆದರೇನು? ಮೂರ್ತಿಗಳಿಗೆ ಮನಸ್ಸು ತಡೆಯಲಿಲ್ಲ. ಮಾರನೆಯ ದಿನ ಆಚಾರ್‍ಯರು ಮನೆಗೆ ಬಂದ ಕೂಡಲೇ ಒಂದು ಜಟಕಾಗಾಡಿ ತರಿಸಿ ಅದರಲ್ಲಿ ಅವರನ್ನು ಹತ್ತಿಸಿಕೊಂಡು, ಒಂದು ದರ್ಜಿ ಅಂಗಡಿಗೆ ಹೋದರು. ಅಲ್ಲಿ ಅವರಿಗೆ ಒಂದು ಕೋಟು ಹೊಲಿಸಿಕೊಟ್ಟರು.

ಡಿವಿಜಿ, 'ಹೃದಯ ಸಂಪನ್ನರು', ಜ್ಞಾಪಕ ಚಿತ್ರಶಾಲೆ-೭, ಕಾವ್ಯಾಲಯ, ೧೯೭೪, ಪು. ೪೫-೪೬

೭. 'ಅಲ್ಲಿಯ ವರೆಗೆ ತಾಳಿ'

ಒಮ್ಮೆ ಎಲ್. ಎಸ್. ಶೇಷಗಿರಿರಾಯರು ಡಿವಿಜಿ. ಅವರ ಮನೆಗೆ ಬಂದು ಅವರೊಂದಿಗೆ ಮಾತಾಡುತ್ತಿದ್ದರು. ಹೀಗೆ ಮಾತಾಡುತ್ತಿರುವಾಗ ಅಲ್ಲಿಗೆ ಮಾಸ್ತಿಯವರು ಬಂದರು. ಮಾಸ್ತಿಯವರು ಬಂದ ಉದ್ದೇಶವೆಂದರೆ, ಅವರ ಸಂಪಾದಕತ್ವದ ಜೀವನ ಪತ್ರಿಕೆಯ ಒಂದು ಸಂಚಿಕೆಯನ್ನು ಡಿ. ವಿ. ಗುಂಡಪ್ಪನವರ ವಿಶೇಷಸಂಚಿಕೆಯನ್ನಾಗಿ ಹೊರತರುವುದನ್ನು ಅವರ ಗಮನಕ್ಕೆ ತಂದು, ಅದಕ್ಕೆ ಅವರ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು ಎನ್ನುವುದು. ಡಿ.ವಿ.ಜಿ. ಅದಕ್ಕೆ ಒಪ್ಪಿಕೊಳ್ಳಲಿಲ್ಲ.

ಮಾಸ್ತಿಯವರು ತುಂಬ ಒತ್ತಾಯಮಾಡಿದರು. ಆಗ ಡಿವಿಜಿ ಅವರು ಮಾಸ್ತಿಯವರಿಗೆ, "ಈಗ ಬೇಡ, ವೆಂಕಟೇಶ ಅಯ್ಯಂಗಾರ್; ನನ್ನನ್ನು ಕೇಳದೆಯೇ ನೀವು ಬೇಕಾದ್ದು ಮಾಡಬಹುದಾದ ದಿನ ಬರುತ್ತದೆ; ಅಲ್ಲಿಯ ವರೆಗೆ ತಾಳಿ" ಎಂಬುದಾಗಿ ಹೇಳಿ ಪ್ರಕರಣವನ್ನು ಮುಗಿಸಿದರು. ಮಾಸ್ತಿಯವರು ಸುಮ್ಮನಾದರು.

ಈ ಸುಮಾರಿನಲ್ಲೇ 'ಕರ್ಮವೀರ' ಪತ್ರಿಕೆಯವರು ಡಿವಿಜಿ. ಅವರನ್ನು ಸಂದರ್ಶಿಸಿ ಒಂದು ಲೇಖನವನ್ನು ಸಿದ್ಧಪಡಿಸಿಕೊಡುವಂತೆ ಎಲ್. ಎಸ್. ಶೇಷಗಿರಿರಾಯರಿಗೆ ತಿಳಿಸಿ, ಅವನರ್ನು ಒಪ್ಪಿಸಿದರು. ಆ ಬಗ್ಗೆ ಡಿವಿಜಿ. ಅವರಿಗೂ ಒಂದು ಪತ್ರ ಬರೆದರು. ಶೇಷಗಿರಿರಾಯರು ತಾವೂ ಡಿವಿಜಿ. ಅವರಿಗೆ ಪತ್ರಬರೆದು ಸಂದರ್ಶನಕ್ಕೆ ಅವಕಾಶ ಕೋರಿದರು.

ಡಿವಿಜಿ. ಉತ್ತರರೂಪವಾಗಿ ಕರ್ಮವೀರ ಪತ್ರಿಕೆಗೆ ಹೀಗೆ ೨೩-೧೨-೧೯೬೯ ರಂದು ಒಂದು ಪತ್ರ ರವಾನಿಸಿದರು.

Your kind letter of the 22nd. You know you are always welcome in my place. But the Karmaveera proposal, whatever it be, frightens me. I am averse to giving myself publicity. I am an old man now, and would like to be left to myself, to do what I like, or not to do anything at all.

ಶೇಷಗಿರಿ ರಾಯರೇನೋ ಡಿವಿಜಿ. ಅವರ ಮನೆಗೆ ಹೋದರು. ಆದರೆ ಡಿವಿಜಿ. ಅವರಿಗೆ ಸ್ಪಷ್ಟವಾಗಿ 'ಸಂದರ್ಶನದ ಸುದ್ದಿ ಬೇಡ' ಎಂದು ತಿಳಿಸಿ, ಹಾಗೆಯೇ ಒಂದು ಗಂಟೆ ಕಾಲ ಆತ್ಮೀಯವಾಗಿ ಮಾತಾಡಿದರು.

ಸಂ. ಎಂ. ವಿ. ಸೀತಾರಾಮಯ್ಯ, 'ಧೀಮಂತ: ಡಿವಿಜಿ ಜನ್ಮಶತಮಾನೋತ್ಸವ ಸಂಸ್ಮರಣ ಸಂಪುಟ', ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು-೧೯, ೧೯೮೮, ಪು. ೨೨೭-೨೭

೮. 'ಅವನ ತಲೆಗೇ ಆ ರುಮಾಲು ಚೆನ್ನಾಗಿ ಒಪ್ಪುತ್ತದೆ'

ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ರಾಮಕೃಷ್ಣಪ್ಪನವರು ಶಿರಸ್ತೇದಾರ್ ಆಗಿ ಅರಮನೆಯ ಕಛೇರಿಯಲ್ಲಿರುತ್ತಿದ್ದರು. ಅವರು ಸದಾಚಾರ ಸಂಪನ್ನರು, ಸ್ವಾಮಿನಿಷ್ಠರು, ನಿಸ್ಪೃಹರು. ತಮ್ಮಲ್ಲಿ ಸಹಾಯಕ್ಕಾಗಿ ಬಂದು ಕಯ್ಯೊಡ್ಡಿದವರಿಗೆ ನಾಸ್ತಿ ಎನ್ನುತ್ತಿರಲಿಲ್ಲ. ಅವರು ತಮ್ಮ ಹಾಸಿಗೆ ತಲೆದಿಂಬಿನ ಕೆಳಗೆ ಆ ಕಾಲದ ದೊಡ್ಡಾಣೆ (೨ ಆಣೆ), ಪಾವಲಿ, ಎಂಟಾಣೆ, ರೂಪಾಯಿ ನಾಣ್ಯಗಳನ್ನು ಬೇರೆ ಬೇರೆ ಪೊಟ್ಟಣಗಳಾಗಿಟ್ಟು ಕೊಂಡು, ಮನೆಗೆ ಯಾರೇ ಬಂದರೂ, ಅವರನ್ನು ಗೌರವದಿಂದಲೂ ಆತ್ಮೀಯತೆ ಯಿಂದಲೂ ಬರಮಾಡಿಕೊಂಡು, ಅವರವರ ಯೋಗ್ಯತಾನುಸಾರ ದಕ್ಷಿಣೆ ತಾಂಬೂಲ ಕೊಟ್ಟು ಕಳುಹಿಸುತ್ತಿದ್ದರು. ಅರಮನೆ ತಮಗೆ ನೀಡಿದ್ದ ಗೌರವವಿಶೇಷಗಳನ್ನು ನಿರಾಕರಿಸಿದ್ದರು.

ಅರಮನೆಯ ಖಜಾನೆಯಲ್ಲಿ ಆಗಿದ್ದ ಲೆಕ್ಕಾಚಾರದ ತಪ್ಪಿನಿಂದ ದೊರೆಗಳಿಗೂ ರಾಮಕೃಷ್ಣಪ್ಪನವರಿಗೂ ಸ್ವಲ್ಪ ಮನಸ್ತಾಪವಾಗಿತ್ತು. ಅದಕ್ಕೆ ರಾಮಕೃಷ್ಣಪ್ಪನವರು ಕಾರಣವಾಗಿರಲಿಲ್ಲ ಎನ್ನುವುದು ಕೆಲವು ದಿನಗಳ ಮೇಲೆ ತಿಳಿದು, ದೊರೆಗಳು ಅವರನ್ನು ಸಮಾಧಾನ ಪಡಿಸಿದರು. "ಅಯ್ಯಾ ರಾಮಕೃಷ್ಣಪ್ಪ, ಕೋಪಿಸಿಕೊಳ್ಳಬೇಡಪ್ಪ; ನಾನು ದತ್ತು ತೆಗೆದುಕೊಳ್ಳೋಣ ಎಂದಿದ್ದೇನೆ. ಎಲ್ಲಾದರೂ ಶಾಪ ಕೊಟ್ಟೀಯ. ಅರಮನೆ ನಿನ್ನದು. ನೀನು ಬಿಳೀಬಟ್ಟೆ ಸಂನ್ಯಾಸಿ. ದಯೆಯಿಟ್ಟು ಈ ಬೀಗದ ಕೈ ಹಿಂದಕ್ಕೆ ತಗೋ" ಎಂದರು. ರಾಮಕೃಷ್ಣಪ್ಪನವರ ಮನಸ್ಸು ಕರಗಿತು.

ಪ್ರತಿದಿನ ಸಂಜೆ ದೊಡ್ಡ ಕೆರೆಗೆ ಹೋಗಿ ಸಂಧ್ಯಾವಂದನೆ ಮಾಡಿಕೊಂಡು, ಅನಂತರ ವರಾಹಸ್ವಾಮಿ ದೇವಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿ ಮನೆಗೆ ಹಿಂದಿರುಗುವುದು ರಾಮಕೃಷ್ಣಪ್ಪನವರ ದಿನಚರಿ. ಒಂದು ಸಂಜೆ ಪದ್ಧತಿಯಂತೆ ಸಂಧ್ಯಾವಂದನೆಗೆ ಕೆರೆಗೆ ಬಂದರು. ತಲೆಯ ಮೇಲಿದ್ದ ೧೨ ಮೊಳದ ಚೌಕದ ಜರಿಯಂಚಿನ ಗದ್ದೆಮಡಿ ರುಮಾಲನ್ನೂ ಕಸೆ ಅಂಗಿಯನ್ನೂ ಬಿಚ್ಚಿ ಮೆಟ್ಟಿಲ ಮೇಲಿಟ್ಟು ಮಡಿಪಂಚೆ ಉಟ್ಟು ಸಂಧ್ಯಾವಂದನೆಗೆ ಇಳಿದರು. ಆಗ ಯಾವನೋ ಒಬ್ಬ ಇದೇ ಸಮಯ ಕಾದಿದ್ದು ರಾಮಕೃಷ್ಣಪ್ಪನವರ ಬೆಲೆ ಬಾಳುವ ರುಮಾಲು ಹಾರಿಸಿಕೊಂಡು ಓಡಿದ. ಸುತ್ತ ಮುತ್ತ ಇದ್ದ ಜನ ಕೂಗಿಕೊಂಡರು. ಓಡಿ ಹೋಗಿ ಅವನನ್ನು ಹಿಡಿದು ತಂದರು.

ಆಗ ರಾಮಕೃಷ್ಣಪ್ಪನವರು ಹೇಳಿದರು: "ಅವನ ತಂಟೆಗೆ ಹೋಗಬೇಡಿ. ಅವನ ಪದಾರ್ಥ ಅವನು ತೆಗೆದುಕೊಂಡು ಹೋದರೆ, ಇಷ್ಟೇಕೆ ಗದ್ದಲ? ನನ್ನ ತಲೆಗಿಂತ ಅವನ ತಲೆಗೇ ಆ ರುಮಾಲು ಚೆನ್ನಾಗಿ ಒಪ್ಪುತ್ತದೆ". ಹೀಗೆ ಹೇಳಿ ಆ ರುಮಾಲನ್ನು ಅವನಿಗೇ ಉದಾರವಾಗಿ ದಾನಮಾಡಿದರು.

ಕೆ. ವಾಸುದೇವಾಚಾರ್ಯ, 'ನೆನಪುಗಳು', ಕಾವ್ಯಾಲಯ, ಮೈಸೂರು, ೧೯೭೭, ಪು. ೨೮-೩೧

೯. 'ಅವರ ಕರುಳು ಚುರಕ್ಕೆಂದಿತು'

ನಂಜನಗೂಡು ಸದ್ವೈದ್ಯಶಾಲೆಯ ಬಿ. ವಿ. ಪಂಡಿತರು ವೈದ್ಯ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಗಣ್ಯರಾಗಿದ್ದವರು. ಅವರು ಸ್ಥಳದ ರಾಮದೇವರ ಗುಡಿಯಲ್ಲಿ ಅರ್ಚಕರಾಗಿರುವಂತೆ ಶಂಕರ ಮಠದ ಮಾಧವ ಅಯ್ಯರ್ ಎಂಬುವನನ್ನು ನಿಯಮಿಸಿದರು. ಆತ ಶ್ರೋತ್ರಿಯ, ಭಗವದ್ಭಕ್ತ, ತುಂಬ ನಂಬಿಕಸ್ಥ. ಪಂಡಿತರು ಅದನ್ನು ಮನಗಂಡೇ ಅಲ್ಲಿ ಆತನನ್ನು ಅರ್ಚಕನನ್ನಾಗಿ ಮಾಡಿದ್ದರು.

ಒಂದು ಸಲ ಹೀಗಾಯಿತು: ಪೂಜೆಗೆ ಅಗ್ರೋದಕವನ್ನು ತರಲು, ಗುಡಿಯ ಬಾಗಿಲು ತೆರೆದಿಟ್ಟು ಅಯ್ಯರ್ ಹೊರಗೆ ಹೋದನು. ವಾಪಸ್ಸು ಬರುವಾಗ ೧೦ ನಿಮಿಷಗಳಾಗಿದ್ದುವು. ಹಿಂದಿರುಗಿ ಬಂದು ನೋಡುವಾಗ ಗುಡಿಯಲ್ಲಿ ರಾಮದೇವರ ಬೆಳ್ಳಿಯ ಕಿರೀಟ ಕರ್ಣಕುಂಡಲಗಳೂ ಸೀತಮ್ಮನವರ ಕೊರಳಿನ ಒಂದೆಳೆ ಬಂಗಾರದ ಜೋಮಾಲೆ ಸರವೂ ತೀರ್ಥದ ಬೆಳ್ಳಿತಟ್ಟೆ ಬಟ್ಟಲಗಳೂ ಕಳುವಾಗಿ ಹೋಗಿದ್ದವು.

ಪಾಪ! ಅಯ್ಯರ್ ಭಯದಿಂದ ತತ್ತರಿಸಿ ಹೋದನು. ಪೂಜೆ ನೋಡಲು ಬಂದ ಭಕ್ತನೊಬ್ಬನ ಮೂಲಕ ಕೇರಿಯ ಇತರರಿಗೂ ಈ ವಿಷಯ ತಿಳಿಯಿತು. ಜನರ ದೊಡ್ಡ ಗುಂಪು ಗುಡಿಯ ಮುಂದೆ ಸೇರಿತು. ಪೂಜಾರಿಯ ಬೇಜವಾಬ್ದಾರಿಯ ವರ್ತನೆಯಿಂದ ಹೀಗಾಯಿತು ಎಂದು ಒಬ್ಬ ಮುಂದಾಳು ಕೂಗಾಡಿದನು.

ಪೋಲೀಸರಿಗೆ ಯಾರೋ ಸುದ್ದಿ ಕೊಟ್ಟರು. ಅಯ್ಯರನ್ನು ಸ್ಟೇಷನ್ನಿಗೆ ಕರೆದೊಯ್ದರು. ಜನರ ಕಟುಟೀಕೆ, ಪೋಲೀಸ್ ಸ್ಟೇಷನ್ ವಾತಾವರಣ, ಪೋಲೀಸರ ಗದರಿಕೆ ಬೆದರಿಕೆ ಇವುಗಳಿಂದ ಅಯ್ಯರ್ ಕಂಗಾಲಾದನು, ಕಣ್ಣೀರಿಟ್ಟನು; ತನ್ನ ನಿರಪರಾಧಿತ್ವವನ್ನು ಹೇಳಿಕೊಂಡನು.

ಸುದ್ದಿ ಬಿ. ವಿ. ಪಂಡಿತರಿಗೆ ಮುಟ್ಟಿತು. ಅವರು ಒಡನೆಯೇ ಪೋಲೀಸ್ ಸ್ಟೇಷನ್‌ಗೆ ಧಾವಿಸಿದರು. ಪೂಜಾರಿಯ ದುಃಸ್ಥಿತಿಯನ್ನು ಕಣ್ಣಾರೆ ಕಂಡರು. ಅವರ ಕರುಳು ಚುರಕ್ಕೆಂದಿತು. ಅವರು ಕೂಡಲೇ ಅಯ್ಯರ್ ಪರವಾಗಿ ತಾವೇ ಪೋಲೀಸರಲ್ಲಿ ಕ್ಷಮೆ ಯಾಚಿಸಿದರು. ಗುಡಿಯಲ್ಲಿ ಕಳೆದು ಹೋದ ಬೆಳ್ಳಿ ಬಂಗಾರದ ಒಡವೆ ವಸ್ತುಗಳನ್ನು ತಾವೇ ಹೊಸದಾಗಿ ಮಾಡಿಸಿಕೊಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟರು. ಅರ್ಚಕನನ್ನು ತಕ್ಷಣವೇ ಅಲ್ಲಿಂದ ಬಿಡಿಸಿಕೊಂಡುಹೋದರು.

ಅಷ್ಟು ಮಾತ್ರವಲ್ಲ, ಮಾಧವ ಅಯ್ಯರ್ ನಿರಪರಾಧಿಯೆಂದು ಜನರಿಗೆಲ್ಲ ತಿಳಿಯ ಹೇಳಿದರು; ಆತನನ್ನೇ ರಾಮದೇವರ ಗುಡಿಯ ಅರ್ಚಕನನ್ನಾಗಿ ಮುಂದುವರಿಸಿದರು.

ಸಂ. ಸೀ. ಸೀತಾರಾಮ್, 'ಸದ್ವೈದ್ಯ' (ಬಿ. ವಿ. ಪಂಡಿತ್ ಶತಮಾನೋತ್ಸವ ಸಂಸ್ಮರಣ ಸಂಪುಟ), ಮಲ್ಲೇಶ್ವರಂ, ಬೆಂಗಳೂರು-೩, ಪು. ೧೮

೧೦. 'ಅವರು ದೇವರಂಥ ಮನುಷ್ಯರು'

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಕನ್ನಡ ಇಲಾಖೆಯಲ್ಲಿ ಪುಟ್ಟಯ್ಯನೆಂಬ ಒಬ್ಬ ನಾಲ್ಕನೆಯ ದರ್ಜೆ ನೌಕರನಿದ್ದನು. ಅವನು ಪ್ರಾಮಾಣಿಕ, ನಿಷ್ಠಾವಂತ. ಆಗ ಕನ್ನಡ ಇಲಾಖೆಯ ಹಲವರು ಹಿರಿಯ ಅಧ್ಯಾಪಕರೊಂದಿಗೆ ಖ್ಯಾತಕವಿ, ಭಾಷಾಂತರಕಾರ, ವಾಗ್ಮಿ ಎಸ್. ವಿ. ಪರಮೇಶ್ವರ ಭಟ್ಟರೂ ಇನ್ನೊಬ್ಬ ಅಧ್ಯಾಪಕರಾದ ಉ. ಕಾ. ಸುಬ್ಬರಾಯಾಚಾರ್ಯರೂ ಇರುತ್ತಿದ್ದರು. ಭಟ್ಟರು ದಿಟವಾಗಿಯೋ ವಿನೋದಕ್ಕಾಗಿಯೋ ಒಮ್ಮೆ ಪುಟ್ಟಯ್ಯನನ್ನು ಕೇಳಿದರು: "ಅಯ್ಯ, ಸುಬ್ಬರಾಯಾಚಾರ್ಯರ ವಿಷಯ ನಿನಗೇನೆನ್ನಿಸುತ್ತದೆ?" ಅವನು ಹೇಳಿದ: "ಮಹಾಸ್ವಾಮಿ, ಅವರು ದೇವರಂಥ ಮನುಷ್ಯರು; ಅವರಿಗೆ ಇನ್ನೊಂದು ಜನ್ಮವಿಲ್ಲ; ಈ ಜನ್ಮ ಮುಗಿದ ಕೂಡಲೇ ಅವರು ಮೋಕ್ಷಕ್ಕೆ ಹೋಗುತ್ತಾರೆ". ಬಳಿಕ ಭಟ್ಟರು ಸುಮ್ಮನಿರದೆ "ನನ್ನ ವಿಚಾರ ಹೇಗೆ?" ಎಂದು ಸಹ ಕೇಳಿದರು. "ನಿಮಗೆ ಹತ್ತಾರು ಜನ್ಮ ಬೇಕು" ಎಂದ ಅವನು. ಇದು ಅವರೇ ಉ. ಕಾ. ಸುಬ್ಬರಾಯಾಚಾರ್ಯರ ಬಗೆಗೆ ಬರೆಯುತ್ತ ಆರಂಭದಲ್ಲಿಯೇ ಹೇಳುವ ಪ್ರಕರಣ.

ಉ. ಕಾ. ಸುಬ್ಬರಾಯಾಚಾರ್ಯರು ಅವಿವಾಹಿತರು. 'ಸೋದರಿ ವಿಧವೆ, ಆಕೆಗೆ ಮಕ್ಕಳಿವೆ, ಜೊತೆಗೆ ಹತ್ತಿರದ ಕೆಲವರು ನೆಂಟರು ತೀರ ಬಡವರು. ಒಪ್ಪೊತ್ತಿನ ಊಟಕ್ಕೆ ಸಹ ಗತಿಯಿಲ್ಲ. ಹೀಗಿರುವಾಗ ನಾನೊಂದು ಸಂಸಾರ ಕಟ್ಟಿಕೊಂಡರೆ ಇವರಿಗೆಲ್ಲ ತೊಂದರೆಯಾಗುವುದಿಲ್ಲವೇ?" ಎಂದು ಹೇಳುತ್ತಿದ್ದರು; ತಮ್ಮ ಮಟ್ಟಿಗೆ ಅಧ್ಯಾತ್ಮ ಪ್ರವೃತ್ತಿಯುಳ್ಳವರಾಗಿ, ಪರೋಪಕಾರಶೀಲರಾಗಿ, ಸಾತ್ವಿಕ ನೀರವ ಸೇವಾಜೀವನದಲ್ಲಿಯೇ ಸುಖ ಕಂಡರು (೧೯೧೯-೧೯೮೯).

ಸುಬ್ಬರಾಯಾಚಾರ್ಯರು ಶುಭ್ರವಾದ ಬಿಳಿಯುಡುಗೆಯಲ್ಲದೆ ಬಣ್ಣದ, ರೇಷ್ಮೆಯ ಬಟ್ಟೆ ತೊಟ್ಟವರಲ್ಲ. ಕಚ್ಚೆಪಂಚೆ, ಮುಂಡು ತೋಳಿನ ಅಂಗಿ, ಉತ್ತರೀಯ ಆದರೆ ಆಯಿತು. ಒಮ್ಮೆ ಅವರ ಕುಟುಂಬದ ಪರಿಚಿತರೊಬ್ಬರ ಮಗ, ತಾನು ಬಟ್ಟೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ, ಅವರಿಗೆ ಚೆನ್ನಾದ ಎರಡು ಜೊತೆ ಪಂಚೆ ತಂದುಕೊಟ್ಟನು. ಅವರು ಅದನ್ನು ಸಂತೋಷದಿಂದಲೇ ಸ್ವೀಕರಿಸಿದರು. ಅತ್ತ ಆ ಹುಡುಗ ತನ್ನ ಉದ್ಯೋಗದ ಊರಿಗೆ ತೆರಳುವವರೆಗೆ ಸುಮ್ಮನಿದ್ದು, ಬಳಿಕ ಆ ಪರಿಚಿತರನ್ನು ಉದ್ದೇಶಿಸಿ ಕೇಳಿದರು: "ನನ್ನ ಸ್ನೇಹಿತರು ಒಬ್ಬರಿದ್ದಾರೆ. ಅವರು ತುಂಬಾ ಬಡವರು. ನಿಮ್ಮ ಮಗ ಕೊಟ್ಟ ಪಂಚೆಗಳಲ್ಲಿ ಒಂದನ್ನು ಅವರಿಗೆ ಕೊಡಬೇಕು ಎಂದಿದ್ದೇನೆ. ಕೊಡಬಹುದೇ?" ಅದಕ್ಕೆ ಅವರೆಂದರು: "ಅದು ನಿಮಗಾಗಿ ಕೊಟ್ಟದ್ದು. ತುಂಬ ಚೆನ್ನಾಗಿದೆ. ನೀವೇ ಉಪಯೋಗಿಸಿ". ಇವರು ಮತ್ತೆ ಹೇಳಿದರು: "ನನ್ನಲ್ಲಿ ಸಾಕಷ್ಟು ಇದೆ ('ಸಾಕಷ್ಟು' ಎನ್ನುವುದು ಉಪಚಾರದ ಮಾತು); ಅವರು ಬಡವರು, ಅವರಿಗೊಂದು ಕೊಡುತ್ತೇನೆ" (ಎರಡು ಅಂಗಿ ಉಳ್ಳವನು ಒಂದೂ ಇಲ್ಲದವನಿಗೆ ಒಂದನ್ನು ಕೊಡಲಿ ಎಂಬುದು ಬೈಬಲ್ ಮಾತು).

ಈಗ ಪರಿಚಿತ ವ್ಯಕ್ತಿಗೆ ಏನು ಹೇಳುವುದೂ ಸಾಧ್ಯವಾಗಲಿಲ್ಲ. ಸುಮ್ಮನಾದೆರು. ಹೀಗೆಯೇ ಹಳ್ಳಿಯ ಬಡ ಕುಟುಂಬವೊಂದರಲ್ಲಿ ಮದುವೆ ನಡೆಯಲಿದ್ದಾಗ ವಧೂ-ವರರಿಗೆ ಉಡುಗೊರೆಯಾಗಿ ಕೊಡಲು ಮಗ್ಗುಲುಹಾಸಿಗೆಗಳನ್ನು ಆಚಾರ್ಯರು ಕೇಳಿ ಪಡೆದರು; ಅದರಿಂದ ೫-೬ ವರ್ಷಗಳಾದರೂ ಚಳಿಗಾಲದಲ್ಲಿ ಅವನ್ನು ಆ ಬಡದಂಪತಿ ಬಳಸುವಂತಾಗಲಿ ಎನ್ನುವುದು ಅವರ ಆಶಯ.

ಸಂ. ಸುಜನಾ, ಎಂ. ಕೃಷ್ಣೇಗೌಡ, 'ನೀರವ ಸಾಧಕ: ಉಕಾಸು. ಸ್ಮರಣ ಸಂಪುಟ' ಉ. ಕಾ. ಸುಬ್ಬರಾಯಾಚಾರ್ ಸ್ಮರಣಸಮಿತಿ, ಮೈಸೂರು ೧೯೯೭, ಪು. ೬೪-೬೫, ೧೮೧

೧೧. 'ಅವರು ಪಿಟೀಲಿನಲ್ಲಿ ಸೊಗಸಾಗಿ ಮಾತನಾಡುತ್ತಾರೆ'

೧೯೪೦ ಡಿಸೆಂಬರ್ ೧ ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿ.ಎಂ.ಶ್ರೀ. ಅವರ ಅಧ್ಯಕ್ಷತೆಯಲ್ಲಿ ಆಸ್ಥಾನವಿದ್ವಾನ್ ಟಿ. ಚೌಡಯ್ಯನವರಿಗೆ ಒಂದು ಸನ್ಮಾನ ಸಮಾರಂಭ ಏರ್ಪಡಿಸಲಾಯಿತು. ಮಹಾರಾಜರು ಅವರಿಗೆ 'ಸಂಗೀತರತ್ನ' ಎಂಬ ಬಿರುದು ದಯಪಾಲಿಸಿದ್ದು ಆ ಅಭಿನಂದನೆಗೆ ಕಾರಣವಾಗಿತ್ತು.

ವೇದಿಕೆಯ ಮೆಲೆ ಎರಡು ಕುರ್ಚಿಗಳಿದ್ದುವು. ಒಂದರಲ್ಲಿ ಶ್ರೀಯವರೂ ಇನ್ನೊಂದರಲ್ಲಿ ಚೌಡಯ್ಯನವರೂ ಮಂಡಿಸಿದ್ದರು. ಸಭಾಂಗಣ ಕಿಕ್ಕಿರಿದಿತ್ತು; ಜನ ಸಭಾಂಗಣದ ಹೊರಭಾಗದಲ್ಲಿಯೂ ನಿಂತಿದ್ದರು. ಸ್ವಾಗತ ಪದ್ಯಮಾಲಿಕೆಯ ಕಟ್ಟು ಹಾಕಿದ್ದ ಪ್ರತಿಯನ್ನು, ಹಾಡಿ ಅವರಿಗೆ ಅರ್ಪಿಸಲಾಯಿತು; ಅವರ ಪ್ರತಿಭೆ ವಿದ್ವತ್ತೆ ಕೀರ್ತಿಗಳ ಬಗೆಗೆ ಉಪನ್ಯಾಸವಾಯಿತು. ಬಳಿಕ ಶ್ರೀಯವರು ಚೌಡಯ್ಯನವರನ್ನು ಸನ್ಮಾನಿಸಿದರು.

ಅಭಿನಂದನೆಗೆ ಪಾತ್ರರಾದ ಟಿ. ಚೌಡಯ್ಯನವರು ಕೆಲವು ಕೃತಜ್ಞತೆಯ ಮಾತುಗಳನ್ನು ಹೇಳಲು ಎದ್ದುನಿಂತರು. ಅವರು ಹಿಂದೆಂದೂ ಅಂತಹ ಸಭೆಗಳಲ್ಲಿ ಮಾತಾಡಿ ಅಭ್ಯಾಸವಿದ್ದವರಲ್ಲ. ಕಂಠ ಗದ್ಗದಗೊಂಡಿತು. ಆನಂದಬಾಷ್ಪ ತುಂಬಿತು. ತಮ್ಮ ಎರಡೂ ಕೈಗಳನ್ನು ಜೋಡಿಸಿ ಸಭೆಗೂ ಅಧ್ಯಕ್ಷರಿಗೂ ತಲೆ ಬಗ್ಗಿಸಿ ನಮಸ್ಕರಿಸಿದರು. ಬಳಿಕ, "ಸ್ವಾಮಿ, ನಾನು ಎಂದೂ ಇಂತಹ ಸಭೆಯಲ್ಲಿ ಇದುವರೆಗೆ ಭಾಗವಹಿಸಿರಲಿಲ್ಲ. ತಮ್ಮ ಮುಂದೆ ಏನೂ ಮಾತಾಡಲಾರೆ. ದಯವಿಟ್ಟು ಕ್ಷಮಿಸಿ" ಎಂದು ಇಷ್ಟು ಮಾತ್ರ ಹೇಳಿ ಕುಳಿತುಬಿಟ್ಟರು. ಸಭೆ ಭಾವಪರವಶವಾಯಿತು. ಶ್ರೀಯವರು ಈ ಅನಿರೀಕ್ಷಿತ ಮುಕ್ತಾಯದ ಅತಿಸಂಕ್ಷಿಪ್ತ ಕೃತಜ್ಞತಾಭಾಷಣದಿಂದ ಒಂದು ನಿಮಿಷ ಸ್ತಬ್ಧರಾದರು. ಆದರೆ ಬಳಿಕ ಸಭೆಯನ್ನು ಉದ್ದೇಶಿಸಿ ಹೀಗೆ ಮಾತನಾಡಿದರು:

"ಈ ದಿನ ಶ್ರೀ ಚೌಡಯ್ಯನವರನ್ನು ಸನ್ಮಾನಿಸಲು ನಾವಿಲ್ಲಿ ಸೇರಿದ್ದೇವೆ. ಈ ನಮ್ಮ ಕನ್ನಡನಾಡಿನ ಒಬ್ಬ ದೊಡ್ಡವಿದ್ವಾಂಸರನ್ನು ಗೌರವಿಸುವುದು ನಮಗೇ ಕೀರ್ತಿ ತರುವ ವಿಷಯ. ಶ್ರೀ ಚೌಡಯ್ಯನವರಿಗೆ ಮಾತನಾಡಲು ಬರುವುದಿಲ್ಲವೆಂದು ನೀವು ಹೇಳಬಲ್ಲಿರಾ? ಅವರಿಗೆ ಕನ್ನಡ ಬರುವುದಿಲ್ಲವೇ? ಕನ್ನಡವೇ ಅವರ ಮಾತೃಭಾಷೆ! ಆದರೆ ಈ ದಿನ ಅವರ ಬಾಯಿಂದ ಏಕೆ ಒಂದೆರಡು ಮಾತುಗಳಾದರೂ ಹೊರಡಲಿಲ್ಲ ವೆಂದು ಕೇಳುವುದಾದರೆ, ನಾನದಕ್ಕೆ ಉತ್ತರ ಹೇಳುತ್ತೇನೆ, ಕೇಳಿ! ಶ್ರೀ ಚೌಡಯ್ಯ ನವರಲ್ಲಿ ನಾದಶಾರದೆ ಸಂಪೂರ್ಣವಾಗಿ ಸನ್ನಿಹಿತಳಾಗಿದ್ದಾಳೆ. ಅವರಲ್ಲಿ ನಾದಸಾಹಿತ್ಯ ತುಂಬಿದೆ, ನಮ್ಮಲ್ಲಿ ಶಬ್ದಸಾಹಿತ್ಯ ತುಂಬಿದೆ, ಅಷ್ಟೆ! ಅವರು ಪಿಟೀಲಿನಲ್ಲಿ ಸೊಗಸಾಗಿ ಮಾತನಾಡುತ್ತಾರೆ, ನಾವು ಬಾಯಲ್ಲಿ ಮಾತನಾಡುತ್ತೇವೆ. ಅವರು ಎರಡೇ ವಾಕ್ಯಗಳನ್ನು ಚೆನ್ನಾಗಿಯೇ ನಮ್ಮೆದುರಿಗೆ ಆಡಿ ತೋರಿಸಿದರಲ್ಲ! ಅದಕ್ಕಿಂತ ಹೆಚ್ಚೇನು ಬೇಕು?"

ಹೀಗೆ ಹೇಳಿ ಶ್ರೀಯವರು ಚೌಡಯ್ಯನವರ ಬೆನ್ನು ತಟ್ಟಿದರು. ಅವರ ಕರಸ್ಪರ್ಶದಿಂದ ಚೌಡಯ್ಯನವರು ರೋಮಾಂಚನಗೊಂಡರು. ಸಭೆ ಮುಕ್ತಾಯವಾಯಿತು.

ಗಮಕಿ ಎಂ. ರಾಘವೇಂದ್ರರಾವ್, 'ಕಲೆಯ ಕಾಣಿಕೆ', ಕಾವ್ಯಗಾಯನ ಕಲಾಮಂದಿರ, ತ್ಯಾಗರಾಜನಗರ, ಬೆಂಗಳೂರು-೨೮,೧೯೮೯, ಪು. ೧೦೧-೧೦೩.

೧೨. 'ಅವರು ಯಾರೋ ನನಗೆ ತಿಳಿಯದು'

ಎಂ. ಬಿ. ಗನೀ ಸಾಹೇಬ್ ಎಂಬುವರು ಒಂದು ಸಲ ಚಿಕ್ಕಮಗಳೂರಿನಿಂದ ಮೂಡಿಗೆರೆಗೆ ತಮ್ಮ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು; ಹಾಂದಿಯ ಹತ್ತಿರ ರಂಗೇಗೌಡರು ಚಿಕ್ಕಮಗಳೂರಿಗೆ ತಮ್ಮ ಕಾರಿನಲ್ಲಿ ಬರುತ್ತಿದ್ದರು. ಇಬ್ಬರೂ ಸಂಧಿಸುವಂತಾದಾಗ ಗೌಡರು ತಮ್ಮ ಕಾರು ನಿಲ್ಲಿಸಿ, ಗನೀ ಸಾಹೇಬರನ್ನು ಗುರುತಿಸಿ ಅವರಿಗೆ ಹೀಗೆ ತಿಳಿಸಿದರು :

"ಸಾಹೇಬರೇ, ನನ್ನ ಮಕ್ಕಳ ಹಾಗಿರುವ ಮೂರು ಜನ ಹೆಂಗಸರನ್ನೂ ಅವರ ಸಣ್ಣ ಮಕ್ಕಳನ್ನೂ ಹಾಂದಿಯ ಗೇಟ್ ಹತ್ತಿರ ಕೂರಿಸಿದ್ದೇನೆ. ಅವರಿಗೆ ಸಮಾಧಾನ ಹೇಳಿ, ಕೈಯಲ್ಲಾದ ಸಹಾಯ ಮಾಡಿದ್ದೇನೆ. ಅವರು ಯಾರೋ ನನಗೆ ತಿಳಿಯದು. ಅವರು ಮಂಗಳೂರಿಗೆ ಹೋಗಬೇಕಂತೆ. 'ಮೂಡಿಗೆರೆಗೆ ಹೋಗಿ, ಅಲ್ಲಿಂದ ಮಂಗಳೂರಿಗೆ ಹೋಗಿ' ಎಂದು ಹೇಳಿದೆ. ಮೂಡಿಗೆರೆಗೆ ಹೇಗೋ ತಲುಪಿಸುವುದಾಗಿ ಹೇಳಿ ಬಂದಿದ್ದೇನೆ. ಈಗ ಆ ಪರಮಾತ್ಮನೇ ಗನೀ ಸಾಹೇಬರ ರೂಪದಲ್ಲಿ ಬಂದಿರಬೇಕೆಂದು ನನಗೆ ತೋರುತ್ತದೆ. ಈಗ ಹೇಗೂ ನೀವು ಮೂಡಿಗೆರೆಗೆ ಹೋಗುತ್ತಿದ್ದೀರಿ. ಹಾಂದಿ ಗೇಟ್

ಹತ್ತಿರ ಆ ಹೆಂಗಸರನ್ನೂ ಚಿಕ್ಕ ಮಕ್ಕಳನ್ನೂ ನಿಮ್ಮ ಗಾಡಿಗೆ ಹತ್ತಿಸಿಕೊಂಡು ಅವರನ್ನು ಮೂಡಿಗೆರೆ ಬಸ್‌ನಿಲ್ದಾಣಕ್ಕೆ ಬಿಡಿ. ಅಲ್ಲಿಂದ ಅವರು ಮಂಗಳೂರಿಗೆ ಹೋಗಲು ಅನುಕೂಲವಾಗುತ್ತದೆ".

ಗನೀ ಸಾಹೇಬರು ಹಾಂದಿ ಗೇಟ್ ಹತ್ತಿರ ಬಂದರು. ಗೌಡರು ಹೇಳಿದ್ದ ಹೆಂಗಸರೂ ಮಕ್ಕಳೂ ಅಲ್ಲಿ ಕುಳಿತಿದ್ದುದು ಕಂಡಿತು. ಅವರಿಗೂ ಕರುಳು ಚುರಕ್ಕೆಂದಿತು. ಬಡವರೂ ನಿರ್ಗತಿಕರೂ ಆಗಿದ್ದ ಆ ಜನರ ಸ್ಥಿತಿಗತಿ ವಿಚಾರಿಸಿಕೊಂಡು, ರಂಗೇಗೌಡರು ಅವರ ಕಷ್ಟ ತಿಳಿದು, ಅವರು ಮಂಗಳೂರು ತಲುಪುವ ತನಕ ಬೇಕಾಗಿದ್ದ ಸಹಾಯವನ್ನು ಮಾಡಿದ್ದರು ಎಂಬುದು ಸಹ ತಿಳಿಯಿತು. ಸಾಹೇಬರು ಆ ಜನವನ್ನೆಲ್ಲ ತಮ್ಮ ಕಾರಿಗೆ ಹತ್ತಿಸಿಕೊಂಡು ಮೂಡಿಗೆರೆ ಬಸ್ ನಿಲ್ದಾಣಕ್ಕೆ ತಂದುಬಿಟ್ಟರು. ಗೌಡರ ದೊಡ್ಡತನ ನೆನೆದು ಅವರಿಗೆ ಹೃದಯ ತುಂಬಿಬಂತು.

ಸಂ. ಚಂದ್ರಯ್ಯನಾಯ್ಡು, 'ಬಾಳೆಹಳ್ಳಿ ರಂಗೇಗೌಡರು', ಹಾಂದಿ ಅಂಚೆ, ಚಿಕ್ಕಮಗಳೂರು ತಾಲೂಕು, ೧೯೮೮, ೧೧೦-೧೧.

೧೩. 'ಅವರೇ ಸ್ವಾಮಿಗಳು'

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಅಧ್ಯಾಪಕರಾಗಿದ್ದ ಎಂ. ಯಾಮುನಾಚಾರ್ಯರು ತುಂಬ ಸಾತ್ತ್ವಿಕರು. ಅವರು ಒಮ್ಮೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿ ಹಳ್ಳಿಗೆ ಅಲ್ಲಿಯ ಅನಾಥಸೇವಾಶ್ರಮದಲ್ಲಿಯ ಉಪನ್ಯಾಸಕ್ಕಾಗಿ ಹೋಗಿದ್ದರು. ಬೆಳಗ್ಗೆ ೫.೩೦ರ ವೇಳೆಗೆ ರೈಲು ಹೊಳಲ್ಕೆರೆ ರೈಲುನಿಲ್ದಾಣ ತಲುಪಿತು. ಅಲ್ಲಿ ೨ ನಿಮಿಷವಷ್ಟೇ ರೈಲು ನಿಲ್ಲುತ್ತಿತ್ತಾದ ಕಾರಣ, ಆಚಾರ್ಯರು ತಮ್ಮ ಹಾಸಿಗೆ ಹೋಲ್ಡಾಲ್ ಕೆಳಕ್ಕೆ ಎಸೆದು, ಕೈಪೆಟ್ಟಿಗೆ ಹಿಡಿದು ಸರಸರನೆ ರೈಲಿಂದಿಳಿದರು.

ಬೆಳಗಿನ ಜಾವ, ಇನ್ನೂ ಮಬ್ಬುಗತ್ತಲು. ಮಿಣುಕುದೀಪಗಳ ಬೆಳಕಿನಲ್ಲಿ ಹಾಸಿಗೆ ಹೋಲ್ಡಾಲ್ ಸರಿಪಡಿಸಿದರು. ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಯಾರೂ ಕಾಣಲಿಲ್ಲ. ಆಶ್ರಮ ಅಲ್ಲಿಂದ ೩ ಮೈಲಿ ದೂರದಲ್ಲಿತ್ತು. ಬಸ್ ನಿಲ್ದಾಣವೆಲ್ಲಿಯೋ? ಸ್ಟೇಷನ್ ಮಾಸ್ಟರನ್ನು ವಿಚಾರಿಸೋಣವೆಂದು ಹೆಜ್ಜೆ ಹಾಕುವಷ್ಟರಲ್ಲಿ ಯಾರೋ ಒಬ್ಬಾತ ಕೈಯಲ್ಲಿ ಬ್ಯಾಟರಿ ಹಿಡಿದು ಅವರ ಕಡೆಗೇ ಬರುತ್ತಿರುವುದು ಕಂಡಿತು. ಚಲ್ಲಣ, ಮೋಟಂಗಿಯಲ್ಲಿದ್ದ ಆತನನ್ನು ಕಂಡಾಗ, ಸಾಮಾನು ಹೊರುವ ಬಂಟ ಕಡೆಗೂ ಒಬ್ಬ ಸಿಕ್ಕಿದನಲ್ಲ ಎಂದು ಅವರಿಗೆ ಸಮಾಧಾನವಾಯಿತು. "ಅಯ್ಯಾ, ನಾನು ಮಲ್ಲಾಡಿಹಳ್ಳಿ ಆಶ್ರಮಕ್ಕೆ ಹೋಗಬೇಕಾಗಿದೆ. ಈ ಸಾಮಾನು ಸ್ವಲ್ಪ ಬಸ್ಸಿಗೆ ಸಾಗಿಸಿಕೊಡುತ್ತೀಯಾ? ಒಂದು

ರೂಪಾಯಿ ಕೊಡುತ್ತೇನೆ" ಎಂದು ಕೇಳಿದರು. ಆತ "ಸ್ವಾಮಿ, ತಾವು ಮೈಸೂರಿಂದ ಬಂದವರು ತಾನೇ? ಕಾರು ಸಿದ್ಧವಾಗಿದೆ, ದಯಮಾಡಿಸಬೇಕು" ಎಂದು ಹೇಳಿ ಅವರ ಹೋಲ್ಡಾಲನ್ನು ಒಂದು ಕೈಯಲ್ಲೆತ್ತಿ ಲೀಲಾಜಾಲವಾಗಿ ಹೆಗಲಿಗೇರಿಸಿ, ಕೈಪೆಟ್ಟಿಗೆ ತೆಗೆದುಕೊಂಡು ಅವರನ್ನು ಕರೆದುಕೊಂಡು ಮುಂದೆ ಸಾಗಿದನು.

ಕಾರಿನ ಹತ್ತಿರ ಬಂದಾಗ ಡ್ರೈವರ್ ಕಾರಿನ ಬಾಗಿಲು ತೆಗೆದು ಸಾಮಾನುಗಳನ್ನು ಡಿಕ್ಕಿಯೊಳಗೆ ಸೇರಿಸಿದ. 'ಆಳು' ಆಚಾರ್ಯರನ್ನು ಉದ್ದೇಶಿಸಿ,"ರಾತ್ರಿ ಪ್ರಯಾಣ ಸುಖವಾಗಿತ್ತೇ, ನಿದ್ದೆ ಚೆನ್ನಾಗಿ ಬಂತೇ" ಎಂದು ಮುಂತಾಗಿ ಆಗಾಗ ಕೇಳುತ್ತಿದ್ದ. ಆಚಾರ್ಯರು ಶ್ರೀ ಮದ್ಗಾಂಭೀರ್ಯದಿಂದಲೇ, "ನಿನ್ನ ಹೆಸರೇನಪ್ಪಾ, ಸ್ವಾಮಿಗಳು ಆರೋಗ್ಯವಾಗಿದ್ದಾರೆಯೇ, ಅವರು ಯಾವಾಗಲೂ ತಿರುಗಾಟದಲ್ಲಿರುವರು ಎಂದು ಕೇಳಿದ್ದೇನೆ. ಅವರು ಈಗ ಆಶ್ರಮದಲ್ಲಿದ್ದಾರೆಯೇ, ಪೂಜಾದಿಗಳನ್ನು ಮುಗಿಸಿ ಭಕ್ತರಿಗೆ ದರ್ಶನಕೊಡುವ ವೇಳೆ ಯಾವುದು? ಈಗ ಆಶ್ರಮ ತಲುಪಿದ ಕೂಡಲೇ ಅವರನ್ನು ಕಾಣಲು ಸಾಧ್ಯವೇ?" ಎಂದು ತಾವೂ ಪ್ರಶ್ನಿಸುತ್ತಾ, ಪ್ರಯಾಣಿಸಿದರು. ಆತ ತನ್ನ ಹೆಸರು 'ತಿರುಕಪ್ಪ' ಎಂದ. "ಸ್ವಾಮಿಗಳು ಬೆಳಗ್ಗೆ ೩ ಗಂಟೆಗೆ ಎದ್ದು ೫ ಗಂಟೆಗೆಲ್ಲಾ ಹೊರಕ್ಕೆ ಬರುತ್ತಾರೆ. ನೀವು ಆಶ್ರಮ ಸೇರುತ್ತಲೇ, ಅವರು ನಿಮ್ಮ ಮುಂದೆ ಪ್ರತ್ಯಕ್ಷರಾಗುತ್ತಾರೆ" ಎಂದು ಹೇಳಿದ.

ಕಾರು ಆಶ್ರಮ ತಲುಪಿತು. ತಿರುಕಪ್ಪ ಮಂಗನಂತೆ ಛಂಗನೆ ಕೆಳಕ್ಕೆ ಹಾರಿ ಅತಿಥಿ ಗೃಹದ ಬಾಗಿಲು ತೆಗೆದ. "ಸ್ವಾಮಿ, ನೀರು ಕಾದಿದೆ; ಮುಖ ತೊಳೆದುಕೊಳ್ಳಿ; ಕಾಫಿ ಕಳಿಸಿಕೊಡುತ್ತೇನೆ" ಎಂದು ಹೇಳಿ, 'ಮೊದಲು ಸ್ವಾಮಿಗಳನ್ನು ದರ್ಶನ ಮಾಡಬೇಕಯ್ಯ' ಎಂದು ಹೇಳುತ್ತಿದ್ದರೂ ಅಲ್ಲಿ ನಿಲ್ಲದೆ ನಗುತ್ತಾ ಹೊರಟುಹೋದ.

ಕಾಫಿ ಸೇವನೆ ಆಯಿತು. ಆಚಾರ್ಯರಲ್ಲಿಗೆ ತಿರುಕಪ್ಪ ಮತ್ತೆ ಬಂದ. "ಕಾಫಿ ಆಯ್ತೇ ಸ್ವಾಮಿ" ಎಂದು ಪ್ರಶ್ನಿಸಿದ."ಆಯಿತು ಮಹಾರಾಯ, ಈಗಲಾದರೂ ಸ್ವಾಮಿಗಳ ದರ್ಶನ ಮಾಡಿಸುತ್ತೀಯಾ?" ಎಂದು ಅಸಹನೆಯಿಂದಲೇ ಪ್ರಶ್ನಿಸಿದರು. ಮುಖಕ್ಷೌರ, ಸ್ನಾನ, ಉಪಾಹಾರ ಎಲ್ಲ ಮುಗಿಯಲಿ. ನಾನು ಸ್ವಾಮಿಗಳ ಹತ್ತಿರದಿಂದಲೇ ಬರುತ್ತಿದ್ದೇನೆ. ತಾವು ಉಪಾಹಾರ ಮುಗಿಸಿದ ಮೇಲೆ ಅವರೇ ತಮ್ಮನ್ನು ಬಂದು ಕಾಣುತ್ತಾರೆ ಎಂದು ನುಡಿದ ತಿರುಕಪ್ಪ. "ನೋಡಪ್ಪಾ, ಸ್ನಾನವೇನೋ ಮಾಡುತ್ತೇನೆ. ಸ್ವಾಮಿಗಳ ದರ್ಶನವಾದ ಮೇಲೆಯೇ ಉಪಾಹಾರ" ಎಂದರು ಆಚಾರ್ಯರು.

ಸ್ನಾನವಾಯಿತು. ಮಡಿಯುಟ್ಟು ಆಚಾರ್ಯರು ಸ್ವಾಮಿಗಳ ಆಗಮನಕ್ಕೆ ಕಾದರು. ಮತ್ತೆ ತಿರುಕಪ್ಪ ಪ್ರತ್ಯಕ್ಷವಾದನು. "ಏನಪ್ಪಾ, ಸ್ವಾಮಿಗಳು...." ಎನ್ನುತ್ತಿದ್ದಂತೆಯೇ, ಆತ ನಗುತ್ತ "ಬನ್ನಿ ಸ್ವಾಮಿ, ತೋರಿಸುತ್ತೇನೆ" ಎಂದು ಹೇಳಿ ಅವರನ್ನು ಕರೆದುಕೊಂಡು ಹೊರಟ. ಹೀಗೆ ಹೊರಟವನು ಆಶ್ರಮದ ಶಾಲೆ, ಕಾಲೇಜು, ದೈಹಿಕ ಶಿಕ್ಷಣಶಾಲೆ, ಶಿಕ್ಷಣ ತರಬೇತಿಶಾಲೆ, ಶಿಕ್ಷಕರ ವಸತಿಗೃಹಗಳು, ಗೋಶಾಲೆ ಹೀಗೆ ಒಂದೊಂದಾಗಿ ಅವನಿಗೆ ತೋರಿಸುತ್ತ ಹೊರಟನು. ಸ್ವಾಮಿಗಳ ಕುಟೀರವನ್ನು ತೋರಿಸಿದನು. 'ಸ್ವಾಮಿಗಳೆಲ್ಲಿ' ಎಂದಾಗ, 'ಈಗ ತಾನೆ ಇಲ್ಲಿಂದ ಕೆಲಸಕ್ಕೆ ಹೋಗುವ ಸಮಯ" ಎಂದ ಆತ. ಅಲ್ಲಿಂದ

ಇಬ್ಬರೂ ಮುಂದಕ್ಕೆ ಸಾಗಿದರು. ತಪೋವನವನ್ನೂ ಗರಡಿಮನೆಯನ್ನೂ ತೋರಿಸಿದ ತಿರುಕಪ್ಪ ಆಚಾರ್ಯರಿಗೆ ಗರಡಿಮನೆಯ ವಿಶೇಷವನ್ನು ವರ್ಣಿಸಿದ. ಅಲ್ಲಿಟ್ಟಿದ್ದ ಗದೆಯನ್ನು ಎತ್ತಲು ಆಚಾರ್ಯರು ಪ್ರಯತ್ನಿಸಿದರು. ಆಗಲಿಲ್ಲ. ತಿರುಕಪ್ಪ ಲೀಲಾಜಾಲವಾಗಿ ಎತ್ತಿ ತಿರುಗಿಸಿದ. ಮುಂದೆ ಅನ್ನಪೂರ್ಣಾಲಯ, ದುರ್ಗಾಲಯ, ಬಳಿಕ ವ್ಯಾಸಪೀಠ ತೋರಿಸಿ 'ಇಲ್ಲಿಯೇ ಸಂಜೆ ತಮ್ಮ ಭಾಷಣ' ಎಂದ. ಬಯಲಿನ ಇಕ್ಕೆಲದ ವಸತಿಗೃಹಗಳ, ವಿದ್ಯಾರ್ಥಿಗಳ ವಿಚಾರವನ್ನೂ ಕೇಳಿ ತಿಳಿದಾಯಿತು.

ಅಷ್ಟರಲ್ಲಿ ಯಾರೋ ಹೆಂಗಸು ಓಡಿ ಬಂದು ತಿರುಕಪ್ಪನಿಗೆ ಅಡ್ಡ ಬಿದ್ದು 'ನಿಮ್ಮಿಂದ ನನ್ನ ಮಾಂಗಲ್ಯ ಉಳಿಯಿತು' ಎಂದು ಕೃತಜ್ಞತೆ ಹೇಳಿದಳು. ಈಗ ಆಚಾರ್ಯರಿಗೆ ಸ್ವಲ್ಪ ಗಾಬರಿ. "ಯಾರು ಈತ, ವೈದ್ಯನಿರಬಹುದೇ?" ಎನ್ನಿಸಿತು. ಈಗ ತಿರುಕಪ್ಪ ಕಚೇರಿ ಪ್ರವೇಶಿಸಿ ಕುರ್ಚಿಯ ಮೇಲೆಯೇ ಕುಳಿತ. ಒಬ್ಬ ಕಾರಕೂನ ಆತನ ಮುಂದೆ ಏನೋ ಕಾಗದಗಳ ಕಟ್ಟು ತಂದಿಟ್ಟ. ಅವುಗಳ ಪರಿಶೀಲನೆಗೆ ಈ ಅಜ್ಞಾತವ್ಯಕ್ತಿ ತೊಡಗಿದ್ದು ನೋಡಿದಾಗ 'ಈತ ಬಹುಶಃ ಮ್ಯಾನೇಜರ್ ಇರಬಹುದೇ?" ಎಂಬ ಸಂದೇಹವಾಯಿತು. ಆಚಾರ್ಯರು ಗಲಿಬಿಲಿಗೊಂಡರು. "ನಾನು ಸ್ವಾಮಿಗಳನ್ನು ಕಾಣಬೇಕಿತ್ತಲ್ಲ" ಎಂದು ವಿನಯದಿಂದ ನುಡಿದರು. ಆಗ ಆ ಕುರ್ಚಿಯಾತ ಇವರ ಕಡೆ ನೋಡುತ್ತ ಸಣ್ಣದನಿಯಲ್ಲಿ " ಏನು ಸ್ವಾಮಿ, ನೀವಿಬ್ಬರೂ ಉದ್ದಕ್ಕೆ ಜೊತೆಯಲ್ಲೇ ಬಂದಿರಲ್ಲ" ಎಂದನು. ಆಚಾರ್ಯರು 'ಅಂದರೆ?' ಎಂದಾಗ, ಆತ 'ಅವರೇ ಸ್ವಾಮಿಗಳು' ಎಂದು ಹೇಳಿ, ಆ ಕುತೂಹಲದ ಕಥೆಗೆ ಕೊನೆಯ ವಾಕ್ಯ ಬರೆದರು.

"ಈವರೆಗೆ ಎಂಥ ಅಪಚಾರ ಮಾಡಿದೆ" ಎಂದು ಈಗ ಆಚಾರ್ಯರಿಗೆ ತೋರಿತು. ಆ ವ್ಯಕ್ತಿಗೆ, ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳಿಗೆ, ದೀರ್ಘದಂಡನಮಸ್ಕಾರ ಮಾಡಿದರು.

ಪ್ರ.ಸಂ. ತ. ಸು. ಶಾಮರಾಯ, 'ನಂದನವನ', 'ಶ್ರೀ ರಾಘವೇಂದ್ರ ಸ್ವಾಮಿಗಳವರ ಅಭಿನಂದನಾ ಸಮಿತಿ, ಮಲ್ಲಾಡಿಹಳ್ಳಿ, ಪು. ೧೫-೧೮.

೧೪. 'ಆ ಏಸುದೇವನೇ ಬಂದರೆ ಹೇಗೋ ಹಾಗೆ'

ದೇವುಡು ನರಸಿಂಹ ಶಾಸ್ತ್ರಿಗಳು ಸರ್ವಜ್ಞನ ಪದಗಳ ಸಂಪಾದಕರಾದ ರೆವೆರೆಂಡ್ ಚನ್ನಪ್ಪ ಉತ್ತಂಗಿ ಅವರನ್ನು ಒಮ್ಮೆ ಭೇಟಿಯಾದ ಸಂದರ್ಭದಲ್ಲಿ 'ತಾವು ನಾಳೆ ನಮ್ಮ ಮನೆಗೆ ಊಟಕ್ಕೆ ದಯಮಾಡಿಸಬೇಕು' ಎಂದು ಆಹ್ವಾನಿಸಿದರು; ಅವರು 'ಆಗಬಹುದು' ಎಂದರು. ಬಳಿಕ ಅವರಿಗೆ ಹೊಳೆಯಿತು, ಉತ್ತಂಗಿಯವರು ಕ್ರೈಸ್ತಪಂಗಡದವರು ಎಂದು. ತಾವು ಸಂಪ್ರದಾಯಸ್ಥ ಬ್ರಾಹ್ಮಣರಾದುದರಿಂದ ಅವರನ್ನು ಸತ್ಕರಿಸುವ ವಿಷಯದಲ್ಲಿ

ಮಡಿವಂತರಾದ ತಮ್ಮ ವರ್ತನೆ ಹೇಗಿರಬೇಕು ಎನ್ನುವ ಆಲೋಚನೆ ಅವರ ತಲೆಯನ್ನು ಹೊಕ್ಕಿತು. ತಮಗೆ ಮೀಮಾಂಸಾಶಾಸ್ತ್ರದ ಬೋಧಕರಾಗಿದ್ದ ಮಹಾಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಲ್ಲಿ ವಿಚಾರ ಮಾಡಿದರು. ಶಾಸ್ತ್ರಿಗಳು, "ಅಯ್ಯ, ನಿನ್ನ ಮನೆಗೆ ಆ ಏಸುದೇವನೇ ಬಂದರೆ ಹೇಗೋ ಹಾಗೆ ಇವರನ್ನೂ ತಿಳಿದು ಸತ್ಕರಿಸು" ಎಂದರು. ದೇವುಡು ಅವರಿಗೆ ಸಮಾಧಾನ, ಸಂತೋಷ ಎರಡೂ ಆದುವು.

ದೇವುಡು ಅವರ ಮನೆಗೆ ಉತ್ತಂಗಿ ಚನ್ನಪ್ಪನವರು ಮಾರನೆಯ ದಿನ ಊಟಕ್ಕೆ ಬಂದರು. ದೇವುಡು ಸಪತ್ನಿಕರಾಗಿ ಅವರ ಕಾಲು ತೊಳೆದು ಪಾದೋದಕವನ್ನು ತಮ್ಮ ತಲೆಯ ಮೇಲೆ ಪ್ರೋಕ್ಷಿಸಿಕೊಂಡರು. ಅವರನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ (ದೇವತಾಸ್ಥಾನ) ತಾವು ಉತ್ತರಾಭಿಮುಖವಾಗಿ (ಪೂಜಿಸುವವನು ಕುಳಿತುಕೊಳ್ಳುವ ಸ್ಥಾನ) ಕುಳಿತು ಸಂತೋಷದಿಂದ ಸಂಭಾಷಿಸಿದರು; ಸಹಪಂಕ್ತಿಭೋಜನ ಮಾಡಿದರು.

ಉತ್ತಂಗಿಯವರಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ.

ಸಂ. ಹೊ. ರಾ. ಸತ್ಯನಾರಾಯಣ ರಾವ್, ಗಂಗಾಧರ ದೇವುಡು, 'ದೇವುಡು ದರ್ಶನ', ಬೆಂಗಳೂರು, ೧೯೯೭, ಪು. ೯೧-೯೨

೧೫. ಆಂಗ್ಲರ ಕ್ಲಬ್ - ದೇಶೀಯರ ಸದಸ್ಯತ್ವ

ಚಿಕ್ಕಮಗಳೂರು ಪ್ಲಾಂಟರ್‌ಗಳಲ್ಲಿ ಆಂಗ್ಲರ ಕ್ಲಬ್, ದೇಶೀಯರ ಕ್ಲಬ್ ಹೀಗೆ ಎರಡು ಸಂಘಟನೆಗಳಿದ್ದುವು. ಆಂಗ್ಲರ ಕ್ಲಬ್-ದೇಶೀಯರ ಸದಸ್ಯತ್ವ ಎನ್ನುವುದು ಸಾಧ್ಯವಿರಲಿಲ್ಲ. ಏಕೆಂದರೆ ಆಂಗ್ಲರು ದೇಶೀಯರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ದೇಶೀಯರಾದರೂ ಡಿ.ಸಿ. ಡಿ.ಎಂ.ಒ. ಈ ಇಬ್ಬರಿಗೆ ಸದಸ್ಯತ್ವ ಸಾಧ್ಯವಿತ್ತು. ಮಾಸ್ತಿಯವರು ಹಿಂದೆ ಅಲ್ಲಿ ಸಬ್ ಡಿವಿಜನ್ ಆಫೀಸರ್ ಆಗಿದ್ದಾಗ ಅವರಿಗೆ ಸದಸ್ಯತ್ವ ಇರಲಿಲ್ಲ. ಅದಕ್ಕಾಗಿ ಅವರು ಆಸೆ ಪಡಲೂ ಇಲ್ಲ. ಈಗ ಡಿ.ಸಿ. ಆಗಿದ್ದ ಕಾರಣ ಅವರಿಗೆ ಅವಕಾಶವಿತ್ತು. ಆದರೆ ಆಂಗ್ಲರ ಪಕ್ಷಪಾತನೀತಿ ಕಾರಣವಾಗಿ ಮಾಸ್ತಿ ಊರಿಗೆ ಬಂದು ೨-೩ ವಾರಗಳಾದರೂ ಉದಾಸೀನವಾಗಿಯೇ ಇದ್ದರು. ಜಿಲ್ಲೆಯ ಎಕ್ಸಿಕ್ಯುಟಿವ್ ಇಂಜನಿಯರ್ ವಿಂಕ್ಲರ್ (ಇವರು ಆಂಗ್ಲರು; ಆದ್ದರಿಂದ ಸದಸ್ಯತ್ವವಿತ್ತು) ಮೂಲಕ ಮಾಸ್ತಿ ಅವರಿಗೆ ಹೇಳಿ ಕಳಿಸಿದರು.

ವಿಂಕ್ಲರ್ ಮಾಸ್ತಿಯವರನ್ನು ಕಂಡು ಈ ಸಂಗತಿ ಅರಿಕೆಮಾಡಿದರು. ಆಗ ಮಾಸ್ತಿ ಹೇಳಿದರು: "ದೇಶೀಯಜನ ಆಂಗ್ಲರೊಡನೆ ಅವರ ಕ್ಲಬ್ಬುಗಳಲ್ಲಿ ಇರಲು ಯೋಗ್ಯರಲ್ಲ, ಆದರೆ ಡಿ.ಸಿ., ಡಿ.ಎಂ.ಓ. ಆದರೆ ಸ್ಥಾನದ ಕಾರಣ ಯೋಗ್ಯರಾಗುತ್ತಾರೆ ಎನ್ನುವ ನಿಮ್ಮ

ಕ್ಲಬ್ಬಿನ ನಿಯಮ ದೇಶೀಯರ ಆತ್ಮಗೌರವಕ್ಕೆ ಹಾನಿ ತಂದಿದೆ. ಇಂಥ ನಿಯಮ ಇರುವ ಕ್ಲಬ್ಬಿನಲ್ಲಿ ಸದಸ್ಯನಾಗಲು ನನಗೆ ಇಷ್ಟವಿಲ್ಲ. ನಿಮ್ಮ ನಿಯಮನ್ನೊಪ್ಪಿ ನಾನು ಸದಸ್ಯನಾದರೆ ಡಿ.ಸಿ. ಆಗಿ ನಾನು ಆಂಗ್ಲರ ಮಟ್ಟಕ್ಕೆ ಏರಿದೆ, ಈ ಪದವಿಯಿಲ್ಲದ ನನ್ನ ದೇಶೀಯ ಸೋದರರು ಆಂಗ್ಲರಿಗೆ ಸಮ ಅಲ್ಲ ಎನ್ನುವ ಮಾತಿಗೆ ನಾನು ಒಪ್ಪಿದಂತಾಗುತ್ತದೆ. ಇಂಥ ಕಲ್ಪನೆಗೆ ಅವಕಾಶ ಮಾಡುವ ವರ್ತನೆ ನನಗೆ ಅನುಚಿತವೆನ್ನಿಸುತ್ತದೆ. ಆದ್ದರಿಂದ ನಿಮ್ಮ ನಿಯಮದಲ್ಲಿರುವ ಅವಕಾಶವನ್ನು ನಾನು ಬಳಸುವುದಿಲ್ಲ."

ವಿಂಕ್ಲರ್‌ಗೆ ಆಶ್ಚರ್ಯವಾಯಿತು. "ಆದರೆ ನಿಮಗೆ ಹಿಂದಿದ್ದ ದೇಶೀಯ ಅಧಿಕಾರಿಗಳಲ್ಲಿ ಪ್ರತಿಯೊಬ್ಬರೂ ಸದಸ್ಯತ್ವವನ್ನು ಒಪ್ಪಿದರಲ್ಲ" ಎಂದರು. ಅದಕ್ಕೆ ಮಾಸ್ತಿ, "ಅದಕ್ಕೆ ಸಹ ಭಾರತೀಯರ ವಿಷಯದಲ್ಲಿ ನಿಮ್ಮ ಕಟ್ಟುಕಟ್ಟಳೆಯ ಸೂಕ್ಷ್ಮಗಳನ್ನು ಅವರು ಮನವರಿಕೆ ಮಾಡಿಕೊಳ್ಳದೆ ಹೋದುದು ಬಹುಶಃ ಕಾರಣ ಆಗಿರಬಹುದು" ಎಂದು ಹೇಳಿದರು. ವಿಂಕ್ಲರ್ ಮತ್ತೆ, "ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳಿ; ಯೋಚನೆ ಮಾಡಿ" ಎಂದು ಕೇಳಿಕೊಂಡಾಗ, ಮಾಸ್ತಿ "ನಾನು ಯೋಚನೆ ಮಾಡಿ ಆಗಿದೆ, ಇದೇ ನನ್ನ ನಿಶ್ಚಯ" ಎಂದುಬಿಟ್ಟರು.

ಈ ಸಂಗತಿಯನ್ನು ವಿಂಕ್ಲರ್ ಆಂಗ್ಲರ ಕ್ಲಬ್ ಕಾರ್ಯಕಾರಿಸಮಿತಿಗೆ ವರದಿಮಾಡಿದರು. ಕೆಲವು ದಿನಗಳ ಬಳಿಕ ಕ್ಲಬ್ ಅಧ್ಯಕ್ಷ ಫೌಕ್ಸ್ ಸಾಹೇಬರು ಮಾಸ್ತಿಯವರನ್ನು ಕಾಣಲು ಬಂದರು; ಕುಶಲಪ್ರಶ್ನೆಗಳಾದ ಮೇಲೆ, "ನಾನು ನಿಮ್ಮೊಂದಿಗೆ ಮಾತಾಡುವ ವಿಷಯವಿತ್ತು, ಬಂದೆ" ಎಂದರು. ಮಾಸ್ತಿ, "ಸಂತೋಷ, ಸಂಗತಿ ಏನು ?" ಎಂದು ಪ್ರಶ್ನಿಸಿದರು. ಆಗ ಫೌಕ್ಸ್ "ನೀವು ನಮ್ಮ ಕ್ಲಬ್ ಸದಸ್ಯರಾಗಬೇಕು ಎನ್ನುವುದು ನಮ್ಮೆಲ್ಲರ ಅಪೇಕ್ಷೆ. ಆಗುತ್ತೀರಿ ಎಂದು ನಾವು ನಿರೀಕ್ಷಿಸಿದ್ದೆವು. 'ಆಗುವುದಿಲ್ಲ' ಎಂದಿರಂತೆ. ಇದು ತಿಳಿದು ಸ್ವತಃ ಪ್ರಾರ್ಥನೆ ಮಾಡಲು ನಾನು ಬಂದೆ" ಎಂದರು. ಮಾಸ್ತಿ "ತಮ್ಮೆಲ್ಲರ ವಿಶ್ವಾಸದ ಈ ಆಹ್ವಾನ ನನಗೆ ಒಂದು ಗೌರವ. ಆದರೆ ಏಕೆ ನಾನು ಸದಸ್ಯನಾಗಲು ಒಪ್ಪಲಿಲ್ಲ ಎನ್ನುವುದನ್ನು ಮಿತ್ರರು (ವಿಂಕ್ಲರ್) ನಿಮಗೆ ಹೇಳಲಿಲ್ಲವೇ ?" ಎಂದು ಪ್ರಶ್ನಿಸಿದರು.

ಸಂಭಾಷಣೆ ಸಾಗಿತು: "ಕ್ಲಬ್ಬಿನಲ್ಲಿ ದೇಶೀಯರಾದ ಇತರರಿಗೆ ಸದಸ್ಯರಾಗುವ ಅವಕಾಶವಿಲ್ಲವಾದ್ದರಿಂದ ನೀವು ಸದಸ್ಯರಾಗುವುದಿಲ್ಲ ಎಂದಿರಂತೆ"; "ಇತರರಿಗೆ ಅವಕಾಶವಿಲ್ಲ ಎಂದಲ್ಲ. ಡಿ. ಸಿ. ಅಲ್ಲದಿದ್ದರೆ ಈ ಮನುಷ್ಯನಿಗೂ ಇಲ್ಲ. ಈ ಸ್ಥಾನದಲ್ಲಿರುವ ಮನುಷ್ಯನನ್ನು ಸ್ಥಾನದ ಬಲದಿಂದ ನೀವು ಸಹಿಸುತ್ತೀರಿ. ದೇಶೀಯನಾಗಿರುವುದು ಸದಸ್ಯತ್ವಕ್ಕೆ ಅನರ್ಹತೆ ಎಂಬ ನಿಮ್ಮ ನಿಲುವನ್ನು ನಾನು ಒಪ್ಪಲಾರೆ. ಒಪ್ಪಿಕೊಂಡಂತೆ ಕಾಣುವ ರೀತಿ ನಡೆಯಲು ನನಗೆ ಸಾಧ್ಯವಿಲ್ಲ"; "ಆದರೆ ಹೀಗೆ ಮಾಡುವುದರಲ್ಲಿ ನೀವು ನಮ್ಮನ್ನು ಒಲ್ಲೆ ಎನ್ನುತ್ತಿದ್ದೀರಿ"; "ಖಂಡಿತವಾಗಿ ಅದು ಸರಿಯಲ್ಲ. ನಾಳೆ ನಿಮ್ಮ ಕ್ಲಬ್ಬಿಗೆ ನನ್ನನ್ನು ಆಹ್ವಾನಿಸಿ, ಬರುತ್ತೇನೆ. ಯಾವುದೇ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಬೇಕು ಎಂದರೆ ಭಾಗವಹಿಸುತ್ತೇನೆ; 'ನೀವು ನನಗೆ ಬೇಕಾಗಿಲ್ಲ' ಎಂದು ನಾನು ಹೇಳುವುದಿಲ್ಲ. ಡಿ. ಸಿ. ಆದ್ದರಿಂದ ಸದಸ್ಯತ್ವದ ಪಟ್ಟ ಎನ್ನುವುದನ್ನು ಮಾತ್ರ ನಾನು ಒಪ್ಪುವುದಿಲ್ಲ".

ಮಾತು ಹೀಗೆಯೇ ಮುನ್ನಡೆಯಿತು. ಮಾಸ್ತಿಯವರು ಹೇಳಿದ್ದನ್ನೇ ಮತ್ತೆ ಹೇಳಬೇಕಾಯಿತು. ಕೊನೆಗೆ ಫೌಕ್ಸ್ ಸಾಹೇಬರು, "ಹಾಗಾದರೆ ಕ್ಲಬ್ ಕಾರ್ಯಕ್ರಮಗಳಿಗೆ ನಾವು ಕೋರಿದಾಗ ನೀವು ಬರುತ್ತೀರಿ ಎಂದಾಯಿತು" ಎಂದರು. ಮಾಸ್ತಿ "ಖಂಡಿತವಾಗಿ; ನಾನು ಊರಿನಲ್ಲಿದ್ದಾಗ, ಮೈಗೆ ಅಸ್ವಸ್ಥತೆ ಇಲ್ಲದಿದ್ದಾಗ, ಬೇರೇನೂ ಅಡೆತಡೆಗಳಿಲ್ಲದೆ ಹೋದಾಗ ತಪ್ಪದೆ ಬರುತ್ತೇನೆ. ನಾನು ನಿಮ್ಮ ವಿಶ್ವಾಸಿ ಮಿತ್ರ. ಮುಂದೆಯೂ ಹಾಗೆಯೇ" ಎಂದು ಮಾತು ಮುಗಿಸಿದರು.

ಇಲ್ಲಿಂದ ಮುಂದೆ ಒಂದು ವಾರದಲ್ಲಿ ಆಂಗ್ಲರ ಕ್ಲಬ್ ಜನ ಏನೋ ಕಾರಣಕ್ಕೆ ಒಂದು ಉಪಾಹಾರಕೂಟ ನಡಸಿದರು. ಮಾಸ್ತಿಯವರಿಗೆ ಆಹ್ವಾನ ಹೋಯಿತು. ಅವರು ಅದರಲ್ಲಿ ಅತಿಥಿಯಾಗಿ ಭಾಗವಹಿಸಿದರು. ಆಗ ಆ ಆಂಗ್ಲಜನ 'ಈ ಡೆಪ್ಯುಟಿ ಕಮೀಷನರ್ ತಮಗೆ ಸರಿಯೆಂದು ತೋರುವ ಸೂತ್ರ ಹಿಡಿದು ನಡೆಯುವ ಗೃಹಸ್ಥರು; ಇವರ ಮನಸ್ಸಿನಲ್ಲಿ ದ್ವೇಷ, ಕಲ್ಮಷ ಇಲ್ಲ" ಎಂದು ಅರ್ಥಮಾಡಿಕೊಂಡರು.

ಮಾಸ್ತಿ **ವೆಂಕಟೇಶ ಅಯ್ಯಂಗಾರ್**, ಭಾವ-೩', ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ **ಟ್ರಸ್ಟ್** (ರಿ), ಬೆಂಗಳೂರು, ೧೯೯೦ (ದ್ವಿ. ಮು.) ಪು. ೫೮-೬೧

೧೬. 'ಆತ ನಿಮಗೆಲ್ಲಾ ಗೊತ್ತಿರುವವನೇ'

ಬ್ರಾಹ್ಮಣರ ಮನೆಯ ಮದುವೆಗಳ ವಿಪರೀತವಾದ ಖರ್ಚು ವೆಚ್ಚಗಳಿಗೆ ಮದುವೆ ಶಾಸ್ತ್ರಗಳ ಪರುಠವಣೆಯೇ ಕಾರಣವೆಂದೂ ಮದುವೆಶಾಸ್ತ್ರವನ್ನು ಒಂದೇ ದಿನಕ್ಕೆ ಇಳಿಸುವ ವಿಷಯದಲ್ಲಿ ಜಗದ್ಗುರು ಚಂದ್ರಶೇಖರ ಭಾರತಿಗಳು ಸಮ್ಮತಿಸಬೇಕೆಂದೂ ಒಬ್ಬ ಸುಧಾರಕರು ಅವರನ್ನು ಒಮ್ಮೆ ಪ್ರಾರ್ಥಿಸಿದರು. ಅದಕ್ಕೆ ಗುರುಗಳು "ನೀವು ಹೇಳುವುದು ಸರಿ, ಆದರೆ ವಿಪರೀತವಾದ ಖರ್ಚಿಗೂ ಶಾಸ್ತ್ರೋಕ್ತವಾದ ವಿವಾಹದ ಕಲಾಪಗಳಿಗೂ ಏಕೆ ಗಂಟುಹಾಕುತ್ತೀರಿ?" ಎಂದು ಪ್ರಶ್ನಿಸಿದರು. ಅದಕ್ಕೆ ಇವರು "ಕಲಾಪಗಳು ಹೆಚ್ಚಿದಷ್ಟೂ ವೆಚ್ಚವೂ ಹೆಚ್ಚುವುದಿಲ್ಲವೇ?" ಎಂದರು.

ಈಗ ಸ್ವಾಮಿಗಳು ಹೀಗೆ ಸಮಾಧಾನ ಹೇಳಿದರು: "ನೀವು ತಪ್ಪುವುದೇ ಇಲ್ಲಿ. ವಿವಾಹಸಮಯದ ಧಾರ್ಮಿಕ ಕಲಾಪಗಳೇ ಬೇರೆ, ಸಂತೋಷದ ಕಲಾಪಗಳೇ ಬೇರೆ. ೪-೫ ಹಿಡಿ ಅಕ್ಕಿ, ಸ್ವಲ್ಪ ತುಪ್ಪ ಸಮಿತ್ತು ದರ್ಭೆ ಇಷ್ಟು ಇದ್ದರೆ ಧಾರ್ಮಿಕ ಕಲಾಪಗಳು ಮುಗಿಯುತ್ತವೆ. ಎಷ್ಟು ದಿನಗಳಾದರೂ ಭಾರವಿಲ್ಲ, ಖರ್ಚಿಲ್ಲ. ಸಂತೋಷದ ಸಂಗೀತ ನೃತ್ಯ ಭೂರಿಭೋಜನ ಉಡುಗೊರೆ ಮೆರೆವಣಿಗೆ ಇವಕ್ಕೆಲ್ಲ ಧನವ್ಯಯ ಮಾಡುತ್ತ ಧರ್ಮಶಾಸ್ತ್ರದ ವಿಧಿಗಳನ್ನು ಏಕೆ ದೂರಬೇಕು? ಈ ಆಡಂಬರಗಳೆಲ್ಲ ಅನಗತ್ಯವಲ್ಲವೆ?

ಸುಧಾರಕರೆಂದರು: “ಶಾಸ್ತ್ರವಿಧಿಗಳಿಗೇನೋ ಖರ್ಚು ಹೆಚ್ಚಿಲ್ಲ. ಆದರೆ ಅವನ್ನು ನಡೆಸುವಷ್ಟು ದಿನವೂ ಬಂಧುಮಿತ್ರರಿಗೆ ಊಟ ಮತ್ತು ಉಪಾಹಾರಗಳ ಸತ್ಕಾರ ನಡೆಯಬೇಕಲ್ಲವೇ? ‘ಇವಕ್ಕೆ ಖರ್ಚು ವೆಚ್ಚ ಉಂಟಲ್ಲವೇ?” ಸ್ವಾಮಿಗಳು: “ಹಾಗಾದರೆ ಮದುವೆ ದಿನಕ್ಕೆ ಮಾತ್ರ ನೆಂಟರಿಷ್ಟರನ್ನು ಊಟಕ್ಕೆ ಕರೆಯಿರಿ.” ಸುಧಾರಕರು: “ಕಲಾಪಗಳಿಗಾಗಿ ನಾಲ್ಕು ದಿನ ಮದುವೆ ಮಾಡಿ, ಒಂದು ದಿನಕ್ಕೆ ಮಾತ್ರ ಅವರನ್ನು ಆಹ್ವಾನಿಸುವುದು ಸಭ್ಯತೆಯಲ್ಲ, ಸ್ವಾಮಿ”. ಸ್ವಾಮಿಜಿ: “ನಿಮ್ಮ ಸುಧಾರಣೆಯಂತೆ ಒಂದು ದಿನವಷ್ಟೇ ಮದುವೆ ಎನ್ನುವುದಾದರೆ, ಅತಿಥಿಗಳಿಗೆ ಆಹ್ವಾನವೂ ಒಂದೇ ದಿನ ತಾನೇ? ನೆಂಟರಿಗೆ ಔತಣ ಮಾಡಿಸಲು ಮರುದಿನವೂ ಉಳಿಸಿಕೊಳ್ಳಬೇಕು ಎನ್ನುವುದಾದರೆ, ಏನು ಕಷ್ಟ? ಯೋಚಿಸಿ ನೋಡಿ. ವೈದಿಕ ಕ್ರಿಯಾಕಲಾಪಗಳ ಖರ್ಚು, ಭೋಜನದ ಖರ್ಚು ಇವುಗಳ ಸಲುವಾಗಿ ಮಾಡುವ ಖರ್ಚುಗಳೇ ಹೆಚ್ಚಾಗಿರುತ್ತವೆ ಅಲ್ಲವೆ? ನೆಂಟರಿಗೆ ಉಡುಗೊರೆ ಕೊಡುವುದು, ಸಿಕ್ಕಿ ಸಿಕ್ಕಿದವರನ್ನೆಲ್ಲ ಕರೆದು ಔತಣಮಾಡಿಸುವುದು, ಸಂಗೀತ ನೃತ್ಯಗಳ ಮೇಜವಾನಿ ಏರ್ಪಡಿಸುವುದು, ವರದಕ್ಷಿಣೆ ಕೊಡುವುದು ಇವನ್ನೆಲ್ಲ ಶಾಸ್ತ್ರ ಹೇಳುವುದಿಲ್ಲ. ಈ ಖರ್ಚುಗಳನ್ನೆಲ್ಲ ನಾವೇ ಏರ್ಪಾಟು ಮಾಡಿಕೊಂಡು ಶಾಸ್ತ್ರವನ್ನು ಏಕೆ ಆಕ್ಷೇಪಿಸಬೇಕು?”

ಈಗ ಸುಧಾರಕರ ಮಾತು ವರದಕ್ಷಿಣೆ ಕಡೆಗೆ ತಿರುಗಿತು. “ಸ್ವಾಮಿ, ವರದಕ್ಷಿಣೆ ಪಿಡುಗು ಅಪಾಯಕಾರಿ. ಸನ್ನಿಧಾನದ ವರ್ಚಸ್ಸಿನಿಂದ ಅದರ ನಿವಾರಣೆ ಆಗಬೇಕು ಎಂದು ನನ್ನ ಪ್ರಾರ್ಥನೆ” ಎಂದರು. ಸ್ವಾಮಿಗಳೆಂದರು: “ನಾನು ಈ ವಿಷಯದಲ್ಲಿ ಸಹಾಯ ಮಾಡಬೇಕಾದ್ದು ನ್ಯಾಯ. ಆದರೆ ಈ ಪದ್ಧತಿಯನ್ನು ರೂಢಿಗೆ ತಂದು ಅದನ್ನು ಪೋಷಿಸುತ್ತಿರುವಾತನ ವರ್ಚಸ್ಸು ನನ್ನ ವರ್ಚಸ್ಸಿಗಿಂತ ಪ್ರಭಾವಶಾಲಿಯಾಗಿದೆಯೆಲ್ಲಾ, ಏನು ಮಾಡುವುದು”. ಸುಧಾರಕರು ಆಶ್ಚರ್ಯದಿಂದ “ಯಾರು ಮಹಾಸ್ವಾಮಿ, ಆತ?” ಎಂದು ಕೇಳಿದಾಗ ಸ್ವಾಮಿಗಳು, ಹೀಗೆ ಉತ್ತರಿಸಿದರು: “ಆತ ನಿಮಗೆಲ್ಲಾ ಗೊತ್ತಿರುವವನೇ. ಅವನನ್ನು ‘ದುರಾಸೆ’ ‘ಲೋಭ’ ಎಂದು ಕರೆಯುತ್ತಾರೆ. ಬ್ರಾಹ್ಮಣರು ತಮ್ಮ ವರ್ಣಧರ್ಮದಂತೆ ನಡೆದು ತಮ್ಮ ಧರ್ಮಗುರುಗಳ ಸಂಪರ್ಕದಲ್ಲಿದ್ದಷ್ಟು ಕಾಲ ಈ ರಾಕ್ಷಸ ಅವರನ್ನು ಏನೂ ಮಾಡಲಿಲ್ಲ. ಆಸೆ ಲೋಭಗಳು ಬ್ರಾಹ್ಮಣರ ಹೃದಯವನ್ನು ಪ್ರವೇಶಿಸಿದಂತೆಲ್ಲಾ ಶಾಂತಿ ತೃಪ್ತಿಗಳು ಅವರನ್ನು ಬಿಟ್ಟುಹೋದುವು. ವರದಕ್ಷಿಣೆಯ ಪ್ರತಿಯಾಗಿ ನಾವು ಬೋಧಿಸಿದಷ್ಟೂ ಈ ಮಹಾಶಕ್ತನಾದ ಕಾಮನೂ ತನ್ನ ಪರವಾಗಿ ಬೋಧಿಸುತ್ತಾನೆ.

“ವರನ ಕಡೆಯವರು ವರದಕ್ಷಿಣೆ ಕೇಳಿದರೆ, ವಧುವಿನ ತಂದೆ ತಾಯಿಗಳು ತಾನೆ ಏನು ಮಾಡಲಾಗುತ್ತದೆ, ಸ್ವಾಮಿ”: ಇದು ಸುಧಾರಕರ ಪ್ರಶ್ನೆ. ಸ್ವಾಮಿಗಳ ಉತ್ತರ: “ನಿಮ್ಮ ಮಾತು ಒಪ್ಪಲಾಗದು. ಒಬ್ಬ ವೈದಿಕನ ಮಗ ವರದಕ್ಷಿಣೆಯಿಲ್ಲದೆ, ಪ್ರತಿಷ್ಠಾವಂತರ ಮಗ ವರದಕ್ಷಿಣೆ ಕೊಟ್ಟರೆ ಮಾತ್ರ ಮದುವೆಯಾಗಲು ಸಿದ್ಧರಾಗಿದ್ದಾರೆ ಎನ್ನಿ. ನೀವು ಕನ್ಯೆಯನ್ನು ಯಾರಿಗೆ ಕೊಡುತ್ತೀರಿ? ಪ್ರತಿಷ್ಠಾವಂತನ ಮಗನಿಗೆ ತಾನೇ? “ಹೌದು”. “ಏಕೆ ಹೇಳಿ ನೋಡೋಣ?”. “ತನ್ನ ಮಗಳು ಅನುಕೂಲಸ್ಥರ ಮನೆ ಸೇರಿದರೆ ಸುಖವಾಗಿರುತ್ತಾಳೆ”

ಎಂದು". "ಆದ್ದರಿಂದ ಈ ವರನ ಕಡೆಯವರ ಹಾಗೆ ವಧುವಿನ ಕಡೆಯವರು ಕೂಡ ಕಾರಣವಷ್ಟೆ." "ಹೌದು, ಮಗಳ ಸುಖಕ್ಕಾಗಿ ತಂದೆ ತಾಯಿ ಕಷ್ಟಪಡಲು ಸಿದ್ಧರಿರುತ್ತಾರೆ." "ಆದರೆ ತನ್ನ ಮಗಳ ಮಾವನೋ ಗಂಡನೋ ಶ್ರೀಮಂತನಾಗಿದ್ದರೆ ಮಗಳು ಸುಖವಾಗಿರುತ್ತಾಳೆ ಎಂದು ಭಾವಿಸುವುದೇ ತಪ್ಪು. ಶ್ರೀಮಂತಿಕೆಯೂ ಸುಖವೂ ಒಂದನ್ನೊಂದು ಹೊಂದಿಕೊಂಡೇನೂ ಇಲ್ಲ. ಇದನ್ನು ಬ್ರಾಹ್ಮಣರು ತಿಳಿಯಬೇಕು. ಹಣವೇ ಪರಮಧ್ಯೇಯ ಎಂದು ನಂಬಿರುವುದರಿಂದಲೇ ಕಷ್ಟಗಳು ಪ್ರಾಪ್ತವಾಗುತ್ತಿವೆ. ಆತ್ಮತೃಪ್ತಿ, ಶಾಂತಸ್ವಭಾವಗಳಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು".

ಹುರುಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ, 'ಅವಧೂತಗುರು ಶ್ರೀ ಚಂದ್ರಶೇಖರ ಭಾರತೀ', ವಿದ್ಯಾಶಂಕರ ಪ್ರಕಾಶನ, ಮೈಸೂರು, ೧೯೯೪, ಪು. ೧೬೯-೭೨

೧೭. 'ಆದರೆ ಆ ಹಾಳು ಆತ್ಮ ಅನ್ನೋದಿದೆಯಲ್ಲ'

ಒಮ್ಮೆ ಲೇಖಕ ವೆಂ. ಮು. ಜೋಶಿ ಎಂಬವರು ಛಾಯಾಚಿತ್ರಗ್ರಾಹಕ ಕೇಸರ್ ಸಿಂಗ್ ಅವರೊಂದಿಗೆ ಡಿ.ವಿ.ಜಿ. ಅವರನ್ನು ಕಾಣಲು ಹೋಗಿದ್ದರು. ಡಿ.ವಿ.ಜಿ. ಅವರ ಕೋಣೆಯಲ್ಲಿದ್ದ ಅಮೃತಶಿಲೆಯ ಒಂದು ಸುಂದರವಾದ ಗಣೇಶನ ಮೂರ್ತಿ ಅವರನ್ನು ಆಕರ್ಷಿಸಿತು. ಅದರ ವಿಚಾರವನ್ನು ತಿಳಿಯುವ ಕುತೂಹಲದಿಂದ ಜೋಶಿಯವರು ಗುಂಡಪ್ಪನವರನ್ನೇ ಪ್ರಶ್ನಿಸಿದರು.

"ಈ ಗಣೇಶನ ವಿಗ್ರಹ ನನಗೆ ಉಡುಗೊರೆಯಾಗಿ ಕೊಟ್ಟದ್ದು ಯಾರು ಗೊತ್ತೇ?" ಎಂದು ಆರಂಭಿಸಿ, ಅದು ತಮಗೆ ಸರ್ ಮಿರ್ಜಾ ಇಸ್ಮಾಯಿಲ್ ಅವರು ನೀಡಿದ ಉಡುಗೊರೆಯೆಂಬುದಾಗಿ ಡಿವಿಜಿ ತಿಳಿಸಿ, ಆ ಸಂದರ್ಭವನ್ನು ಹೀಗೆ ವಿವರಿಸಿದರು:

ಮಿರ್ಜಾ ಇಸ್ಮಾಯಿಲ್ ಅವರು ಕೆಲಕಾಲ ರಾಜಾಸ್ಥಾನದ ಜಯಪುರದಲ್ಲಿ ದಿವಾನರಾಗಿದ್ದರು. ಅಲ್ಲಿಯ ಒಬ್ಬ ಶಿಲ್ಪಿ ಅವರಿಗೆ ಪ್ರಿಯವಾದ ಮೂರ್ತಿಯೊಂದನ್ನು ಮಾಡಿಕೊಡುವುದಾಗಿ ಅವರಿಗೆ ದುಂಬಾಲು ಬಿದ್ದನು. ಮಿರ್ಜಾ ಅವರಿಗೆ ಹಿಂದೂ ದೇವರಲ್ಲಿ ಗಣೇಶನ ನೆನಪಾಯಿತು. ಬಹುಶಃ ಬೆಂಗಳೂರು ಸುಲ್ತಾನ್ ಪೇಟೆಯ ಗಣೇಶ ಮಂದಿರದ ಗಲಾಟೆ ಅವರ ಮನಸ್ಸಿನಲ್ಲಿ ಇನ್ನೂ ಉಳಿದುಕೊಂಡಿದ್ದಿರಬಹುದು. ಗಣೇಶನ ಮೂರ್ತಿ ಮಾಡಿಕೊಡುವ ಹಾಗೆ ಶಿಲ್ಪಿಗೆ ಸೂಚಿಸಿದರು. ಶಿಲ್ಪಿ ಮಾಡಿಕೊಟ್ಟನು. ಅದನ್ನು ಮಿರ್ಜಾ ತಮ್ಮಲ್ಲಿ ಜೋಪಾನವಾಗಿರಿಸಿಕೊಂಡಿದ್ದರು. ಜಯಪುರ ಸಂಸ್ಥಾನದ ಸರಕಾರದ ಸೇವೆಯಲ್ಲಿ ಆಗ್ಗೆ ಮೈಸೂರಿನ ಇಂಜಿನಿಯರೊಬ್ಬರು ಉದ್ಯೋಗದಲ್ಲಿದ್ದರು. ಅವರು ರಜೆಯ ಮೇಲೆ ಬೆಂಗಳೂರಿಗೆ ಹೊರಡಲಿದ್ದಾಗ, ಮಿರ್ಜಾ ಸಾಹೇಬರು ಅವರಿಗೆ ಆ ಮೂರ್ತಿಯನ್ನು

ಒಪ್ಪಿಸಿ, ಬೆಂಗಳೂರು ತಲುಪಿದ ಮೇಲೆ ರೈಲುನಿಲ್ದಾಣದಿಂದ ನೇರವಾಗಿ ಡಿವಿಜಿ ಅವರ ಮನೆಗೆ ಹೋಗಿ ಅವರಿಗೆ ಅದನ್ನು ತಮ್ಮ ಪರವಾಗಿ ಕೊಡಬೇಕೆಂದು ಸೂಚಿಸಿದರು. ಇಂಜಿನಿಯರ್ ಹಾಗೆಯೇ ಮಾಡಿದರು.

ಡಿ.ವಿ.ಜಿ. ತಮ್ಮ ಈ ವಿಗ್ರಹವೃತ್ತಾಂತವನ್ನು ಮುಂದುವರಿಸಿದರು. "ಈ ಅಮೃತ ಶಿಲೆಯ ಸುಂದರವಾದ ಮೂರ್ತಿಗೆ ಒಂದು ಭವ್ಯವಾದ ಮಂಟಪ ಮಾಡಿಸಬೇಕೆಂದು ನಿರ್ಧಾರಮಾಡಿದೆ. ವೆಂಕಟರಮಣಪ್ಪ ಎಂಬ ಪರಿಚಯಸ್ಥನಾದ ಒಬ್ಬ ಹಳೆಯ ಬಡಗಿಗೆ ಆ ಕೆಲಸ ವಹಿಸಿದೆ. ಆತ ಹಣ್ಣುಹಣ್ಣು ಮುದುಕ; ಆದರೆ ಶ್ರಮಪಟ್ಟು ದಿನವೂ ದುಡಿಯುತ್ತಿದ್ದ. ಅವನು ಪಡುವ ಶ್ರಮವನ್ನು ನಾನು ನೋಡಲಾಗದೆ, 'ಅಯ್ಯ, ಅಷ್ಟೊಂದು ಶ್ರಮ ಏಕೆ ತೆಗೆದುಕೊಳ್ಳುತ್ತೀಯೆ?' ಎಂದು ಕೇಳಿದೆ. ಆಗ ಆತ ಹೇಳಿದ ಉತ್ತರ ಇಂದಿನ ಜನಾಂಗಕ್ಕೆ ತಮಾಷೆಯಾಗಿ ಕಂಡೀತು. ಆತ ಏನು ಹೇಳಿದ ಗೊತ್ತೇ? ಆ ಹಳೆಯ ಹಣ್ಣುಹಣ್ಣು ಮುದುಕ ಬಡಗಿ ಹೇಳಿದ: 'ಬುದ್ಧೀ, ಕೆಲಸ ಹೇಗೋ ಮಾಡಿ ಬಿಸಾಕಿಬಿಡಬಹುದು. ಆದರೆ ಆ ಹಾಳು ಆತ್ಮ ಅನ್ನೋದಿದೆಯಲ್ಲ, ಅದು ಕೇಳುತ್ತೆ ಬುದ್ಧಿ : 'ದುಡ್ಡು ತೊಗೊಳ್ತೀಯ; ಅದಕ್ಕೆ ತಕ್ಕ ಹಾಗೆ ಕೆಲಸ ಮಾಡಿದೆಯಾ' ಅಂತ. ಅದಕ್ಕೇ ಬುದ್ಧಿ, ನಾನು ಕಷ್ಟ ಪಡಲೇ ಬೇಕು."

"ಇವತ್ತಿನ ಚಿಕ್ಕವರಿಗೆ ಇಂತಹ ಪ್ರಜ್ಞೆ ಬಂದರೆ ಸಾಕು, ಭಾರತ ಉದ್ಧಾರವಾದಂತೆ" ಎಂದು ಡಿ.ವಿ.ಜಿ. ತಮ್ಮ ಮಾತು ಮುಗಿಸಿದರು.

ಸಂ. ಎಂ.ವಿ. ಸೀತಾರಾಮಯ್ಯ, 'ಧೀಮಂತ' (ಡಿ.ವಿ.ಜಿ. ಜನ್ಮಶತಮಾನೋತ್ಸವ ಸಂಪುಟ), ಗೋಖಲೆ ಸಾರ್ವಜನಿಕ ಸಂಸ್ಥೆ, ಬೆಂಗಳೂರು-೧೯, ೧೯೮೮, ಪು. ೨೩೩-೩೫.

೧೮. 'ಆ ಮನೆಯನ್ನೇ ನಿಷ್ಕರ್ಷೆಮಾಡು'

ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ತಮ್ಮ ಉತ್ಕೃಷ್ಟವಾದ ವಾಗ್ಮಿತೆ, ರಾಮಾಯಣೋಪನ್ಯಾಸಗಳು ಮತ್ತು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸೇವಾ ಕಾರ್ಯಗಳು ಇವುಗಳಿಂದ ಪ್ರಸಿದ್ಧರಾಗಿದ್ದವರು; ಅಧ್ಯಾಪಕರಾಗಿ ವೃತ್ತಿಯನ್ನಾರಂಭಿಸಿ ವಿಶ್ವವಿದ್ಯಾನಿಲಯವೊಂದರ ಕುಲಪತಿಗಳಾದವರು; ಡಿ.ವಿ.ಜಿ, ಎಸ್. ಜಿ. ಶಾಸ್ತ್ರಿ ಮೊದಲಾದವರಿಗೆ ಆಪ್ತರಾಗಿದ್ದವರು.

ಶಾಸ್ತ್ರಿಗಳು ಸ್ವಲ್ಪ ಕಾಲ ಬೆಂಗಳೂರಿನಲ್ಲಿರಲು ಉದ್ದೇಶಿಸಿದರು. ಅವರ ವಸತಿಗಾಗಿ ಡಿವಿಜಿ. ೩-೪ ಮನೆಗಳನ್ನು ನೋಡಿಟ್ಟರು. ಅವುಗಳಲ್ಲಿ ಒಂದರ ಬಗೆಗೆ ಪತ್ರದಲ್ಲಿ ಅವರು ಕೆಲವು ತಪಶೀಲುಗಳನ್ನು ಬರೆದಿದ್ದರು. "ಮನೆ ಲಾಲ್‌ಬಾಗಿಗೆ ಸಮೀಪದಲ್ಲಿದೆ; ಸ್ನೇಹಿತರ ಮನೆಗಳಿಗೆ ಹತ್ತಿರವಿದೆ. ಮನೆಯಲ್ಲಿ ವಿಸ್ತಾರವಾದ ಕೋಣೆಗಳಿವೆ. ಕುಳಿತು ಕೆಲಸ ಮಾಡಲು

ದೊಡ್ಡ ನಡುಮನೆಯಿದೆ. ಕಾಂಪೌಂಡಿನೊಳಗೆ ಸೇದುವ ಬಾವಿಯಿದ್ದು, ಒಳ್ಳೆಯ ಸಿಹಿನೀರು ಸಿಕ್ಕುತ್ತದೆ. ಮುಖ್ಯ ಕಟ್ಟಡಕ್ಕೆ ಸ್ವಲ್ಪ ಆಚೆಗೆ ಒಂದು ಸಣ್ಣ ಔಟ್‌ಹೌಸ್ ಇದೆ. ಮನೆಯ ಕಟ್ಟಡ ಮಜಬೂತಾಗಿದೆ. ಪೂರ್ವಕ್ಕೆ ಅಭಿಮುಖವಾದ ಆ ಮನೆಯ ಮುಂದೆ ಕೈಸಾಲೆ ಖಾಲಿಜಾಗಗಳೂ ಇದ್ದು, ಸ್ನೇಹಿತರ ಗೋಷ್ಠಿಗೆ ಅದರಿಂದ ಅನುಕೂಲವಿದೆ.

ಇದರ ಜೊತೆಗೆ ಯೋಚಿಸಬೇಕಾದ ಒಂದು ಸಂಗತಿಯೆಂದರೆ: ಗೃಹಪ್ರವೇಶವಾದ ೧-೨ ವಾರಗಳಲ್ಲಿಯೇ ಮನೆಯ ಮಾಲಿಕ ಬಾವಿಯಲ್ಲಿ ನೀರು ಸೇದಲು ಹೋಗಿ ಹಗ್ಗ ತೊಡರಿಕೊಂಡು ಬಾವಿಯಲ್ಲಿ ಬಿದ್ದು ಮೃತನಾದ ಕಾರಣ, ಆ ಮನೆಗೆ 'ದುರದೃಷ್ಟದ ಮನೆ' ಎಂಬ ಹೆಸರು ಬಂದಿದೆ. ಅಲ್ಲಿಗೆ ಜನ ಸಂಸಾರಕ್ಕೆ ಬರಲು ಹೆದರುತ್ತಾರೆ".

ಇಷ್ಟು ಬರೆದು ಆದ ಮೇಲೆ, ಇನ್ನೂ ಕೆಲವು ವಾಕ್ಯಗಳನ್ನು ಬರೆದಿದ್ದರು: "ಗತಿಸಿದ ಮನೆಯಾತ ತಮ್ಮ ಸ್ನೇಹಿತ; ಎಂಜಿನಿಯರು; ಸತ್ಕುಲದಲ್ಲಿ ಹುಟ್ಟಿದವನು; ತಂದೆ ಪ್ರಸಿದ್ಧ ಸಂಸ್ಕೃತವಿದ್ವಾಂಸರು; ಆ ಸ್ನೇಹಿತ ಸತ್ತ ನಂತರ ಸಂಸಾರಕ್ಕೆ ಕಷ್ಟ ಬಂತು. ಮನೆಯ ಸಾಲದ ಹೊರೆ ಉಳಿಯಿತು; ಮನೆ ಸಹಕಾರಿ ಬ್ಯಾಂಕಿಗೆ ಅಡಮಾನವಾಯಿತು. ಬ್ಯಾಂಕಿನಲ್ಲಿ ಡಿವಿಜಿ ವಿಚಾರಿಸಿದಾಗ, ಅಲ್ಲಿದ್ದ ಅವರ ಒಬ್ಬ ಸ್ನೇಹಿತರು ಹೇಳಿದರು: "ಮನೆಯಿಂದ ಬರುವ ಬಾಡಿಗೆಯಿಂದಲೇ ಆ ಸಂಸಾರಕ್ಕೆ ಜೀವನ ನಡೆಯಬೇಕಾಗಿದೆ. ಅವರಿಗೆ ಬೇರೆ ಏನೂ ಗತಿಯಿಲ್ಲ. ಬಾಡಿಗೆ ೬೦ ರೂಪಾಯಿ. ಅದರಲ್ಲಿ ಅರ್ಧ ಸಾಲಕ್ಕೆ ಕಟ್ಟಿಕೊಂಡು, ಇನ್ನರ್ಧ ಸಂಸಾರನಿರ್ವಹಣೆಗೆಂದು ಮನೆಯವರಿಗೆ ಕೊಡುತ್ತದೆ, ಬ್ಯಾಂಕು. ಬ್ಯಾಂಕಿನ ಡೈರೆಕ್ಟರುಗಳಲ್ಲಿ ಇಂಥಿಂಥವರನ್ನು ನೋಡಿ ಮಾತಾಡಿದರೆ ಬಾಡಿಗೆ ಕೊಂಚ ಇಳಿಸಬಹುದು".

ಶಾಸ್ತ್ರಿಗಳು ಡಿವಿಜಿ ಅವರ ಪತ್ರವನ್ನೋದಿ ತಮ್ಮ ಪ್ರತಿಕ್ರಿಯೆಯನ್ನು ಅವರಿಗೆ ಹೀಗೆ ಬರೆದು ತಿಳಿಸಿದರು:

"ಅಯ್ಯ, ನಿನ್ನ ಕಾಗದದಿಂದ ನನಗೆ ಆಶ್ಚರ್ಯವಾಗಿದೆ. ನನ್ನ ಅಭಿಪ್ರಾಯ ಏನೆಂದು ಕೇಳುತ್ತೀಯಲ್ಲ. ನನ್ನ ಮನಸ್ಸು ನಿನಗೆ ತಿಳಿಯದೇ? ಈ ಕುಟುಂಬ ಕಷ್ಟಸ್ಥಿತಿಯಲ್ಲಿದೆ ಎನ್ನುತ್ತೀಯೆ; ಒಳ್ಳೆಯ ಜನ ಎನ್ನುತ್ತೀಯೆ. ಅಂಥವರಿಗೆ ನಮ್ಮ ಕೈಲಾದಷ್ಟು ಸಹಾಯ ಮಾಡುವುದು ನಮ್ಮ ಕರ್ತವ್ಯವಲ್ಲವೇ? ಮನೆ 'ದುರದೃಷ್ಟದ ಮನೆ' ಎನ್ನುತ್ತೀಯೆ, ನಾನು ರೋಗಿಷ್ಠ. ನಾನು ಆ ಮನೆಯಲ್ಲಿದ್ದು ಬದುಕಿದರೆ ಆ ಕೆಟ್ಟ ಹೆಸರು ತೊಡೆದುಹೋಗುತ್ತದೆ; ಒಂದು ಪಕ್ಷ ಅಲ್ಲಿ ನಾನು ಸತ್ತರೆ ಮನೆಗೆ ಹೊಸ ಕೆಡುಕೇನೂ ನನ್ನಿಂದ ಬಂದ ಹಾಗಾಗುವುದಿಲ್ಲ. ಆದ್ದರಿಂದ ಆ ಮನೆಯನ್ನೇ ನಿಷ್ಕರ್ಷೆಮಾಡು. ನೀನು ಯಾವ ಡೈರೆಕ್ಟರನ್ನೂ ನೋಡುವುದಕ್ಕೆ ಹೋಗಬೇಡ; ಬಾಡಿಗೆ ಕಡಿಮೆ ಮಾಡಿಸಿ ಎಂದು ಕೇಳಬೇಡ. ಬಾಡಿಗೆ ಕಡಿಮೆ ಮಾಡಿದರೆ ಆ ಸಂಸಾರಕ್ಕೆ ಸಲ್ಲುವ ಭಾಗ ಕಡಿಮೆಯಾಗುತ್ತದೆಯಲ್ಲವೇ? ಈಗ ಬಾಡಿಗೆ ಕಡಿಮೆ ಮಾಡಿಸಿದರೆ ಇನ್ನು ಮುಂದೆ ಆ ಮನೆಗೆ ಬಾಡಿಗೆಗೆ ಬರುವವರು ನನ್ನ ಅದನ್ನು ಅಗ್ಗಕ್ಕೆ ಕೇಳುತ್ತಾರೆ. ನನ್ನ ಕಾರಣದಿಂದ ಮನೆಯ ಬೆಲೆ ಇಳಿಸಬಾರದು. ಆ ಮನೆಯವರು ಬೇಕಾದರೆ ಅಲ್ಲಿಯೇ ಒಂದು ಭಾಗದಲ್ಲಿ ಇದ್ದುಕೊಳ್ಳಲಿ. ಅವರು ವೈದಿಕರು, ದೊಡ್ಡ ವಿದ್ವಾಂಸರ ಮನೆಯವರು ಎಂದು ಹೇಳಿದೆ. ಅದು ಒಳ್ಳೆಯ ಸಹವಾಸ. ಅದನ್ನು ನಾವಾಗಿಯೇ ಸಂಪಾದಿಸಿಕೊಳ್ಳಬೇಕು...."

ಹೀಗೆ ಬರೆದ ಮೇಲೆ ಡಿವಿಜಿ. ಶ್ರೀನಿವಾಸ ಶಾಸ್ತ್ರಿಗಳ ಬೆಂಗಳೂರು ವಸತಿಗೆ ಅದೇ ಮನೆಯನ್ನು ಗೊತ್ತುಮಾಡಿದರು. ಶಾಸ್ತ್ರಿಗಳೂ ಅವರ ಮನೆಯವರೂ ಅಲ್ಲಿ ಸಂತೋಷದಿಂದ ೩-೪ ವರ್ಷ ವಾಸವಿದ್ದರು.

ಡಿ.ವಿ.ಜಿ., 'ಹಲವರು ಸಾರ್ವಜನಿಕರು', ಕಾವ್ಯಾಲಯ, ಮೈಸೂರು, ೧೯೭೩, ಪು. ೮೮-೯೦

೧೯. 'ಇದು ಉಪಚಾರದ ಮಾತಲ್ಲ'

ಮಾನ್ವಿ ನರಸಿಂಗರಾವ್ ಎಂಬುವರು ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಶಿಷ್ಯರಲ್ಲಿ ಒಬ್ಬರು. ಅವರು ಹೈದರಾಬಾದಿನಿಂದ ಎಂ.ಎ. (ಕನ್ನಡ) ವ್ಯಾಸಂಗಕ್ಕೆ ಉಸ್ಮಾನಿಯ ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿವೇತನವನ್ನು ಪಡೆದು ಹೊರಟುಬಂದರು. ವೆಂಕಣ್ಣಯ್ಯನವರು ಅವರನ್ನು ಪ್ರೀತಿ ವಿಶ್ವಾಸಗಳಿಂದ ಕಂಡು ಅವರ ಯೋಗಕ್ಷೇಮದ ಬಗೆಗೆ ಆಸಕ್ತಿ ವಹಿಸಿದರು. "ಮಾನವತೆಯ ಮೂರ್ತಿಮಂತ ವ್ಯಕ್ತಿ, ಕಷ್ಟಕ್ಕೆ ಕೊರಗುವ ಹೃದಯ" ಎಂದು ಮಾನ್ವಿ ಅವರಿಗೆ ಕೆಲ ದಿನಗಳಲ್ಲೇ ಮನವರಿಕೆಯಾಯಿತು.

ಎಂ.ಎ. ಪರೀಕ್ಷೆ ಮುಗಿಯಿತು. ವಾಚಿಕಪರೀಕ್ಷೆಗೆ ಆರ್. ನರಸಿಂಹಾಚಾರ್ಯರು, ಬಿ. ಎಂ. ಶ್ರೀಕಂಠಯ್ಯನವರು ಮತ್ತು ವೆಂಕಣ್ಣಯ್ಯನವರು ಇದ್ದರು. ಪರೀಕ್ಷೆ ಮುಗಿದೊಡನೆ ಮಾನ್ವಿ ಹೊರಗೆ ಹೊರಡಲಿದ್ದಾಗ, ಅವರು ಸಂಜೆ ಹೈದರಾಬಾದಿಗೆ ಪ್ರಯಾಣ ಮಾಡುವರೆಂಬುದನ್ನು ಮೊದಲೇ ತಿಳಿದಿದ್ದ ವೆಂಕಣ್ಣಯ್ಯನವರು, "ಮಾನ್ವೀ, ಊರಿಗೆ ಹೊರಡುವ ಮುಂಚೆ ನನ್ನನ್ನು ನೋಡ್ತೀರಿ, ತಾನೇ" ಎಂದರು. 'ಹೌದು ಸಾರ್' ಎಂದರು, ಮಾನ್ವಿ.

ಸಂಜೆ ಮಾನ್ವಿಯವರು ವೆಂಕಣ್ಣಯ್ಯನವರ ಮನೆಗೆ ಬಂದರು. ಆಗ ವೆಂಕಣ್ಣಯ್ಯನವರು ತಮ್ಮ ಕೊಠಡಿಯಲ್ಲಿದ್ದರು. ಅಲ್ಲಿಗೇ ಹೋದರು, ಮಾನ್ವಿ. ಅಲ್ಲಿ ಆಗಲೇ ಮೂರುಕಾಲಿನ ಮಣೆಯ ಮೇಲೆ ಒಂದು ಬೆಳ್ಳಿ ತಟ್ಟೆಯಲ್ಲಿ ತೆಂಗಿನ ಕಾಯಿ, ವೀಳ್ಯದೆಲೆ-ಅಡಕೆ, ಒಂದು ಗುಲಾಬಿ ಹೂ ಇದ್ದುವು, ಸಿದ್ಧವಾಗಿ. ವಿದ್ಯಾರ್ಥಿ ಮಾನ್ವಿ ಒಳಗೆ ಬರುತ್ತಲೇ, ಪ್ರಾಧ್ಯಾಪಕ ವೆಂಕಣ್ಣಯ್ಯನವರು ಸಂತೋಷವಾಗಿ ಮೇಲೆದ್ದು, ಅವರ ಹೆಗಲ ಮೇಲೆ ಕೈಯಿಕ್ಕಿ, ಅವರನ್ನು ಸ್ವಾಗತಿಸಿದರು. ಬಳಿಕ ಅವರನ್ನು ಉದ್ದೇಶಿಸಿ, "ನೀವು ಊರಿಗೆ ಹೋಗುವಿರಿ; ಪರೀಕ್ಷೆಯಲ್ಲಿ ಏನಾಗುವುದೋ ಎಂಬ ಚಿಂತೆಯಲ್ಲಿ ನೀವು ಹೋಗಕೂಡದು. ಇದಕ್ಕೆಂದೇ ನಿಮ್ಮನ್ನು ಬಯಹೇಳಿದೆ. ನಿಮಗೆ ಫಸ್ಟ್‌ಕ್ಲಾಸ್ ಬಂದಿದೆಯಪ್ಪ" ಎಂದು ಹೇಳುತ್ತ, ಗುಲಾಬಿ ಹೂವನ್ನೆತ್ತಿ ಮಾನ್ವಿಯವರ ಕೋಟಿಗೆ ಸಿಕ್ಕಿಸಿದರು. ತೆಂಗಿನ ಕಾಯಿ, ವೀಳ್ಯದೆಲೆ-ಅಡಕೆ ತಾಂಬೂಲವನ್ನು ಕೈಗೆ ಕೊಟ್ಟರು.

ಪರೀಕ್ಷೆಯ ಫಲಿತಾಂಶವನ್ನು ಮೊದಲೇ ತಿಳಿಸುವುದು ನಿಯಮವಲ್ಲವಾದರೂ ದೂರದ ಊರಿಂದ ಬಂದು ಕಷ್ಟಪಟ್ಟು ಓದಿದ ವಿದ್ಯಾರ್ಥಿಯ ಮೇಲೆ ವೆಂಕಣ್ಣಯ್ಯನವರು ತುಂಬ ಅಂತಃಕರಣವನ್ನು ತೋರಿದರು. ಸಂತೋಷಗೊಂಡ ಮಾನ್ವಿ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, "ತಮ್ಮ ಅನುಗ್ರಹ" ಎಂದರು. ಆಗ ವೆಂಕಣ್ಣಯ್ಯನವರು, "ನಿಮಗೆ ಕ್ಲಾಸ್ ಬಂದುದು ನಮ್ಮ ಅನುಗ್ರಹವೇನೂ ಅಲ್ಲಪ್ಪ. ನಿಮ್ಮ ಯೋಗ್ಯತೆಯಿಂದ ನೀವು ಪಡೆದಿದ್ದೀರಿ" ಎಂದರು.

ಹೈದರಾಬಾದಿಗೆ ಮರಳಿದ ಬಳಿಕ ವೆಂಕಣ್ಣಯ್ಯನವರ ಸೂಚನೆಯಂತೆ ಮಾನ್ವಿಯವರು ತಮ್ಮ ಗುರುಗಳಿಗೆ ಆಗಾಗ ಪತ್ರ ಬರೆಯುತ್ತಲೇ ಇದ್ದರು. ಈ ಕಡೆಯಿಂದ ಗುರುಗಳು ಬರೆದ ಒಂದು ಪತ್ರದಲ್ಲಿ ಹೀಗೆ ಕೆಲವು ಸಾಲುಗಳಿದ್ದವು :

"ನಿಮಗೆ ನಮ್ಮೆಲ್ಲರಲ್ಲಿಯೂ ಎಷ್ಟರ ಮಟ್ಟಿಗೆ ಪ್ರೀತಿ ಇದೆ ಎಂಬುದನ್ನು ನಾವೆಲ್ಲರೂ ಮನಗಂಡಿದ್ದೇವೆ. ನಿಮ್ಮ ಸೌಜನ್ಯಸ್ವಭಾವವೇ ಪರರಲ್ಲಿರುವ ಸುಗುಣಲೇಶವನ್ನು ದೊಡ್ಡದು ಮಾಡಿ ತೋರುತ್ತಿದೆ. ನೀವು ಇಲ್ಲಿಗೆ ಬಂದು ಓದಿ ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ಪ್ರಥಮತರಗತಿಯಲ್ಲಿ ಉತ್ತೀರ್ಣರಾಗಿ ನಮ್ಮ ಕನ್ನಡ ಡಿಪಾರ್ಟ್‌ಮೆಂಟಿಗೆ ಒಂದು ಗೌರವವನ್ನು ತಂದಿರುತ್ತೀರಿ. ಇಲ್ಲಿಂದ ಹೈದರಾಬಾದಿಗೆ ಹೋಗಿ, ಅಲ್ಲಿ ನೆಲಸಿ, ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ಪಾಠ ಪ್ರವಚನಗಳನ್ನು ನಡೆಸಿ, ಆ ಮೂಲಕ ಕನ್ನಡ ನಾಡಿನ, ಕನ್ನಡ ನುಡಿಯ ಮೇಲ್ಮೆಗಾಗಿ ನೀವು ಈ ವಿಶ್ವವಿದ್ಯಾನಿಲಯದಿಂದ ಹಚ್ಚಿಕೊಂಡು ಹೋದ ಬೆಳಕನ್ನು ಇನ್ನಷ್ಟು ಪ್ರಜ್ವಲಿಸುವಂತೆ ಮಾಡಿ ಧನ್ಯರಾಗುವಿರೆಂದು ನಂಬಿರುತ್ತೇನೆ. ಇದು ಉಪಚಾರದ ಮಾತಲ್ಲ."

ಪ್ರ.ಸಂ. ಕುವೆಂಪು, 'ಸವಿನೆನಪು' (ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ), ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೦, ಪು. ೧೦೮-೦೯,

೨೦. 'ಇದು ಕರ್ಮಠನ ಕರುಳಿನ ಕಥೆ'

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಕ.ವೆಂ. ರಾಘವಾಚಾರ್ ಎಂಬ ಪ್ರಾಧ್ಯಾಪಕರಿದ್ದರು; ಇಲ್ಲಿ ನಿವೃತ್ತಿಯಾದ ಬಳಿಕ ಹತ್ತು ವರ್ಷ ದೆಹಲಿ ವಿಶ್ವವಿದ್ಯಾನಿಲಯದ ಭಾಷಾವಿಭಾಗದಲ್ಲಿಯೂ ಪ್ರಾಧ್ಯಾಪಕರಾಗಿದ್ದರು. ಅವರು ತಮ್ಮ ಬಾಲ್ಯಕಾಲದ ಒಂದು ಅನುಭವವನ್ನು, ಹಿರಿಯರಿಂದ ಕೇಳಿ ತಿಳಿದುದನ್ನು, ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

ಆಚಾರ್ಯರು ೪ ವರ್ಷದ ಸಣ್ಣ ಮಗು. ಮನೆಯಲ್ಲಿ ಅಂದು ಅವರ ತಾತ ತನ್ನ

ತಂದೆಯವರ ಶ್ರಾದ್ಧ ಮಾಡುತ್ತಿದ್ದರು. ಹೊರಗೆ ಹಜಾರದಲ್ಲಿ ಹೋಮ ನಡೆಯುತ್ತಿದೆ; ಒಳಗೆ ಶ್ರಾದ್ಧದ ಅಡಿಗೆ ತಯಾರಾಗುತ್ತಿದೆ. ಸಣ್ಣ ಮಕ್ಕಳನ್ನೆಲ್ಲ ಪಕ್ಕದ ದೇವಸ್ಥಾನದ ಕೈಸಾಲೆಯಲ್ಲಿ ಬಿಟ್ಟು ಬಂದಿದ್ದಾರೆ. ದೇವಸ್ಥಾನದ ಪ್ರಾಕಾರದಿಂದ ಒಳಗಿಂದಲೇ ನೇರವಾಗಿ ಮನೆಗೆ ಹೋಗಲು ದಕ್ಷಿಣದ ಕಡೆ ಒಂದು ಬಾಗಿಲಿತ್ತು. ಅಡಿಗೆಮನೆಯಲ್ಲಿ ಕರಿಯುತ್ತಿದ್ದ ವಡೆಯ ವಾಸನೆ ಈ ಮಗುವಿನ ಮೂಗಿಗೆ ಬಡಿಯಿತು. ಅದು ಗುಡಿಯ ಕೈಸಾಲೆಯಿಂದ ಮೆಲ್ಲಗೆ ಮಾಯವಾಗಿ, ಎಲ್ಲರ ಕಣ್ಣು ತಪ್ಪಿಸಿ, ಅಡಿಗೆ ಮನೆಗೆ ನುಸುಳಿ ವಡೆ ಬೇಕೆಂದು ಅಳತೊಡಗಿತು. ಮಗುವಿನ ಅಳು ಕಿವಿಗೆ ಬಿದ್ದಾಗ, ತಾತ ಹೋಮವನ್ನು ಯಾವುದೋ ಘಟ್ಟದಲ್ಲಿ ನಿಲ್ಲಿಸಿ ಅಡಿಗೆ ಮನೆಯೊಳಗೆ ಬಂದರು. ಅಲ್ಲಿ ಇದ್ದವರನ್ನೆಲ್ಲ ಗದರಿಸಿಕೊಂಡು ಮಗುವನ್ನು ಎತ್ತಿಕೊಂಡು (ಆ ದಿನ ಮಕ್ಕಳಿಗೆಲ್ಲ ರೇಶ್ಮೆ ಪಟ್ಟು ಉಡಿಸಿದ್ದರಾದ್ದರಿಂದ ಅವರನ್ನು ಮುಟ್ಟಿಕೊಂಡರೂ ಮೈಲಿಗೆಯಾಗುತ್ತಿರಲಿಲ್ಲ; ಶ್ರೀ ವೈಷ್ಣವರ ಮನೆಗಳಲ್ಲಿ ಆ ಸಂಪ್ರದಾಯ ಇದ್ದಿರಬಹುದೇನೋ) ಏನೇನೋ ಹೇಳಿ ಸಮಾಧಾನಮಾಡಿ ಮತ್ತೆ ಕೈಸಾಲೆಯಲ್ಲಿ ಬಿಟ್ಟು ಬಂದು ಹೋಮಕ್ಕೆ ಕುಳಿತರು.

ಹೋಮ ಮುಗಿಯಿತು. ಬ್ರಾಹ್ಮಣರಿಗೆಲ್ಲ ಬಡಿಸಿದ್ದಾಯಿತು. ಇನ್ನೇನು ಅವರಿಗೆ ಆಪೋಶನ ಹಾಕಬೇಕು; ಅದೇ ಮಗು ತಿರುಗಿ ಕೈಸಾಲೆಯಿಂದ ಅಡಿಗೆ ಮನೆಗೆ ಬಂದು, ಕಿಟ್ಟೆಂದು ಕಿರುಚತೊಡಗಿತು. ಮಗುವಿನ ಅಳು ತಾತನ ಕಿವಿ ಇರಿಯಿತು. ತಾತ ಕೈಯ ತೀರ್ಥಪಾತ್ರೆಯನ್ನು ಹಾಗೆಯೇ ಇಟ್ಟು ಅಡಿಗೆ ಮನೆಗೆ ಬಂದು ಮಗುವನ್ನೆತ್ತಿಕೊಂಡು ಸಮಾಧಾನಪಡಿಸತೊಡಗಿದರು. ಚಂಡಿಹಿಡಿದಂತೆ ಅಳುತ್ತಿದ್ದ ಮಗುವನ್ನು ಕಂಡು ಆ ಹಣ್ಣುಜೀವಕ್ಕೆ ಏನೆನ್ನಿಸಿತೋ ಏನೋ! "ಈ ತಬ್ಬಲಿಯನ್ನು ಅಳಿಸಿಕೊಂಡು (ಮಗುವಿಗೆ ತಾಯಿ ಇರಲಿಲ್ಲ) ಶ್ರಾದ್ಧಮಾಡಿದರೆ ನಮ್ಮಪ್ಪನಿಗೆ ಆಗುವ ತೃಪ್ತಿ ಅಷ್ಟರಲ್ಲಿಯೇ ಇದೆ" ಎಂದು ಹೇಳಿ, ಒಂದು ವಡೆ ತೆಗೆದುಕೊಂಡು ಮುರಿದು ಮಗುವಿನ ಬಾಯಿಗೆ ಅರ್ಧ ತುರುಕಿ, ಇನ್ನರ್ಧ ಅದರ ಕೈಗೆ ಕೊಟ್ಟು, ಅದು ಅಳು ನಿಲ್ಲಿಸುವಂತೆ ಮಾಡಿದರು.

ಹೊರಗೆ ಬಂದ ತಾತ ನಿಮಂತ್ರಣದ ಬ್ರಾಹ್ಮಣರಿಗೆ ದೀರ್ಘದಂಡ ನಮಸ್ಕಾರ ಹಾಕಿದರು. ನಡೆದದ್ದನ್ನೆಲ್ಲ ಅವರಿಗೆ ತಿಳಿಸಿದರು. "ಕ್ಷಮಿಸಿ; ಆಪೋಶನ ಹಾಕು ಎಂದರೆ ಹಾಕುತ್ತೇನೆ" ಎಂದು ವಿಜ್ಞಾಪಿಸಿದರು. ಈ ವಿಚಿತ್ರಸನ್ನಿವೇಶ ನೋಡಿ ಬ್ರಾಹ್ಮಣರು ಗಲಿಬಿಲಿಗೊಂಡರು. ತಾತ ಶಾಸ್ತ್ರವೇತ್ತರು, ಶಿಷ್ಯರಿಗೆ ಪಾಠಹೇಳಿದ ಗುರುಗಳು; ಬರಿಯ ಉಪದೇಶ ಮಾಡುತ್ತಿರಲಿಲ್ಲ, ನಿಷ್ಠೆಯಿಂದ ಅನುಷ್ಠಾನವನ್ನೂ ಇಟ್ಟುಕೊಂಡಿದ್ದರು. ಹೀಗಾಗಿ ಬ್ರಾಹ್ಮಣರು ಆಕ್ಷೇಪವನ್ನೆತ್ತಲಿಲ್ಲ. ಕರ್ಮಕ್ಕೆ ಏನೂ ಅಪಚಾರವಾಗಲಿಲ್ಲವೆಂದೇ ಗ್ರಹಿಸಿ ಆಪೋಶನ ಹಾಕಿಸಿಕೊಂಡರು. ಶ್ರಾದ್ಧ ಸಾಂಗವಾಗಿ ನೆರವೇರಿತು.

ಆಚಾರ್ಯರು ಈ ಸನ್ನಿವೇಶವನ್ನು ನೆನೆದು, 'ಇದು ಕರ್ಮಠನ ಕರುಳಿನ ಕಥೆ' ಎಂದು ಅದಕ್ಕೆ ಮುಕ್ತಾಯ ಹೇಳಿದ್ದಾರೆ.

ಕ.ವೆಂ. ರಾಘವಾಚಾರ್, 'ನಂದಾನೆನಪು', ಉಷಾ ಸಾಹಿತ್ಯ ಮಾಲೆ, ಮೈಸೂರು ೧೯೭೩, ಪು. ೩೧೪-೧೫

೨೧. 'ಇದು ನನ್ನ ಸ್ವಂತಕೆಲಸ'

ಬಿಹಾರದಲ್ಲಿ ಗಂಗಾನದಿಗೆ ಒಂದು ಹೊಸ ಸೇತುವೆ ಕಟ್ಟಿಸುವ ವಿಚಾರ ಇಂಡಿಯಾ ಸರ್ಕಾರದ ಮುಂದೆ ಬಂತು. ಸೇತುವೆಗೆ ಸೂಕ್ತವಾದ ಸ್ಥಳ ಗೊತ್ತುಮಾಡುವಲ್ಲಿ ಸರ್ಕಾರದ ಎಂಜಿನಿಯರುಗಳ ನಡುವೆ ಅಭಿಪ್ರಾಯಭೇದ ಬಲವಾಗಿತ್ತು. ಈ ವಿಚಾರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆ ಪಡೆಯಬಹುದೆಂದು ಒಬ್ಬ ಪ್ರಮುಖರು ಸೂಚಿಸಿದರು. ಇತರರು ಒಪ್ಪಿದರು. ವಿಶ್ವೇಶ್ವರಯ್ಯನವರಿಗೆ ಆಹ್ವಾನ ಬಂತು. ಆಗ ಅವರಿಗೆ ೯೦ರ ಮೇಲ್ಪಟ್ಟು ವಯಸ್ಸು. ಅವರು ಬರಲಾರರೆಂದು ಕೆಲವರು ನಿರೀಕ್ಷಿಸಿದ್ದರು. ಅವರಿಗೆ ಆಶಾಭಂಗವಾಯಿತು.

ವಿಶ್ವೇಶ್ವರಯ್ಯನವರಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಲಾಯಿತು. ಅವರನ್ನು ನದೀತೀರಕ್ಕೆ ಕರೆದೊಯ್ಯಲು ಡೋಲಿಗಳೂ ಸಹಾಯಕರೂ ಸಿದ್ಧರಾದರು. ಆ ಪ್ರದೇಶ ಬಂಡೆಗಳಿಂದ, ಗುಡ್ಡಗಳಿಂದ ತುಂಬಿದ್ದ ಕಾರಣ, ಅಲ್ಲಿ ಸಂಚಾರ ಕಷ್ಟವಾಗಿದ್ದ ಕಾರಣ, ಈ ಏರ್ಪಾಡು.

ಸರ್ ಎಂ. ವಿ. ಸ್ಥಳ ತಲುಪುತ್ತಿದ್ದ ಹಾಗೆಯೇ ಕಾರಿನಿಂದ ಧುಮುಕಿದರು. ನೆಲದ ಮೇಲಿಂದ ಬಂಡೆಯ ಮೇಲಕ್ಕೆ ಹಾರಿದರು. ಅಲ್ಲಿಂದ ಇನ್ನೊಂದು ಗುಡ್ಡಕ್ಕೆ ಎಗರಿದರು. ಕಾಲುನಡೆಯಲ್ಲೇ ಒಂದು ಗಂಟೆ ಕಾಲ ಪೂರ್ತಿ ಸ್ಥಳದ ಅಜಮಾಯಿಷಿ ಮಾಡಿದರು. ಡೋಲಿಗಳೊಂದಿಗೆ ಸಹಾಯಕರು ಸುಮ್ಮನೆ ಸಾವಕಾಶವಾಗಿ ಜೊತೆಗೆ ಬರುತ್ತಿದ್ದರು. ಸರ್ ಎಂ.ವಿ. ಲವಲವಿಕೆ ನೋಡಿ ಅವರಿಗೆ ೯೦ ಆಗಿಲ್ಲ ಎಂದೇ ಎಲ್ಲ ವಾದಿಸುತ್ತಿದ್ದರು.

ಪ್ರದೇಶದ ಸಮೀಕ್ಷೆ ಮುಗಿಯಿತು. ಟಿ.ಬಿ.ಗೆ ಮರಳಿದ ಮೇಲೆ ವಿಶ್ವೇಶ್ವರಯ್ಯನವರು ಮೇಜಿನ ಮೇಲೆ ಕಾಗದದ ಹಾಳೆಗಳನ್ನು ಹಾಸಿ ಡ್ರಾಯಿಂಗ್ ಬರೆಯಲು ಉಪಕ್ರಮಿಸಿದರು. ತಪಶೀಲಾಗಿ ಸೇತುವೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಗುರುತುಮಾಡಿ, ರಿಪೋರ್ಟು ಸಿದ್ಧಪಡಿಸಿದರು.

ಅದಾದ ಮೇಲೆ ಅಲ್ಲಿಯ ಹಣಕಾಸು ಅಧಿಕಾರಿಯನ್ನು ಬರಮಾಡಿ "ಈ ರಿಪೋರ್ಟು ಅಚ್ಚುಮಾಡಿಸಬೇಕು. ಅದರ ಪ್ರತಿಗಳನ್ನು ಅಮೆರಿಕದಲ್ಲಿಯೂ ಹಂಚಬೇಕಾಗುತ್ತದೆ. ಆದ್ದರಿಂದ ಬಹು ಸೊಗಸಾಗಿ ಅಚ್ಚುಮಾಡಿಸಬೇಕು" ಎಂದರು. ಆಗ ಅಧಿಕಾರಿ "ಸರ್ಕಾರ ಅಚ್ಚು ಮಾಡಿಸಲು ೫೦೦ ರೂಪಾಯಿ ಮಂಜೂರುಮಾಡಿದೆ. ಅಷ್ಟರಲ್ಲಿ ಶಕ್ಯವಿದ್ದಂತೆ ಮಾಡುತ್ತೇನೆ" ಎಂದು ತಿಳಿಸಿದರು. ಆಗ ಸರ್ ಎಂ. ವಿ. "ಛೇ ಛೇ! ಸರ್ಕಾರದ ಹಣ ನನಗೆ ಬೇಕಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ಈ ರಿಪೋರ್ಟನ್ನು ಅಚ್ಚುಮಾಡುವ ಹಣ ನಾನು ಕೊಡುತ್ತೇನೆ. ಇದು ನನ್ನ ಸ್ವಂತ ಕೆಲಸ" ಎಂದು ಸ್ಪಷ್ಟಪಡಿಸಿದರು.

ಈ ಯೋಜನೆಯಲ್ಲಿ ಸಂಬಂಧಪಟ್ಟಿದ್ದ ಒಬ್ಬ ಸರ್ಕಾರದ ಅಧಿಕಾರಿಯೇ ಈ ಸಂಗತಿಯನ್ನು ಡಿ.ವಿ.ಜಿ. ಅವರಿಗೆ ತಿಳಿಸಿದರಂತೆ.

ಡಿ.ವಿ.ಜಿ. ಮೈಸೂರಿನ ದಿವಾನರುಗಳು; ಜ್ಞಾಪಕ ಚಿತ್ರಶಾಲೆ, ಸಂ.೪, ಕಾವ್ಯಾಲಯ, ಮೈಸೂರು, ೧೯೭೧, ಪು. ೧೧೪-೧೬.

೨೨. 'ಇದೂ ಆಗಲಿ, ಅದೂ ಆಗಲಿ'

ಛಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳು ಉದ್ದಾಮ ಸಂಸ್ಕೃತಪಂಡಿತರು; ಸದಾಚಾರ ಪರಾಯಣರು, ಸಂಪ್ರದಾಯನಿಷ್ಠರು. ಇವರು ಒಂದು ದಿನ ದಿವಾನ್ ವಿ. ಪಿ. ಮಾಧವ ರಾಯರಲ್ಲಿ ಒಂದು ಕೆಲಸಕ್ಕೆ ಹೋದರು. ರಾಯರು ಆದರದಿಂದ ಅವರನ್ನು ಬರ ಮಾಡಿಕೊಂಡರು; ಬಂದ ಉದ್ದೇಶವೇನೆಂದು ವಿಚಾರಿಸಿದರು.

ಶಾಸ್ತ್ರಿಗಳು ತಮ್ಮ ಮನೆಮಾತು ತೆಲುಗಿನಲ್ಲಿ ವಿಜ್ಞಾಪಿಸಿದರು (ಅದರ ಕನ್ನಡ ರೂಪ ಕೊಟ್ಟಿದೆ) :

"ನನಗೆ ಇಬ್ಬರು ಮಕ್ಕಳು. ಭಾರ್ಯಾವಿಯೋಗವಾಗಿ ಬಹುವರ್ಷವಾಯಿತು. ಮಕ್ಕಳು ಇನ್ನೂ ಸಂಪಾದನೆ ಮಾಡುವ ಸ್ಥಿತಿಗೆ ಬಂದಿಲ್ಲ. ಜೊತೆಗೆ ಸಾಲದ ಹೊರೆ ಹೊತ್ತಿದ್ದೇನೆ. ಸ್ವಂತಮನೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ನನ್ನ ಪ್ರಾರಬ್ಧದಿಂದಾಗಿ ಋಣಬಾಧೆಗೆ ಸಿಕ್ಕಿಕೊಂಡಿದ್ದೇನೆ. ಇದು ನನಗಿರುವ ಕಷ್ಟ. ಇಬ್ಬರು ಮಕ್ಕಳಲ್ಲಿ ದೊಡ್ಡವನು ಪೂನಾದಲ್ಲಿ ಇಂಜಿನಿಯರ್ ವಿದ್ಯಾಭ್ಯಾಸಕ್ಕೆಂದು ಹೋಗಿ ಎಲ್.ಸಿ.ಇ. ಪರೀಕ್ಷೆ ಪಾಸ್‌ಮಾಡಿ ಬಂದಿದ್ದಾನೆ. ಅದೂ ನನ್ನ ಋಣಬಾಧೆಗೆ ಕೊಂಚ ಕಾರಣ".

ಮಾಧವರಾಯರು ಕೇಳಿದರು: "ಏನು ಮಾಡಿದರೆ ನಿಮಗೆ ಅನುಕೂಲವಾದೀತು?"

ಶಾಸ್ತ್ರಿಗಳು ಹೇಳಿದರು: "ಕೆಲಸವಿಲ್ಲದ ದೊಡ್ಡ ಹುಡುಗನಿಗೆ ಒಂದು ಸಂಬಳ ಮಾಡಿಸಿಕೊಟ್ಟರೂ ಸರಿ ಅಥವಾ ಎರಡನೆಯವನು ಇನ್ನೂ ಏನೋ ಓದಬೇಕಂತೆ, ಅವನಿಗೆ ಕಾಲಕ್ಷೇಪ (Scholarship) ಮಾಡಿಸಿಕೊಟ್ಟರೂ ಸರಿ".

ಇದಕ್ಕೆ ಮಾಧವರಾಯರು ಶಾಸ್ತ್ರಿಗಳಿಗೆ ಹೀಗೆ ಹೇಳಿದರು: ಅಯ್ಯೋ ಶಾಸ್ತ್ರಿಗಳೇ! ನಿಮಗೆ ಯಾಚನೆಮಾಡುವುದಕ್ಕೂ ಬರುವುದಿಲ್ಲವಲ್ಲ. ಹೀಗೇನೇ ಕೇಳುವುದು? ಇದೂ ಆಗಲಿ, ಅದೂ ಆಗಲಿ. ಎರಡೂ ಮಾಡಿಸೋಣ".

ಈ ವೃತ್ತಾಂತವನ್ನು ಸ್ವತಃ ವಿಶ್ವೇಶ್ವರ ಶಾಸ್ತ್ರಿಗಳೇ ಡಿ.ವಿ.ಜಿ. ಅವರಿಗೆ ಹೇಳಿದರಂತೆ. 'ಔದಾರ್ಯವೆಂದರೆ ಇವರದು ಔದಾರ್ಯ, ಮುಕ್ತಹಸ್ತದಿಂದ ದಾನಮಾಡುತ್ತಾರೆ' ಎಂಬುದಾಗಿ

ತಮ್ಮ ಮೆಚ್ಚುಗೆ ಪ್ರಕಟಿಸಿದ ಆ ಸಂದರ್ಭವೂ ಸ್ವಾರಸ್ಯವಾಗಿದೆಯೆಂದು ಡಿ.ವಿ.ಜಿ. ಅದನ್ನು ನೆನೆದಿದ್ದಾರೆ.

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ.೪, ಕಾವ್ಯಾಲಯ ಪ್ರಕಾಶಕರು, ಮೈಸೂರು ೧೯೭೧, ಪು. ೮೨-೮೩

೨೩. 'ಇದೆಲ್ಲ ನಿಮ್ಮ ಮನೆ ನಮಗೆ ತಂದುಕೊಟ್ಟ ಭಾಗ್ಯ'

ಅದೇ ತಾನೆ ಬೆಂಗಳೂರು ಜಯನಗರದ ಬಡಾವಣೆ ಹುಟ್ಟಿ ಬೆಳೆಯತೊಡಗಿತ್ತು. ಅಲ್ಲಿ ಡಾ.ಎಚ್. ಕೆ. ರಂಗನಾಥ್ ಅವರು ಸ್ವಂತ ಮನೆ ಕಟ್ಟಿಕೊಂಡರಾದರೂ ತಮ್ಮ ಕಛೇರಿ ಆಕಾಶವಾಣಿಗೆ ಹತ್ತಿರದ ಮಲ್ಲೇಶ್ವರ ಬಡಾವಣೆಯಲ್ಲಿ ಒಂದು ಬಾಡಿಗೆಮನೆಯಲ್ಲಿ ವಾಸಿಸುತ್ತಿದ್ದರು. ಜಯನಗರದ ಮನೆಗೆ ೧೫೦ ರೂ. ತಿಂಗಳ ಬಾಡಿಗೆಗೆ ಒಬ್ಬ ಬಾಡಿಗೆದಾರ ಬಂದನಾದರೂ ಆತ ಮೋಸಗಾರನಾಗಿದ್ದ. ಅಕಸ್ಮಾತ್ತಾಗಿ ಅವನ ಮೋಸ ಬಯಲಾಗಿ ಅವನನ್ನು ಅಲ್ಲಿಂದ ಎತ್ತಂಗಡಿ ಮಾಡುವಲ್ಲಿ ಯಶಸ್ವಿಯಾದ ರಂಗನಾಥ್ ತಿಂಗಳ ನಂತರ ತಮ್ಮ ಕಛೇರಿಗೆ ತಮ್ಮನ್ನು ಹುಡುಕಿಕೊಂಡು ಬಂದ ಕೆ. ವಿ. ರಾಮನಾಥ್ ಎಂಬವರಿಗೆ ಅವರ ಕೋರಿಕೆಯಂತೆ ಮತ್ತೆ ಬಾಡಿಗೆಗೆ ಕೊಟ್ಟರು.

ರಾಮನಾಥ್ ಅದೇ ತಾನೆ ಮದುವೆಯಾಗಿದ್ದರು. ಈ ಹೊಸ ಮನೆಗೆ ಬಾಡಿಗೆಗೆ ಬಂದು ಒಂದು ಪುಟ್ಟ ರಾಸಾಯನಿಕ ಪ್ರಯೋಗಶಾಲೆ ಆರಂಭಿಸಬೇಕೆಂದು ಅವರು ಯೋಚಿಸಿದ್ದರು. ಮನುಷ್ಯ ಸಾತ್ತ್ವಿಕನಂತೆ ಕಂಡದ್ದರಿಂದ ಆತನ ಆರ್ಥಿಕಸ್ಥಿತಿ ಉತ್ತಮವಲ್ಲದಿದ್ದರೂ, ಅಡ್ವಾನ್ಸ್ ಅಗ್ರಿಮೆಂಟ್ ಏನೂ ಇಲ್ಲದೆ ನಂಬಿಕೆಯಿಂದ ಆತನಿಗೆ ಮನೆ ಬಾಡಿಗೆಗೆ ಕೊಟ್ಟರು. ಮೊದಲಷ್ಟೇ ಬಾಡಿಗೆ. ಬಾಡಿಗೆ ಸರಿಯಾಗಿ ಕೊಡುವರೋ ಇಲ್ಲವೋ ಎಂಬ ಆತಂಕವೇನೋ ಇತ್ತು.

ಒಪ್ಪಂದದಂತೆ ಬಾಡಿಗೆದಾರರು ಮಾರನೆಯ ತಿಂಗಳ ಒಂದನೆಯ ತಾರೀಖು ಮನೆಗೆ ಬಂದು ಬಾಡಿಗೆ ಕೊಡಲಿಲ್ಲ. ಎರಡನೆಯ ತಾರೀಖು ಕೂಡ ಬರಲಿಲ್ಲ. ರಂಗನಾಥ್ ಅವರಿಗೆ ಚಡಪಡಿಕೆ ಹೆಚ್ಚಿತು. ಪೋಲೀಸ್ ಸಹಾಯದಿಂದ ಜಯನಗರಕ್ಕೆ ಹೋಗಿ ಬಾಡಿಗೆದಾರನನ್ನು ಮನೆ ಬಿಡಿಸಬೇಕು ಎಂದು ಯೋಚಿಸಿದರು. ಅವರೆ ಮೂರನೆಯ ತಾರೀಖು ಸಂಜೆ ರಾಮನಾಥ್ ತಮ್ಮ ಪತ್ನಿಯೊಂದಿಗೆ ಬಂದರು. ಕ್ಷಮೆ ಕೇಳಿದರು. ಬಾಡಿಗೆ ಹಣ ಎಂದು ೧೭೫ ರೂ. ಒಪ್ಪಿಸಿದರು. ರಂಗನಾಥ್ 'ಇದೇಕೆ ಇಷ್ಟು?' ಎಂದು ಅವರನ್ನು ಪ್ರಶ್ನಿಸಿದಾಗ, "ನಿಮ್ಮ ಮನೆಗೆ ಕಡೆಯ ಪಕ್ಷ ೨೫೦ ರೂ. ಗಳನ್ನಾದರೂ

ಬಾಡಿಗೆ ಕೊಡಬೇಕು, ಆದರೆ ಸದ್ಯಕ್ಕೆ ನನ್ನಲ್ಲಿ ಅಷ್ಟು ಆರ್ಥಿಕಚೈತನ್ಯವಿಲ್ಲ" ಎಂದು ವಿನಯದಿಂದ ಹೇಳಿದರು. ರಂಗನಾಥ್ ಅವರಿಗೆ ಆಶ್ಚರ್ಯ, ಕಸಿವಿಸಿ.

ಮುಂದೆ ೧೦ ವರ್ಷ ಕಾಲ ರಾಮನಾಥ್ ಜಯನಗರದ ಆ ಮನೆಯಲ್ಲಿಯೇ ಬಾಡಿಗೆಗಿದ್ದರು. ೧ ವರ್ಷ ಕಳೆಯುವಷ್ಟರಲ್ಲಿ ಮನೆಗೆ ಮೂರು ಸೀಲಿಂಗ್ ಫ್ಯಾನ್ ಹಾಕಿಸಿದರು; ಬಳಿಕ ಇನ್ನೊಂದು ವರ್ಷದ ಹೊತ್ತಿಗೆ ಗ್ಯಾರೇಜಿಗೆ ಮಜಬೂತಾದ ರೋಲಿಂಗ್‌ಷಟರ್ಸ್ ಮಾಡಿಸಿದರು. ಎಲ್ಲ ತಮ್ಮ ಖರ್ಚಿನಲ್ಲಿಯೇ. ಭಾಗಶಃ ಆದರೂ ವೆಚ್ಚವನ್ನು ತಮ್ಮಿಂದ ಪಡೆಯುವಂತೆ ರಂಗನಾಥ್ ಕೋರಿದರೂ ಅವರು ಒಪ್ಪಲಿಲ್ಲ. "ನಾವು ತಾನೇ ಈ ಮನೆಯಲ್ಲಿರುವವರು; ಆದ್ದರಿಂದ ನಮ್ಮದೇ ವೆಚ್ಚ" ಎಂದರು. ಮತ್ತೆ ೬ ತಿಂಗಳು ಕಳೆಯುವಲ್ಲಿ ಮನೆಗೆ ತುಂಬ ಬೆಲೆಯ ಸುಣ್ಣ ಬಣ್ಣ ಪೈಂಟಿಂಗ್ ಮಾಡಿಸಿದರು. ಆಗಲೂ ರಂಗನಾಥ್ ತಮ್ಮಿಂದ ವೆಚ್ಚದ ಭಾಗ ಪಡೆಯುವಂತೆ ಕೇಳಿಕೊಂಡರು. ಆದರೆ ರಾಮನಾಥ್ ಒಪ್ಪಲಿಲ್ಲ. ಸ್ವಲ್ಪ ದಿನಗಳಲ್ಲಿಯೇ ಮನೆಯ ಬಾಡಿಗೆ ೫೦೦ ರೂ. ಗಳಿಗೆ ತಾವೇ ಹೆಚ್ಚಿಸಿ ಮನೆ ಮಾಲಿಕರು ರಂಗನಾಥರಿಗೆ ಸಲ್ಲಿಸಿದರು. ಮತ್ತೆ 'ಇದೇನು?' ಎಂದು ಪ್ರಶ್ನಿಸಿದರೆ, "ನಿಮ್ಮ ಮನೆ ನನಗೆ ಸೌಭಾಗ್ಯವನ್ನು ತಂದು ಕೊಟ್ಟಿದೆ. ಅದನ್ನು ನಾನು ಚೆನ್ನಾಗಿ ನೋಡಿಕೊಳ್ಳಬೇಕಲ್ಲವೇ?" ಎಂದು ಉತ್ತರ ಹೇಳಿದರು.

ರಾಮನಾಥ್-ಸರೋಜಾ ದಂಪತಿಗಳಿಗೆ ಈಗ ಇಬ್ಬರು ಮಕ್ಕಳು. ಅವರ ಪ್ರಯೋಗ ಶಾಲೆ ಪುಟ್ಟಕಾರ್ಖಾನೆಯಾಗಿ ಪರಿವರ್ತನೆಗೊಂಡು ಒಳ್ಳೆಯ ಆದಾಯ, ಲಾಭ ತರುತ್ತಿದ್ದಿತು. ರಾಮನಾಥ್ ಹೊಸ ಕಾರು ಕೊಂಡಿದ್ದರು; ದೊಡ್ಡದೊಂದು ಸೈಟು ಕೊಂಡಿದ್ದರು. ಈ ಒಳ್ಳೆಯ ಸುದ್ದಿಗಾಗಿ ರಂಗನಾಥ್ ಕುಟುಂಬದವರು ಸಂತೋಷ ಅಭಿನಂದನೆ ಪ್ರಕಟಿಸಿದಾಗ, "ಇದೆಲ್ಲ ನಿಮ್ಮ ಮನೆ ನಮಗೆ ತಂದುಕೊಟ್ಟ ಭಾಗ್ಯ" ಎಂದು ವಿನಯದಿಂದಲೇ ಹೇಳಿ ಅವರಿಗೆ ತಮ್ಮ ಕೃತಜ್ಞತೆ ಸೂಚಿಸಿದರು.

ಇಷ್ಟರಲ್ಲಿ ರಂಗನಾಥ್ ಮಲ್ಲೇಶ್ವರದ ಬಾಡಿಗೆ ಮನೆ ಬಿಟ್ಟು ಪಕ್ಕದ ಶ್ರೀರಾಮಪುರದ ಬಾಡಿಗೆ ಮನೆಗೆ ಬಂದಿದ್ದರು. ಅದರ ಮಾಲಿಕರು ಇಲ್ಲಿಯವರೇ ಆದರೂ ಕಲಕತ್ತೆಯಲ್ಲಿದ್ದರು. ಅವರೂ ಸಂಭಾವಿತರು. ಬಾಡಿಗೆ ತಕರಾರು ಏನೂ ಇರಲಿಲ್ಲ. ತಮ್ಮ ಮನೆಯ ಬಾಡಿಗೆದಾರರ ಹಾಗೆಯೇ ರಂಗನಾಥ್ ಸಹ ಆಗಿಂದಾಗ್ಗೆ ತಾವೇ ಬಾಡಿಗೆ ಹೆಚ್ಚಿಸಿ ಕೊಡುತ್ತಿದ್ದರು. ೧-೨ ವರ್ಷಗಳ ಬಳಿಕ ಈ ಮನೆಯ ಮಾಲಿಕರು ಗೋಪಾಲರಾಯರು ತಾವು ಮರುವರ್ಷ ವೃತ್ತಿಯಿಂದ ನಿವೃತ್ತರಾಗಲಿರುವ ವಿಷಯ ತಿಳಿಸಿ ತಾವು ಬೆಂಗಳೂರಿಗೆ ಸ್ವಂತ ಮನೆಗೆ ಹಿಂದಿರುಗುವ ಆಶಯದ ಪತ್ರ ಬರೆದರು. ಈಗ ರಂಗನಾಥ್ ಜಯನಗರದ ತಮ್ಮ ಸ್ವಂತಮನೆಗೆ ಹೋಗಲು ನಿಶ್ಚಯಿಸಿದರು. ೬-೮ ತಿಂಗಳ ಅವಧಿ ಕೊಟ್ಟು ರಾಮನಾಥ್ ಅವರಿಗೆ ಮನೆ ತೆರವುಮಾಡಿಕೊಡುವಂತೆ ಕೇಳಿಕೊಂಡರು.

ಜಯನಗರ ಬೆಳೆಯತೊಡಗಿತ್ತು. ೨ ತಿಂಗಳಲ್ಲೇ ಒಂದು ಸಂಜೆ ರಾಮನಾಥ್ ದಂಪತಿಗಳು ತಮ್ಮ ಕಾರಿನಲ್ಲಿ ರಂಗನಾಥ್ ಅವರ ಮನೆಗೆ ಬಂದರು; ದಂಪತಿಗಳನ್ನು ವಿಶ್ವಾಸದಿಂದ ತಮ್ಮ ಬಾಡಿಗೆ ಮನೆಗೆ ಆಹ್ವಾನಿಸಿ ಕರೆದೊಯ್ದರು. ರಂಗನಾಥ್

ನೋಡುತ್ತಾರೆ, ಮನೆ ಖಾಲಿಯಾಗಿದೆ; ಹೊಸದಾಗಿ ಸುಣ್ಣ ಬಣ್ಣದ ಪೈಂಟಿಂಗ್ ಮಾಡಿಸಿದೆ; ಮನೆಯ ಮುಂದೆ ಗುಲಾಬಿ ಗಿಡಗಳ ತೋಟ ಅರಳಿ ಪರಿಮಳ ಸೂಸುತ್ತಿದೆ. "ಏನಿದು ರಾಮನಾಥ್, ಮನೆ ಖಾಲಿ ಮಾಡಿದ್ದೀರಿ?" ಎಂದು ಪ್ರಶ್ನಿಸಿದರು, ಗಾಬರಿಯಿಂದ ರಂಗನಾಥ್. "ನಿಮಗಾಗಿ ತೆರವುಮಾಡಿ ಅಣಿಗೊಳಿಸಿದ್ದೇನೆ. ಇದು ನಮಗೆ ಭಾಗ್ಯ ಕೊಟ್ಟ ಮನೆ. ಆ ಭಾಗ್ಯ ಇನ್ನು ಮುಂದೆ ನಿಮ್ಮದಾಗಲಿ" ಎಂದರು; ಬೀಗದ ಕೈ ಒಪ್ಪಿಸಿದರು. ರಂಗನಾಥ್ ಕಣ್ಣಲ್ಲಿ ನೀರು ತುಂಬಿಕೊಂಡಿತು.

ರಾಮನಾಥ್ ಈ ಮನೆಯನ್ನು ತೆರವುಮಾಡಿದ್ದರು, ನಿಜ. ಕೊಟ್ಟ ಗಡುವಿಗೆ ಮುಂಚೆಯೇ ಮಾಲಿಕರಿಗೆ ತೊಂದರೆಯಾಗದ ಹಾಗೆ, ಜೆ. ಪಿ. ನಗರದಲ್ಲಿ ಮೂರು ಪಟ್ಟು ಹೆಚ್ಚು ಬಾಡಿಗೆ ಗೊತ್ತುಮಾಡಿಕೊಂಡು ಮನೆ ಬದಲಾಯಿಸಿದ್ದರು. ಆ ರಾತ್ರಿ ರಾಮನಾಥ್ ದಂಪತಿಗಳು ತಾವು ಬಿಡಲಿದ್ದ ಮನೆಯಲ್ಲಿಯೇ ರಂಗನಾಥ್ ದಂಪತಿಗಳಿಗೆ ಔತಣಮಾಡಿಸಿ ಕಳಿಸಿಕೊಟ್ಟರು. ತಾವು ಹೊಸ ಬಾಡಿಗೆಮನೆಗೆ ಹೋದರು.

ಎಚ್. ಕೆ. ರಂಗನಾಥ್, 'ನೆನಪಿನ ನಂದನ', ಸಾಹಿತ್ಯ ಮಂದಿರ, ಬೆಂಗಳೂರು-೧೯, ೧೯೯೯, ಪು. ೨೪೩-೪೫.

೨೪. 'ಇಂಥ ಭಯಕ್ಕೆ ಬೀಳದಂತೆ ನಾವು ಬಾಳಬೇಕು'

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಹಳೆಯ ಮೈಸೂರು ಸಂಸ್ಥಾನದ ಸರ್ಕಾರದ ಹಿರಿಯ ಅಧಿಕಾರಿಯಾಗಿದ್ದು, ಮಧುಗಿರಿಯಿಂದ ಬೆಂಗಳೂರಿಗೆ ೧೯೨೪ರಲ್ಲಿ ವರ್ಗವಾಗಿ ಬಂದರು. ಅವರಿಗೆ ಇಲ್ಲಿ ಆರನೆಯ ಮಗಳು ಹುಟ್ಟಿದಳು. ಅವರಿಗೆ ಗಂಡು ಮಕ್ಕಳಿರಲಿಲ್ಲ. ಆರು ಹೆಣ್ಣು ಮಕ್ಕಳಾದ ಮೇಲೆ ಇನ್ನು ಮಕ್ಕಳಾದರೆ ಪಾಲನೆ ಕಷ್ಟವೆಂದು ಅವರಿಗೆ ತೋರಿತು. ತುಂಬ ಕಷ್ಟವಾದರೂ ದೃಢಸಂಕಲ್ಪದಿಂದ ದಂಪತಿಗಳು ಮೂರು ವರ್ಷ ಬ್ರಹ್ಮಚರ್ಯ ಪಾಲಿಸಿದರು.

ಮಧ್ಯೆ ಒಂದು ಪ್ರಸಂಗ ಘಟಿಸಿತು. ಮಾಸ್ತಿಯವರ ಪತ್ನಿಯವರಿಗೆ ಬಲ ಮುಂಗೈಯಲ್ಲಿ ಏನೋ ಒಂದು ಸಣ್ಣ ಬಾವು ಕಾಣಿಸಿಕೊಂಡಿತು. ಅವರ ಮಾವ ಭಯಪಟ್ಟರು. ಏಕೆಂದರೆ ಮಾಸ್ತಿಯವರ ಅತ್ತೆಗೆ ಒಂದು ವಯಸ್ಸಿನಲ್ಲಿ ಇಂಥದೇ ಬಾವು ಕಾಣಿಸಿಕೊಂಡು ಆಮೇಲೆ ಅದು ಮೂಳೆಯ ಕ್ಷಯವಾಗಿ ಪರಿಣಮಿಸಿತ್ತಂತೆ. ತಾಯಿಗೆ ಆದಂತೆ ಮಗಳಿಗೂ ಆದೀತು ಎಂಬುದು ಮಾಸ್ತಿಯವರ ಆತಂಕ. ಆದ್ದರಿಂದ ಈ ವಿಷಯವನ್ನು ತಮ್ಮ ಅಳಿಯನಿಗೆ ತಿಳಿಸಿದರು; ಬೆಂಗಳೂರಿನಲ್ಲಿ ಆಪ್ತಮಿತ್ರರಾದ

ಡಾ. ಸಿ. ಬಿ. ರಾಮರಾಯರಿಗೆ ಅರಿಕೆ ಮಾಡಿದರು. ಅವರು "ಈ ಲಕ್ಷಣಗಳು ಒಳ್ಳೆಯವಲ್ಲ, ಕ್ಷಯಕ್ಕೆ ಪರೀಕ್ಷೆ ಮಾಡಿಸಿಕೊಳ್ಳಲಿ" ಎಂದು ಸಲಹೆ ಮಾಡಿದರು.

ಮಾಸ್ತಿ ತಲ್ಲಣಿಸಿದರು. "ದುಸ್ಸಾಧ್ಯ ಸಂಯಮದಿಂದ ಮೂರು ವರ್ಷ ಬ್ರಹ್ಮಚರ್ಯ ಪಾಲಿಸಿದ್ದಕ್ಕೆ ಇದೇನೇ ಪ್ರತಿಫಲ?" ಎಂದು ನೊಂದುಕೊಂಡರು. ಪತ್ನಿಗೆ ಹೇಳಲಿಲ್ಲ. "ಕೈ ಕೂಸನ್ನು ಬಿಟ್ಟು ಈ ತಾಯಿ ಏನಾದರೂ ಕಣ್ಣು ಮುಚ್ಚಿಕೊಂಡರೆ ಸಂಸಾರದ ಗತಿಯೇನು?" ಎಂದು ಕಳವಳಿಸಿದರು. ಮರುದಿನ ತಮ್ಮ ಪತ್ನಿಯನ್ನು ಕರೆದುಕೊಂಡು ಕಾರಿನಲ್ಲಿ ಹೊರಟು ಡಾ. ರಾಮರಾಯರ ಖಚಿತ ಅಭಿಪ್ರಾಯಕ್ಕೆ ಸಿದ್ಧವಾದರು. ಪ್ರಯಾಣ ಮೈಸೂರಿಂದ ಬೆಂಗಳೂರಿಗೆ.

ಡಾಕ್ಟರನ್ನು ಕಂಡದ್ದಾಯಿತು. ಒಳಸಾಲೆಯಲ್ಲಿದ್ದ ಡಾಕ್ಟರು ವಿಶ್ವಾಸದಿಂದ ಮಾಸ್ತಿಯವರನ್ನು ಬರಮಾಡಿಕೊಂಡು ಯೋಗಕ್ಷೇಮ ವಿಚಾರಿಸಿದರು. ಮಾಸ್ತಿ ತಮ್ಮ ಪತ್ನಿಯ ದೇಹಸ್ಥಿತಿಯ ತಪಾಸಣೆ ಕುರಿತು ಪ್ರಸ್ತಾಪಿಸಿದರು. ಆಗ ಡಾಕ್ಟರು, "ಇದೇನು, ಇವರ ತಂದೆ ಇವರು ತುಂಬಾ ಖಾಯಿಲೆಯಾಗಿದ್ದಾರೆ ಎಂದು ಹೇಳಿದರಲ್ಲ?" ಎಂದು ಕೇಳಿದರು. ಆಗ ಮಾಸ್ತಿಯವರು "ಡಾಕ್ಟರಿಗೆ ತೋರಿಸಿ ಎಂಬುದಾಗಿ ಮಾವನವರಿಗೆ ಹೇಳಿದಿರಂತೆ; ಬೇರೆಯವರು ಏಕೆ, ನೀವೇ ನೋಡಲಿ ಎಂದು ನಾನು ಕರೆದುಕೊಂಡು ಬಂದೆ" ಎಂದು ತಿಳಿಸಿದರು. "ಸರಿಯಪ್ಪ, ಅವರ ವರ್ಣನೆ ಕೇಳಿ ನನಗೆ ಭಯವಾಯಿತು, ಅದರಿಂದ ಏನೋ ಹೇಳಿದೆ. ಇವರನ್ನು ಡಾಕ್ಟರಿಗೆ ಏತಕ್ಕೆ ತೋರಿಸಬೇಕು, ಆರೋಗ್ಯವಾಗಿದ್ದಾರಲ್ಲ" ಎಂದು ರಾಮರಾಯರು ಹೇಳಿದ್ದಲ್ಲದೆ, "ಹಾಗಾದರೆ ಶ್ವಾಸಕೋಶ ಹೃದಯಗಳ ಪರೀಕ್ಷೆ ಅನಗತ್ಯ ಎನ್ನುತ್ತೀರಾ?" ಎಂದು ಮಾಸ್ತಿ ಕೇಳಿದ್ದಕ್ಕೆ, "ಬೇಕಾಗಿಯೇ ಇಲ್ಲ, ಇವರೇನು ಖಾಯಿಲೆ ಮನುಷ್ಯರಲ್ಲ, ತುಂಬಾ ಆರೋಗ್ಯವಾಗಿದ್ದಾರೆ" ಎಂದು ಸ್ಪಷ್ಟವಾಗಿಯೇ ತಿಳಿಸಿದರು.

ಮಾಸ್ತಿಯವರಿಗೆ ಎದೆಯ ಮೇಲಿನ ದೊಡ್ಡ ಭಾರ ಕಳಚಿದಂತಾಯಿತು. 'ದೇವರು ತಮ್ಮನ್ನು ಕಾಪಾಡಿದರು' ಎನ್ನಿಸಿತು. ಮೈಸೂರಿಗೆ ಮರಳಿದರು, ಪತ್ನಿಯೊಂದಿಗೆ. ಹಿಂದಿನ ದಿನ ಆದ ಭಯ, ಈ ದಿನದ ಸಮಾಧಾನ ಈ ಎರಡರಿಂದಲೂ ಅವರ ಮನಸ್ಸು ಹೀಗೆ ಒಂದು ನಿಶ್ಚಯಕ್ಕೆ ಬಂದಿತ್ತು: "ಮತ್ತೆ ಇಂಥ ಭಯಕ್ಕೆ ಬೀಳದಂತೆ ನಾವು ಬಾಳಬೇಕು. ಈಕೆ ಇನ್ನು ಮಕ್ಕಳನ್ನು ಹೆತ್ತಳೋ, ಏನಾಗಬಹುದು ಏನಾಗಬಾರದು, ನಾವು ಕಾಣೆವು. ಇವರ ತಾಯಿ ಆರು ಮಕ್ಕಳನ್ನು ಹೆತ್ತು ಕ್ಷಯಕ್ಕೆ ಸಿಕ್ಕಿಸಿದರು. ಈಕೆ ಆರು ಮಕ್ಕಳನ್ನು ಹೆತ್ತು ಕ್ಷೇಮದಿಂದಿದ್ದಾಳೆ. ಏಳನ್ನು ಹೆತ್ತು ಕ್ಷಯಕ್ಕೆ ಸಿಕ್ಕುವ ಅಪಾಯ ಬೇಡ. ಇನ್ನು ನಮಗೆ ಮಕ್ಕಳು ಬೇಡ. ಮೂರು ವರ್ಷ ನಡೆದು ಬಂದಿರುವ ಬ್ರಹ್ಮಚರ್ಯ ಅಖಂಡವಾಗಿ ಮುಂದುವರಿಯಬೇಕು."

ಅದೇ ದಿನ ಇಬ್ಬರೂ ಒಪ್ಪಿ, ಈ ನಿಶ್ಚಯವನ್ನು ಮೂವತ್ತು ವರ್ಷಗಳ ಕಾಲ ನಡೆಸಿದರು. ಮಾಸ್ತಿ ಹೇಳುತ್ತಾರೆ: 'ನಡೆಸಿದೆವು! ನಡೆಸಿದೆವೇ? ದೈವ ನಡೆಸಿತು, ನಾವು ನಡೆದೆವು" ಆಗ ಮಾಸ್ತಿಯವರು ೩೩ ವರ್ಷದ ಪೂರ್ವವಯಸ್ಸಿನವರು ಎಂಬುದನ್ನು ನೆನೆಯಬೇಕು.

ತಮ್ಮ ಅತ್ತೆ ೧೯೧೩ರಲ್ಲಿ ತೀರಿಕೊಂಡ ಮೇಲೆ ಮಾವನವರು ಹೆಂಡತಿಯನ್ನು ಕಳೆದುಕೊಂಡು ೧೫ ವರ್ಷಗಳ ಕಾಲ ತಮ್ಮ ಮಕ್ಕಳನ್ನು ಸಾಕಲು ಪಟ್ಟ ಪಾಡು ಎಂಥದೆಂಬುದನ್ನು ಮಾಸ್ತಿ ಕಂಡಿದ್ದರು. ತಮ್ಮ ಪಾಲಿಗೆ ಇಂಥ ಕಷ್ಟ ಬೇಡ ಎನ್ನುವ ನಿರ್ಧಾರ ಅವರ ಮನಸ್ಸನ್ನು ದೃಢಮಾಡಿತು; ಅವರ ನಡತೆಯನ್ನು ಭದ್ರಪಡಿಸಿತು.

ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ಭಾವ-೨', ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಬೆಂಗಳೂರು, ೧೯೯೦ (ದ್ವಿ), ಪು. ೩೧೮-೨೦

೨೫. 'ಇಷ್ಟು ವರ್ಷ ಬದುಕಿದ್ದು ಸಾರ್ಥಕವಾಯ್ತು'

ಶ್ರೀಮತಿ ಜಿ. ವಿ. ಜಯಾ ರಾಜಶೇಖರ್ ಅವರು ಬರೆದು, ಡಂಬಳ–ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿದ (೧೯೮೩) 'ಎಲೆ ಮಲ್ಲಪ್ಪ ಶೆಟ್ಟರು' ಎಂಬ ಜೀವನಚರಿತ್ರೆ ಓದಿದ ಎಸ್. ಜಿ. ನರಸಿಂಹಯ್ಯನವರು (೧೮೯೭) ಗ್ರಂಥಕರ್ತೃವನ್ನು ನೋಡಿ ತಮ್ಮ ಮೆಚ್ಚುಗೆ ಹೇಳಲು ಅಪೇಕ್ಷಿಸಿದರು. ತಮ್ಮ ಅಪೇಕ್ಷೆಯನ್ನು ಎಸ್. ಜಿ. ಬಸವಯ್ಯ ಎಂಬುವರಿಗೆ ಅವರು ತಿಳಿಸಿದರು. ಬಸವಯ್ಯನವರು ಲೇಖಕಿಯ ಕುಟುಂಬವರ್ಗಕ್ಕೆ ಪರಿಚಿತರು. ಆದ್ದರಿಂದ ಅವರು ಲೇಖಕಿಗೆ ಫೋನ್ ಮಾಡಿ, "ನಿಮ್ಮ 'ಎಲೆ ಮಲ್ಲಪ್ಪ ಶೆಟ್ಟರು' ಪುಸ್ತಕ ಓದಿದ ಎಸ್. ಜಿ. ನರಸಿಂಹಯ್ಯ ಎಂಬ ವಯೋವೃದ್ಧರು ನಿಮ್ಮನ್ನು ನೋಡಬೇಕೆಂದು ಬಯಸುತ್ತಿದ್ದಾರೆ. ಅವರನ್ನು ನಿಮ್ಮ ಮನೆಗೆ ಕರೆತರಲೇ, ನಿಮಗೆ ಯಾವಾಗ ಅನುಕೂಲವಾಗುತ್ತದೆ, ತಿಳಿಸಿ" ಎಂದು ಕೇಳಿದರು. ನರಸಿಂಹಯ್ಯನವರ ವಯಸ್ಸು ೯೦ ಎಂದು ಕೇಳಿ ತಿಳಿದ ಮೇಲೆ ಲೇಖಕಿ, "ಆ ಹಿರಿಯರಿಗೆ ಶ್ರಮ ಬೇಡ, ಅವರ ಅಡ್ರೆಸ್ ಕೊಡಿ, ನಾನೇ ಒಂದು ದಿನ ಅವರ ಮನೆಗೆ ಹೋಗಿ ದರ್ಶನಮಾಡುತ್ತೇನೆ" ಎಂದು ಉತ್ತರಿಸಿದರು. 'ಆಗಲಿ' ಎಂದ ಬಸವಯ್ಯನವರು ಮತ್ತೆ ೨ ದಿನಗಳ ಅನಂತರ ಫೋನ್ ಮಾಡಿ, "ಅವರು ನಿಮ್ಮ ಮನೆಗೇ ಬಂದು ನಿಮ್ಮನ್ನು ನೋಡಬೇಕಂತೆ, ಅನಂತರ ನೀವು ಅವರ ಮನೆಗೆ ಹೋಗಬಹುದು" ಎಂದು ತಿಳಿಸಿದರು. ಆ ವಯೋವೃದ್ಧರಿಗೆ ಶ್ರಮವಾಗುವುದು ಬೇಡ ಎನ್ನುವ ಕಾರಣಕ್ಕಾಗಿ ನಾನೇ ಬರುತ್ತೇನೆ ಎಂದಿದ್ದೆ; ಅವರು ಅಷ್ಟು ಬಯಸಿ ಬರುವುದಾದರೆ ತುಂಬ ಸಂತೋಷ" ಎಂಬುದಾಗಿ ಜಯಾ ಹೇಳಿದರು.

ಒಂದು ದಿನ ಗೊತ್ತುಮಾಡಿ ಎಸ್. ಜಿ. ಬಸವಯ್ಯನವರು ಎಸ್. ಜಿ. ನರಸಿಂಹಯ್ಯ ನವರನ್ನು ತಮ್ಮ ಕಾರಿನಲ್ಲಿ ಜಯಾ ರಾಜಶೇಖರ್ ಅವರ ಮನೆಗೆ ಕರೆತಂದರು. ತೆಳ್ಳಗೆ

ಎತ್ತರಕ್ಕೆ ಇದ್ದ ಗೌರವರ್ಣದ ವ್ಯಕ್ತಿ ನರಸಿಂಹಯ್ಯನವರು ಲೇಖಕಿ ಒಳಗಿನಿಂದ ಹೊರಗೆ ಬರುವ ವರೆಗೆ ಕಾದು ಕುರ್ಚಿಯಲ್ಲಿ ಕುಳಿತಿದ್ದರು. ಜಯಾ ಅವರು ಹೊರಕ್ಕೆ ಬಂದ ಕೂಡಲೇ, ಕುಳಿತಿದ್ದವರು ಮೇಲೆದ್ದರು. 'ಕುಳಿತುಕೊಳ್ಳಿ' ಎಂದು ಹೇಳಿದರೂ ಕೇಳದೆ, ತಾವು ತಂದಿದ್ದ ಬಾಳೆಯ ಹಣ್ಣಿನ ಚಿಪ್ಪು ಮತ್ತು ಹೂವನ್ನು ಮಮತೆಯಿಂದ ಅವರ ಕೈಯಲ್ಲಿಟ್ಟರು. ಬಳಿಕ ಅವರ ಎರಡೂ ಕೈಗಳನ್ನು ಹಿಡಿದು ತಮ್ಮ ಕಣ್ಣಿಗೆ ಒತ್ತಿಕೊಂಡರು. "ಎಂಥಾ ಪುಣ್ಯಾತ್ಮನ ಚರಿತ್ರೆ ಬರೆದಿದ್ದೀಯಾ ತಾಯೀ; ಅದನ್ನೋದಿ ತುಂಬ ಸಂತೋಷವಾಯ್ತು. ನಾನು ಇಷ್ಟು ವರ್ಷ ಬದುಕಿದ್ದು ಸಾರ್ಥಕವಾಯ್ತು." ಎಂದು ಮುಂತಾಗಿ ಹೇಳುತ್ತ ಅಳತೊಡಗಿದರು.

ಸ್ವಲ್ಪ ಹೊತ್ತಾದ ಮೇಲೆ ತಮ್ಮನ್ನು ತಾವು ನಿಯಂತ್ರಿಸಿಕೊಂಡರು. ಮೈಗೆ ಆಗುವುದಿಲ್ಲವೆಂದು ಹೇಳಿ ಹಾಲು ಮಾತ್ರ ಸೇವಿಸಿದರು. ಅವರು ಎಲೆ ಮಲ್ಲಪ್ಪ ಶೆಟ್ಟರಿಂದ ಜೀರ್ಣೋದ್ಧಾರವಾದ ಕಾಡು ಮಲ್ಲೇಶ್ವರ ದೇವಸ್ಥಾನದ ಧರ್ಮದರ್ಶಿಗಳಾಗಿದ್ದವರು. ಸ್ವಲ್ಪ ಹೊತ್ತು ಮಾತಾಡಿ ಹೊರಡುವಾಗ, "ತಾಯೀ, ನಮ್ಮ ಮನೆಗೆ ನನ್ನ ಜೀವ ಇರುವಾಗಲೇ ಒಂದು ಸಲ ಬನ್ನಿ, ತಡಮಾಡಬೇಡಿ. ಹಣ್ಣಾಗಿದ್ದೇನೆ. ಇನ್ನೆಷ್ಟು ದಿನ ಬದುಕಿರುತ್ತೇನೋ ಗೊತ್ತಿಲ್ಲ. ದಯೆಯಿಟ್ಟು ಬೇಗ ಬನ್ನಿ" ಎಂಬುದಾಗಿ ಬೇಡಿಕೊಂಡರು. ಖಂಡಿತ ಬರುವುದಾಗಿ ಲೇಖಕಿ ಸಮಾಧಾನ ಹೇಳಿದರು.

ಮಲ್ಲೇಶ್ವರದ ತೆಂಗಿನ ಮರದ ರಸ್ತೆಯಲ್ಲಿರುವ ಎಸ್. ಜಿ. ನರಸಿಂಹಯ್ಯನವರ ಮನೆಗೆ ಲೇಖಕಿ ಜಯಾ ರಾಜಶೇಖರ್ ವಿಳಾಸ ಹುಡುಕಿಕೊಂಡು ಒಂದು ದಿನ ಹೋದರು. ಅವರನ್ನು ಕಂಡ ಕೂಡಲೇ ನರಸಿಂಹಯ್ಯನವರಲ್ಲಿ ಸಂತೋಷ ಉಕ್ಕಿ ಕಣ್ಣೀರು ಧಾರೆಯಾಗಿ ಹರಿಯಿತು. "ನಿಮ್ಮಂತಹ ಹೆಣ್ಣುಮಗಳು ನನ್ನ ಮನೆಗೆ ಬಂದು ಈ ನೆಲ ಪಾವನ ಮಾಡಿದಿರಿ. ಲಕ್ಷ್ಮಿ ಸರಸ್ವತಿ ಪಾರ್ವತಿ ಮೂರೂ ಜನ ನನ್ನ ಮನೆಗೆ ಬಂದ ಹಾಗಾಯಿತು. ಇದೆಲ್ಲಾ ನಾನು ಶಿವಪಂಚಾಕ್ಷರಿ ಈಗ ಓದುತ್ತಿದ್ದುದರ ಫಲ" ಎಂದು ಹೇಳಿ, ಅಲ್ಲೇ ಇಟ್ಟುಕೊಂಡಿದ್ದ ಆ ಪುಸ್ತಕ ತೋರಿಸಿದರು.

ಲೇಖಕಿ ವಿನಯದಿಂದ ನರಸಿಂಹಯ್ಯನವರ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಹಿಂದಿರುಗಿದರು. ಬಳಿಕ ಕೆಲವೇ ದಿನಗಳಲ್ಲಿ ನರಸಿಂಹಯ್ಯನವರು ಶಿವಸನ್ನಿಧಿ ಸೇರಿದರು.

ಜಿ. ವಿ. ಜಯಾ ರಾಜಶೇಖರ್, 'ನೆನಪಿನ ಸುಳಿಯಲ್ಲಿ', ಸಿರಿ ಪ್ರಕಾಶನ, ಬೆಂಗಳೂರು-೧೧, ೧೯೯೫, ಪು. ೮೧-೮೨

೨೬. 'ಇಷ್ಟು ಸಣ್ಣ ವಿಷಯಕ್ಕೆ ಇಷ್ಟು ರಂಪವೇ?'

ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ತಂದೆ ಸುಬ್ಬಣ್ಣನವರ (ದೊಡ್ಡ ಸುಬ್ಬಣ್ಣ) ಚಿಕ್ಕಪ್ಪನವರ ಮಗ ಸಣ್ಣ ಸುಬ್ಬಣ್ಣ ಅಂತಹ ವಿದ್ಯಾವಂತನಲ್ಲ. ಅವನಿಗೆ ಯಾವ ಕೆಲಸವೂ ಇರಲಿಲ್ಲ. ಅವನ ತಾಯಿಗೆ ಮಗನ ಮದುವೆ ಮಾಡುವ ಆಸೆ. ದೊಡ್ಡ ಸುಬ್ಬಣ್ಣನವರ ಸ್ವಂತ ತಮ್ಮ ಶ್ರೀನಿವಾಸನಿಗೆ ಒಳ್ಳೆಯ ಕಡೆ ಹೆಣ್ಣು ಗೊತ್ತಾದುದು ಆಕೆಯನ್ನು ಇನ್ನಷ್ಟು ಚಿಂತೆಗೆ ಈಡುಮಾಡಿತ್ತು. ಆಕೆಯ ತೌರು ಮನೆಯಿಂದಲೇ ಹೆಣ್ಣು ತರುವ ಸಲುವಾಗಿ ಸುಬ್ಬಣ್ಣನವರು ಆಕೆಯ ತೌರೂರಿಗೆ ಅವರನ್ನು ಕರೆದುಕೊಂಡು ಹೋದರು. ಆ ಮನೆಯವರು ಇವರ ಉದ್ದೇಶ ಏನೆಂಬುದು ತಿಳಿಯುತ್ತಲೇ ನಿರ್ದಾಕ್ಷಿಣ್ಯವಾಗಿ, ನಿಷ್ಠುರವಾಗಿ, ಸುಬ್ಬಣ್ಣನವರಿಗೆ, "ಏನು ನೋಡಿ ನಿನ್ನ ತಮ್ಮನಿಗೆ (ಸೋದರಸಂಬಂಧಿ) ಹೆಣ್ಣು ಕೊಡಬೇಕಯ್ಯ? ವಾಸಕ್ಕೆ ಮನೆಯಿಲ್ಲ, ಬತ್ತಕ್ಕೆ ಭೂಮಿಯಿಲ್ಲ. ನಾಳೆ ಬೆಳಗ್ಗೆ ಹುಡುಗಿ ಗತಿಯೇನು? ನಿನ್ನ ಮೀಸೆ, ರೇಷ್ಮೆವಸ್ತ್ರ ನೋಡಿ ನಾವು ಮರುಳಾಗುವುದಿಲ್ಲ. ನಾವು ಹುಡುಗಿಯನ್ನು ಕೊಡುವುದಿಲ್ಲ" ಎಂದು ಹೇಳಿಬಿಟ್ಟರು.

ಸುಬ್ಬಣ್ಣನವರಿಗೆ ಈಗ ದಿಕ್ಕು ತೋಚದಾಯಿತು. ಚಿಕ್ಕಮ್ಮ ಏನೆಂದು ಕೊಳ್ಳುತ್ತಾಳೋ ಎಂದು ಮಾತನಾಡದೆ ಸುಮ್ಮನಾದರು. ಏಕಾಂತದಲ್ಲಿ ಆಕೆಯನ್ನು 'ಏನು ಮಾಡಲಮ್ಮ' ಎಂದು ಕೇಳಿದರು. ಆಕೆ ಸುಮ್ಮನೆ ಕಣ್ಣೀರಿಟ್ಟರು. ಮತ್ತೆ ಸುಬ್ಬಣ್ಣನವರು ತಮಗಾದ ಅಪಮಾನ ಲಕ್ಷಿಸದೆ, "ಸ್ವಾಮಿ ನಮ್ಮ ಚಿಕ್ಕಮ್ಮ ಕಣ್ಣೀರಿಡದೆ ತನ್ನ ತೌರುಮನೆಯಿಂದ ಹಿಂದಿರುಗುವ ಹಾಗೆ ಮಾಡಿ., ನಮ್ಮ ಹುಡುಗನಿಗೆ ನೀವು ಹೆಣ್ಣು ಕೊಡಬೇಕಾದರೆ ನಾವು ಏನು ಮಾಡಬೇಕು, ಹೇಳಿ" ಎಂದು ಅಂಗಲಾಚಿದರು. ಆಗ ತೌರುಮನೆಯವರು ನಿರ್ದಾಕ್ಷಿಣ್ಯವಾಗಿ ಹೇಳಿದರು: "ನಿನ್ನ ಆಸ್ತಿಯಲ್ಲಿ ಈ ನಿನ್ನ ತಮ್ಮನಿಗೂ (ಸೋದರ ಸಂಬಂಧಿ) ಅರ್ಧಪಾಲು ಕೊಡು. ಆಗ ಹೊಟ್ಟೆ ಬಟ್ಟೆಗೆ ದಿಕ್ಕಾಗುತ್ತದೆ. ಹಾಗೆ ಆದರೆ ನಾವು ಹೆಣ್ಣು ಕೊಡುತ್ತೇವೆ; ಇಲ್ಲವಾದರೆ ಇಲ್ಲ." ಸುಬ್ಬಣ್ಣನವರು ಕೂಡಲೇ "ಇಷ್ಟು ಸಣ್ಣವಿಷಯಕ್ಕೆ ಇಷ್ಟು ರಂಪವೇ? ನನ್ನ ತಮ್ಮನಿಗೆ ನಾನು ಆಸ್ತಿ ಕೊಡಲಾರೆನೇ? ಖಂಡಿತ ಕೊಡುತ್ತೇನೆ. ಹಾಗೆ ಕೊಟ್ಟುದಕ್ಕೆ ಕಾಗದ ಪತ್ರ ನಿಮಗೆ ತೋರಿಸಿದರೆ ನೀವು ಹೆಣ್ಣು ಕೊಡುತ್ತೀರಿ ತಾನೇ?" ಎಂದು ಪ್ರಶ್ನಿಸಿದರು.

ಸುಬ್ಬಣ್ಣನವರು ತಮ್ಮ ಚಿಕ್ಕಮ್ಮನೊಂದಿಗೆ ಊರಿಗೆ ಮರಳಿದರು. ಊರಿನ ದೊಡ್ಡ ಮನುಷ್ಯರನ್ನೆಲ್ಲ ಬರಮಾಡಿ, ಅವರ ಎದುರಿನಲ್ಲಿ ಸ್ವಯಾರ್ಜಿತವಾದ ತನ್ನ ಆಸ್ತಿಯನ್ನು ಎರಡು ಭಾಗ ಮಾಡಿ, ಅದರಲ್ಲಿ ಒಂದು ಭಾಗವನ್ನು ಆರಿಸಿಕೊಳ್ಳುವಂತೆ ಆ ಚಿಕ್ಕಪ್ಪನ ಮಗನಿಗೆ ತಿಳಿಸಿದರು. ಸಣ್ಣ ಸುಬ್ಬಣ್ಣ ತೇವವಾದ ಕಣ್ಣು ಒರೆಸಿಕೊಳ್ಳುತ್ತ, "ಅಣ್ಣಯ್ಯ, ಇದಕ್ಕೆ ನಾನು ಹಕ್ಕುದಾರನಲ್ಲ. ಇದು ಪಿತ್ರಾರ್ಜಿತವಲ್ಲ, ನಿನ್ನ ಸ್ವಯಾರ್ಜಿತ. ಇದರ ಮೇಲೆ ನನ್ನಿಂದ ನಿನಗೆ ಯಾವ ಪ್ರಯೋಜನವೂ ಇಲ್ಲ. ಆದರೂ ನೀನು ಒಡಹುಟ್ಟಿದ ತಮ್ಮನಿಗಿಂತ ಹೆಚ್ಚಾಗಿ ನನ್ನನ್ನು ನೋಡಿಕೊಂಡಿದ್ದೀಯೆ. ನನಗೆ ಈ ಆಸ್ತಿ ಪಾಲು ಬೇಡ, ಮದುವೆಯೂ ಬೇಡ" ಎಂದು ಸ್ಪಷ್ಟವಾಗಿ ಹೇಳಿದನು.

ಆಗ ಸುಬ್ಬಣ್ಣನವರು ಅವನ ಬೆನ್ನು ತಟ್ಟಿ ನಗುತ್ತ, "ಹಾಗನ್ನಬೇಡ, ಸುಬ್ಬು. ಚಿಕ್ಕಪ್ಪ ನನಗೆ ತಂದೆಯ ಸಮಾನ. ಅವರ ಪ್ರೀತಿಗೆ ಬೆಲೆ ಕಟ್ಟುವವರು ಯಾರು? ಅವರ ಮಗನಾದ ನೀನು ನನ್ನ ತಮ್ಮ ಶ್ರೀನಿವಾಸನಂತೆಯೇ ನನಗೆ ತಮ್ಮ. ಅವನೇನೋ ಓದಿನಲ್ಲಿ ಮುಂದುವರಿದ. ನಿನಗೆ ಅದು ಸಾಧ್ಯವಾಗಲಿಲ್ಲ. ನಿನ್ನ ಜೀವನದ ಜವಾಬ್ದಾರಿ ನನ್ನದೇ ಅಲ್ಲವೇನಪ್ಪ. ಎಂದಾದರೂ ಮಾಡುವುದನ್ನು ಇಂದೇ ಮಾಡುತ್ತಿದ್ದೇನೆ. ಇದರಿಂದ ಚಿಕ್ಕಮ್ಮನ ಆಸೆ ಪೂರೈಸುವುದಾದರೆ, ಅದಕ್ಕಿಂತಲೂ ಹೆಚ್ಚಿಗೆ ನನಗೇನು ಬೇಕು?" ಎಂದು ಮುಂತಾಗಿ ಸಮಾಧಾನಪಡಿಸಿದರು.

ಸುಬ್ಬಣ್ಣನವರು ಗ್ರಾಮಸ್ಥರ ಎದುರಿನಲ್ಲಿ ತಮ್ಮ ಅರ್ಧ ಮನೆ, ಅರ್ಧ ಜಮೀನು, ದನ-ಕರು, ಪಾತ್ರೆ-ಪಡಗಗಳಲ್ಲಿ ಅರ್ಧ ಅರ್ಧ ಹೀಗೆ ಸಮಪಾಲು ವಿಭಾಗಮಾಡಿದರು. ಈ ಪ್ರಕಾರ ಒಂದು ಪಾರೀಖತ್ತು ಬರೆದು, ಅದಕ್ಕೆ ಪಂಚಾಯಿತರ ಸಹಿ ಹಾಕಿಸಿದರು. ಈ ವಿಷಯವನ್ನು ಹೆಣ್ಣಿನ ಮನೆಯವರಿಗೆ ತಿಳಿಸಿದರು. ಅವರು ಈಗ ಸಣ್ಣ ಸುಬ್ಬಣ್ಣನಿಗೆ ಹೆಣ್ಣು ಕೊಡಲು ಒಪ್ಪಿಕೊಂಡರು. ಮದುವೆ ಹೆಣ್ಣಿನ ಮನೆಯಿದ್ದ ರಾಯದುರ್ಗದಲ್ಲಿ ನಡೆದುಹೋಯಿತು.

ತ. ಸು. ಶಾಮರಾಯ, 'ಮೂರು ತಲೆಮಾರು', ಸುವಿದ್ಯಾ ಪ್ರಕಾಶನ, ಬೆಂಗಳೂರು-೪, ೧೯೮೨, ಪು. ೧೩೮-೪೦.

೨೭. 'ಇಷ್ಟೊಂದು ದುಡ್ಡು ತೆಗೆದುಕೊಂಡು ನಾನೇನು ಮಾಡಲಿ?'

ಪರಿವಾರದವರ ಪಂಗಡಕ್ಕೆ ಸೇರಿದ ದ್ಯಾವಣ್ಣ ಮೈಸೂರು ಅರಸುಮನೆತನದ ದೇವ ಪಾರ್ಥಿವರ ಬಂಗಲೆ ಮಹಡಿಯ ಮೇಲೆ ನವಬತ್ತು ನುಡಿಸುವ ಕೆಲಸ ಮಾಡುತ್ತಿದ್ದನು. ಸಂಬಳ ತಿಂಗಳಿಗೆ ೩ ರೂಪಾಯಿ. ಶ್ರಾವ್ಯವಾಗಿ ನಾಗಸ್ವರ ನುಡಿಸುತ್ತಿದ್ದ, ಹಾಡುತ್ತಿದ್ದ. ಈತನಿಗೆ ಸಂಗೀತಕಲಾನಿಧಿ ವಾಸುದೇವಾಚಾರ್ಯರಲ್ಲಿ ಗುರುಭಕ್ತಿ. ಅವನು ಎಂದೂ ಗುರುಗಳ ಮುಖವನ್ನು ತಲೆಯೆತ್ತಿ ನೋಡಿದವನಲ್ಲ, ಮನಸ್ಸಿನಲ್ಲಿ ಒಬ್ಬರಿಗೆ ಒಂದು ಕೇಡು ಬಗೆದವನಲ್ಲ, ಸುಳ್ಳಾಡಿದವನಲ್ಲ. ಆಚಾರ್ಯರು ಸ್ನಾನ ಸಂಧ್ಯಾವಂದನೆ ಮುಗಿಸಿ, ದೇವರ ಪೂಜೆ ಮಾಡಿ, ತೀರ್ಥಪ್ರಸಾದ ಕೊಡುವ ವರೆಗೂ ಅವನು ಒಂದು ಉದ್ಧರಣೆ ನೀರು ಸಹ ಮುಟ್ಟುತ್ತಿರಲಿಲ್ಲ.

ಅದು ನಾಲ್ವಡಿ ಕೃಷ್ಣರಾಜರ ಕಾಲ. ಒಂದು ಸಲ ಪ್ರಭುಗಳು ದ್ಯಾವಣ್ಣನ ನಾಗಸ್ವರ ಕೇಳಿದರು. ಅವರಿಗೆ ಅದು ಸೊಗಸಿತು. ಶಿವಪೂಜೆಯ ಬಳಿಕ ತಮ್ಮ ಸನ್ನಿಧಿಗೆ ದ್ಯಾವಣ್ಣನನ್ನು ಬರಮಾಡಿಕೊಂಡರು. ಸಂಭಾಷಣೆ ಹೀಗೆ ಸಾಗಿತು:

ನಾಲ್ವಡಿ ಕೃಷ್ಣರಾಜರು: ಯಾರ ಹತ್ತಿರ ಸಂಗೀತಪಾಠ?

ದ್ಯಾವಣ್ಣ: ನಮ್ಮ ಗುರುಗಳ ಹತ್ತಿರ ಮಹಾಸ್ವಾಮಿ.

ನಾಲ್ವಡಿ ಕೃಷ್ಣರಾಜರು: ಅದನ್ನೇ ನಾವು ಕೇಳುತ್ತಿರುವುದು. ನಿನ್ನ ಗುರುಗಳು ಯಾರು?

ದ್ಯಾವಣ್ಣ: ಕ್ಷಮಿಸಬೇಕು ನನ್ನೊಡೆಯ; ಗುರುಗಳ ಹೆಸರು ಹೇಳಬಾರದೆಂದು ಶಾಸ್ತ್ರದಲ್ಲಿ ಹೇಳಿದೆಯಂತೆ.

ಹೇಗೋ ಪ್ರಭುಗಳು ದ್ಯಾವಣ್ಣನ ಗುರುಗಳು ಯಾರೆಂದು ಅವನಿಂದಲೇ ಕೇಳಿ ತಿಳಿದರು. ಸಂಭಾಷಣೆ ಮುಂದುವರಿಯಿತು.

ನಾಲ್ವಡಿ ಕೃಷ್ಣರಾಜರು: ಎಷ್ಟು ವರ್ಷದಿಂದ ಅಭ್ಯಾಸ ಮಾಡುತ್ತಿದ್ದೀಯೆ?

ದ್ಯಾವಣ್ಣ: ಐದು ವರ್ಷದಿಂದ ಮಹಾಸ್ವಾಮಿ

ನಾಲ್ವಡಿ ಕೃಷ್ಣರಾಜರು: ನಿನ್ನ ಗುರುಗಳು ಚೆನ್ನಾಗಿ ಪಾಠ ಹೇಳಿಕೊಡುತ್ತಾರೆಯೇ?

ದ್ಯಾವಣ್ಣ: ಮಹಾಸ್ವಾಮಿ, ಏನು ಅರಿಕೆ ಮಾಡಲಿ? ಅದು ದೊಡ್ಡ ಸಮುದ್ರ, ಹೋದಷ್ಟೂ ಆಳ. ನಮ್ಮ ನಮ್ಮ ಬೊಗಸೆ ಇದ್ದಷ್ಟು ತಾನೇ ನಮಗೆ ಪ್ರಾಪ್ತಿ. ಆ ನಮ್ಮಪ್ಪ ನನ್ನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತ ಚೆನ್ನಾಗಿ ನೋಡಿಕೊಳ್ಳುತ್ತಾರೆ, ಪ್ರಭು.

ನಾಲ್ವಡಿ ಕೃಷ್ಣರಾಜರು: ಸಂತೋಷ, ಈಗ ನಿನ್ನ ಸಂಬಳ ಎಷ್ಟು?

ದ್ಯಾವಣ್ಣ: ಮೂರು ರೂಪಾಯಿ ನನ್ನೊಡೆಯ.

ನಾಲ್ವಡಿ ಕೃಷ್ಣರಾಜರು: ಜೀವನಕ್ಕೆ ಅಷ್ಟು ಸಾಕೇ, ದ್ಯಾವಣ್ಣ

ದ್ಯಾವಣ್ಣ: ಮಹಾಸ್ವಾಮಿ, ನಮ್ಮ ತಾಯಿ ವರಾಹಸ್ವಾಮಿ ದೇವಸ್ಥಾನದಲ್ಲಿ ಕೆಲಸ ಮಾಡಿ ನಾಲ್ಕು ರೂಪಾಯಿ ಸಂಪಾದಿಸುತ್ತಿದ್ದಾಳೆ. ನನ್ನ ಹೆಂಗಸಿಗೆ ಕೃಷ್ಣದೇವರ ಗುಡಿಯಲ್ಲಿ ಕೆಲಸವಿದೆ. ಮೂರು ರೂಪಾಯಿ ಸಂಬಳ ಬರ್‍ತಿದೆ. ನನಗೆ ಸ್ವಂತ ಮನೆಯಿದೆ. ಒಂದು ಕಾಸು ಸಾಲವಿಲ್ಲ. ನನಗೆ ಬರುವುದು ನನಗೆ ಬೇಕಾದಷ್ಟು, ಮಹಾಸ್ವಾಮಿ. ತಮ್ಮ ಪಾದದ ಅನುಗ್ರಹದಿಂದ ನನಗೆ ಯಾವ ತೊಂದರೆಯೂ ಇಲ್ಲ, ಮಹಾಸ್ವಾಮಿ.

ಪ್ರಭುಗಳಿಗೆ ದ್ಯಾವಣ್ಣನ ಸರಳಸ್ವಭಾವ ಹಿಡಿಸಿತು; ಪ್ರಾಮಾಣಿಕತೆ ಮೆಚ್ಚಾಯಿತು. ಬಕ್ಷಿಯವರನ್ನು ಬರಹೇಳಿ "ಈತನಿಗೆ ೫೦೦ ರೂ. ಬಹುಮಾನ ಕೊಡಿ" ಎಂದು ಅಪ್ಪಣೆ ಮಾಡಿದರು.

ತಕ್ಷಣವೇ ದ್ಯಾವಣ್ಣ "ಮಹಾಸ್ವಾಮಿ, ದಯವಿಟ್ಟು ನನ್ನನ್ನು ಮನ್ನಿಸಿ ಕಾಪಾಡಬೇಕು. ಇಷ್ಟೊಂದು ದುಡ್ಡು ತೆಗೆದುಕೊಂಡು ನಾನೇನು ಮಾಡಲಿ, ನನ್ನೊಡೆಯ? ಅದನ್ನು ಇಟ್ಟುಕೊಳ್ಳುವುದಕ್ಕೆ ನನ್ನ ಮನೆಯಲ್ಲಿ ಸ್ಥಳವಿಲ್ಲ, ಭದ್ರತೆಯಿಲ್ಲ. ದಯೆಮಾಡಿ ಆ ಹಣ ಅರಮನೆಯಲ್ಲಿಯೇ ಇರಲಿ, ಮಹಾಸ್ವಾಮಿ" ಎಂದು ಅಂಗಲಾಚಿದನು.

ಪ್ರಭುಗಳಿಗೆ ನಗು ಬಂದಿತು. "ಇರಲಿ ದ್ಯಾವಣ್ಣ, ಚಿಂತಿಸಬೇಡ. ಈ ಹಣ ತೆಗೆದುಕೊಂಡು ಹೋಗು. ನಾವು ನಿನ್ನ ಮನೆಯನ್ನು ಸರಿಪಡಿಸಿಕೊಡುತ್ತೇವೆ. ಆಚಾರ್ಯರಲ್ಲಿ

ಚೆನ್ನಾಗಿ ಸಂಗೀತದ ಅಭ್ಯಾಸ ಮಾಡು" ಎಂದು ಹೇಳಿದರು. ಅವನ ಸಂಬಳವನ್ನು ೮ ರೂಪಾಯಿಗಳಿಗೆ ಹೆಚ್ಚಿಸಿದರು; ಅವನಿಗೆ ಒಂದು ಬೆಳ್ಳಿ ನಾಗಸ್ವರ ಮಾಡಿಸಿಕೊಟ್ಟರು.

ಎಸ್. ಕೃಷ್ಣಮೂರ್ತಿ, 'ವಾಗ್ಗೇಯಕಾರ ವಾಸುದೇವಾಚಾರ್ಯ', ಕಾವ್ಯಾಲಯ, ಜಯನಗರ, ಮೈಸೂರು-೫೭೦೦೧೪, ಪು. ೬೫-೬೭

೨೮. 'ಈ ಆಪದ್ಬಾಂಧವರು ಯಾರು'?

ಬಿಡಾರಂ ಕೃಷ್ಣಪ್ಪನವರು ಸುಪ್ರಸಿದ್ಧ ಗಾಯಕರು. ಆಸ್ಥಾನದ ಸಂಗೀತವಿದ್ವಾಂಸರು, 'ಗಾಯಕಶಿಖಾಮಣಿ' ಬಿರುದು ಗಳಿಸಿದವರು. ಅವರ ಬಾಲ್ಯಕಾಲ ಬಡತನದ ಕಾಲ. ಅಣ್ಣ ತಮ್ಮಂದಿರು ಭಿಕ್ಷಾಟನೆಮಾಡಿ ಏನಾದರೂ ತಂದರೆ ಉಂಟು, ಇಲ್ಲವಾದರೆ ಇಲ್ಲ. ಒಂದು ದಿನ ಕೃಷ್ಣಪ್ಪ ಅಣ್ಣನೊಂದಿಗೆ ಭಿಕ್ಷೆಗೆ ಹೋಗಲಿಲ್ಲ. ಹಸಿವು ಹೆಚ್ಚಾಗಿ, ಏನಾದರೂ ಕೊಡುವಂತೆ ತಾಯಿಯನ್ನು ಕೇಳಿದರು; ಭಿಕ್ಷೆಗೆ ಹೋಗಿದ್ದ ಅಣ್ಣ ಮನೆಗೆ ಬಾರದೆ ಏನೂ ಸಿಕ್ಕುವಂತಿರಲಿಲ್ಲ. ಆಗ ದಿಕ್ಕು ತೋಚದೆ ಆ ತಾಯಿ ಕಣ್ಣೀರು ಹಾಕಿದರು.

ಕೃಷ್ಣಪ್ಪ ಮೈಸೂರಿನ ಅರಮನೆ ಹತ್ತಿರದ ಕೋಟೆ ಆಂಜನೇಯನ ಗುಡಿಯ ಬಳಿಗೆ ಹೋದರು. ಆಗ ಮಟಮಟ ಮಧ್ಯಾಹ್ನ. ದೇವರ ನಾಮಗಳನ್ನು ಹಾಡಲಾರಂಭಿಸಿದರು. ಅದು ಭಕ್ತರು ಸುಳಿಯುವ ವೇಳೆಯಲ್ಲವಾದ್ದರಿಂದ ಅವರಿಗೆ ಏನೂ ಸಿಕ್ಕಲಿಲ್ಲ. ಹಸಿವು ಬಾಯಾರಿಕೆಗಳಿಂದ ಬಳಲಿ ಅಲ್ಲೇ ಮಲಗಿಬಿಟ್ಟರು. ಅದೇ ವೇಳೆಗೆ ಅಲ್ಲಿಗೆ ಡಾ. ನಂಜುಂಡ ರಾವ್ ಎಂಬವರು ಬಂದು ಹುಡುಗನನ್ನೆಬ್ಬಿಸಿ, ಅವನ ವಿಚಾರ ಕೇಳಿ ತಿಳಿದು ಕನಿಕರಿಸಿ, ೧ ರೂಪಾಯಿ ಕೊಟ್ಟು ಮನೆಗೆ ಕಳುಹಿಸಿದರು. ಆ ದಿನದಿಂದ ಕೃಷ್ಣಪ್ಪನವರು ಆ ಗುಡಿಗೆ ಬರುವುದು, ದೇವರ ನಾಮ ಹಾಡಿ ಏನಾದರೂ ಸಂಪಾದಿಸುವುದು ಸಾಗಿತು.

ಒಂದು ದಿನ ಸಾಹುಕಾರ ತಿಮ್ಮಯ್ಯ ಎಂಬುವರು ದೇವರ ದರ್ಶನಕ್ಕೆಂದು ಗುಡಿಗೆ ಬಂದರು. ಕೃಷ್ಣಪ್ಪನವರ ಭವ್ಯಾಕೃತಿ, ತೇಜಸ್ಸು, ಶಾರೀರದ ಗಾಂಭೀರ್ಯ ಮಾಧುರ್ಯಗಳು ಅವರನ್ನು ಆಕರ್ಷಿಸಿದುವು. 'ಬಂಗಾರವಿದೆ, ಪುಟಕ್ಕೆ ಹಾಕಬೇಕು' ಎಂದುಕೊಂಡರು. ಹೆಸರು ಕೇಳಿದರು. 'ಸಂಗೀತಾಭ್ಯಾಸ ಮಾಡಲು ಇಷ್ಟವಿದೆಯೇ?' ಎಂದು ಪ್ರಶ್ನಿಸಿದರು. 'ಕುಡಿಯುವುದಕ್ಕೆ ಗಂಜಿಯೂ ಇಲ್ಲದ ಬಡವನಾದ ನಾನೆಲ್ಲಿ? ಆ ಗಾಂಧರ್ವವಿದ್ಯೆ ಎಲ್ಲಿ?' ಎಂದು ಕೃಷ್ಣಪ್ಪ ನಿಟ್ಟುಸಿರಿಟ್ಟರು. ತಿಮ್ಮಯ್ಯ ಹುಡುಗನನ್ನು ಸಂಗಡ ಕರೆದುಕೊಂಡು ಎಲ್ಲಿಗೋ ಹೊರಟರು. ದಾರಿಯುದ್ದಕ್ಕೆ ಕೃಷ್ಣಪ್ಪನವರಿಗೆ, 'ಈ ಆಪದ್ಬಾಂಧವರು ಯಾರು? ಯಾವ ವಿದ್ವಾಂಸರ ಹತ್ತಿರ ನನ್ನನ್ನು ಕರೆದೊಯ್ಯುತ್ತಿದ್ದಾರೆ?' ಎಂದು ಒಂದೇ ಸಮನೆ ಪ್ರಶ್ನೆಗಳೇಳುತ್ತಿದ್ದುವು.

ತಿಮ್ಮಯ್ಯನವರು ಪ್ರಸಿದ್ಧ ಸಂಗೀತವಿದ್ವಾಂಸ ಕರೂರು ರಾಮಸ್ವಾಮಿಯವರ ಮನೆಗೆ ಬಂದು ಬಾಗಿಲು ತಟ್ಟಿದರು. ಬಾಗಿಲು ತೆರೆದು ಹೊರಬಂದವರನ್ನು ಕಂಡಾಗ ಕೃಷ್ಣಪ್ಪನವರು ತಮ್ಮ ಕಣ್ಣನ್ನೇ ತಾವು ನಂಬದಾದರು. ಕನಸೋ ದಿಟವೋ ಅರ್ಥವಾಗದ ಸ್ಥಿತಿ ಅದು. ಆ ವಿದ್ವಾಂಸರಲ್ಲಿ ಸಂಗೀತ ಕಲಿಯುವ ಯೋಗ ತನಗೆ ಉಂಟೇ ಎಂದು ಬಹುಕಾಲದಿಂದ ಕೃಷ್ಣಪ್ಪನವರು ಹಂಬಲಿಸುತ್ತಿದ್ದರು. ರಾಮಸ್ವಾಮಿಯವರು ಕೃಷ್ಣಪ್ಪನವರ ಮನೆಯ ಶುಕ್ರವಾರದ ಭಜನೆಯ ಒಂದು ದಿನ ದಿವ್ಯವಾಗಿ ಹಾಡಿ ಅವರ ಮನೆಮಂದಿಯನ್ನೆಲ್ಲ ಮರುಳಾಗುವಂತೆ ಮಾಡಿದ್ದರು.

ರಾಮಸ್ವಾಮಿಗಳು ಸಾಹುಕಾರರನ್ನೂ ತಾವು ಮೊದಲೇ ನೋಡಿದ್ದ ಕೃಷ್ಣಪ್ಪನನ್ನೂ ಮನೆಯೊಳಗೆ ಆಹ್ವಾನಿಸಿದರು. 'ಈತನ ಪರಿಚಯ ಎಲ್ಲಿ ನಿಮಗೆ?' ಎಂದು ಸಾಹುಕಾರರು ಪ್ರಶ್ನಿಸಿದಾಗ, 'ಮೊನ್ನೆ ತಾನೆ ಇವರ ಮನೆಗೆ ಹೋಗಿ ಹಾಡಿ ಬಂದಿದ್ದೇನೆ. ಇವರ ಮನೆಯವರೆಲ್ಲ ಚೆನ್ನಾಗಿ ಗೊತ್ತು. ಅದಿರಲಿ, ತಾವು ಬಂದ ಉದ್ದೇಶವೇನು, ಸಾಹುಕಾರರೇ?' ಎಂದು ಕೇಳಿದರು.

ಆಗ ಸಾಹುಕಾರ ತಿಮ್ಮಯ್ಯನವರು ಕರೂರು ರಾಮಸ್ವಾಮಿಯವರನ್ನು ಉದ್ದೇಶಿಸಿ ಹೀಗೆ ಹೇಳಿದರು:

"ನಾನು ಬಂದಿರುವುದೂ ಈ ಹುಡುಗನ ವಿಷಯವಾಗಿಯೇ. ಈತನಿಗೆ ನೀವು ಸಂಗೀತ ಹೇಳಿಕೊಡಬೇಕು. ಇಗೋ, ತಗೊಳ್ಳಿ ಈ ಹಣ. ಪ್ರಶಸ್ತವಾದ ಒಂದು ದಿನ ನೋಡಿ ಆದಷ್ಟು ಜಾಗ್ರತೆ ಪಾಠ ಪ್ರಾರಂಭಮಾಡಿ. ಮನಸ್ಸು ಬಿಚ್ಚಿ ವಿದ್ಯಾದಾನಮಾಡಿ. ನಿಮ್ಮ ಶ್ರಮಕ್ಕೆ ಸಲ್ಲಬೇಕಾದ ಪ್ರತಿಫಲಕ್ಕೆ ಲೋಪ ಇಲ್ಲದ ಹಾಗೆ ನೋಡಿಕೊಳ್ಳುವ ಭಾರ ನನ್ನದು."

ಹೀಗೆ ಹೇಳಿ ನೂರು ರೂಪಾಯಿ ನೋಟೊಂದನ್ನು ರಾಮಸ್ವಾಮಿಯವರ ಕೈಯಲಿಟ್ಟರು. (ಸು. ೧೦೦-೧೨೦ ವರ್ಷ ಹಿಂದೆ ಈ ೧೦೦ ರೂಪಾಯಿಗೆ ಏನು ಬೆಲೆಯಿತ್ತು ಎಂಬುದನ್ನು ಊಹಿಸಿ ತಿಳಿಯಬೇಕು).

"ತಮ್ಮ ಮಾತಿಗೆ ಯಾವಾಗಲಾದರೂ ಬದಲು ಆಡಿದ್ದೇನೆಯೇ? ಅಗತ್ಯವಾಗಿ ಆಗಲಿ ಸಾಹುಕಾರರೇ, ನನ್ನ ಕೈಯಲ್ಲಾದ ಮಟ್ಟಿಗೆ ಈತನನ್ನು ತಯಾರುಮಾಡುತ್ತೇನೆ" ಎಂದರು, ಕರೂರು ರಾಮಸ್ವಾಮಿಯವರು. ಕೃತಜ್ಞತೆಯಿಂದ ಕೃಷ್ಣಪ್ಪನವರ ಕಣ್ಣಂಚಿನಲ್ಲಿ ಹನಿ ಮೂಡಿತ್ತು.

ಕೆ. ವಾಸುದೇವಾಚಾರ್ಯ, 'ನಾ ಕಂಡ ಕಲಾವಿದರು', ಕಾವ್ಯಾಲಯ, ಪ್ರಕಾಶಕರು, ಮೈಸೂರು-೧೪, ೧೯೮೫ (ದ್ವಿ. ಮು.) ಪು. ೪೬-೫೦

೨೯. 'ಈಗ ನಾವು ಏನಾಗಿದ್ದೇವೆ?'

ಡಿ. ವಿ. ಗುಂಡಪ್ಪನವರು ಒಂದು ಸಲ ಚಿಕ್ಕಬಳ್ಳಾಪುರದ ಕಡೆಗೆ ಹೋಗಿ, ವಿಶ್ವೇಶ್ವರಯ್ಯನವರ ಸ್ವಸ್ಥಳ ಮುದ್ದೇನಹಳ್ಳಿಗೂ ಹೋಗಿದ್ದರು. ಆ ವಿಷಯವನ್ನು ಅವರಿಗೆ ತಿಳಿಸುತ್ತ, "ನಾನು ನಿಮ್ಮ ಊರಿಗೆ ಹೋಗಿದ್ದೆ. ಅಲ್ಲಿ ಯಾರೋ ಮುದುಕರು ಒಂದು ಕಾಗದ ತೋರಿಸಿ, ಅದರಲ್ಲಿದ್ದದ್ದು ನಿಮ್ಮ ತಂದೆಯವರ ಕೈಬರಹ ಎಂಬುದಾಗಿ ಹೇಳಿದರು" ಎಂದು ತಿಳಿಸಿದರು. ಮುಂದೆ ಡಿ.ವಿ.ಜಿ. - ಎಂ.ವಿ. ಅವರ ನಡುವೆ ಹೀಗೆ ಸಂವಾದ ಸಾಗಿತು.

ಎಂ. ವಿ. : ನೀನು ಅದನ್ನು ನೋಡಿದೆಯಾ?

ಡಿ.ವಿ.ಜಿ.: ನೋಡಿದೆ.

ಎಂ.ವಿ. : ಅದರಲ್ಲಿ ಏನು ಬರೆದಿದ್ದರು?

ಡಿ.ವಿ.ಜಿ.: ಉಪನಿಷದ್ ವಾಕ್ಯಗಳನ್ನು, 'ಬ್ರಹ್ಮವಿದಾಪ್ನೋತಿ' ಇತ್ಯಾದಿಯಾಗಿ.

ಎಂ.ವಿ.: ಅವರು ಏನೇನೋ ಮಾಡಿಕೊಳ್ಳುತ್ತಿದ್ದರು. ಆ ದೊಡ್ಡಮನುಷ್ಯರು ಬೆಳಗ್ಗೆ ೫ ಗಂಟೆಯಿಂದ ೧೧ ಗಂಟೆಯ ವರೆಗೆ ಏನೇನೋ ಹೇಳಿಕೊಳ್ಳುತ್ತಿದ್ದರು. ಆರು ಗಂಟೆ ಹೊತ್ತು Waste (ಹೀಗೆ ಹೇಳಿ ನಕ್ಕರು).

ಡಿ.ವಿ.ಜಿ.: ಹಾಗೆ ಅವರು Waste ಮಾಡಿದ್ದರ ಫಲವನ್ನು ಈ ಹೊತ್ತು ನಾವು ಅನುಭವಿಸಿ ಸಂತೋಷಪಡುತ್ತಿದ್ದೇವೆ.

ಎಂ.ವಿ. : ಏನದು?

ಡಿ.ವಿ.ಜಿ.: (ಕೈಯನ್ನು ಅವರತ್ತ ತೋರಿಸಿ) ಕೃಷ್ಣರಾಜಸಾಗರ, ಭದ್ರಾವತಿ....

ಎಂ.ವಿ.: (ಮಾತು ಮುಗಿಯಲು ಅವಕಾಶಕೊಡದೆ) ಅದೆಲ್ಲಾ ಸರಿ, ಈಗ ನಾವು ಏನಾಗಿದ್ದೇವೆ?

ಡಿ.ವಿ.ಜಿ.: ಪ್ರೊಫೆಸರ್ ಜಾಲಿ ಎಂಬ ಪ್ರಸಿದ್ಧ ಜರ್ಮನ್ ವಿದ್ವಾಂಸನು ಹಿಂದೂ ಧರ್ಮಗ್ರಂಥಗಳನ್ನು ಕುರಿತು ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಐದಾರು ಉಪನ್ಯಾಸಗಳನ್ನು ಕೊಟ್ಟ. ಅದರಲ್ಲಿ ರಘುನಂದನ, ನಂದಪಂಡಿತ ಮೊದಲಾದ ನಿಬಂಧನಕಾರರ ಚರಿತ್ರೆಗಳನ್ನು ಸಂಕ್ಷೇಪವಾಗಿ ಹೇಳಿದ್ದಾನೆ. ಆ ಮಹಾಪಂಡಿತರುಗಳ ವಂಶಗಳಲ್ಲಿ ೬, ೭, ೮, ೯ ತಲೆ ಮಾರುಗಳ ವರೆಗೂ ವಿದ್ವತ್ತೆಯ ಸಂಪ್ರದಾಯ ಬೆಳೆದು ಬಂದುದನ್ನು ನೋಡಿ, ಜಾಲಿ ತನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾನೆ. ತಂದೆ, ಮಗ, ಮೊಮ್ಮಗ, ತಮ್ಮನ ಮಕ್ಕಳು, ಮೊಮ್ಮಕ್ಕಳು – ಈ ಪರಂಪರೆಯಲ್ಲಿ ಪ್ರತಿಯೊಬ್ಬನೂ ೩-೪ ಶಾಸ್ತ್ರಗಳಿಗೆ ಅಧಿಕಾರಿಯಾಗಿ ಪ್ರಮಾಣಭೂತವಾದ ಗ್ರಂಥಗಳನ್ನು ಬರೆದಿದ್ದಾನೆ. ತರ್ಕ ವ್ಯಾಕರಣ ಪೂರ್ವಮೀಮಾಂಸಾ ಶ್ರೌತ ಧರ್ಮಶಾಸ್ತ್ರ ದತ್ತಕಸಂಪ್ರದಾಯ ದಾಯಭಾಗವಿಧಿ – ಹೀಗೆ ನಾನಾ ಪ್ರಕರಣಗಳನ್ನು

ಕುರಿತು ಸ್ವತಂತ್ರಪಿಚಾರದಿಂದ ಗ್ರಂಥರಚನೆ ಮಾಡಿದ್ದಾರೆ. ಇದು ವಂಶಪಾರಂಪರ್ಯದ ಪ್ರಭಾವ. ಇಂಥಾದ್ದು ಇನ್ನಾವ ದೇಶದಲ್ಲಿಯೂ ಕಾಣಬರುತ್ತಿಲ್ಲ. ಹೀಗೆಂದು ಪ್ರೊಫೆಸರ್ ಜಾಲಿಯು ವಂಶಮಹಿಮೆಯನ್ನು ಕೊಂಡಾಡಿದ್ದಾನೆ.

ಈ ಮಾತು ಕೇಳಿದ ಮೇಲೆ ಸಹ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಮೊದಲಿನ ಪಲ್ಲವಿಗೇ ಹಿಂತಿರುಗಿದರು :

"ಅದೆಲ್ಲಾ ಸರಿ, ಈಗ ನಾವು ಏನಾಗಿದ್ದೇವೆ?"

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ-೪, ಕಾವ್ಯಾಲಯ, ಮೈಸೂರು, ೧೯೭೧, ಪು. ೧೨೭-೨೮.

೩೦. 'ಈಗಲೇ ಇಲ್ಲೇ ಮಂಜೂರು ಮಾಡಿದ್ದೇನೆ'

ಮಿರ್ಜಾ. ಎಂ. ಇಸ್ಮಾಯಿಲ್ ಮೈಸೂರಿನ ಗಣ್ಯ ದಿವಾನರಲ್ಲಿ ಒಬ್ಬರು. ಅದು ನಾಲ್ವಡಿ ಕೃಷ್ಣರಾಜರ ಕಾಲ. ಮಿರ್ಜಾ ನಿಧನ ಹೊಂದಿದ ದಿನ ಡಿ.ವಿ.ಜಿ. ಸಹ ಶ್ಮಶಾನಕ್ಕೆ ಹೋಗಿದ್ದರು. ಸಂಸ್ಕಾರಕಾರ್ಯ ಮುಗಿಯುವಾಗ ರಾತ್ರಿ ೯-೧೦ ಗಂಟೆ. ದೊಡ್ಡ ಜನ ಸಂದಣಿ ಸೇರಿತ್ತು. ಜೊತೆಯ ಮಿತ್ರರೂ ಡಿ.ವಿ.ಜಿ. ಅವರೂ ಆ ಸಂದಣಿಯ ಗದ್ದಲದಲ್ಲಿ ಬೇರೆಬೇರೆಯಾದರು. ಮಿತ್ರರನ್ನು ಹುಡುಕುತ್ತ (ಇವರು ಎಂ. ಎಸ್. ಪುಟ್ಟಣ್ಣನವರ ಮಗ ಎಂ.ಪಿ. ಸೋಮಶೇಖರ ರಾವ್) ಶ್ಮಶಾನಪ್ರದೇಶದ ಬಾಗಿಲಿನ ವರೆಗೆ ಡಿ.ವಿ.ಜಿ. ಬಂದರು. ಅಲ್ಲಿ ಒಬ್ಬಾತ ಬಿಕ್ಕಿಬಿಕ್ಕಿ ಅಳುತ್ತಿರುವುದು ಅವರಿಗೆ ಕಂಡಿತು. ಆತನ ಉಡುಗೆಯಿಂದ ಆತ ಹಿಂದು ಎಂದು ಅವರಿಗೆ ತೋರಿತು. ಆತನನ್ನು ವಿಚಾರಿಸಿದರು: 'ನೀವು ಯಾರು?' ಆತ ಹೇಳಿದ: "ಸ್ವಾಮಿ, ನಾನು ಕಬ್ಬನ್ ಪೇಟೆಯವನು, ಜಾತಿಯಿಂದ ಅಕ್ಕಸಾಲಿ. ಒಂದು ದಿನ ಬೆಳಗ್ಗೆ ನನ್ನ ಹೆಂಡತಿ ನೀರಿಗಾಗಿ ಬನ್ನಪ್ಪ ಪಾರ್ಕಿನ ಪಕ್ಕದ ಕೊಳಾಯಿಗೆ ಹೋದಳು. ಬಹಳ ಹೊತ್ತಾದರೂ ಬರಲಿಲ್ಲ. ಆ ದಿನ ಕೊಳಾಯಿ ಹತ್ತಿರ ನೀರಿಗೆ ಬಂದ ಜನ ಬಹಳ ಇದ್ದರು. ಜಗಳ, ಗಲಾಟೆ ನಡೆಯಿತು. ಸುಮಾರು ೧ ಗಂಟೆ ಕಾದ ಮೇಲೆ ನನ್ನ ಹೆಂಡತಿಗೆ ನೀರು ಸಿಕ್ಕಿತು.

ಆಕೆ ಬಸಿರಿ, ದೊಡ್ಡ ಕೊಡ, ಹೊರಲಾರದೆ ಹೊತ್ತುಕೊಂಡು ಬಂದಳು. ಅಲ್ಲಿ ನಡೆದ ಜಗಳ, ಅವರಿವರಿಂದ ಬೈಗುಳಗಳು, ಮೈಗೆ ಸ್ವಸ್ಥವೂ ಇರಲಿಲ್ಲ. ಎಲ್ಲ ಸೇರಿ ಕಣ್ಣೀರಿಡುತ್ತ ಮನೆಗೆ ಬಂದಳು.

ಆಕೆಯ ಹಿಂದೆಯೇ ಒಬ್ಬ ಸರಕಾರದ ಜವಾನ ಬಂದ; ಬಂದವನು, 'ಈ ಮನೆ ಯಾರದು?' ಎಂದು ಕೇಳಿದ. ನಾನು 'ಏಕೆ' ಎಂದೆ. ಆತ ಹೇಳಿದ: 'ದಿವಾನ್ ಸಾಹೇಬರ ಸವಾರಿ ಸೈಂಟ್ ಮಾರ್ಥಾ ಆಸ್ಪತ್ರೆ ಹತ್ತಿರ ನಿಂತಿದೆ. ಈ ಹೆಂಗಸಿನ ಜೊತೆಯಲ್ಲಿ ಹೋಗಿ ಮನೆ ತಿಳಿದುಕೊಂಡು ಬರುವಂತೆ ಸಾಹೇಬರು ಹೇಳಿದ್ದಾರೆ, ಅದಕ್ಕೆ ಬಂದಿದ್ದೇನೆ' ಎಂದ.

ಅದನ್ನು ಕೇಳಿ ನನಗೆ ಗಾಬರಿಯಾಯಿತು. ಏನು ಸಮಾಚಾರವೋ ಎಂದು ಆ ಜವಾನನ ಜೊತೆಯಲ್ಲಿ ದಿವಾನರ ಸವಾರಿಯಿದ್ದ ಕಡೆಗೆ ಹೋದೆ. ನಾನು ಹೋಗಿ ಕೈ ಮುಗಿಯುತ್ತಲೇ ಸಾಹೇಬರು, 'ನೀನು ಯಾರು?' ಎಂದು ಮುಂತಾಗಿ ವಿಚಾರಿಸಿದರು. ನಾನು ಇದ್ದ ಸಂಗತಿ ತಿಳಿಸಿದೆ. ಅವರು 'ನಿಮ್ಮ ಮನೆಯಲ್ಲಿ ಕೊಳಾಯಿ ಇಲ್ಲವೋ?' ಎಂದು ಪ್ರಶ್ನಿಸಿದರು. ನಾನು, 'ಇಲ್ಲ ಸ್ವಾಮಿ, ಅಷ್ಟಕ್ಕೆ ಅನುಕೂಲವಿಲ್ಲ. ಬೀದಿ ಕೊಳಾಯಿಯಿಂದಲೇ ನೀರು ತಂದುಕೊಳ್ಳುತ್ತೇವೆ' ಎಂದೆ. ಸಾಹೇಬರು, 'ಬೀದಿ ಕೊಳಾಯಿಗೂ ನಿಮ್ಮ ಮನೆಗೂ ಎಷ್ಟು ದೂರ'? ಎಂದು ಕೇಳಿದರು. ನಾನು, 'ಅರ್ಧ ಮೈಲಿ ಆಗಬಹುದು, ಸ್ವಾಮಿ; ನನ್ನ ಮನೆ ಇರುವುದು ಹಿಂದುಗಡೆ ಸಂದಿಯಲ್ಲಿ; ಸಂದಿಗೊಂದಿ ಸುತ್ತಿಕೊಂಡು ಹೋಗಬೇಕು" ಎಂದು ಅರಿಕೆ ಮಾಡಿದೆ.

ಆಗ ದಿವಾನ್ ಸಾಹೇಬರು ತಮ್ಮ ಜೊತೆಯಲ್ಲಿದ್ದ ಇಂಜಿನಿಯರ್ ಸಾಹೇಬರನ್ನು ಕುರಿತು, 'ಈತನ ಮನೆಯ ಹತ್ತಿರ ಎಲ್ಲಾದರೂ ಒಂದು ಕೊಳಾಯಿ ಹಾಕಿಸಿ ಕೊಡಲಾದೀತೇ?' ಎಂದು ಕೇಳಿದರು. ಇಂಜಿನಿಯರ್ ಸಾಹೇಬರು 'ಪ್ಲಾನ್ ಬರೆಸಿ ಒಪ್ಪಿಸುತ್ತೇನೆ. ಅದನ್ನು ಮಂಜೂರುಮಾಡಿದರೆ ಕೆಲಸ ಮಾಡಿಸುತ್ತೇನೆ' ಎಂದು ಹೇಳಿದರು. ಆಗ ದಿವಾನರು, 'ಈಗಲೇ, ಇಲ್ಲೇ ಮಂಜೂರು ಮಾಡಿದ್ದೇನೆ. ಕೆಲಸ ಆರಂಭಮಾಡಿಸಿ. ನಾಳೆ ಬೆಳಗ್ಗೆ ಅವರ ಮನೆಗೆ ನೀರು ಈ ಹೊಸಕೊಳಾಯಿಯಿಂದ ಬರಬೇಕು. ಜನರ ದಟ್ಟಣೆಯಿರುವ ಈ ಪ್ರದೇಶದಲ್ಲಿ ಒಂದೋ ಎರಡೋ ಕೊಳಾಯಿಗಳನ್ನಿಟ್ಟರೆ ಉಪಯೋಗವಿಲ್ಲ. ಒಂದೊಂದು ಸಣ್ಣ ಪ್ರದೇಶಕ್ಕೂ ಮಧ್ಯೆ ಅನುಕೂಲವಾದ ಕಡೆಗಳಲ್ಲಿ ಕೊಳಾಯಿಗಳಿರಬೇಕು. ನಾಳೆ ನಾನು ಇಲ್ಲಿಗೆ ಬರುವ ವೇಳೆಗೆ ಇವರಿಗೆ ನೀವು ಕೊಳಾಯಿ ಕೊಟ್ಟು ಉಪಕಾರ ಮಾಡಬೇಕು' ಎಂದರು.

ಸ್ವಾಮಿ, ಅದರಂತೆ ಕೆಲಸ ನಡೆಯಿತು. ಎರಡು ದಿವಸಗಳೊಳಗೆ ಕೊಳಾಯಿ ಬಂತು. ಈಗ ಆ ನೀರು ಕುಡಿಯುತ್ತಿದ್ದೇವೆ. ನೂರಾರು ಮಂದಿ ಹೆಂಗಸರು ನೀರಿಗೆ ಜಗಳ ಆಡುತ್ತಿದ್ದುದನ್ನೂ ಬಸಿರಿ ಹೆಂಗಸು ಒಬ್ಬಳು ಕಷ್ಟ ಪಡುತ್ತಿದ್ದುದ್ದನ್ನೂ ನೋಡಿ ಕನಿಕರ ಪಟ್ಟವರು, ಆ ಧಣಿ. ನಮ್ಮನ್ನು ಹಾಗೆ ನೋಡಿಕೊಳ್ಳುವವರು ಇನ್ನು ಬೇರೆ ಯಾರಿದ್ದಾರೆ?"

ಹೀಗೆ ಹೇಳುತ್ತ ಆತ ಗೋಳಾಡಿದ.

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ. ೪, ಕಾವ್ಯಾಲಯ, ಮೈಸೂರು, ೧೯೭೧, ಪು.೨೩೩-೩೫

೩೧. 'ಈತ ಸ್ಮಾರ್ತನೋ, ವೈಷ್ಣವನೋ'?

ಕನ್ನಡ ಪ್ರಾಧ್ಯಾಪಕ ಟಿ. ಎಸ್. ವೆಂಕಣ್ಣಯ್ಯನವರ ಮನೆಯಲ್ಲಿ, ಅವರ ದೂರದ ನೆಂಟರೊಬ್ಬರು ಸಪತ್ನಿಕರಾಗಿ ತಂಗಿದ್ದರು. ವಯಸ್ಸು ವರಸೆಯಲ್ಲಿ ಅವರು ಮನೆಯ ಎಲ್ಲರಿಗೂ ಹಿರಿಯರು. ತುಂಬ ಸಂಪ್ರದಾಯಸ್ಥರಾದ ಕಾರಣ, ಮಡಿ-ಮೈಲಿಗೆ ಎಂದೂ ಆಚಾರ-ಅನಾಚಾರ ಎಂದೂ ಆಗಾಗ ಹಾರಾಡುತ್ತಿದ್ದರು. ವೆಂಕಣ್ಣಯ್ಯನವರು "ಪಾಪ, ಸಂಪ್ರದಾಯಸ್ಥರು; ಮಡಿವಂತಿಕೆ ಹೆಚ್ಚು. ಈ ವಯಸ್ಸಿನಲ್ಲಿ ಅವರು ಬದಲಾಯಿಸುವುದು ಸಾಧ್ಯವೇ?" ಎಂದು ಅವರ ಬಗ್ಗೆ ಅನುಕಂಪ ತೋರಿಸುತ್ತಿದ್ದರು. ಉಳಿದವರಿಗೆ ಆ ಹಿರಿಯರ ವರ್ತನೆ ಸಹನೆಯಾಗುತ್ತಿರಲಿಲ್ಲ.

ಒಂದು ದಿನ ಈ ಹಿರಿಯರು ಸ್ನಾನ ಸಂಧ್ಯಾದಿಗಳು ಮುಗಿದ ಮೇಲೆ ವೆಂಕಣ್ಣಯ್ಯನವರ ಮೇಜಿನ ಮೇಲಿದ್ದ ಒಂದು ಪುಸ್ತಕ ತೆಗೆದುಕೊಂಡು ಓದತೊಡಗಿದರು. ಅದು ಕೆ. ವಿ. ಪುಟ್ಟಪ್ಪ (ಕುವೆಂಪು) ನವರ ಯಾವುದೋ ಒಂದು ಪುಸ್ತಕ. ಪುಸ್ತಕವನ್ನು ಓದುತ್ತ ವೆಂಕಣ್ಣಯ್ಯನವರ ತಮ್ಮಂದಿರು ತ.ಸು. ಶಾಮರಾಯನವರತ್ತ ತಿರುಗಿ, "ಈತ ಯಾರೋ, ಈ ಪುಟ್ಟಪ್ಪ ಎನ್ನುವವನು; ಈತ ಸ್ಮಾರ್ತನೋ, ವೈಷ್ಣವನೋ?" ಎಂದು ಪ್ರಶ್ನಿಸಿದರು. ಆಗ ಶಾಮರಾಯರು, "ಇವರು ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು, ದೊಡ್ಡ ಕವಿ, ನಮ್ಮ ಮೇಷ್ಟ್ರು; ಸ್ಮಾರ್ತರೂ ಅಲ್ಲ, ವೈಷ್ಣವರೂ ಅಲ್ಲ, ಒಕ್ಕಲಿಗರು" ಎಂದರು. ಆ ಹಿರಿಯರಿಗೆ ರೇಗಿತು. "ನಿನ್ನ ತಲೆ, ನಿನಗೇನು ಗೊತ್ತು? ಶಂಕರರ ಅದ್ವೈತವನ್ನು ಈತ ಓದಿರಬೇಕು. ಹೀಗೆ ಬರೆದಿರಬೇಕಾದರೆ ಈತ ಸ್ಮಾರ್ತಬ್ರಾಹ್ಮಣನೇ ಇರುತ್ತಾನೆ" ಎಂದರು. ಮತ್ತೆ ಶಾಮರಾಯರು, "ಅವರು ಪ್ರಾಚ್ಯ ಪಾಶ್ಚಾತ್ಯ ವೇದಾಂತವೆಲ್ಲ ಓದಿಕೊಂಡಿದ್ದಾರೆ. ರಾಮಕೃಷ್ಣಾಶ್ರಮದಲ್ಲಿ ವಾಸ. ಅವರ ವಿಚಾರ ನನಗೆ ಗೊತ್ತು. ಅವರು ಬ್ರಾಹ್ಮಣರಲ್ಲ, ಒಕ್ಕಲಿಗರು" ಎಂದು ಒತ್ತಿ ಹೇಳಿದರು. ಆ ಹಿರಿಯರು ಈಗ ತಾಳ್ಮೆಗೆಟ್ಟು "ಏತಿಯೆಂದರೆ ಪ್ರೇತಿ ಎನ್ನುವುದು ಈ ಕಾಲದ ಹುಡುಗರ ಲಕ್ಷಣ" ಎಂದು ಮುಂತಾಗಿ ಅರಚಿದರು.

ಎಲ್ಲರೂ ಊಟಕ್ಕೆ ಕುಳಿತಾಗ, ಶಾಮರಾಯರು ವೆಂಕಣ್ಣಯ್ಯನವರ ಮುಂದೆ ಈ ಸುದ್ದಿ ತೆಗೆದರು; ನಡೆದ ವಾಗ್ವಾದವನ್ನು ಸೂಕ್ಷ್ಮವಾಗಿ ತಿಳಿಸಿದರು; "ಪುಟ್ಟಪ್ಪನವರು ಒಕ್ಕಲಿಗರಲ್ಲವಂತೆ, ಅವರನ್ನು ದೊಡ್ಡಪ್ಪ ಬ್ರಾಹ್ಮಣ ಎನ್ನುತ್ತಾರೆ" ಎಂದರು. ತಮ್ಮ ಮಾತಿಗೆ ಅಣ್ಣ ಸಹಮತಿಸುತ್ತಾರೆ, ಹಿರಿಯರಿಗೆ ಮುಖಭಂಗವಾಗುತ್ತದೆ ಎನ್ನುವುದು ಶಾಮರಾಯರ ಎಣಿಕೆ. ವೆಂಕಣ್ಣಯ್ಯನವರು ನಸುನಕ್ಕು, "ದೊಡ್ಡಪ್ಪನ ಮಾತು ನಿಜ. ಪುಟ್ಟಪ್ಪ ಬ್ರಾಹ್ಮಣ, ಹದಿನಾರಾಣೆ ಬ್ರಾಹ್ಮಣ, ಬ್ರಾಹ್ಮಣರಲ್ಲಿ ಬ್ರಾಹ್ಮಣ" ಎಂದರು. ಮಡಿವಂತ ಹಿರಿಯರು ಗೆದ್ದ ಹುಂಜದಂತೆ ಗಹಗಹಿಸಿದರು. ಶಾಮರಾಯರಿಗೆ ಮುಖಭಂಗವಾದಂತೆ ಆಯಿತು. ಅರ್ಧದಲ್ಲೇ ಊಟ ಬಿಟ್ಟು ಎದ್ದುಹೋದರು.

ಶಾಮರಾಯರು ಸಂಜೆ ವೆಂಕಣ್ಣಯ್ಯನವರನ್ನು ಏಕಾಂತದಲ್ಲಿ ಸಂಧಿಸಿದರು. "ಇದೇಕೆ ಹೀಗೆ ಸತ್ಯಕ್ಕೆ ಅಪಚಾರ ಮಾಡಿದಿರಿ?" ಎಂದು ಕೇಳಿದರು. ಅದಕ್ಕೆ ವೆಂಕಣ್ಣಯ್ಯನವರು

ಹೇಳಿದರು: "ಸತ್ಯಕ್ಕೆ ಎಲ್ಲಿ ಅಪಚಾರವಯ್ಯ? ಪುಟ್ಟಪ್ಪನನ್ನು ಬ್ರಾಹ್ಮಣನೆಂದು ಕರೆದರೆ ಸತ್ಯಕ್ಕೆ ಅಪಚಾರವೇ? ಬ್ರಾಹ್ಮಣನೆಂದರೆ ಏನೆಂದುಕೊಂಡಿದ್ದೀಯೆ? ಗೀತೆಯಲ್ಲಿ ಶ್ರೀಕೃಷ್ಣ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ' ಎಂದಿದ್ದಾನೆ. ವರ್ಣ ಭೇದವಿರುವುದು ಹುಟ್ಟಿನಲ್ಲಿ ಅಲ್ಲ, ಗುಣ ಕರ್ಮಗಳಲ್ಲಿ. ಬ್ರಾಹ್ಮಣನ ಗುಣ ಕರ್ಮಗಳು ಯಾವುವೆಂದು ಹೇಳಿವೆಯೋ ಅವು ಪುಟ್ಟಪ್ಪನಲ್ಲಿವೆ. ಆದ್ದರಿಂದ ಆತ ಬ್ರಾಹ್ಮಣ. "ಚತುಸ್ಸಾಗರ ಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು" ಎಂದು ಶಾಂತಿಮಂತ್ರ ಕೇಳಿಲ್ಲವೇ? ಹುಟ್ಟಿನಿಂದ ಬ್ರಾಹ್ಮಣ್ಯವನ್ನು ನಿರ್ಧರಿಸುವಂತಿದ್ದರೆ ಆ ಮಂತ್ರದ ಗತಿಯೇನು? ಇಂಗ್ಲೆಂಡು, ಅಮೇರಿಕಾಗಳಲ್ಲಿ ಕೂಡ ಬ್ರಾಹ್ಮಣರಿದ್ದಾರಯ್ಯ. ವಾಲ್ಮೀಕಿ ವ್ಯಾಸರನ್ನು ನಾವು ಬ್ರಾಹ್ಮಣರೆಂದು ಪೂಜಿಸುತ್ತಿಲ್ಲವೇ? ಅವರು ಹುಟ್ಟಿನಿಂದ ಬ್ರಾಹ್ಮಣರೇನು?"

ಸರಿಯೆ, ಮನೆಯಲ್ಲಿ ತಂಗಿದ್ದ ಹಿರಿಯರು ಇದೇ ಅರ್ಥದಲ್ಲಿ ಪುಟ್ಟಪ್ಪನವರನ್ನು ಬ್ರಾಹ್ಮಣರೆಂದು ಕರೆದಿದ್ದರೇ ಎಂಬ ಸಂದೇಹ ಶಾಮರಾಯರನ್ನು ಬಾಧಿಸಿತು. ಅದಕ್ಕೆ ವೆಂಕಣ್ಣಯ್ಯನವರು, ಆ ಹಿರಿಯರ ಮನೆಯಲ್ಲಿ ನಾಲ್ಕು ದಿನ ತಾವು ತಂಗಬೇಕಾಗಿ ಬಂದಾಗ, ಒಂದು ವೈದಿಕದ ದಿನ ಸಂಸ್ಕೃತದಲ್ಲಿಯೋ ತೆಲುಗಿನಲ್ಲಿಯೋ ತಾವು ಮಾತಾಡದೆ ಕನ್ನಡದಲ್ಲಿ ಮಾತಾಡಿದ್ದಕ್ಕೆ ತಮ್ಮ ಮೇಲೆ ಉದ್ಧರಣೆ ಬೀಸಿ ಎಸೆದರೆಂದೂ ಇಂಥವರನ್ನು ಅವರ ಇಳಿವಯಸ್ಸಿನಲ್ಲಿ ಸರಿಮಾಡುವುದು ಸಾಧ್ಯವಾಗದೆಂದೂ ಸ್ಪಷ್ಟಪಡಿಸಿದರು.

ಪ್ರಧಾನ ಸಂಪಾದಕರು: ಕುವೆಂಪು, 'ಸವಿನೆನಪು' (ದಿವಂಗತ ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕಗ್ರಂಥ), ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೦, ಪು.೨೮೦-೮೧

೩೨. 'ಈ ದಿನವೇ, ಈ ಕ್ಷಣವೇ ಸಲ್ಲಿಸಿಬಿಡು'

ಭಾರತ ರಾಜಕೀಯದಲ್ಲಿ ಮಹಾದೇವ ಗೋವಿಂದ ರ‍್ಯಾನಡೆ, ಗೋಪಾಲ ಕೃಷ್ಣ ಗೋಖಲೆ ಮೊದಲಾದ ಗಣ್ಯರಿಂದ ಪ್ರವರ್ತಿತವಾದ ಲಿಬರಲ್ ಪಂಥದ ಒಂದು ಲಕ್ಷಣವೆಂದರೆ, ಎಲ್ಲ ಜನರೂ ಪ್ರಾಮಾಣಿಕರೆಂಬ ವಿಶ್ವಾಸ. ಈ ಪಂಥದ ಪ್ರತಿನಿಧಿಗಳಲ್ಲಿ ಒಬ್ಬರು, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಪಿ. ಕೋದಂಡರಾವ್ ಎಂಬ ಮಹನೀಯರು. 'ಜನ ಸುಳ್ಳು ಹೇಳುತ್ತಾರೆಯೇ?' ಎಂದು ಆಶ್ಚರ್ಯ ಪಡುತ್ತಿದ್ದವರು ಅವರು. ಅವರೊಬ್ಬ ದೊಡ್ಡಮನುಷ್ಯರು; ನೈಜ ದೇಶಭಕ್ತಿ, ಸೌಜನ್ಯ ಅವರಿಗೆ ಹುಟ್ಟಿನಿಂದಲೇ ಬಂದಿದ್ದುವು. ತುಂಬ ಪ್ರಾಮಾಣಿಕರು.

ಕೋದಂಡರಾಯರು ಒಂದು ದಿನ ಬೆಳಗ್ಗೆ ಗಾಂಧೀಬಜಾರಿನ (ಬೆಂಗಳೂರಿನ

ಒಂದು ಬಡಾವಣೆ) ಸಮೀಪದಲ್ಲಿ ಅವರ ತರುಣಮಿತ್ರರಾದ ಎಸ್. ಆರ್. ರಾಮಸ್ವಾಮಿ (ಉತ್ಥಾನ ಮಾಸಪತ್ರಿಕೆಯ ಗೌರವ ಪ್ರಧಾನಸಂಪಾದಕರು) ಅವರಿಗೆ ಎದುರಾಗಿ ಸಿಕ್ಕಿದರು. ಅವರ ನಡುವೆ ಹೀಗೆ ಸಂಭಾಷಣೆ ನಡೆಯಿತು:

ರಾಮಸ್ವಾಮಿ: ಸರ್, ಎಲ್ಲಿಗೆ ಹೊರಟಿರಿ?

ರಾಯರು: (ಬೆಳಗ್ಗೆ ತಾನೆ ಬಂದಿದ್ದ ಬಿಲ್ ತೆಗೆದು ತೋರಿಸಿ) ನೀರಿನ ಬಿಲ್ ಕಟ್ಟುವುದಕ್ಕೆ.

ರಾಮಸ್ವಾಮಿ: ಇದಕ್ಕೆ ಏನು ಅವಸರವಾಗಿತ್ತು? ಬಿಲ್ ಈಗ ತಾನೆ ಬಂದಿದೆ. ಇಷ್ಟಾಗಿ ಮೀಟರುಗಳು ಸರಿಯಾಗಿಲ್ಲ ಎಂದು ಕೋಲಾಹಲ ನಡೆಯುತ್ತಿದೆ. ಅದು ಇತ್ಯರ್ಥ ಆಗುವ ವರೆಗೆ ಹಣ ಕಟ್ಟುವುದಿಲ್ಲ ಎಂದು ಜನ ಹಟ ಹಿಡಿದಿದ್ದಾರೆ. ನಿಮಗೆ ಯಾಕೆ ಇಷ್ಟು ಆತುರ?

ರಾಯರು: (ಗಾಬರಿಪಟ್ಟು) ಏನಪ್ಪ, ನೀನು ಹೇಳುವ ಮಾತು? ಕಾನೂನನ್ನು ಗೌರವಿಸಬೇಕೆಂಬ ಗೋಖಲೆಯವರ ಬೋಧನೆಯನ್ನು ಜನರಲ್ಲಿ ಪ್ರಚಾರಮಾಡುತ್ತ ನನ್ನ ಆಯುಸ್ಸನ್ನೆಲ್ಲ ಸವೆಸಿದ್ದಾಯಿತು. ಈಗ ನಾನೇ ಆ ಉಪದೇಶಕ್ಕೆ ವಿರುದ್ಧವಾಗಿ ನಡೆಯಬೇಕೆನ್ನುತ್ತೀಯೇನು? ಸರ್ಕಾರ ವಿಧಿಸಿರುವ ತೆರಿಗೆ ಕೊಡುವುದು ಮೊದಲ ಕರ್ತವ್ಯ. ಅದು ನ್ಯಾಯವೆ, ಅಲ್ಲವೆ ಎಂಬುದರ ವಿಚಾರ ಆಮೇಲೆ. ನನ್ನ ಗುರುಗಳಾದ ಶ್ರೀನಿವಾಸ ಶಾಸ್ತ್ರಿಗಳು (ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು) ನನಗೆ ಕಲಿಸಿದ ಒಂದು ಪಾಠ ಇದು: "ಯಾರಿಗಾದರೂ ನಿನ್ನಿಂದ ಹಣ ಸಲ್ಲಬೇಕಾಗಿದ್ದಲ್ಲಿ ಅದನ್ನು ಸಾಧ್ಯವಿದ್ದರೆ ಈ ದಿನವೇ, ಈ ಕ್ಷಣವೇ ಸಲ್ಲಿಸಿಬಿಡು. Tomorrow you may not be alive to pay it. (ನಾಳೆ ನೀನು ಬದುಕಿರುತ್ತೀಯೋ ಇಲ್ಲವೋ ನೀನೇನು ಬಲ್ಲೆ; ಬೇರೆಯವರಿಗೆ ಕೊಡಬೇಕಾದುದನ್ನು ಕೊಟ್ಟುಬಿಡು, ಋಣಿಯಾಗಿ ಸಾಯಬೇಡ)'.

ಎಸ್. ಆರ್. ರಾಮಸ್ವಾಮಿ, 'ದೀವಿಟಿಗೆಗಳು' ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು, ೧೯೯೮, ಪು. ೨೩೪-೩೫

೩೩. 'ಈ ನಾಲಿಗೆ ಒಂದು ಸುಳ್ಳು ಹೇಳಬೇಕೆ?'

ನಾಟಕಶಿರೋಮಣಿ ಎ. ವಿ. ವರದಾಚಾರ್ಯರು ಒಬ್ಬ ಅಸಾಧಾರಣವ್ಯಕ್ತಿ, ತಮ್ಮ ಕಾಲಕ್ಕೇ ಐತಿಹ್ಯವಾಗಿ ಪ್ರಸಿದ್ಧಿಗಳಿಸಿದ ಮಹಾನ್ ಕಲಾವಿದರು. ಅವರು ಅಭಿನಯಿಸಿದ ನಾಟಕಗಳು, ಆ ನಾಟಕಗಳಲ್ಲಿ ಅವರು ಹಾಡುತ್ತಿದ್ದ ಹಾಡುಗಳು ಅದ್ಭುತ ಪರಿಣಾಮವನ್ನು

ಅಂದಿನ ರಸಿಕರ ಮೇಲೆ ಬೀರಿದುವು. ಅವರ ಘನವ್ಯಕ್ತಿತ್ವವೂ ಔದಾರ್ಯದ ಹಿರಿಮೆಯೂ ಪ್ರಸಿದ್ಧವಾದವು. ಅವರ ಬಳಿ ಬೇಡುವುದಕ್ಕೆ ಹೋಗಿ ಬರಿಗೈಯಲ್ಲಿ ಯಾರೂ ಹಿಂದಿರುಗುತ್ತಿರಲಿಲ್ಲ. ನೂರಾರು ಮಂದಿ ದೀನ ದರಿದ್ರರಿಗೆ ಅವರು ಅನ್ನ ವಸ್ತ್ರಗಳನ್ನು, ಉದ್ಯೋಗವನ್ನು ಕಲ್ಪಿಸಿಕೊಟ್ಟರು. ಯಾಚನೆ ಮಾಡಬಂದವರಿಗೆ ಆ ಗಳಿಗೆಗೆ ತಮ್ಮ ಕೈಯಲ್ಲಿ ಏನಿದ್ದರೆ ಅದನ್ನು ಕೊಟ್ಟು 'ಕೃಷ್ಣಾರ್ಪಣ' ಎಂದು ಕೈಮುಗಿಯುತ್ತಿದ್ದರು. ಅವರು ಎಂಥ ಸತ್ಯವಂತರು ಎಂಬುದನ್ನು ಈ ಪ್ರಕರಣ ಹೇಳುತ್ತದೆ:

ವರದಾಚಾರ್ಯರು ಒಂದು ಸಲ ಒಬ್ಬ ಸಾಹುಕಾರರ ಹತ್ತಿರ ಹಣ ಸಾಲ ತೆಗೆದುಕೊಂಡಿದ್ದರು. ಅಸಲು ಬಡ್ಡಿ ಸೇರಿ ಕೊಡಬೇಕಾದ್ದು ಸು. ೩೦ ಸಾವಿರ ಆಗಿತ್ತು. ಆ ಸಾಹುಕಾರ ಇನ್ನು ಹೆಚ್ಚು ಕಾಲ ಕಾಯಲು ಸಿದ್ಧನಿರಲಿಲ್ಲ. ಮೊಕದ್ದಮೆ ಹೂಡಿದ. ಕೋರ್ಟ್ ಆರ್ಡರಿನಂತೆ ಜಪ್ತಿ ಕ್ರಮ ಖಂಡಿತ ಎಂಬ ಘಟ್ಟಕ್ಕೆ ವಿಷಯ ಬಂತು.

ಈಗ ವರದಾಚಾರ್ಯರ ಗೆಳೆಯರೊಬ್ಬರು, ಈ ಪ್ರಕರಣವನ್ನು ಖುದ್ದಾಗಿ ಡಿ.ವಿ.ಜಿ. ಅವರಿಗೆ ನಿರೂಪಿಸಿದ ವಕೀಲರನ್ನು ಸಂಪರ್ಕಿಸಿದರು. ಇವರು ಪರಮಪ್ರಾಮಾಣಿಕರಾದ ವಕೀಲರು, ತಮ್ಮ ಕಸಬಿನಲ್ಲಿ ಹೆಸರು ಮಾಡಿದ್ದವರು. ಅವರು ಕೇಸಿನ ಕಾಗದದ ಕಟ್ಟುಗಳನ್ನೆಲ್ಲಾ ಪರೀಕ್ಷೆಮಾಡಿ ನೋಡಿದರು. ಬಳಿಕ ತಮ್ಮ ಅಭಿಪ್ರಾಯವನ್ನು ಹೀಗೆ ಆ ಮಿತ್ರರಿಗೆ ತಿಳಿಸಿದರು.

"ಮೊಕದ್ದಮೆಯೇನೋ ಬಲವಾಗಿದೆ. ಆದರೆ ಒಂದು ದಸ್ತಾವೇಜು ಇದರಲ್ಲಿ ಕಾಣಿಸುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಸಂಗತಿಯನ್ನು ರುಜುವಾತುಮಾಡಲು ಎದುರು ಕಕ್ಷಿಗೆ ಯಾವ ಆಧಾರವೂ ಇಲ್ಲ. ಆ ವಿಚಾರ ಕುರಿತು ಜಡ್ಜಿಯೋ ಎದುರುಕಕ್ಷಿಯ ವಕೀಲರೋ ಪ್ರಶ್ನೆಮಾಡಿದರೆ, ಆಗ ವರದಾಚಾರ್ಯರು 'ಅದು ತಮಗೆ ಜ್ಞಾಪಕವಿಲ್ಲ' ಎಂದು ಹೇಳಬೇಕು; ಹಾಗೆ ಹೇಳಿದರೆ ಕೇಸು ನಿಲ್ಲಲಾರದು. ನಿಮ್ಮ ಸ್ನೇಹಿತರು ಹಾಗೆ ಹೇಳಿಯಾರೋ?"

ವರದಾಚಾರ್ಯರ ಮಿತ್ರರು ಈ ಸಲಹೆಯನ್ನು ವರದಾಚಾರ್ಯರಿಗೆ ತಿಳಿಸಿ, ಸಾಲದ ಕ್ಲೇಶದಿಂದ ಅವರನ್ನು ಪಾರುಮಾಡಲು ನೋಡಿದರು. ಆಚಾರ್ಯರು ತಮಗೆ ಸಹಜವಾಗಿದ್ದ ಅಟ್ಟಹಾಸದ ನಗೆಯನ್ನು ನಕ್ಕು, ತಮ್ಮ ಆ ಮಿತ್ರರಿಗೆ ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದರು:

"೩೦ ಸಾವಿರ ರೂಪಾಯಿಗೋಸ್ಕರ ಈ ನಾಲಿಗೆ ಒಂದು ಸುಳ್ಳು ಹೇಳಬೇಕೆ? ಭಗವಂತ ಈ ಕೈಗೆ ಅಂಥ ೩೦ ಸಾವಿರ ರೂಪಾಯಿಗಳನ್ನು ಎಷ್ಟು ಸಲ ಅನುಗ್ರಹಿಸಿದ್ದಾನೆ! ಇನ್ನೂ ಅನುಗ್ರಹ ಮಾಡಲಾರನೇ? ಇರಲಿ. ಸಾಹುಕಾರ ಏನು ತಾನೆ ಮಾಡುತ್ತಾನೆ? ನನ್ನ ಹಳೆಯ ಪರದೆಗಳನ್ನೂ ಹಳೆಯ ಬೊಂತೆಗಳನ್ನೂ ಕಿತ್ತುಕೊಂಡು ಹೋದಾನು. ಹೋಗಲಿ. ಬೇರೆ ಕಡೆ ಹಣ ತೆಗೆದು ಹೊಸ ಪರದೆ ಬರೆಸಿ, ಹೊಸ ಡ್ರೆಸ್ ಹಾಕಿ ನಾಟಕ ಆಡೋಣ. ಆಗ ಆ ಸಾಲ ಈ ಸಾಲ ಎರಡನ್ನೂ ತೀರಿಸೋಣ. ಸುಳ್ಳು ಹೇಳಿ ಋಣದಿಂದ ತಪ್ಪಿಸಿಕೊಳ್ಳುವುದು ನನ್ನಿಂದ ಆಗುವ ಕೆಲಸವಲ್ಲ".

ಇದು ಆಚಾರ್ಯರಲ್ಲಿದ್ದ ಸತ್ತ್ವ; ಅವರ ಜೀವನದ ಮೇಲ್ಮೆಯ ಅಂತರಂಗ. ಅವರ ನಾಟಕ ಕಳೆಕಟ್ಟಿದ್ದು ಇಂತಹ ಋಜುತೆಯಿಂದ.

ಡಿ.ವಿ.ಜಿ., 'ಕಲೋಪಾಸಕರು', ಜ್ಞಾಪಕ ಚಿತ್ರಶಾಲೆ, ಕಾವ್ಯಾಲಯ, ಮೈಸೂರು, ೧೯೭೦, ಪು. ೧೫೨-೫೪.

೩೪. 'ಈ ವಿಷಯದಲ್ಲಿ ಪುರಾಣ ಏನೂ ಹೇಳತಕ್ಕದ್ದಿಲ್ಲವೋ'

ಎಂ. ವಿಶ್ವೇಶ್ವರಯ್ಯನವರು ದಿವಾನರಾಗುವ ಮೊದಲು ಕೆಲವು ದಿನಗಳ ಹಿಂದೆ ಬೆಂಗಳೂರು ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನದಲ್ಲಿ ಒಂದು ಪ್ರಸಂಗ ನಡೆಯಿತು. ಆ ದೇವಸ್ಥಾನದ ಮುಖ್ಯ ಧರ್ಮಕರ್ತರು ವಿಶ್ವೇಶ್ವರಯ್ಯನವರ ಸೋದರ ಮಾವಂದಿರಾದ ಎಚ್. ರಾಮಯ್ಯನವರು. ಆ ದಿನದ ಏರ್ಪಾಡೆಲ್ಲ ಅವರದೇ. ಅದರ ಪ್ರಕಾರ ಆ ದಿನ ಅಲ್ಲಿ ಒಂದು ಹರಿಕಥೆ ನಡೆಯುವುದಿತ್ತು.

ಅಧ್ಯಕ್ಷತೆಗೆ ದಿವಾನ್ ವಿ. ಪಿ. ಮಾಧವರಾಯರು ಆಹ್ವಾನಿತರಾಗಿದ್ದರು. ಆಗ ಚೀಫ್ ಇಂಜಿನಿಯರ್ ಆಗಿದ್ದ ವಿಶ್ವೇಶ್ವರಯ್ಯನವರೂ ಕಾರ್ಯಕ್ರಮಕ್ಕೆ ಬಂದಿದ್ದರು.

ಹರಿಕಥೆ ಮಾಡುವ ದಾಸರು ಪ್ರಾಸ್ತಾವಿಕವಾಗಿ ಯಾವುದೋ ಪೌರಾಣಿಕ ಕಥಾ ಪ್ರಸಂಗವನ್ನು ಉದಾಹರಿಸಿದರು. ಬಹುಶಃ ಅದು ರುಕ್ಮಾಂಗದನ ಏಕಾದಶೀವ್ರತ ಕುರಿತದ್ದು. ಮಾಧವರಾಯರು ಆ ಪ್ರಸಂಗದ ವಿಶೇಷ ವಿಶ್ವೇಶ್ವರಯ್ಯನವರಿಗೆ ತಿಳಿದಿರಲಾರದೆಂದು ಊಹಿಸಿ ಅದರ ಪೂರ್ವಾಪರ ಸಂದರ್ಭಗಳನ್ನು ಅವರಿಗೆ ವಿವರಿಸಿದರು. ವಿಶ್ವೇಶ್ವರಯ್ಯನವರು ಅದನ್ನು ತಾಳ್ಮೆಯಿಂದಲೇ ಕೇಳಿ, ಬಳಿಕ ಹೀಗೆ ಹೇಳಿದರು:

"ಅದೆಲ್ಲಾ ಸರಿ, ಅಲ್ಲಿ ಓಡಾಡಿ ಕೊಂಡಿರುವ ಮಕ್ಕಳ ಕಡೆ ನೋಡಿ. ಹರಕುಬಟ್ಟೆ, ಕೊಳಕುಮುಖ, ಕೆದರಿದ ತಲೆ, ಆರೋಗ್ಯವಿಲ್ಲದ ಮೈ; ಕೈಕಾಲು ಸಣ್ಣ, ಹೊಟ್ಟೆ ದಪ್ಪ; ಅರಚಾಟ, ಗೋಳಾಟ. ಈ ವಿಷಯದಲ್ಲಿ ಪುರಾಣ ಏನೂ ಹೇಳತಕ್ಕದ್ದಿಲ್ಲವೋ".

ಹಳೆಯ ಪುರಾಣಕಥೆಗಿಂತ ವರ್ತಮಾನದ ವಸ್ತುಸ್ಥಿತಿಯೇ ವಿಮರ್ಶೆ ಯೋಗ್ಯವೆನ್ನುವುದು ಸರ್ ಎಂ. ವಿ. ಅವರ ಇಂಗಿತ.

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ. ೪, ಕಾವ್ಯಾಲಯ, ಮೈಸೂರು, ೧೯೭೧, ಪು. ೧೧೮-೧೯

೩೫. 'ಈ ಸರಸ್ವತಿಯನ್ನು ಮಾರಿಕೊಂಡು ಬದುಕಲಿಕ್ಕೆ ಹೇಳುವಿರೇನು?'

ಪ್ರೊ. ಕೆ. ಜಿ. ಕುಂದಣಗಾರ (೧೮೯೫-೧೯೬೫) ಹಳೆಯ ಪೀಳಿಗೆಯ ಬಹುಶ್ರುತ ವಿದ್ವಾಂಸರು; ಬಹುಭಾಷಾಭಿಜ್ಞರು; ಬಹುಮುಖ ಪ್ರತಿಭಾವಂತರು. ಭಾಷೆ ಸಾಹಿತ್ಯ ಸಂಸ್ಕೃತಿ ಧರ್ಮ ಕಲೆಗಳು ಇತಿಹಾಸ ಪುರಾತತ್ತ್ವ ಮೊದಲಾದ ಕ್ಷೇತ್ರಗಳಲ್ಲಿ ಕೃಷಿ ನಡಸಿ ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ ಪ್ರಕಟಿಸಿದ ಶ್ರೀಯುತರು ೧೯೬೨ರಲ್ಲಿ ಗದುಗಿನಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು; ೧೯೪೬ರಲ್ಲಿ ಮುಂಬಯಿಯಲ್ಲಿ ನಡೆದ ಪ್ರಾಚ್ಯವಿದ್ಯಾಸಮ್ಮೇಳನದಲ್ಲಿ ದ್ರಾವಿಡವಿಭಾಗದ ಅಧ್ಯಕ್ಷರೂ ಆಗಿದ್ದರು.

ಕುಂದಣಗಾರರು ಸರಳ ಸೌಜನ್ಯಮೂರ್ತಿ. ತಮಗೆ ಕೂಡಲು ಒಳ್ಳೆಯ ಕುರ್ಚಿ ಇಲ್ಲದಿದ್ದರೂ ಪುಸ್ತಕಗಳ ರಾಶಿ ಸಾಗುವಾನಿ ಬೀರುಗಳಲ್ಲಿ ತುಂಬಿರುತ್ತಿದ್ದಿತು. ಸಾಲ ಮಾಡಿಯಾದರೂ ಪುಸ್ತಕಗಳನ್ನು ಕೊಂಡು ತರುತ್ತಿದ್ದರು. ಅವರ ಜೀವನದ ಸಂಧ್ಯೆಯಲ್ಲಿ ಅವರ ಹತ್ತಿರ ಔಷಧ ಚಿಕಿತ್ಸೆಗಳಿಗೆ ಹಣವಿರುತ್ತಿರಲಿಲ್ಲ; ಸಂಸಾರ ನಡೆಯುವುದೇ ಕಷ್ಟವಾಗಿತ್ತು. ಹಣ ತೆಗೆದುಕೊಳ್ಳುವುದಿಲ್ಲವೆಂಬ ಕಾರಣಕ್ಕಾಗಿ ಪರಿಚಿತವೈದ್ಯರಲ್ಲಿಗೆ ಅವರು ಹೋಗುತ್ತಿರಲಿಲ್ಲ. ಅವರ ಪುಸ್ತಕಗಳು ಆ ಕಾಲಕ್ಕೇ ೨೦-೨೫ ಸಾವಿರ ರೂ. ಬೆಲೆ ಬಾಳುವ ಮಟ್ಟಿಗೆ ಅಮೂಲ್ಯವಾದವು. ಅವರ ಶಿಷ್ಯರೂ ಆಪ್ತರೂ ಅವರ ಸ್ಥಿತಿಯ ಸುಧಾರಣೆಗೆ ತಮ್ಮಲ್ಲಿಯೇ ವಿಚಾರಮಾಡಿ, ಹೀಗೆ ಒಂದು ಯೋಜನೆ ಹಾಕಿದರು :

ಕುಂದಣಗಾರರು ಬದುಕಿರುವ ವರೆಗೆ ಅವರ ಪುಸ್ತಕಭಂಡಾರ ಅವರೊಂದಿಗಿರುತ್ತದೆ. ಬಳಿಕ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ವಿಭಾಗಕ್ಕೆ ಅದನ್ನು ಪಡೆಯಲು ಸಂತೋಷಿಸುತ್ತದೆ. ಮುಂಗಡವಾಗಿ ಈಗ ೨೦ ಸಾವಿರ ರೂಪಾಯಿ ಅವರಿಗೆ ವಿಶ್ವವಿದ್ಯಾನಿಲಯ ಕೊಡುತ್ತದೆ. ಅದನ್ನು ಅವರು ಸ್ವೀಕರಿಸಬೇಕು. ವ್ಯವಹಾರದ ಅನಂತರ ಉಳಿದ ಹಣವನ್ನೂ ಕೊಡಲಾಗುತ್ತದೆ.

ಈ ಯೋಜನೆಯಂತೆ ಕುಲಪತಿ ಡಾ. ಡಿ. ಸಿ. ಪಾವಟೆಯವರ ಆದೇಶದಂತೆ ಡಾ. ಆರ್. ಸಿ. ಹಿರೇಮಠ ಮುಂತಾಗಿ ನಾಲ್ವರು ಕುಂದಣಗಾರರಲ್ಲಿಗೆ ಹೋಗಿ ಅವರನ್ನು ಕಂಡರು. ಆಗ ಕುಂದಣಗಾರರಿದ್ದುದು ಬೆಳಗಾಮಿನ ಟಿಳಕವಾಡಿಯ ಒಂದು ಸಣ್ಣ ಮನೆಯಲ್ಲಿ. ಬಂದವರಿಗೆ ಒಂದು ಕಪ್ ಚಹ ಕೊಟ್ಟು ಸ್ವಾಗತಿಸಲೂ ಸಾಧ್ಯವಾಗದ ಸ್ಥಿತಿಯಲ್ಲಿದ್ದರು, ಆಗ ಕುಂದಣಗಾರರು. ಹಿರೇಮಠರು ಅಂಜುತ್ತಲೇ, ಮೆಲ್ಲಗೆ ಬಂದ ವಿಷಯ ತಿಳಿಸಿ, "ಮುಂಗಡವಾಗಿ ಕುಲಪತಿಗಳು ತಮಗೆ ಇಪ್ಪತ್ತು ಸಾವಿರ ರೂಪಾಯಿಗಳ ಚೆಕ್ಕು ಕಳಿಸಿದ್ದಾರೆ. ತಾವು ಒಪ್ಪಿಗೆ ಕೊಟ್ಟಾಗ ಉಳಿದ ಭಂಡಾರದ ಮೌಲ್ಯಮಾಪನ ಮಾಡಿ..." ಎನ್ನುತ್ತಿದ್ದಂತೆಯೇ, ಕುಂದಣಗಾರರು ಅಲ್ಲಿಗೇ ಅವರನ್ನು ತಡೆದರು.

ಈಗ ಕುಂದಣಗಾರರ ಕಣ್ಣಲ್ಲಿ ನೀರು ಧಾರೆಯಾಗಿ ಹರಿಯಿತು. ತಕ್ಷಣವೇ, "ಈ ಸರಸ್ವತಿಯನ್ನು ಮಾರಿಕೊಂಡು ಬದುಕಲಿಕ್ಕೆ ಹೇಳುವಿರೇನು? ಅದು ನನ್ನ ಕಡೆಯಿಂದ ಆಗುವಂಥದಲ್ಲ. ಈ ಚೆಕ್ಕು ಪಾವಟೇ ಸಾಹೇಬರಿಗೆ ಕೊಟ್ಟು ನನ್ನ ಕೃತಜ್ಞತೆ ತಿಳಿಸಿರಿ" ಎಂದು ಹೇಳಿ ಗದ್ಗದಿತರಾದರು. ಬಂದವರು ಅವರನ್ನು ಒಪ್ಪಿಸಲು ಮತ್ತೆ ಮತ್ತೆ ಪ್ರಯತ್ನಿಸಿದರು. ಆದರೆ ಮಧ್ಯಾಹ್ನದ ಊಟಕ್ಕೆ ಸಹ ಅನುಕೂಲವಿಲ್ಲದ ವಿಪನ್ನ ಸ್ಥಿತಿಯಲ್ಲಿದ್ದೂ ತಮ್ಮ ಪುಸ್ತಕಭಂಡಾರವನ್ನು ಹಣಕ್ಕಾಗಿ ವಿನಿಮಯಮಾಡಲು ಒಪ್ಪದ ಆತ್ಮಾಭಿಮಾನ ವಿದ್ಯಾಭಿಮಾನಗಳನ್ನು ಕುಂದಣಗಾರರು ಮೆರೆದರು.

ಸಂ. ಡಾ. ಎಂ. ಜಿ. ಬಿರಾದಾರ, 'ಪ್ರೊ. ಕೆ. ಜಿ. ಕುಂದಣಗಾರರ ಬದುಕು ಮತ್ತು ಬರಹ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೬, ಪು. ೨೫-೨೭

೩೬. 'ಉಪ್ಪಿನ ಕಾಯಿಯೊಂದಿಗೆ ಊಟದ ಶಾಸ್ತ್ರ'

ಎಂ. ಎಸ್. ಪುಟ್ಟಣ್ಣನವರು (೧೮೫೪-೧೯೩೦) ಕನ್ನಡ ಭಾಷಾ ಸಾಹಿತ್ಯಗಳ ಪುನರುಜ್ಜೀವಕರಲ್ಲಿ ಗಣ್ಯರು. ಮೈಸೂರು ಸರ್ಕಾರದಲ್ಲಿ ಅಮಲ್ದಾರ್ ವೃತ್ತಿಯಲ್ಲಿದ್ದ ಅವರು ತಮ್ಮ ಪ್ರಾಮಾಣಿಕ ಕರ್ತವ್ಯನಿಷ್ಠ ಸೇವೆಗಾಗಿ, ಶಿಸ್ತು ದಕ್ಷತೆಗಳಿಗಾಗಿ ತುಂಬ ಹೆಸರಾಗಿದ್ದರು. ಅವರ ಹೊಸಗನ್ನಡ ಸಾಹಿತ್ಯದ ಆರಂಭಕಾಲದ ಕಾದಂಬರಿಕಾರರು, ಜೀವನಚರಿತ್ರಕಾರರು ಹಾಗೂ ಇತಿಹಾಸಕಾರರು.

ಮೈಸೂರು ಸಂಸ್ಥಾನದ ಒಂದು ಊರಿನಲ್ಲಿ ಪುಟ್ಟಣ್ಣ ಅಮಲ್ದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಗ್ಗೆ ಅವರು ತಮ್ಮ ಕುಟುಂಬದೊಂದಿಗೆ ಸರ್ಕಾರದವರು ಇಲಾಖೆಯವರಿಗಾಗಿ ಕಟ್ಟಿಸಿಕೊಟ್ಟಿದ್ದ ಮನೆಯಲ್ಲಿ ವಾಸವಿದ್ದರು. ಪಕ್ಕದ ಮನೆಯೂ ಇಲಾಖೆಯವರ ಸಲುವಾಗಿ ಕಟ್ಟಿಸಿದ್ದೇ. ಅಲ್ಲಿದ್ದ ಅಧಿಕಾರಿಗಳು ವರ್ಗವಾಗಿಯೋ ಏನೋ ಮನೆ ಖಾಲಿಮಾಡಿ ಹೊರಟುಹೋಗಿದ್ದರು.

ಒಂದು ದಿನ ಅಡಿಗೆಗೆ ಬೇಕಾಗಿದ್ದ ಕರಿಬೇವು ಮನೆಯಲ್ಲಿರಲಿಲ್ಲ. ಖಾಲಿ ಮಾಡಿದ್ದ ಪಕ್ಕದ ಮನೆಯ ಹಿತ್ತಿಲ ಮರದಿಂದ ಒಂದಿಷ್ಟು ಕರಿಬೇವು ಕಿತ್ತು ತಂದರು, ಪುಟ್ಟಣ್ಣನವರ ಹೆಂಡತಿ. ಇದನ್ನು ಪುಟ್ಟಣ್ಣ ದೂರದಿಂದಲೇ ಕಂಡರು.

ಅಡಿಗೆ ಆಯಿತು. ಪುಟ್ಟಣ್ಣ ಊಟಕ್ಕೆ ಕುಳಿತರು. ಆದರೆ ಪಕ್ಕದ ಮನೆಯ ಹಿತ್ತಿಲ ಕರಿಬೇವು ಹಾಕಿದ್ದ ಸಾರು ಹಾಕಿಸಿಕೊಳ್ಳಲಿಲ್ಲ, ಮಜ್ಜಿಗೆಯನ್ನೂ ಮುಟ್ಟಲಿಲ್ಲ. ಉಪ್ಪಿನ ಕಾಯಿಯೊಂದಿಗೆ ಊಟದ ಶಾಸ್ತ್ರ ಮುಗಿಸಿದರು.

ಎಂದಿನಂತೆ ಕೋರ್ಟಿಗೆ ಹೋದರು. ಆ ಕಾಲಕ್ಕೆ ಅಮಲ್ದಾರರಿಗೆ ನ್ಯಾಯ ನಿರ್ವಹಣೆಯ ಅಧಿಕಾರವೂ ಇದ್ದಿರಬೇಕು. ತಮ್ಮ ಪತ್ನಿ ಮಾಡಿದ್ದ ತಪ್ಪಿಗೆ ಅವರಿಗೆ ಸಮನ್ಸ್ ಕಳಿಸಿದರು. ಇದ್ದ ಹಾಗೇ ಬರಬೇಕೆಂದು ಆಜ್ಞೆ. ಹೆಂಡತಿ ಗಾಬರಿಯಾಗಿ ಕೋರ್ಟಿಗೆ ಹೋದರು. ಅಲ್ಲಿ ಅವರಿಗೆ ಅವರು ಮಾಡಿದ್ದ ತಪ್ಪನ್ನು ಮನವರಿಕೆಮಾಡಿ ಆಯಿತು. ಅವರು ಒಂದು ರೂಪಾಯಿ ದಂಡ ತೆರಬೇಕು ಅಥವಾ ಸಂಜೆಯವರೆಗೆ ಕೋರ್ಟಿನಲ್ಲಿಯೇ ಇರಬೇಕು ಎಂಬುದಾಗಿ ಪುಟ್ಟಣ್ಣನವರು ತೀರ್ಪುಕೊಟ್ಟರು.

ಪುಟ್ಟಣ್ಣನವರ ಪತ್ನಿಯ ಹತ್ತಿರ ರೂಪಾಯಿ ಎಲ್ಲಿಂದ ಬರಬೇಕು? ಆಳುಗಳು ಆ ಹಣ ಕೊಟ್ಟು ಅವರನ್ನು ಬಿಡಿಸಿಕೊಂಡು ಹೋದರು. ಮನೆಗೆ ಬಂದ ಮೇಲೆ ಪುಟ್ಟಣ್ಣನವರು ಆಳುಗಳು ಕೊಟ್ಟಿದ್ದ ದಂಡದ ಹಣವನ್ನು ಅವರಿಗೆ ವಾಪಸ್ಸು ಮಾಡಿದರು.

ಎಚ್. ಎಸ್. ಸುಜಾತಾ, 'ಎಂ. ಎಸ್. ಪುಟ್ಟಣ್ಣ', ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೧, ಪು. ೨೨

೩೭. 'ಋಣ ತೀರಿಸಬೇಕಾದ್ದು ನನ್ನ ಕರ್ತವ್ಯ'

ಚ. ವಾಸುದೇವಯ್ಯನವರು ಹಳೆಯ ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಇಲಾಖೆಯಲ್ಲಿ ಮ್ಯಾನೇಜರ್ ಆಗಿದ್ದರು. ತಮ್ಮ 'ಕನ್ನಡ ಬಾಲಬೋಧೆ', 'ಆರ್ಯಕೀರ್ತಿ', 'ಭೀಷ್ಮಚರಿತೆ' ಇವುಗಳಿಂದ ಕನ್ನಡ ಭಾಷಾಸಾಹಿತ್ಯಲೋಕದಲ್ಲಿ ಹಿಂದೆ ಪ್ರಸಿದ್ಧರಾಗಿದ್ದರು. ಹಿರಿಯರಾಗಿದ್ದ ಅವರಲ್ಲಿ ಆರ್. ನರಸಿಂಹಾಚಾರ್ಯರು, ಎಂ. ವಿಶ್ವೇಶ್ವರಯ್ಯನವರು, ಎಚ್. ಜೆ. ಭಾಭಾ, ಸಿ. ಆರ್. ರೆಡ್ಡಿ, ಎಂ. ಎನ್. ಕೃಷ್ಣರಾವ್, ಡಿವಿಜಿ, ಬಿಎಂಶ್ರೀ ಮೊದಲಾದವರಿಗೆ ಪ್ರೀತಿಗೌರವಗಳಿದ್ದುವು. ಅವರು ತುಂಬ ಸಾತ್ತ್ವಿಕರು, ನಿಸ್ಪೃಹರು.

ವಾಸುದೇವಯ್ಯನವರದು ದೊಡ್ಡ ಕುಟುಂಬ. ಬಂಧುಬಳಗ ಹೆಚ್ಚು. ಎಲ್ಲ ಭಾರವನ್ನೂ ಅವರೇ ಹೊತ್ತಿದ್ದರು. ಒಂದು ಸಾರಿ ಯಾವುದೋ ಗೃಹಕೃತ್ಯಕ್ಕೆ ಒಬ್ಬ ವೈಶ್ಯ ಸಾಹುಕಾರನಿಂದ ಎರಡು ಸಾವಿರ ರೂಪಾಯಿ ಸಾಲ ತೆಗೆದುಕೊಂಡರು. ಇದಕ್ಕೆ ತಮ್ಮ ಮನೆಯನ್ನು ಆಧಾರ ಮಾಡಿಕೊಟ್ಟಿದ್ದರು. ೪-೫ ವರ್ಷ ಕಳೆದ ಮೇಲೆ ಸಾಲ ತೀರಿಸುವ ಆಲೋಚನೆ ಬಂತು. ಆಗ ಅವರು ಭಾಭಾ ಸಾಹೇಬರು ಯಾವುದೋ ಒಂದು ತಾತಾ ಕಂಪೆನಿಯಲ್ಲಿ ಅವರಿಗೆ ಕೊಡಿಸಿದ್ದ ಷೇರುಗಳನ್ನು ಮಾರಿ ಹಣ ಸಿದ್ಧಮಾಡಿಕೊಂಡು ಸಾಹುಕಾರನಲ್ಲಿಗೆ ಹೋದರು.

ಸಾಹುಕಾರನು ವಾಸುದೇವಯ್ಯನವರನ್ನು ಗೌರವದಿಂದ ಬರಮಾಡಿಕೊಂಡನು. ಅಯ್ಯನವರು ತಮ್ಮ ಆಗಮನದ ಉದ್ದೇಶ ಹೇಳಿದ ಮೇಲೆ, ಆತ 'ನಾನೇನು ತಮ್ಮನ್ನು

ಅವಸರಪಡಿಸಲಿಲ್ಲವಲ್ಲ' ಎಂಬುದಾಗಿ ಉಪಚಾರದ ಮಾತು ಹೇಳಿದ. ಅದಕ್ಕೆ ಅಯ್ಯನವರು "ಋಣ ತೀರಿಸಬೇಕಾದ್ದು ನನ್ನ ಕರ್ತವ್ಯ. ಅವಸರಪಡಿಸದೆ ಇರುವುದು ನಿಮ್ಮ ಒಳ್ಳೆಯತನ. ನೀವು ಒಳ್ಳೆಯವರೆಂದು ನಾನು ನನ್ನ ಕರ್ತವ್ಯ ಮರೆಯತಕ್ಕದ್ದಲ್ಲ. ಸರಿ, ಬಡ್ಡಿ ಎಷ್ಟಾಗಿರಬಹುದು?" ಎಂದು ಕೇಳಿದರು. ಆತ ಹೇಳಿದ ಪ್ರಕಾರ, ಬಡ್ಡಿ ಸೇರಿ ೨೮೦೦ ರೂಪಾಯಿ ಪಾವತಿಮಾಡಿದರು.

ಆ ಸಾಹುಕಾರನು ವಾಸುದೇವಯ್ಯನವರಲ್ಲಿ ತುಂಬ ಗೌರವ ಇಟ್ಟಿದ್ದವನು. ಆತ ಒಂದು ತಟ್ಟೆಯಲ್ಲಿ ತಾಂಬೂಲವನ್ನಿರಿಸಿ ಅದರಲ್ಲಿ ಬಡ್ಡಿ ೮೦೦ ರೂ. ಗಳನ್ನಿಟ್ಟು ಅದನ್ನು ಸ್ವೀಕರಿಸಬೇಕೆಂದು ಅವರನ್ನು ಪ್ರಾರ್ಥಿಸಿದನು.

ಡಿ.ವಿ.ಜಿ. 'ಸಾಹಿತ್ಯೋಪಾಸಕರು', ಜ್ಞಾಪಕ ಚಿತ್ರಶಾಲೆ-೩, ಕಾವ್ಯಾಲಯ, ಮೈಸೂರು, ೧೯೭೦, ಪು. ೭೩

೩೮. 'ಎಂಥಾ ಅನಾಯಾಸವಾದ ಮರಣ!'

ವಾಜಪೇಯಂ ಮನೆತನ ಮುಲಕನಾಡು ಬ್ರಾಹ್ಮಣಸಮುದಾಯದ ಒಂದು ಸುಸಂಸ್ಕೃತ ಶ್ರೀಮಂತಮನೆತನ. ವಾಜಪೇಯಂ ವೆಂಕಟೇಶಯ್ಯನವರು ಖ್ಯಾತ ವಾಣಿಜ್ಯೋದ್ಯಮಿಗಳು, ಸಾರ್ವಜನಿಕ ಸೇವೆಯಲ್ಲಿ ತುಂಬ ಹೆಸರಾಗಿದ್ದವರು, ಹಲವಾರು ಧರ್ಮಸಂಸ್ಥೆಗಳು, ಬ್ಯಾಂಕು ಮತ್ತು ಸೊಸೈಟಿಗಳು, ಕಾಂಗ್ರೆಸ್ ಸಂಸ್ಥೆ, ಪುರಸಭೆ, ಪ್ರಜಾ ಪ್ರತಿನಿಧಿ ಸಭೆ ಎಲ್ಲ ಕಡೆಗಳಲ್ಲಿಯೂ ಅವರ ಪ್ರವೇಶವಿತ್ತು. ಆಗಿನ ಮಹಾರಾಜರು ಅವರಿಗೆ ಪಬ್ಲಿಕ್ ಸರ್ವಿಸ್ ಮೆಡಲ್ ಕೊಟ್ಟು ಸನ್ಮಾನಿಸಿದ್ದರು. ಅವರ ಪತ್ನಿ ಚಿದಂಬರಮ್ಮ ಅಥವಾ ಚಿದಕ್ಕಮ್ಮ (೧೯೦೦-೧೯೯೩) ಮಹಾಸಾಧ್ವಿ, ಪರೋಪಕಾರಿ, ಕಷ್ಟಸಹಿಷ್ಣು ಮತ್ತು ವಿವೇಕಶಾಲಿ. ತಾವು ಹೊಕ್ಕ ಮನೆಯ ಸಂಸಾರದ ಜವಾಬ್ದಾರಿಯನ್ನು ಒಂದು ಅಧಿಕಾರದ ಗತ್ತಿನಿಂದ ನಡಸಿದ ಅವರು ವೃದ್ಧಾಪ್ಯದಲ್ಲಿ ಮೆತ್ತಗಾಗಿ ಮಗುವಿನಂತಾದರು. ಆ ದಿವಸಗಳಲ್ಲಿ ತಮ್ಮ ಹತ್ತಿರವಿದ್ದ ಸಾಮಾನುಗಳನ್ನು ತಮಗೇನನ್ನೂ ಇಟ್ಟುಕೊಳ್ಳದೆ ಬೇಕುಬೇಕಾದವರಿಗೆ ಕೊಟ್ಟುಬಿಟ್ಟರು. ಅವರಿಗೆ ಸಾವು ಅನಾಯಾಸವಾಗಿ ಬಂತು. ಅವರ ಮಗಳು ಶ್ರೀಮತಿ ಅವರು ಆ ಪ್ರಸಂಗವನ್ನು ನಿರೂಪಿಸಿದ್ದಾರೆ.

ಅಂದು ಧನುರ್ಮಾಸದ ಹುಣ್ಣಿಮೆ. ಮಗಳು ಹುಗ್ಗಿ ಪಾಯಸದ ಅಡಿಗೆಮಾಡಿ ದೇವರಿಗೆ ನೈವೇದ್ಯಮಾಡಿದ್ದರು. ತಾಯಿ ಚಿದಕ್ಕಮ್ಮನವರು ಮಧ್ಯಾಹ್ನ ೧೨ ಗಂಟೆಗೆ ಊಟ ಮಾಡಿದರು. ೧೨-೩೦ ಹೊತ್ತಿಗೆ ಮಗಳನ್ನು ಕರೆದು ಅವರೊಂದಿಗೆ ಮಾತನಾಡಿದರು.

ಚಿದಕ್ಕ: ನಿಂತುಕೊಂಡು ನಾನು ಹೇಳುವುದನ್ನು ಗಮನಕೊಟ್ಟು ಕೇಳಿಸಿಕೋ...

ಶ್ರೀಮತಿ : -

ಚಿದಕ್ಕ : ಬಿಡ್ಡಾ (ಮಗಳೆ), ನನಗೆ ಏನೋ ಸಂಕಟವಾಗುತ್ತಿದೆ. ನಾನು ಇನ್ನು ಹೆಚ್ಚು ಕಾಲ ಬದುಕುವುದಿಲ್ಲ. ಇನ್ನು ಮೂರು ದಿನಗಳಲ್ಲಿ ಹೋಗಿಬಿಡುತ್ತೇನೆ.

ಶ್ರೀಮತಿ : ಅಮ್ಮ, ಹೊತ್ತಾಗಿ ಊಟಮಾಡಿದ್ದೀಯೆ, ಮಲಗಿಕೊಂಡು ಏಳು, ಸರಿಹೋಗುತ್ತದೆ.

ಚಿದಕ್ಕ : (ಅಸಮಾಧಾನದಿಂದ) ಸ್ವಲ್ಪ ನಾನು ಹೇಳೋದು ಕೇಳಬಾರದೇ?

ಶ್ರೀಮತಿ : ಸರಿ ಹೇಳಮ್ಮಾ.

ಚಿದಕ್ಕ : ನೋಡು, ಈ ಮೂರು ದಿನಗಳಲ್ಲಿ ನಿಮ್ಮ ಅಣ್ಣ ಬಂದರೆ ನಾನೇ ಹೇಳುತ್ತೇನೆ; ಇಲ್ಲದೆ ಹೋದಲ್ಲಿ, ನೀನು ಅವನಿಗೆ ಹೇಳು:

'ಮಗ ಬಿಡುವ ಎಳ್ಳುನೀರಿನಿಂದ ತಂದೆ ತಾಯಿಗಳಿಗೆ ಮೋಕ್ಷ ಸಿಕ್ಕುವುದಿಲ್ಲ. ದರ್ಭೆ ಗಾಳಿಯ ಪಾಲು, ನೀರು ಭೂಮಿಯ ಪಾಲು, ಎಳ್ಳು ಹಕ್ಕಿಗಳ ಪಾಲು' (ಈ ಆಶಯದ ತೆಲುಗು ವೇಮನಪದ್ಯವನ್ನೇ ಹೇಳಿದರು); ನಾನು ಮಾಡಿದ ಒಳ್ಳೇದು ಕೆಟ್ಟದ್ದು ನನ್ನ ಹಿಂದೆ ಬರುತ್ತದೆಯೇ ಹೊರತು ಅವನು ಮಾಡುವ ಕರ್ಮಗಳಿಂದ ನನಗೆ ಸದ್ಗತಿ ಬರುವುದಿಲ್ಲ. ಯಾರೂ ನನಗಾಗಿ ಕಷ್ಟಪಡುವುದು, ಖರ್ಚುಮಾಡುವುದು ಬೇಡ. ನಾನು ದೆವ್ವ ಅಥವಾ ಭೂತವಾಗಿ ಯಾರನ್ನೂ ಕಾಡುವುದಿಲ್ಲ.

ಈ ಸಂಭಾಷಣೆ ನಡೆದ ಮೇಲೆ, ಆ ದಿನ ಚೆನ್ನಾಗಿಯೇ ಇದ್ದರು. ಸಂಜೆ ೫-೩೦ರ ವರೆಗೆ ಮಾತಾಡುತ್ತಿದ್ದರು.

ಮಾರನೆಯ ಭಾನುವಾರ ಚಿದಕ್ಕನವರ ಹುಟ್ಟಿದ ಹಬ್ಬ ಮಾಡಲು ಮಗಳು ಶ್ರೀಮತಿ ಸೀರೆ ಕುಪ್ಪಸ ತರಿಸಿ ಇಟ್ಟಿದ್ದರು. ಬಂಧುಗಳನ್ನು ಊಟಕ್ಕೆ ಕರೆದಿದ್ದರು. ಬೊಂಬಾಯಿಯಿಂದ ಚಿದಕ್ಕನವರ ತಂಗಿಯ ಮಗ ಸೀರೆ ಕುಪ್ಪಸ ಕಳುಹಿಸಿದ್ದರು. ಇವರ ಹತ್ತಿರ ಮಧ್ಯಾಹ್ನ ೨-೩೦ರ ವರೆಗೂ ಚಿದಕ್ಕ ಮಾತಾಡುತ್ತಲೇ ಇದ್ದರು; ಸಂತೋಷವಾಗಿ ಆರೋಗ್ಯವಾಗಿದ್ದರು.

ಆದರೆ ಸಂಜೆ ೬ ಗಂಟೆಯಲ್ಲಿ ಇದ್ದಕ್ಕಿದ್ದಂತೆ ಹೋಗಿಬಿಟ್ಟರು (೮-೧-೧೯೯೩). ಡಾಕ್ಟರು ನೋಡಿ, 'ಎಂಥ ಅನಾಯಾಸವಾದ ಮರಣ' ಎಂದು ಆಶ್ಚರ್ಯಪಟ್ಟರು.

ಸಂ. ಮೈಥಿಲಿ ರಾಮಕೃಷ್ಣ, 'ಚಿದಕ್ಕಮ್ಮನವರ ಶತಾಬ್ದಿ ಸಂಸ್ಮರಣ ಗ್ರಂಥ', ಜನವರಿ ೪, ೨೦೦೦; ಪು. ೨೩

೩೯. 'ಎಲ್ಲ ಈಶ್ವರಲೀಲೆ'

ಕೆ. ಶಂಕರನಾರಾಯಣ ರಾಯರು ಶಿವಮೊಗ್ಗೆಯ ಪ್ರಸಿದ್ಧರಾದ ವಕೀಲರು; ಥಿಯೋಸಾಫಿಕಲ್ ಸೊಸೈಟಿ ಸಂಸ್ಥೆಗೆ ಸೇರಿದ್ದವರು; ವಕೀಲಿವೃತ್ತಿ ಬಿಟ್ಟ ಮೇಲೆ ಡಿಸ್ಟ್ರಿಕ್ಟ್ ಜಡ್ಜ್ ಆಗಿ ಬೆಂಗಳೂರಿನಲ್ಲಿ ನೆಲಸಿದವರು. ಅವರು ಯಾವಾಗಲೂ ದೊಡ್ಡ ದೊಡ್ಡ ಮನೆಗಳಲ್ಲಿ ವಾಸಮಾಡುತ್ತಿದ್ದರು. ಮನೆಯ ತುಂಬ ಜನ; ಬಂಧುಗಳು, ಸ್ನೇಹಿತರು, ಇತರರು ಎಲ್ಲ ಇರುತ್ತಿದ್ದು, ಅದು ಒಂದು ಧರ್ಮಛತ್ರವೆಂಬಂತೆ ಇರುತ್ತಿದ್ದಿತು. ಯಾರು ಯಾರಿಗೋ ಅಲ್ಲಿ ಊಟ, ಅವರವರ ಲಭ್ಯವಿದ್ದಂತೆ. 'ಎಲ್ಲ ಈಶ್ವರ ಲೀಲೆ' ಎನ್ನುತ್ತಿದ್ದರು, ಪೂಜೆ ಪಾರಾಯಣ ವ್ರತ ಎಲ್ಲವನ್ನೂ ನಡಸಿಕೊಂಡು ಹೋಗುತ್ತಿದ್ದ ಭಗವದ್ಭಕ್ತರಾದ ರಾಯರು.

ಒಂದು ದಿನ ರಾಯರ ಹೆಸರಿಗೆ ಒಂದು ಪತ್ರ ಪೋಸ್ಟ್ ಮೂಲಕ ಬಂತು. ಅದು ಒಬ್ಬ ಹೆಂಗಸಿನ ಕಾಗದ. ಅದರ ಒಕ್ಕಣೆ: "ನನ್ನ ಗಂಡ ಚಾಕರಿ ಸಂಪಾದಿಸುವುದಕ್ಕೆಂದು ಬೆಂಗಳೂರಿಗೆ ಹೋದ. ನಿಮ್ಮ ಆಶ್ರಯದಲ್ಲಿರುವುದಾಗಿ ನನಗೆ ಹೇಳಿದ. ಆದರೆ ೨-೩ ತಿಂಗಳಾದರೂ ಅವನಿಂದ ನನಗೆ ಕಾಗದ ಬಂದಿಲ್ಲ. ಅವನ ಕ್ಷೇಮಸಮಾಚಾರ ತಿಳಿಯಲಿಲ್ಲ. ಆದ್ದರಿಂದ ಮನಸ್ಸಿಗೆ ತುಂಬ ಯೋಚನೆಯಾಗಿದೆ. ಅವನ್ನು ನಿಮ್ಮಲ್ಲಿದ್ದಾನೆಯೇ, ಅವನಿಗೆ ಚಾಕರಿ ಆಗಿದೆಯೇ, ದಯೆಮಾಡಿ ತಿಳಿಸಬೇಕು'.

ಆ ಕಾಗದ ಕೈಗೆ ಬಂದ ಹೊತ್ತಿನಲ್ಲಿ ರಾಯರು ಆಫೀಸಿಗೆ ಹೊರಡುವ ಅವಸರದಲ್ಲಿದ್ದರು. ತಮ್ಮ ಹೆಂಡತಿಯನ್ನು ಕರೆದು ಅವರ ಕೈಗೆ ಕಾಗದ ಕೊಟ್ಟು, 'ಇದೇನೋ ಹೆಂಗಸರ ಕಾಗದ. ಇದಕ್ಕೆ ಏನು ಜವಾಬು ಕೊಡಬೇಕೋ ಕೊಡಿ' ಎಂದು ಹೇಳಿ ಹೊರಟು ಹೋದರು.

ಇನ್ನೊಂದು ತಿಂಗಳು ಕಳೆಯಿತು. ಆಕೆಯಿಂದ ಇನ್ನೊಂದು ಕಾಗದ ಬಂತು. ಈ ಸಾರಿಯೂ ಅದನ್ನು ರಾಯರು ಹೆಂಡತಿಗೆ ಕೊಟ್ಟು, ವಿಷಯ ಅಲ್ಲಿಗೆ ಮುಗಿಯಿತು ಎಂದುಕೊಂಡರು. ಮೂರನೆಯ ತಿಂಗಳಲ್ಲಿ ಮತ್ತೂ ಒಂದು ಕಾಗದ ಬಂತು. ಅದನ್ನೂ ರಾಯರು ಹೆಂಡತಿಯ ಕೈಗೆ ಕೊಟ್ಟರು.

ಈ ಸಲ ರಾಯರ ಹೆಂಡತಿ ಒಂದು ಕೆಲಸ ಮಾಡಿದರು. ಆ ದಿನಕ್ಕೆ ಮುಂದಿನ ಭಾನುವಾರ ರಾಯರು ಭೋಜನದ ವೇಳೆಗೆ ಮನೆಯಲ್ಲೇ ಇದ್ದು, ಪಂಕ್ತಿಯಲ್ಲಿ ಕೂಡತಕ್ಕದ್ದೆಂದು ತಾಕೀತುಮಾಡಿದರು. ರಾಯರು ಹಾಗೆಯೇ ಮಾಡಲು ಒಪ್ಪಿದರು. ಊಟದ ಪಂಕ್ತಿಯಲ್ಲಿ ೨೦-೨೫ ಮಂದಿ ಕುಳಿತಿದ್ದರು. ಆಗ ಆಕೆ ಯಜಮಾನರ ಪಕ್ಕದಲ್ಲಿ ನಿಂತು ಕೈ ತೋರಿಸಿ, "ಅಲ್ಲಿ ನೋಡ್ರಿ, ಎದುರು ಸಾಲಿನಲ್ಲಿ ಆ ಕಡೆಯಿಂದ ಐದನೆಯ ಮನುಷ್ಯ ಇದ್ದಾನಲ್ಲ, ಅವನ ಹೆಂಡತಿಯೇ ಈ ಕಾಗದ ಬರೆದಿರುವುದು. ಮಿಕ್ಕ ವಿಷಯ ನೀವು ವಿಚಾರಿಸಿಕೊಳ್ಳಿ" ಎಂದರು.

ಅನಂತರ ವಿಚಾರವೇನೋ ನಡೆಯಿತು. ತಮ್ಮ ಮನೆಯಲ್ಲಿ ತಿಂಗಳುಗಟ್ಟಲೆ ಊಟ ಮಾಡಿಕೊಂಡಿದ್ದ ಮನುಷ್ಯನನ್ನು 'ಈತ ಯಾರು, ಏತಕ್ಕೆ ಬಂದ' ಎಂದು ವಿಚಾರ ಮಾಡುವ ಗೋಜಿಗೇ ಹೋಗಲಿಲ್ಲ, ರಾಯರು. ಛತ್ರದ ಊಟ ಸಾಗುತ್ತಲೇ ಇತ್ತು.

ಡಿ.ವಿ.ಜಿ. : 'ಹಲವರು ಸಾರ್ವಜನಿಕರು', ಜ್ಞಾಪಕ ಚಿತ್ರಶಾಲೆ-೬, 'ಕಾವ್ಯಾಲಯ', ಮೈಸೂರು, ೧೯೭೩, ಪು. ೨೩೪-೩೫.

೪೦. ' ಏನು ಶೆಟ್ಟರೇ, ಬರೀ ಸೊನ್ನೆ ಸುತ್ತುತ್ತಿದ್ದೀರಲ್ಲ'

ಬೆಂಗಳೂರಿನ ಎಲೆ ಮಲ್ಲಪ್ಪ ಶೆಟ್ಟರು (೧೮೧೫-೮೭) ತಮ್ಮ ಕಾಲದ ಪ್ರಸಿದ್ಧ ವ್ಯಾಪಾರಿಗಳು. ಸಮೃದ್ಧವಾದ ಸಂಪಾದನೆ. ಈ ಸಂಪಾದನೆಯನ್ನು ಸದ್ವಿನಿಯೋಗಮಾಡುವ ದಾನಗುಣವೂ ಅವರಿಗಿತ್ತು. ಅನೇಕ ಗುಡಿ, ಕೆರೆ, ಛತ್ರ ಮಾಡಿಸಿದರು; ಕ್ಷಾಮ ಕಾಲದಲ್ಲಿಯೂ ದಾಸೋಹಮಾಡಿದರು; ಜನರ ಕಷ್ಟ ಕಾರ್ಪಣ್ಯಗಳಲ್ಲಿ ಅವರಿಗೆ ದ್ರವ್ಯ ಸಹಾಯ ಮಾಡಿದರು; ಫಲವಾಗಿ, ಕೈ ಬರಿದುಮಾಡಿಕೊಂಡರು. ಅವರ ಜನೋಪಕಾರಕ ಗುಣವನ್ನು ಗುರುತಿಸಿ, ಅಂದಿನ ವಿಕ್ಟೋರಿಯ ರಾಣಿಯವರ ಇಂಗ್ಲಿಷ್ ಸರ್ಕಾರದವರು ಅವರಿಗೆ 'ರಾಯ್ ಬಹದ್ದೂರ್' ಬಿರುದುಕೊಟ್ಟರು (೧-೧-೧೮೭೭).

ಮಲ್ಲಪ್ಪ ಶೆಟ್ಟರು ಹೊಸಕೋಟೆ ತಾ. ಜೋಡಿವೀರನಹಳ್ಳಿಯಲ್ಲಿ ದೊಡ್ಡಕೆರೆ ಕಟ್ಟಿಸಿ ಸು. ೧೫೦ ಎಕರೆ ಜಮೀನಿಗೆ ನೀರು ಸಿಕ್ಕುವಂತೆ ಮಾಡಿದರು. ಅದೇ 'ಎಲೆ ಮಲ್ಲಪ್ಪ ಶೆಟ್ಟರ ಕೆರೆ'. ಕೂಲಿಕಾರರಿಗೆ ಶೆಟ್ಟರು ದುಡ್ಡು ಎಣಿಸಿಕೊಡುತ್ತಿರಲಿಲ್ಲ, ಜೋಳಿಗೆಯಿಂದ ಕೈ ಹಿಡಿಯಲ್ಲಿ ತೆಗೆದುಕೊಡುತ್ತಿದ್ದರು. ಗರ್ಭಿಣಿ ಹೆಂಗಸರಿಗೆ ಎರಡು ಹಿಡಿ ನಾಣ್ಯ! 'ಇದೇನು ಸ್ವಾಮಿ, ನಾನು ಒಬ್ಬಳೇ ಇರೋದು, ಎರಡು ಕೂಲಿ ಕೊಟ್ಟರಲ್ಲಾ" ಎಂದರೆ, ಶೆಟ್ಟರು ನಕ್ಕು, 'ನಿನಗೊಂದು ಕೂಲಿ, ನಿನ್ನ ಹೊಟ್ಟೇಲಿರೋ ಮಗುವಿಗೆ ಒಂದು ಕೂಲಿ' ಎನ್ನುತ್ತಿದ್ದರು.

ಒಂದು ಮಧ್ಯಾಹ್ನ ಮಲ್ಲಪ್ಪ ಶೆಟ್ಟರು ತಮ್ಮ ದೈನಂದಿನ ಕೆರೆಯ ಕೆಲಸದ ಉಸ್ತುವಾರಿ ಮುಗಿಸಿ ಮನೆಗೆ ಮರಳಲು ತಮ್ಮ ಕೋಚ್‌ಗಾಡಿ ಹತ್ತಿ ಕುಳಿತರು. ಗಾಡಿ ಸ್ವಲ್ಪ ದೂರ ಸಾಗಿದಾಗ, ಅವರಿಗೆ ಹೃದಯವಿದ್ರಾವಕವಾದ ದೃಶ್ಯವೊಂದು ಕಂಡಿತು. ರಸ್ತೆ ಬದಿಯ ಮರದಡಿಯಲ್ಲಿ ತುಂಬುಗರ್ಭಿಣಿಯೊಬ್ಬಳು ಪ್ರಸವವೇದನೆಯಿಂದ ಬಾಧೆಪಡುತ್ತಿದ್ದಳು. ಶೆಟ್ಟರು ತಕ್ಷಣವೇ ಗಾಡಿಯಲ್ಲಿ ಹಿಂದಿರುಗಿ ಕೆರೆ ಕೆಲಸ ನಡೆಯುತ್ತಿದ್ದ ಜಾಗದಿಂದ ಕೆಲವರು ಹೆಂಗಸರನ್ನು ಸಹಾಯಕ್ಕೆ ಕರೆತಂದರು. ಹೆರಿಗೆಯೇನೋ ಆಯಿತು. ಆದರೆ ತಿಳಿವಳಿಕೆಯ ಆರೈಕೆ ಇಲ್ಲದೆ, ಆಗಲೇ ಬಸಿರಿಹೆಂಗಸು ತೀರಿಕೊಂಡಳು. ಶೆಟ್ಟರ ಮನಸ್ಸಿಗೆ ತುಂಬ ನೋವಾಯಿತು.

ಆಗಲೇ ಬೆಂಗಳೂರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಕಟ್ಟಿಸಲು ಶೆಟ್ಟರು ಸಂಕಲ್ಪಿಸಿದರು. ಗಣ್ಯವ್ಯಕ್ತಿಗಳ ಸಭೆ ಕೂಡಿಸಿದರು. ಸಭೆಗೆ ಮದರಾಸು ಸರ್ಕಾರದ ಗೌರ್ನರ್ ಸಹ ಬಂದಿದ್ದರು. ಅಲ್ಲಿ ಶೆಟ್ಟರು ನಡೆದ ಸಂಗತಿ ವಿವರಿಸಿದರು. ಹೆರಿಗೆ ಆಸ್ಪತ್ರೆ ಕಟ್ಟಬೇಕೆಂಬ ಅವರ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು; ಚಂದಾ ಕೂಡಿಸಲು ನಿಶ್ಚಯಿಸಿದರು; "ಶೆಟ್ಟರೇ, ಈ ಯೋಜನೆ ನಿಮ್ಮದು, ನೀವೇ ಮೊದಲು ಚಂದಾ ಹಾಕಿ" ಎಂದರು. ಹೀಗೆ ಹೇಳಿ, ಚಂದಾಪಟ್ಟಿಯನ್ನು ಅವರ ಮುಂದೆ ಚಾಚಿದರು, ಗಣ್ಯರೊಬ್ಬರು. ಶೆಟ್ಟರು, "ನೀವೆಲ್ಲಾ ಹಾಕಿ, ಆಮೇಲೆ ನೋಡೋಣ" ಎಂದು ಹೇಳಿ, ಒಂದು ಮೂಲೆಯಲ್ಲಿ ಕುಳಿತರು. ಗಣ್ಯವರ್ತಕರೆಲ್ಲ ತಮ್ಮ ಹೆಸರು, ಹಣದ ಮೊತ್ತ ಬರೆಯುತ್ತ ಹೋದರು.

ಈಗ ಮದರಾಸು ಗೌರ್ನರ್, "ಆ ಮೂಲೆಯಲ್ಲಿ ಕುಳಿತಿರುವ ಆ ಕರೀಕೋಟು ಕೆಂಪುವಸ್ತ್ರದ ಮುದುಕರನ್ನು ಕೇಳಿ, ಏನು ಕೊಡುವರೋ ನೋಡೋಣ" ಎಂದರು. ಈಗ ಕೊನೆಯದಾಗಿ ಚಂದಾಪಟ್ಟಿ ಶೆಟ್ಟರ ಕೈಗೆ ಬಂತು. ಅವರಿಗೆ ಬರೆವಣಿಗೆ ಬರುತ್ತಿತ್ತೋ ಇಲ್ಲವೋ ತಿಳಿಯದು. ಪಟ್ಟಿಯನ್ನು ಕೈಗೆ ತೆಗೆದುಕೊಂಡು ತಮ್ಮ ಹೆಸರಿನ ಮುಂದೆ ಉದ್ದಕ್ಕೆ ಸೊನ್ನೆಗಳನ್ನು ಸುತ್ತುತ್ತಾ ಹೋದರು. ಅವರೊಂದಿಗೆ ಸದಾ ಇರುತ್ತಿದ್ದ ಅವರ ಗುಮಾಸ್ತೆ ೩೫ ಸೊನ್ನೆಗಳಾಗುತ್ತಲೇ ಅವರ ಕೈ ತಡೆದ. ಸೇರಿದ್ದ ಜನ "ಏನು ಶೆಟ್ಟರೇ, ಬರೀ ಸೊನ್ನೆ ಸುತ್ತುತ್ತಿದ್ದೀರಲ್ಲ, ಏನೂ ಕೊಡುವುದಿಲ್ಲ ಎಂದರ್ಥವೇ?" ಎಂದು ಹೇಳಿ ನಕ್ಕರು.

ಶೆಟ್ಟರು "ದಯಮಾಡಿ ಎಲ್ಲರೂ ಇನ್ನು ಒಂದು ಗಂಟೆ ಕಾಲ ಇಲ್ಲೇ ಕುಳಿತಿರಬೇಕು, ಯಾರೂ ಎದ್ದು ಹೋಗಬಾರದು" ಎಂದು ಕೇಳಿಕೊಂಡರು. ತಮ್ಮ ಗುಮಾಸ್ತೆಯನ್ನು ಮನೆಗೆ ಕಳಿಸಿ ಹಣ ತರಿಸಿದರು. ಆಗ ಬಳಕೆಯಲ್ಲಿದ್ದುದು ಬೆಳ್ಳಿರೂಪಾಯಿ. ಸಾವಿರ ರೂಪಾಯಿಗಳನ್ನು ಒಂದೊಂದು ಸಣ್ಣಪೀಪಾಯಿಯಲ್ಲಿ ತುಂಬಿಸಿತ್ತು. ಅಂತಹ ೩೫ ಪೀಪಾಯಿಗಳನ್ನು ಒಡೆಸಿ ಒಂದು ಸೊನ್ನೆಗೆ ಸಾವಿರದಂತೆ ೩೫ ಸಾವಿರ ರೂಪಾಯಿಗಳನ್ನು ಶೆಟ್ಟರು ತಮ್ಮ ಚಂದಾ ಆಗಿ ಆಗಲೇ ಸಲ್ಲಿಸಿದರು.

ಹೆರಿಗೆ ಆಸ್ಪತ್ರೆ ಕಟ್ಟಿದ್ದಾಯಿತು. ಆಸ್ಪತ್ರೆಯ ಆ ಹಳೆಯ ಕಟ್ಟಡ ಈಗ ಬೆಂಗಳೂರಿನ ನೃಪತುಂಗ ರಸ್ತೆಯ ಐಜಿಪಿ ಆಫೀಸ್ ಇರುವ ಸ್ಥಳದಲ್ಲಿತ್ತು; ಈಚೆಗೆ ಸ್ಥಳಾಂತರಗೊಂಡಿತು. ಧರ್ಮಕಾರ್ಯ ಮಾಡಿದ ದಾನಿಗಳ ಪಟ್ಟಿಯಲ್ಲಿ ಎಲೆ ಮಲ್ಲಪ್ಪ ಶೆಟ್ಟರ ಹೆಸರು ಅಗ್ರಸ್ಥಾನದಲ್ಲಿದೆ; ಆಸ್ಪತ್ರೆಯಲ್ಲಿ ಅವರ ಭಾವಚಿತ್ರವೂ ಇದೆ.

ಜಯಾ ರಾಜಶೇಖರ್, 'ಎಲೆ ಮಲ್ಲಪ್ಪ ಶೆಟ್ಟರು', ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ, ೧೯೮೭, ಪು. ೨೮-೩೧

೪೧. 'ಒಂದು ಉಪಾಯ ಮಾಡಿದರು'

ವಿಶ್ವೇಶ್ವರಯ್ಯನವರು ಯಾರಿಂದ ಎಷ್ಟು ಮಟ್ಟಿನ ಸಹಾಯ ಪಡೆದುಕೊಂಡರೂ ಅದಕ್ಕೆ ಸಂಭಾವನೆ ಕೊಡುವ ಪದ್ಧತಿ ಇಟ್ಟುಕೊಂಡಿದ್ದರು. ಅವರಿಗೆ ಅನೇಕ ಸರಕಾರಗಳಿಂದಲೂ ಇಂಜಿನಿಯರಿಂಗ್ ಮತ್ತು ಯಂತ್ರಕರ್ಮಪರಿಶ್ರಮಗಳಿಗೆ ಸಂಬಂಧಿಸಿದ ಹಾಗೆ ಬೇಡಿಕೆಗಳು ಬರುತ್ತಿದ್ದುವು. ಈ ಬೇಡಿಕೆಗಳಿಗೆ ಉತ್ತರಿಸಲು ಅವರಿಗೆ ಇತರರ ಸಹಾಯ ಕೊಂಚ ಬೇಕಾಗುತ್ತಿತ್ತು. ವಿದ್ಯುಚ್ಛಕ್ತಿ, ಭೂಗುಣ ಮುಂತಾದ ವಿಚಾರಗಳಲ್ಲಿ ಅವರು ಸಮರ್ಥರಾದವರನ್ನು ಕೇಳುತ್ತಿದ್ದರು. ಅವರು ಕೊಟ್ಟ ಸಲಹೆ ಸಹಾಯಗಳಿಗಾಗಿ ಅವರಿಗೆ ಒಂದಿಷ್ಟು ಪ್ರತಿಫಲ ನೀಡುತ್ತಿದ್ದರು. ಅವರು ಆ ಪ್ರತಿಫಲ ಅನಾವಶ್ಯಕವೆಂದೂ ತಾವು ಮಾಡಿದ ಕೆಲಸ ಬಹು ಸ್ವಲ್ಪವಾದ್ದೆಂದೂ ಹೇಳಿದರೆ, ವಿಶ್ವೇಶ್ವರಯ್ಯನವರು ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. "ನಾನು ಮಾಡುವ ಕೆಲಸಕ್ಕಾಗಿ ನನಗೆ ಸಂಭಾವನೆ ಬರುತ್ತದೆ. ಆದ್ದರಿಂದ ನೀವು ನಾನು ಕೊಟ್ಟದ್ದನ್ನು ತೆಗೆದುಕೊಳ್ಳಲೇ ಬೇಕು" ಎಂದು ಒತ್ತಾಯ ಪಡಿಸುತ್ತಿದ್ದರು.

ಅವರಿಗೂ ಡಿವಿಜಿ ಅವರಿಗೂ ಈ ವಿಷಯದಲ್ಲಿ ತಕರಾರುಗಳು ಏಳುತ್ತಿದ್ದುವು. ಡಿವಿಜಿ "ನಿಮ್ಮಿಂದ 'ಒಂದು ಕೆಲಸ ಮಾಡಿಕೊಡು' ಎಂದು ಹೇಳಿಸಿಕೊಳ್ಳುವುದೇ ನನಗೆ ಒಂದು ಪುಣ್ಯಾವಕಾಶ. ನಿಮಗೆ ನಾನು ಕೆಲಸ ಮಾಡಿಕೊಟ್ಟೆನೆಂಬುದೇ ಹೆಮ್ಮೆಯ ವಿಷಯ" ಎಂದು ಹೇಳುತ್ತಿದ್ದರು. ವಿಶ್ವೇಶ್ವರಯ್ಯನವರು ಅದನ್ನು ಒಪ್ಪುತ್ತಿರಲಿಲ್ಲ. "ನೀನು ಹಾಗೆ ಮಾಡಿದರೆ ಇನ್ನು ಮುಂದೆ ನಿನಗೆ ಯಾವ ಕೆಲಸವನ್ನೂ ಹೇಳಲಾರೆ. ಅಂಥವರು ಹಣ ತೆಗೆದುಕೊಂಡಿದ್ದಾರೆ, ಇಂಥವರು ಹಣ ತೆಗೆದುಕೊಂಡಿದ್ದಾರೆ. ನೀನೇಕೆ ತೆಗೆದುಕೊಳ್ಳ ಬಾರದು" ಎಂದು ಅವರೊಂದಿಗೆ ವಾದಮಾಡುತ್ತಿದ್ದರು.

ಅದಕ್ಕೆ ಡಿ.ವಿ.ಜಿ. ಒಂದು ಉಪಾಯ ಮಾಡಿದರು. ತಾವು ಮಾಡಿಕೊಡುತ್ತಿದ್ದ ಕೆಲಸಕ್ಕೆ ವಿಶ್ವೇಶ್ವರಯ್ಯನವರು ನೀಡುತ್ತಿದ್ದ ಸಂಭಾವನೆಯ ಚೆಕ್ಕುಗಳನ್ನು ಅವರಿಂದ ಸ್ವೀಕರಿಸುತ್ತಿದ್ದರು; ಆದರೆ ಅವನ್ನು ನಗದು ಮಾಡಿಸಲು ತಮ್ಮ ಬ್ಯಾಂಕ್ ಖಾತೆಗೆ ಕಳಿಸಿಕೊಡದೆ ತಮ್ಮಲ್ಲಿ ಹಾಗೆಯೇ ಇರಿಸಿಕೊಳ್ಳುತ್ತಿದ್ದರು.

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ.೪, ಕಾವ್ಯಾಲಯ, ಮೈಸೂರು, ೧೯೭೧, ಪು. ೧೮೮-೮೯

೪೨. 'ಒಳ್ಳೆಯವನು, ಚಾರಿತ್ರ್ಯವಂತ'

ಒಂದು ಬಾರಿ ಶೃಂಗೇರಿಯಲ್ಲಿ ಗಣೇಶ ಚತುರ್ಥಿಯ ಪರ್ವದಲ್ಲಿ ಒಂದು ವಿದ್ವತ್ ಸಭೆ ಏರ್ಪಾಡಾಗಿತ್ತು. ಆ ಸಭೆಗೆ ಭಾರತದ ಎಲ್ಲ ಕಡೆಗಳಿಂದಲೂ ವಿದ್ವಾಂಸರು ಬಂದಿದ್ದರು. ಮಧ್ಯಾಹ್ನ ಛತ್ರದಲ್ಲಿ ಎಲ್ಲರೂ ಸೇರಿದ್ದಾರೆ. ಎಲ್ಲರೂ ವೇದವಿದ್ವಾಂಸರು, ಶ್ರೋತ್ರಿಯರು. ಸಭೆ ಮೊದಲಾಗಬೇಕು. ಎಲ್ಲ ಸಿದ್ಧವಾಗಿದೆ. ವಿದ್ವಾಂಸರು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ಯಾಕೋ ಚಡಪಡಿಸುತ್ತಿದ್ದಾರೆ.

ಮಠದ ಒಬ್ಬ ಪರಿಚಾರಕ, ಅಂಗಳದ ತೊಟ್ಟಿಯಲ್ಲಿದ್ದ ಬಾವಿಯಿಂದ ನೀರು ಸೇದಿ ಕಲ್ಲಿನ ತೊಟ್ಟಿಗೆ ತುಂಬುತ್ತಿದ್ದನು. ಅವನ ಸುತ್ತಲೂ ಕುಳಿತ ವಿದ್ವಾಂಸರಿಗೆ ಆ ಪರಿಚಾರಕ ಹಾಗೆ ತೊಟ್ಟಿಯ ನಡುವೆ ನಿಂತಿರುವಾಗ ಹೇಗೆ ತಮ್ಮ ವಿದ್ವತ್‌ಸಭೆ ಆರಂಭ ಮಾಡುವುದು ಎನ್ನುವುದು ಚಡಪಡಿಕೆಗೆ ಮುಖ್ಯವಾದ ಕಾರಣವಾಗಿತ್ತು.

ಆಗ ತಾನೆ ಬಂದು ಕುಳಿತಿದ್ದ, ಶ್ರೋತ್ರಿಯರಾಗಿ ತುಂಬ ನಿಷ್ಠಾವಂತರೆಂದೂ ವೈದಿಕವಿದ್ವಾಂಸರಾಗಿ ಪುರೋಹಿತರಾಗಿ ತುಂಬ ಸಮರ್ಥರೆಂದೂ ಪ್ರಸಿದ್ಧರಾಗಿದ್ದ ಶಿವಮೊಗ್ಗದ ವೇ. ಬ್ರ. ಶ್ರೀ ಕೇಶವಮೂರ್ತಿ ಘನಪಾಠಿಗಳು ವಿದ್ವಾಂಸರ ಮುಖದ ಚಡಪಡಿಕೆಯನ್ನು ಗಮನಿಸಿದರು. ಅವರಿಗೆ ವಿಷಯ ಮನವರಿಕೆಯಾಯಿತು. ಅವರು ತಮ್ಮ ಸಮಾಧಾನವನ್ನು ಹೀಗೆ ತಿಳಿಸಿದರು.

"ಏಕೆ ಯೋಚನೆ? ಆತ ಅನೇಕ ವರ್ಷಗಳಿಂದ ಮಠದಲ್ಲಿ ಗುರುಗಳ ಹಾಗೂ ಅಮ್ಮನವರ ಸೇವೆ ಮಾಡುತ್ತಿರುವವನು, ಒಳ್ಳೆಯವನು. ಅದೂ ಅಲ್ಲದೆ ಆಪಸ್ತಂಬರು ತಮ್ಮ ಧರ್ಮಸೂತ್ರಗಳಲ್ಲಿ ಹೀಗೆ ದೇವತಾಸೇವೆಯನ್ನೂ ಗುರುಹಿರಿಯರ ಸೇವೆಯನ್ನೂ ಮಾಡಿ ಚಾರಿತ್ರ್ಯವಂತರಾದವರ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಅವನ ಪಾಡಿಗೆ ಅವನು ತನ್ನ ಕೆಲಸ ಮಾಡಿಕೊಂಡಿರಲಿ. ನೀವು ನಿಮ್ಮ ಕಲಾಪಗಳನ್ನು ಆರಂಭಿಸಿ".

ಈ ಮಾತನ್ನು ಇತರ ವಿದ್ವಾಂಸರು ಯಾರೂ ವಿರೋಧಿಸಲಿಲ್ಲ. ವಿದ್ವತ್‌ಸಭೆ ಮೊದಲಾಯಿತು.

ಆರ್. ಕೆ. ಶ್ರೀಕಂಠ ಕುಮಾರಸ್ವಾಮಿ, 'ಹೃದಯ ಸಂಪನ್ನತೆ', ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, ೨೦೦೦, ಪು. ೯-೧೦

೪೩. 'ಕಣ್ಮರೆಯಾಯಿತೇ ಕಾಂತಿ'

ವೀಣೆ ವೆಂಕಟಗಿರಿಯಪ್ಪನವರು (೧೮೮೭-೧೯೫೨) ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನವಿದ್ವಾಂಸರು. ದೊಡ್ಡ ಕಲಾವಿದರಾಗಿ, ವಾಗ್ಗೇಯಕಾರರಾಗಿ ಪ್ರಸಿದ್ಧರು. ಭಾರತದಾದ್ಯಂತ ಪ್ರವಾಸಮಾಡಿ ತಮ್ಮ ಸುಮಧುರ ವೀಣಾವಾದನದಿಂದ ರಸಿಕರನ್ನು ಮೆಚ್ಚಿಸಿದವರು. ರಸಿಕರೂ ಉದಾರಿಗಳೂ ಆಗಿದ್ದ ಅವರು ತಮ್ಮ ಜ್ಯೇಷ್ಠ ಪುತ್ರನ, ವರ್ಧಿಷ್ಣು ಕಲಾವಿದನ, ಅಕಾಲಿಕನಿಧನದಿಂದ (೧೯೪೮) ತುಂಬ ಸೋತುಹೋದರು. ತಮ್ಮ ಇತಿಮಿತಿಯಿಲ್ಲದ ದಾನಧರ್ಮಗಳಿಂದಾಗಿ ಈ ವೇಳೆಗೆ ಅವರ ಕೈ ಬರಿದಾಗಿತ್ತು. ನಿತ್ಯ ಉಡುವ ಬಟ್ಟೆಯನ್ನು ಸಹ ಅಂಗಡಿಯಲ್ಲಿ ಸಾಲಮಾಡಿ ತರಬೇಕಾದ ಸ್ಥಿತಿಗೆ ಅವರು ಇಳಿದಿದ್ದರು.

ಮೈಯಲ್ಲಿ ಆರೋಗ್ಯವಿಲ್ಲದೆ ಹಾಸಿಗೆ ಹಿಡಿದಿದ್ದ ವೆಂಕಟಗಿರಿಯಪ್ಪನವರಿಗೆ ಒಂದು ದಿನ ಬೆಳಗ್ಗೆ ಅವರ ಮನೆಯ ಮುಂದೆ ಒಬ್ಬ ಬೀದಿಹೋಕ ಹಾಡುಗಾರನೊಬ್ಬ ಏನೋ ದೇವರ ನಾಮ ಹಾಡಿಕೊಂಡು ಹೋಗುತ್ತಿರುವುದು ಕೇಳಿಸಿತು. 'ಕಣ್ಮರೆಯಾಯಿತೇ ಕಾಂತಿ' ಎಂಬ ದೇವರ ನಾಮ ಅದು. ಅದನ್ನು ಕೇಳುತ್ತಿದ್ದಂತೆಯೇ ಎರಡು ವರ್ಷಗಳ ಹಿಂದೆ ತಮ್ಮನ್ನು ಅಗಲಿದ ತಮ್ಮ ಮಗನ ನೆನಪು ಬಂದು, ಅವರು ಭಾವಾವೇಗಕ್ಕೆ ಒಳಗಾದರು. ಕಣ್ಣುಗಳಲ್ಲಿ ನೀರು ಸೂಸಿತು.

ಈ ಘಟನೆ ನಡೆದಾಗ ಅವರ ಆಪ್ತಶಿಷ್ಯರಾದ ವೀಣಾವಿದ್ವಾನ್ ಆರ್. ಎನ್. ದೊರೆಸ್ವಾಮಿ ಅವರೊಂದಿಗೆ ಇದ್ದರು. ಆ ಹಾಡುಗಾರನನ್ನು ತಮ್ಮಲ್ಲಿಗೆ ಕರೆದುಕೊಂಡು ಬರುವಂತೆ ಅವರಿಗೆ ಸೂಚಿಸಿದರು. ದೊರೆಸ್ವಾಮಿಗಳು ಅವನನ್ನು ಗುರುಗಳಲ್ಲಿಗೆ ಕರೆ ತಂದರು. ಅವನು ಏನೊಂದೂ ಅರ್ಥವಾಗದೆ ಗೊಂದಲದಲ್ಲಿದ್ದನು. ಆಗ ವಿದ್ವಾನ್ ವೆಂಕಟಗಿರಿಯಪ್ಪನವರು ಅವನಿಗೆ ಇನ್ನೂ ಒಂದು ಹಾಡು ಹೇಳುವಂತೆ ತಿಳಿಸಿದರು. ಅವನು ಹೇಗೋ ಸವರಿಸಿಕೊಂಡು ಇನ್ನೂ ಒಂದು ಹಾಡು ಹೇಳಿದನು.

ವೆಂಕಟಗಿರಿಯಪ್ಪನವರು ಈಗ ದೊರೆಸ್ವಾಮಿಗಳಿಗೆ ಪೆಟ್ಟಿಗೆಯಲ್ಲಿದ್ದ ಜೋಡಿ ಪಂಚೆಗಳಲ್ಲಿ ಉಳಿದಿದ್ದ ಪಂಚೆಯೊಂದನ್ನು ತರುವ ಹಾಗೆ ತಿಳಿಸಿದರು. ತಮ್ಮ ಬೊಂಬಾಯಿಯ ಭೇಟಿಯ ಸಮಯದಲ್ಲಿ ಇಷ್ಟಪಟ್ಟು ಕೊಂಡಿದ್ದ ಹಸಿರಂಚಿನ ಹಸನಾದ ಮರ್ಸಿರೈಸ್ಡ್ ಮಿಲ್‌ಪಂಚೆಯಲ್ಲಿ ಒಂದನ್ನು ಬಳಸಿ, ಅವರು ಇನ್ನೊಂದನ್ನು ಆ ಪೆಟ್ಟಿಗೆಯಲ್ಲಿಟ್ಟಿದ್ದರು.

ಗುರುಗಳ ಉದಾರಹೃದಯ, ಅವರ ಆಗಿನ ಕಷ್ಟದ ಸ್ಥಿತಿ ಎರಡನ್ನೂ ಚೆನ್ನಾಗಿ ಬಲ್ಲವರಾಗಿದ್ದ ದೊರೆಸ್ವಾಮಿಗಳು ಆ ಪಂಚೆಯನ್ನು ಹೊರತೆಗೆದರೆ ಅದು ಬೀದಿಹೋಕ ಹಾಡುಗಾರನ, ಭಿಕ್ಷುಕನ, ಪಾಲಾಗಿ ಹೋಗುತ್ತದೆಯಲ್ಲ ಎಂದು ಎಣಿಸಿ, ಗುರುಗಳ ಮಾತು ತಮ್ಮ ಕಿವಿಗೆ ಬೀಳಲಿಲ್ಲವೇನೋ ಎಂಬಂತೆ ಸುಮ್ಮನಿದ್ದರು. ಆದರೆ ಗುರುಗಳು ಮತ್ತೆ ಕೂಗಿ ಹೇಳಿದರು. ದೊರೆಸ್ವಾಮಿಗಳು ಸ್ವಲ್ಪ ಧೈರ್ಯಮಾಡಿ ತಮ್ಮ ಮನಸ್ಸಿನಲ್ಲಿದ್ದ ಆತಂಕವನ್ನು ಗುರುಗಳಿಗೆ ತಿಳಿಸಿದರು.

ವೆಂಕಟಗಿರಿಯಪ್ಪನವರಿಗೆ ಶಿಷ್ಯನ ಮಾತು ರುಚಿಸಲಿಲ್ಲ. "ಸುಮ್ಮನೆ ತೆಗೆದುಕೊಂಡು ಬಾರಯ್ಯ. ಮನೆಗೆ ಕಾಂತಿ ನೀಡುತ್ತಿದ್ದ ಮಗನೇ ಕಣ್ಮರೆಯಾದ ಮೇಲೆ ಈ ಹಾಳು ಒಂಟಿಪಂಚೆಯ ಮೇಲೆ ಏಕೆ ಇಷ್ಟು ವ್ಯಾಮೋಹ?" ಎಂದು ಹೇಳಿದರು. ಆ ಪಂಚೆಯನ್ನು ಒಂದು ರೂಪಾಯಿ ದಕ್ಷಿಣೆಯಿಟ್ಟು ಭಿಕ್ಷುಕನಿಗೆ ಕೊಟ್ಟು, 'ಕೃಷ್ಣಾರ್ಪಣಮಸ್ತು' ಎಂದರು.

ಆರ್. ಎನ್. ದೊರೆಸ್ವಾಮಿ, 'ವೀಣಾ ವೆಂಕಟಗಿರಿಯಪ್ಪ', 'ಮಹತೀ' (ಸಂಗೀತ ಕಲಾರತ್ನ, ಪ್ರೊ. ಆರ್. ಎನ್. ದೊರೆಸ್ವಾಮಿ ಅಭಿನಂದನ ಗ್ರಂಥ), ಮೈಸೂರು, ೨೦೦೦ ಪು. ೨೩೧-೨೩೨; ಎಸ್. ಕೃಷ್ಣಮೂರ್ತಿ, 'ಸಂಗೀತಸಮಯ', ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೦, ಪು. ೭೯-೮೦

೪೪. 'ಕನ್ನಡವನ್ನು ಕಾಪಾಡಬೇಕು, ಕಟ್ಟಬೇಕು'

ಪ್ರಾಧ್ಯಾಪಕ ಶಿ. ಶಿ. ಬಸವನಾಳರು ರಬಕವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ವರ್ಷ ೧೯೪೪. ಬಸವನಾಳರು ವೀರಶೈವ ಸಾಹಿತ್ಯದಲ್ಲಿ ಬಹುವಾಗಿ ಕೃಷಿಮಾಡಿ ವಿದ್ವಾಂಸರೆಂದು ಖ್ಯಾತರಾದವರು. ಆ ಸಂದರ್ಭದಲ್ಲಿಯೇ ಧಾರವಾಡದಲ್ಲಿ ಪ್ರಗತಿಶೀಲ ಸಾಹಿತ್ಯದ ಚಳುವಳಿಯ ಬಗ್ಗೆ ಒಂದು ವಿಚಾರಗೋಷ್ಠಿ ನಡೆಯಿತು. ಈ ಗೋಷ್ಠಿಯಲ್ಲಿ ಶ್ರೀರಂಗ, ಅನಕೃ, ತರಾಸು ಮೊದಲಾದವರೆಲ್ಲ ಭಾಗವಹಿಸಿದ್ದರು. ನಡುವೆ ಬಸವನಾಳರೂ ಇದ್ದರು. ಅವರು ಮಾತಾಡುವಾಗ ಸ್ವಲ್ಪ ಭಾವೋದ್ವೇಗದಿಂದ, "ನೋಡಿ, ನನ್ನ ತಲೆ ಹಣ್ಣಾಗಿದೆ; ನನಗೆ ತಿಳಿದಿರುವಷ್ಟು ನಿಮಗೆ ತಿಳಿದಿರುವುದು ಸಾಧ್ಯವಿಲ್ಲ. ನಾವು ಹೇಳುತ್ತೇವೆ ಎಂದ ಮೇಲೆ ನೀವು ಕೇಳಬೇಕು" ಎಂದು ಹೇಳಿದರು. ಆಗ ೨೬-೨೭ ರ ಹರೆಯದಲ್ಲಿದ್ದ ತರಾಸು ಅವರಿಗೆ ಆ ಮಾತು ಹಿಡಿಸಲಿಲ್ಲ. ತಮ್ಮ ಭಾಷಣದ ಸರದಿ ಬಂದಾಗ ಅವರು ಹೇಳಿದರು: "'ನನ್ನ ತಲೆ ಹಣ್ಣಾಗಿದೆ; ನನಗೆ ತಿಳಿದಿದೆ; ನಾನು ಹೇಳುವುದು ನೀವು ಕೇಳಿ' ಎಂದು ಪ್ರೊ. ಬಸವನಾಳರು ಹೇಳಿದರು. ಆದರೆ ಅವರು ಒಂದು ಮಾತು ಹೇಳುವುದು ಮರೆತರು. ನನ್ನ ಎದುರಿಗಿರುವ ಗೋಡೆ ಇದೆಯಲ್ಲ, ಅದು ಅವರ ಕೂದಲಿಗಿಂತ ಬಿಳುಪಾಗಿದೆ. ಅಂದರೆ ಅದು ಅವರಿಗಿಂತ ಬುದ್ಧಿವಂತ ಎಂದು ನಾವು ಒಪ್ಪಿಕೊಳ್ಳಲೇಬೇಕೆ?"

ಈ ಮಾತು ಕೇಳಿ ಸಭೆಯಲ್ಲಿದ್ದವರೆಲ್ಲ ನಕ್ಕರು. ಆದರೆ ಬಸವನಾಳರು ಯಾವ ವಿಕಾರವನ್ನೂ ಮುಖದ ಮೇಲೆ ತೋರಿಸಲಿಲ್ಲ. ಗೋಷ್ಠಿ ಮುಗಿಯಿತು. ಎಲ್ಲರೂ ತಮ್ಮ ಬಿಡಾರಗಳ ಕಡೆಗೆ ಮರಳುವಾಗ, ಅನಕೃ ತರಾಸು ಅವರ ಜೊತೆಗೇ ಬಸವನಾಳರೂ ಹೊರಟರು. ಆಗ ಅನಕೃ ಅವರು ತರಾಸು ಅವರನ್ನು ಉದ್ದೇಶಿಸಿ ಹೇಳಿದರು: "ಸುಬ್ಬು, ಇವತ್ತು ನೀನು ಮಾಡಬಾರದ ಪಾಪ ಮಾಡಿದೆ. ಹಿರಿಯರಾದ ಬಸವನಾಳರನ್ನು ಕುರಿತು

ಹಾಗೆ ಮಾತಾಡಿದ್ದು ತಪ್ಪು. ಅವರಲ್ಲಿ ಕ್ಷಮೆ ಕೇಳು. ಸಭೆಯಲ್ಲಿ ನೀನು ಉದ್ವೇಗದಿಂದ ಏನೇ ಮಾತಾಡಿರಲಿ, ಅವರ ಯೋಗ್ಯತೆ ಹಿರಿತನ ಖಂಡಿತವಾಗಿ ನಿನಗಿಲ್ಲ. ನೀನು ವಯಸ್ಸಿನಲ್ಲಿ ಚಿಕ್ಕವನು. ಮೊದಲು ಅವರ ಕ್ಷಮೆ ಕೇಳು".

ಅಷ್ಟು ಹೊತ್ತಿಗೆ ತರಾಸು ಅವರಿಗೆ ಪಶ್ಚಾತ್ತಾಪವಾಗಿತ್ತು. ಅವರು ಬಸವನಾಳರನ್ನು ಉದ್ದೇಶಿಸಿ, "ಸರ್, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಉದ್ವೇಗದಲ್ಲಿ ಏನೋ ಮಾತಾಡಿಬಿಟ್ಟೆ. ತಾವು ಕ್ಷಮಿಸಬೇಕು" ಎಂದರು. ಆಗ ಬಸವನಾಳರು ತರಾಸು ಅವರನ್ನು ಕುರಿತು, "ಅಪ್ಪ, ಈ ಉದ್ವೇಗ, ಈ ಉತ್ಸಾಹ ನಿಮ್ಮಲ್ಲಿ ಇರಬೇಕು. ಕನ್ನಡವನ್ನು ಕಾಪಾಡಬೇಕು, ಕಟ್ಟಬೇಕು ಅನ್ನುವುದಾದರೆ ಈ ಉತ್ಸಾಹ ಈ ಶ್ರದ್ಧೆ ಇಲ್ಲದೆ ಹೋದರೆ ಆಗುವುದಿಲ್ಲ" – ಎಂಬುದಾಗಿ ಹೇಳಿ, ಯುವಕ ತರಾಸು. ಅವರ ಬೆನ್ನು ತಟ್ಟಿದರು. ತುಂಬಿದ ಸಭೆಯಲ್ಲಿ ತನ್ನನ್ನು ಹಾಗೆ ಈ ಚಿಕ್ಕವನು ಅವಮಾನಿಸಿದನಲ್ಲ ಎಂಬುದಾಗಿ ಅವರು ಮನಸ್ಸು ಸಣ್ಣದು ಮಾಡಿಕೊಳ್ಳಲಿಲ್ಲ.

ಸಂ. ನಾ.ಪ್ರಭಾಕರ್, ತರಾಸು. 'ಮಂಥನ', ತರಾಸು. ಪ್ರತಿಷ್ಠಾನ, ಯಾದವಗಿರಿ, ಮೈಸೂರು, ೧೯೯೨, ಪು.೫೨-೫೪

೪೫. 'ತಮ್ಮಲ್ಲಿ ಶಾಸ್ತ್ರಭಿಕ್ಷೆ ಬೇಡಲು ಬಂದಿದ್ದೇನೆ'

ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಡಿ. ವಿ. ಗುಂಡಪ್ಪನವರಿಗೆ ಹೇಳಿದ ವೃತ್ತಾಂತವಿದು:

ಕುಣಿಗಲ ರಾಮಶಾಸ್ತ್ರಿಗಳು ಒಮ್ಮೆ ರಾಮೇಶ್ವರಕ್ಕೆ ಯಾತ್ರೆ ಹೊರಟರು. ಆ ಯಾತ್ರೆಗೆ ಬೇಕಾದ ಸೌಕರ್ಯಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಏರ್ಪಾಡುಮಾಡಿಕೊಟ್ಟರು. ಆ ಏರ್ಪಾಡಿನಲ್ಲಿ ಪಾಚಕ ಪರಿಚಾರಕ ವರ್ಗ, ಮೇನಾ ಮತ್ತು ಹೊರುವ ಬೋವಿಗಳು ಎಲ್ಲ ಸೇರಿತ್ತು. ಆಪ್ತಶಿಷ್ಯರೂ ಜತೆಗಿದ್ದರು.

ಮಾರ್ಗಮಧ್ಯೆ ಮಾಯಾವರಂ ಎಂಬ ತಮಿಳುನಾಡಿನ ಒಂದು ಪಟ್ಟಣಕ್ಕೆ ಬಂದರು. ಅಲ್ಲಿ ಅಪ್ಪಯ್ಯದೀಕ್ಷಿತರ ವಂಶಸ್ಥರಾದ ಮನ್ನಾರಗುಡಿ ರಾಜುಶಾಸ್ತ್ರಿಗಳೆಂಬ ಮಹಾ ವಿದ್ವಾಂಸರಿದ್ದರು; ಅವರು ಮಹಾಮಹೋಪಾಧ್ಯಾಯರು, ದೊಡ್ಡ ಗುರುಕುಲ ನಡಸುತ್ತಿದ್ದ ಕುಲಪತಿಗಳು; ವಯೋವೃದ್ಧರು ಕೂಡ.

ರಾಮಶಾಸ್ತ್ರಿಗಳ ಮೇನೆ ಪರಿವಾರದೊಂದಿಗೆ ಮಾಯಾವರದಿಂದ ರಾಮೇಶ್ವರದ ಕಡೆಗೆ ಸಾಗುವಾಗ ಈ ಪರಿವಾರದೊಡನೆ ರಾಜುಶಾಸ್ತ್ರಿಗಳು ಸಹ ಸೇರಿಕೊಂಡರು. ಕೈಕಟ್ಟಿಕೊಂಡು ಕಾಲುನಡಗೆಯಲ್ಲಿ ಸಾಗುವರು, ಎಲ್ಲಿಯೋ ಭೋಜನ ತೀರಿಸಿ ಮತ್ತೆ ಪ್ರಯಾಣದ ವೇಳೆಗೆ ಸೇರುವರು. ಮಾತಿಲ್ಲ, ಕತೆಯಿಲ್ಲ. ರಾಜುಶಾಸ್ತ್ರಿಗಳ ಶಿಷ್ಯರಿಗೆ ಇದು

ಸರಿಕಾಣಲಿಲ್ಲ. 'ಮೇನೆಯಲ್ಲಿರುವಾತ ಯುವಕ; ತಮ್ಮ ಗುರುಗಳು ವಯೋವೃದ್ಧರು, ಜ್ಞಾನವೃದ್ಧರು. ಯುವಕ ವಿದ್ವಾಂಸ ತಮ್ಮ ಗುರುಗಳನ್ನು ಮಾತಾಡಿಸುತ್ತಿಲ್ಲ; ಮುದುಕರಾದ ಅವರನ್ನು ಹೀಗೆ ನಡೆಯಿಸಬಾರದು ಎಂಬ ಮರ್ಯಾದೆಯೂ ಈತನಿಗೆ ಇಲ್ಲ. ತಮ್ಮ ಗುರುಗಳು ಈ ಅಹಂಕಾರಿಯನ್ನು ಅನುಸರಿಸಿ ಹೋಗುತ್ತಿದ್ದಾರಲ್ಲ, ಇದು ಅಪಮಾನಕರ"– ಹೀಗೆ ಕೂಗಾಡಿದರು. ಈ ಮಾತುಗಳು ರಾಜುಶಾಸ್ತ್ರಿಗಳ ಕಿವಿಗೂ ಬಿದ್ದವು.

ಗುರುಗಳು ಶಿಷ್ಯರಿಗೆ ಹೇಳಿದರು: "ಅಯ್ಯಾ, ಮೇನೆಯಲ್ಲಿರುವಾತ ಮಹಾವಿದ್ವಾಂಸ. ನಾನು ಆತನಲ್ಲಿ ವಿದ್ಯೆ ಕಲಿಯುವುದಕ್ಕಾಗಿ ಬಂದಿದ್ದೇನೆ. ಈ ವಿಚಾರ ಆತನಿಗೆ ತಿಳಿಯದು. ಆತ ಮೇನೆಯ ಜೊತೆಗೆ ಕುತೂಹಲದಿಂದ ಸ್ವಲ್ಪ ದೂರ ಸಾಗುವ ಬೇರೆ ದಾರಿಹೋಕರ ಹಾಗೆ ಎಂಬುದಾಗಿ ನನ್ನನ್ನು ತಿಳಿದಿರಬಹುದು. ಇದು ಸ್ವಾಭಾವಿಕ. ಈಗ ಎರಡು ದಿನಗಳಾಗಿವೆ, ಅಷ್ಟೆ. ಇನ್ನೂ ಒಂದೆರಡು ದಿನ ತಾಳಿಕೊಳ್ಳಿ. ಆತನ ಯೋಗ್ಯತೆ ನಿಮಗೆ ತಿಳಿಯುತ್ತದೆ. ಆತ ನವದ್ವೀಪಕ್ಕೆ ಹೋಗಿ ನವೀನನ್ಯಾಯಪ್ರಕ್ರಿಯೆ ವ್ಯಾಸಂಗ ಮಾಡಿ ಬಂದಿದ್ದಾರೆ. ನನಗೆ ತಿಳಿದಿರುವುದು ಪ್ರಾಚೀನನ್ಯಾಯ. ಈಗ ನಾನು ಬಂಗಾಳ ದೇಶಕ್ಕೆ ಹೋಗಿ ಅಲ್ಲಿ ಅದನ್ನು ಕಲಿತು ಬರುವ ವಯಸ್ಸಲ್ಲ. ಏನಿದ್ದರೂ ಅಲ್ಲಿಂದ ಕಲಿತು ಬಂದವರನ್ನು ಆಶ್ರಯಿಸಿ ಕಲಿಯಬೇಕು, ಅಷ್ಟೆ. ಇದಕ್ಕಾಗಿ ನಾನು ರಾಮಶಾಸ್ತ್ರಿಗಳನ್ನು ಅನುಸರಿಸುತ್ತಿದ್ದೇನೆ. ನೀವು ಕೊಂಚ ತಾಳ್ಮೆಯಿಂದಿರಿ".

ಶಿಷ್ಯರು ಸುಮ್ಮನಾದರು. ಒಂದೆರಡು ದಿನ, ಯಥಾಪ್ರಕಾರ ಮೇನೆಯ ಪಕ್ಕ ರಾಜುಶಾಸ್ತ್ರಿಗಳ ಪ್ರಯಾಣ ಸಾಗಿತ್ತು. ದಾರಿಯಲ್ಲಿ ಒಂದು ಕಡೆ ರಾಮಶಾಸ್ತ್ರಿಗಳ ಕುತೂಹಲ ಹೆಚ್ಚಿ ಮೇನೆ ನಿಲ್ಲಿಸಲು ಹೇಳಿದರು. 'ತಾವು ಯಾರು?' ಎಂದು ರಾಜುಶಾಸ್ತ್ರಿಗಳನ್ನು ಪ್ರಶ್ನಿಸಿದರು. ಆ ಮೊದಲು ಅವರನ್ನು ಶಾಸ್ತ್ರಿಗಳು ಕಂಡವರಲ್ಲ. 'ನಾನು ರಾಜುಶಾಸ್ತ್ರಿ, ಮನ್ನಾರಗುಡಿಯವನು; ತಮ್ಮಲ್ಲಿ ಶಾಸ್ತ್ರಭಿಕ್ಷೆ ಬೇಡಲು ಬಂದಿದ್ದೇನೆ' ಎಂದು ಅವರು ತಮ್ಮ ಪರಿಚಯ ಹೇಳಿದರು.

ಈ ಮಾತು ಕೇಳಿದೊಡನೆಯೇ ರಾಮಶಾಸ್ತ್ರಿಗಳು ಮೇನೆಯಿಂದಿಳಿದರು; ರಾಜುಶಾಸ್ತ್ರಿಗಳ ಪಾದಗಳನ್ನು ಹಿಡಿದು ಸಾಷ್ಟಾಂಗನಮಸ್ಕಾರ ಮಾಡಿದರು; ಬಳಿಕ ಕುಶಲ ಪ್ರಶ್ನೆಗಳಾದುವು. ಮತ್ತೆ ಪ್ರಯಾಣವನ್ನು ಆರಂಭಿಸಬೇಕೆನ್ನುವಾಗ ರಾಮಶಾಸ್ತ್ರಿಗಳು ರಾಜು ಶಾಸ್ತ್ರಿಗಳಿಗೆ ಮೊದಲು ಮೇನೆಯಲ್ಲಿ ಕುಳಿತುಕೊಳ್ಳುವಂತೆ ಕೇಳಿಕೊಂಡರು. ರಾಜುಶಾಸ್ತ್ರಿಗಳು ಒಪ್ಪಲಿಲ್ಲ. ಆದರೆ ರಾಮಶಾಸ್ತ್ರಿಗಳು ತಾವು ಒಬ್ಬರೇ ಮೇನೆಯಲ್ಲಿ ಕೂಡಲು ನಿರಾಕರಿಸಿದರು. ತಾವೂ ಕಾಲುನಡಗೆಯಲ್ಲೇ ಪ್ರಯಾಣಿಸುವುದಾಗಿ ತಿಳಿಸಿದರು. ಆಮೇಲೆ ಇಬ್ಬರೂ ಮೇನೆಯಲ್ಲಿ ರಾಮೇಶ್ವರದ ಯಾತ್ರೆಗೆ ಸಾಗಿದರು; ದಾರಿಯುದ್ದಕ್ಕೆ ಶಾಸ್ತ್ರವಿಚಾರ ಚರ್ಚಿಸಿದರು. ಹಿಂದಿರುಗುವಾಗ ರಾಮಶಾಸ್ತ್ರಿಗಳು ಮಾಯಾವರದಲ್ಲಿ ರಾಜುಶಾಸ್ತ್ರಿಗಳ ಅತಿಥಿಗಳಾಗಿ ಎರಡು ದಿನವಿದ್ದರು.

ಡಿ.ವಿ.ಜಿ. 'ವೈದಿಕಧರ್ಮ ಸಂಪ್ರದಾಯಸ್ಥರು', ಜ್ಞಾಪಕ ಚಿತ್ರಶಾಲೆ-೫, ಕಾವ್ಯಾಲಯ, ಮೈಸೂರು, ೧೯೭೨, ಪು. ೧೪೦-೪೩

೪೬. 'ತಾಪತ್ರಯಹರಣನಿಪುಣ'

ಒಂದು ಸಾಯಂಕಾಲ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು ಮತ್ತು ವಿದ್ವಾನ್ ವಿ. ದೊರೆಸ್ವಾಮಿ ಅಯ್ಯಂಗಾರ್ಯರ ವೀಣೆ ಒಟ್ಟಿಗೆ ಏರ್ಪಾಡಾಗಿತ್ತು. ಮುತ್ತುಸ್ವಾಮಿ ದೀಕ್ಷಿತರ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ' ಎಂಬ ಕೃತಿಯನ್ನು ನುಡಿಸಿದಾಗ, 'ತಾಪತ್ರಯಹರಣ ನಿಪುಣ' ಎಂಬ ಕೀರ್ತನಾಂಶದ ಎಡೆಯಲ್ಲಿ ಚೌಡಯ್ಯನವರು ಕಲ್ಪನಾಸ್ವರಗಳನ್ನು ವಿಶೇಷವಾಗಿ ನುಡಿಸಿದರು. ಹಿಂದೆ ಎಂದೂ ಸ್ವರಕಲ್ಪನೆಗೆ ಅವರು ಆ ಸ್ಥಳವನ್ನು ಆರಿಸಿಕೊಂಡಿದ್ದಿಲ್ಲ. ಇದನ್ನು ಗಮನಿಸಿದ ಅಯ್ಯಂಗಾರ್ಯರಿಗೆ ಸ್ವಲ್ಪ ಕುತೂಹಲ ಕೆರಳಿತು. ಪ್ರಶ್ನಾರ್ಥಕ ಮುಖಭಾವದಿಂದ ಚೌಡಯ್ಯನವರತ್ತ ನೋಡಿದರು.

ಈಗ ಚೌಡಯ್ಯನವರು ತಮ್ಮ ಮನಃಕ್ಲೇಶವನ್ನು ಸ್ಪಷ್ಟಮಾಡಿದರು; ಯಾರೋ ಒಬ್ಬಾತ ಚೌಡಯ್ಯನವರನ್ನು ಹಣದ ಸಹಾಯಕ್ಕಾಗಿ ಪ್ರಾರ್ಥಿಸಿದ್ದ. 'ಆಗಲಿ' ಎಂದು ಅವರು ಮಾತು ಕೊಟ್ಟಿದ್ದರು. ಮಾರನೆಯ ದಿನ ಅವನು ಅದಕ್ಕಾಗಿ ಅವರನ್ನು ಕಾಣುವವನಿದ್ದನು. ಚೌಡಯ್ಯನವರ ಹತ್ತಿರ 'ವಿಷ ತೆಗೆದುಕೊಳ್ಳಲೂ ಒಂದು ಕುರುಡು ಕಾಸಿರಲಿಲ್ಲ'. ಬಂದವರ ಮುಂದೆ ಹೇಗೆ ಬರಿಗೈ ಆಡಿಸುವುದು ಎನ್ನುವುದು ಅವರ ಚಿಂತೆ.

ಈ ಯೋಚನೆಯು ಮನಸ್ಸನ್ನು ತುಂಬಿಕೊಂಡಿರುವಾಗಲೇ ಅವರಿಗೆ 'ತಾಪತ್ರಯ ಹರಣನಿಪುಣ' ಎಂಬ ಕೀರ್ತನಾಂಶ ನೆನಪಿಗೆ ಬಂತು. ಅವರು ಭಾವಪರವಶರಾಗಿ ಕಲ್ಪನಾಸ್ವರಗಳನ್ನು ನುಡಿಸಲು ಅದು ಮೀಟುಗೋಲಾಯಿತು.

ಮಾರನೆಯ ದಿನ ದೈವಸಹಾಯ ಒದಗಿತು. ಅವರ ಇನ್ನೊಂದು ಕಛೇರಿಯನ್ನು ಗೊತ್ತುಮಾಡಿಕೊಂಡು ಹೋಗಲು ಬಂದಿದ್ದ ಶ್ರೀಮಂತರೊಬ್ಬರು ಕಛೇರಿಗೆ ನಿಗದಿಯಾಗಿದ್ದ ಸಂಭಾವನೆಯ ಹಣದಲ್ಲಿ ಅರ್ಧದಷ್ಟನ್ನು ಮುಂಗಡವಾಗಿ ಕೊಟ್ಟು ಹೋದರು. ಆ ಸಮಯಕ್ಕೆ ಕಾಣಿಸಿಕೊಂಡನು, ಹಣಸಹಾಯಕ್ಕಾಗಿ ಪ್ರಾರ್ಥಿಸಿದ್ದ ಮನುಷ್ಯ. ಬಂದಿದ್ದ ಸಂಭಾವನೆಯ ಮುಂಗಡ ಹಣವನ್ನು ಆತನಿಗೆ ಕೊಟ್ಟು, ಆಡಿದ ಮಾತನ್ನು ಉಳಿಸಿಕೊಳ್ಳಲು ಸಾಧ್ಯವಾದುದಕ್ಕೆ ತಮ್ಮ ಮನೆದೇವರನ್ನು ಮನಸ್ಸಿನಲ್ಲಿಯೇ ಸ್ಮರಿಸಿದರು.

ಈ ಸಂಗತಿಯನ್ನು ವಿ. ದೊರೆಸ್ವಾಮಿ ಅಯ್ಯಂಗಾರ್ಯರೇ ವಿದ್ವಾನ್ ಕೆ. ವಾಸುದೇವಚಾರ್ಯರ ಮೊಮ್ಮಗ ಎಸ್. ಕೃಷ್ಣಮೂರ್ತಿಗಳಿಗೆ ಹೇಳಿದರೆಂದು ತಿಳಿಯುವುದು.

ಎಸ್. ಕೃಷ್ಣಮೂರ್ತಿ, 'ಸಂಗೀತ ಕಲಾನಿಧಿ', ಕಾವ್ಯಾಲಯ, ಮೈಸೂರು, ಪು. ೬೫-೬೬

೪೭. 'ತಾಯಿಯ ಮಾತು ಮೀರಿ ನಡೆಯುತ್ತಿರಲಿಲ್ಲ'

ಡಾ. ಆ. ನೇ. ಉಪಾಧ್ಯೆ ಅಂತಾರಾಷ್ಟ್ರೀಯ ಖ್ಯಾತಿಯ ಪ್ರಾಕೃತಭಾಷೆ-ಜೈನಶಾಸ್ತ್ರ ವಿದ್ವಾಂಸರು. ಅವರು ತಮ್ಮ ಶೈಶವದಲ್ಲಿಯೇ ತಂದೆಯನ್ನು ಕಳೆದುಕೊಂಡರು; ತಾಯಿಯ ಮಮತೆಯ ಮಡಿಲಲ್ಲಿ ಬೆಳೆದು ದೊಡ್ಡವರಾದರು. ತಾಯಿ ಚಂದ್ರಾಬಾಯಿ ಅವರಿಗೆ ತಮ್ಮ ನಾಲ್ವರು ಮಕ್ಕಳನ್ನು ಕಳೆದುಕೊಂಡ ಮೇಲೆ ಹುಟ್ಟಿದ ಮಗನೆಂದು ಉಪಾಧ್ಯೆಯವರ ಮೇಲೆ ಹೆಚ್ಚಿನ ಮೋಹ, ಹತ್ತಿರದಲ್ಲಿಯೇ ಮಗನಿರಬೇಕೆಂಬ ಅಪೇಕ್ಷೆ.

ಉಪಾಧ್ಯೆ ಸಂಪಾದಿಸಿದ ಪ್ರಾಚೀನ ಜೈನಗ್ರಂಥಗಳಿಂದ ಅವರ ಖ್ಯಾತಿ ವಿದೇಶಗಳಲ್ಲೂ ಹಬ್ಬಿತು. ಜರ್ಮನಿಗೆ ಬರುವಂತೆ ವಿಶೇಷವಾದ ಆಹ್ವಾನ ಬಂತು. ತಾಯಿಯನ್ನು ಬಿಟ್ಟು ವಿದೇಶವಿರಲಿ, ಕೊಲ್ಲಾಪುರವನ್ನು ಬಿಟ್ಟು ಹೋಗಲೂ ಅವರು ಸಿದ್ಧರಿರಲಿಲ್ಲ; ಆಹ್ವಾನವನ್ನು ನಿರಾಕರಿಸಿದರು. ೧೯೫೬ರಲ್ಲಿ ಡಾ. ಡಿ. ಸಿ. ಪಾವಟೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜೈನಸಿದ್ಧಾಂತ ಶಾಖೆಯನ್ನು ಸ್ಥಾಪಿಸಲೆಂದು ಉದ್ದೇಶಿಸಿ, ಉಪಾಧ್ಯೆಯವರನ್ನು ಧಾರವಾಡಕ್ಕೆ ವರ್ಗವಾಗುವಂತೆ ಮಾಡಿದರು; ಹೆಚ್ಚಿನ ವೇತನ ಸ್ಥಾನಮಾನಗಳ ಆಶ್ವಾಸನೆ ನೀಡಿದರು. ಆದರೆ ವೃದ್ಧೆಯಾದ ತಾಯಿಯಿಂದ ದೂರವಿರಲು ಸಾಧ್ಯವಾಗದೆಂದು ಕುಲಪತಿ ಪಾವಟೆ ಅವರಿಗೆ ಸ್ಪಷ್ಟಪಡಿಸಿದಾಗ, ವರ್ಗದ ಆಜ್ಞೆ ರದ್ದಾಯಿತು. ಬಿಹಾರ ಸರ್ಕಾರ ವೈಶಾಲಿಯಲ್ಲಿ ಜೈನ ಅಧ್ಯಯನಸಂಸ್ಥೆ ತೆರೆಯಲು ಉದ್ದೇಶಿಸಿ ಉಪಾಧ್ಯೆಯವರನ್ನು ನಿರ್ದೇಶಕರಾಗಿ ಬರಬೇಕೆಂದು ಕೋರಿತು. ಭಾರತೀಯ ಜ್ಞಾನಪೀಠ ಸಂಸ್ಥಾಪಕರಾದ ಸಾಹು ಶಾಂತಿ ಪ್ರಸಾದ ಜೈನರೇ ಸ್ವತಃ ಕೊಲ್ಲಾಪುರಕ್ಕೆ ಆಗಮಿಸಿ ವೈಶಾಲಿಯ ಹುದ್ದೆಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡರು. ಆಗಲೂ ತಮ್ಮ ಮುಪ್ಪಿನ ತಾಯಿಯನ್ನು ತೋರಿಸಿ, ಸಾಧ್ಯವಾಗದೆಂದರು, ಉಪಾಧ್ಯೆ.

ಡಾ. ಉಪಾಧ್ಯೆ ತಾಯಿಯ ಮಾತು ಮೀರಿ ನಡೆಯುತ್ತಿರಲಿಲ್ಲ. ಮನೆಯನ್ನು ಬಿಟ್ಟು ಹೊರಹೊರಡುವಾಗ ಪ್ರತಿಸಲವೂ ತಾಯಿಯ ಪಾದಗಳಿಗೆ ನಮಸ್ಕರಿಸಿ ಹೇಳಿ ಹೋಗುತ್ತಿದ್ದರು. ಇಷ್ಟು ಹೊತ್ತಿಗೆ ಬರುವುದಾಗಿ ತಿಳಿಸಿ ಹೋಗುತ್ತಿದ್ದರಲ್ಲದೆ ಆ ಹೊತ್ತಿಗೆ ಸರಿಯಾಗಿ ಹಿಂದಿರುಗುತ್ತಿದ್ದರು. ಒಮ್ಮೆ ಎಂದಿನಂತೆ ವಿಶ್ವವಿದ್ಯಾನಿಲಯದ ಕಾರು ಮನೆಯ ಮುಂದೆ ನಿಂತು, ಇನ್ನೇನು ಹೊರಡಲು ಸಿದ್ಧರಾಗಿ ತಾಯಿಗೆ ಎಂದಿನಂತೆ ಹೇಳಿ ಹೋಗಲು ಅವರ ಕೊಠಡಿಗೆ ಬಂದಾಗ, ಆಕೆಗೆ ಮರಣ ಸನ್ನಿಹಿತವಾದುದನ್ನು ಕಂಡರು. ತತ್‌ಕ್ಷಣ ಕಾರ್ಯಕ್ರಮ ರದ್ದುಪಡಿಸಿ, ಅಂತ್ಯಕಾಲದಲ್ಲಿ ಅವರ ಹತ್ತಿರವೇ ಇದ್ದು ಅವರ ಸೇವೆಮಾಡಿದರು. ಬಳಿಕವೇ ಅವರು ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನವನ್ನೊಪ್ಪಿ ಪ್ರಥಮ ಪ್ರಾಧ್ಯಾಪಕರಾಗಿ ಪ್ರಾಕೃತ-ಜೈನಶಾಸ್ತ್ರ ವಿಭಾಗಕ್ಕೆ ಬಂದದ್ದು.

ಎಂ. ಎ. ಜಯಚಂದ್ರ, ಡಾ. ಆ. ನೇ. ಉಪಾಧ್ಯೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೨೦-೨೨

೪೮. 'ದಿಟವಾಗಿ ಹಸು ತಾಯಿಗಿಂತಲೂ ಹೆಚ್ಚು'

ಶೃಂಗೇರಿ ಶಾರದಾಪೀಠದ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳು ಒಂದು ಸಂಜೆ ಬಹಳ ಹೊತ್ತು ಮೌನವಾಗಿದ್ದು, ಬಳಿಕ ಹತ್ತಿರವಿದ್ದ ಶಿಷ್ಯರೊಬ್ಬರನ್ನು ಕುರಿತು ಹೀಗೆ ಪ್ರಶ್ನಿಸಿದರು:

'ನಿಮ್ಮ ಜಿಲ್ಲೆಯ ಹಳ್ಳಿಯೊಂದರಲ್ಲಿ ಬ್ರಾಹ್ಮಣರ ಮನೆಗಳಿದ್ದು, ದನ ಕರು ಮುಂತಾದ ಪ್ರಾಣಿಗಳ ಮೃತದೇಹಗಳನ್ನು ಕೊಂಡೊಯ್ಯಲು ಅಂತ್ಯಜರು ನಿರಾಕರಿಸಿದರೆಂದೂ ಕಡೆಗೆ ಬ್ರಾಹ್ಮಣರೇ ಅವನ್ನು ಗಾಡಿಗಳಲ್ಲಿ ಹಾಕಿಕೊಂಡು ನದಿಯ ದಡದಲ್ಲಿ ತಾವೇ ಸ್ವತಃ ಸಂಸ್ಕಾರ ನಡಸಿದರೆಂದೂ ಕೇಳಿದೆ. ಇದು ನಿಜವೇ?"

ಈ ಸುದ್ದಿ ಸ್ವಾಮಿಗಳ ವರೆಗೆ ಬಂದದ್ದು ತಿಳಿದು ಆಶ್ಚರ್ಯಪಟ್ಟು, ಆ ಶಿಷ್ಯರು "ನಿಜ, ಮಹಾಸ್ವಾಮಿ" ಎಂದರು.

ಮುಂದೆ ಈ ಸಂಭಾಷಣೆ ಹೀಗೆ ಮುನ್ನಡೆಯಿತು:

ಸ್ವಾಮಿಗಳು: "ಅನೂಚಾನವಾಗಿ ಬಂದ ಪದ್ಧತಿಯನ್ನು ಬಿಟ್ಟು ತಾವೇ ಮೃತ ಪ್ರಾಣಿಗಳ ಸಂಸ್ಕಾರ ನಡಸಬೇಕಾಗಿ ಬಂದುದಕ್ಕೆ ಆ ಬ್ರಾಹ್ಮಣರು ತುಂಬಾ ಅಸಮಾಧಾನ ಪಟ್ಟಿರಬೇಕಲ್ಲವೇ?"

ಶಿಷ್ಯರು: "ಹೌದು ಸ್ವಾಮಿ, ಅವರು ಕೋಪಗೊಂಡದ್ದು ನಿಜ".

ಸ್ವಾಮಿಗಳು: "ಅದಕ್ಕಾಗಿ ಅವರು ಪಶ್ಚಾತ್ತಾಪ ಪಡಬೇಕಾಗಿಲ್ಲವೆಂದೂ ಅದನ್ನು ಸತ್ಕಾರ್ಯವೆಂದೇ ತಿಳಿಯಬೇಕೆಂದೂ ನನ್ನ ಪರವಾಗಿ ಅವರಿಗೆ ತಿಳಿಸುತ್ತೀರಾ?"

ಶಿಷ್ಯರು: "ಅದು ಸತ್ಕಾರ್ಯ ಹೇಗಾದೀತು?"

ಸ್ವಾಮಿಗಳು: "ನೋಡಿ, ಈ ಕಾಲದಲ್ಲಿ ತಾಯಂದಿರು ತಮ್ಮ ಮಕ್ಕಳ ಪೋಷಣೆಗೆ ಸಾಕಾಗುವಷ್ಟು ಸ್ತನ್ಯವನ್ನು ಪಡೆಯುತ್ತಿಲ್ಲ. ಆದ್ದರಿಂದ ಈಗ ಮಕ್ಕಳಲ್ಲಿ ಹೆಚ್ಚಾಗಿ ಹಸುವಿನ ಹಾಲನ್ನೇ ಅವಲಂಬಿಸಿರುವುದು ಎಲ್ಲರಿಗೂ ತಿಳಿದ ವಿಷಯ. ಚಿಕ್ಕವರು, ದೊಡ್ಡವರು ಎಲ್ಲರಿಗೂ ಈಗ ಹಾಲು ಅವರ ಆಹಾರದಲ್ಲಿ ಮುಖ್ಯಪದಾರ್ಥ. ಹಸು ಪೂಜೆಗೂ ಅಭಿಷೇಕಕ್ಕೆ ಹಾಲು ಕೊಡುತ್ತದೆ. ಹಸುವನ್ನು ಶಾಸ್ತ್ರಗಳು ಪವಿತ್ರವೆಂದು ಸಾರಿರುವುದಿರಲಿ, ದಿಟವಾಗಿ ಹಸು ತಾಯಿಗಿಂತಲೂ ಹೆಚ್ಚು. ಆ ಪ್ರಾಣಿಯೂ ಸತ್ತಾಗ ಅಂತ್ಯಸಂಸ್ಕಾರ ಮಾಡುವ ಅವಕಾಶ ದೊರಕಿದರೆ, ನಾವು ಕೃತಜ್ಞರಾಗಿರಬೇಡವೇ? ಅದನ್ನು ತುಂಬಾ ಶ್ರೇಷ್ಠವಾದ ಕೆಲಸವೆಂದೇ ಭಾವಿಸಿ ನಾವು ಮಾಡಬೇಕು."

ಶಿಷ್ಯರು: "ಹಿಂದಿನಿಂದ ರೂಢವಾಗಿರುವ ಆಚಾರ, ಅಭ್ಯಾಸ ಮೈಗೂಡಿ ಹೋಗಿರುವುದರಿಂದ ಬದಲಾವಣೆಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ".

ಸ್ವಾಮಿಗಳು: "ಕಷ್ಟವಾಗಬಹುದು. ಆದರೆ ಯಶಸ್ಕರವಾದಲ್ಲಿ ಖಂಡಿತ ಪ್ರಯತ್ನ

ಮಾಡುವುದು ಒಳ್ಳೆಯದು. ಅಲ್ಲದೆ ಅಂತ್ಯಜರು ಮೃತಪ್ರಾಣಿಯನ್ನು ತೆಗೆದುಕೊಂಡು ಹೋಗಿ ಅದರ ಮಾಂಸವನ್ನು ತಿನ್ನುವರೆಂಬುದು ಬ್ರಾಹ್ಮಣರಿಗೆ ತಿಳಿದ ವಿಷಯ"

ಶಿಷ್ಯರು: "ನಿಜ, ನಿಜ".

ಸ್ವಾಮಿಗಳು: "ಮೃತಪ್ರಾಣಿಯನ್ನು ತೆಗೆದುಕೊಂಡು ಹೋಗುವಂತೆ ಅಂತ್ಯಜರಿಗೆ ಹೇಳುವುದರಿಂದ ಬ್ರಾಹ್ಮಣರೇ ಪರೋಕ್ಷವಾಗಿ ಅದರ ಮಾಂಸವನ್ನು ತಿನ್ನುವಂತೆ ಅಂತ್ಯಜರನ್ನು ಪ್ರಚೋದಿಸುವಂತೆ ಆಗುವುದಿಲ್ಲವೇ? ಆ ಪಾಪಕಾರ್ಯದಲ್ಲಿ ತಾವೇ ಭಾಗಿಗಳಾಗುವುದಿಲ್ಲವೇ? ಮೃತವಾದ ಗೋವುಗಳನ್ನು ಸಮಾಧಿ ಮಾಡುವುದರಿಂದ ಬೇರೆಯವರಿಗೆ ಮಾಂಸಭಕ್ಷಣೆಗೆ ಅವಕಾಶ ಮಾಡಿಕೊಡುವ ಸಂದರ್ಭವೇ ಬರುವುದಿಲ್ಲ. ಇದೇ ಒಂದು ದೊಡ್ಡ ಪ್ರಮಾದವಲ್ಲವೇ? ನೀವು ಮತ್ತೊಮ್ಮೆ ಆ ಗ್ರಾಮದ ಜನರನ್ನು ಭೇಟಿಯಾದಾಗ, ಈ ಎರಡು ದೃಷ್ಟಿಗಳನ್ನೂ ಅವರಿಗೆ ವಿವರಿಸಿರಿ. ಇಂತಹ ಸಂದರ್ಭ ಒದಗಿರುವುದು ಪರಿಣಾಮದಲ್ಲಿ ಒಳ್ಳೆಯದನ್ನೇ ಉಂಟುಮಾಡುವುದೆಂದೂ ಅದಕ್ಕಾಗಿ ಅವರು ಪಶ್ಚಾತ್ತಾಪಪಡಬೇಕಾಗಿಲ್ಲವೆಂದೂ ತಿಳಿಸಿರಿ."

ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ, 'ಸಂಭಾಷಣ ತರಂಗಿಣಿ' (ಆರ್. ಕೃಷ್ಣಸ್ವಾಮಿ ಅಯ್ಯರ್ ಅವರ ಆಂಗ್ಲಮೂಲದ ಅನುವಾದ), ವಿದ್ಯಾಶಂಕರ ಪ್ರಕಾಶನ, ಮೈಸೂರು - ೪, ೧೯೬೫, ಪು. ೬೪-೬೬

೪೯. 'ದೇವರು ನಿನಗೆ ನನ್ನಂತಹ ಅಣ್ಣನನ್ನು ಕೊಟ್ಟಿಲ್ಲವೇ?'

ಮೈಸೂರು ಮಹಾರಾಜ ಕಾಲೇಜಿನಲ್ಲಿ ತ. ಸು. ಶಾಮರಾಯರು ಓದುತ್ತಿದ್ದ ದಿನಗಳು. ಸ್ವಾಭಿಮಾನಿಯಾದ್ದರಿಂದ, ತನ್ನ ಖರ್ಚು ವೆಚ್ಚ ತಾನೇ ನೋಡಿಕೊಳ್ಳುವುದಾಗಿ ಅವರು ಅಣ್ಣ ವೆಂಕಣ್ಣಯ್ಯನವರಿಗೆ ತಿಳಿಸಿದರು. ಒಪ್ಪಿಗೆ ಪಡೆದರು. ಹೀಗಾಗಿ, ತಮಗೆ ಯಾವುದಾದರೂ ವಿದ್ಯಾರ್ಥಿವೇತನ ದೊರೆತೀತೆ ಎಂದು ನಿರೀಕ್ಷಿಸುತ್ತಿದ್ದರು. ತಾವು ಹಿಂದೆ ಶಾಲೆಯ ಅಧ್ಯಾಪಕರಾಗಿದ್ದಾಗ ಕೂಡಿಟ್ಟುಕೊಂಡಿದ್ದ ಅಲ್ಪ ಸ್ವಲ್ಪ ಹಣ ಮೊದಲ ವರ್ಷದ ಬಿ. ಎ. ಆನರ್ಸ್ ಮುಗಿಯುವ ವೇಳೆಗೆ ಅರ್ಧದಷ್ಟು ಕರಗಿ ಹೋಗಿತ್ತು. 'ಮುಂದೇನು ಗತಿ' ಎಂಬ ಆತಂಕದಲ್ಲಿಯೇ ಎರಡನೆಯ ವರ್ಷಕ್ಕೆ ಕಾಲಿಟ್ಟರು. ದೇವರ ದಯೆ ಎನ್ನುವಂತೆ ಬಿ.ಎಂ.ಶ್ರೀ ಅವರ ಹೆಸರಿನ ವಿದ್ಯಾರ್ಥಿವೇತನ ತಮಗೆ ಬಂದಿರುವುದು ನೋಟೀಸ್ ಬೋರ್ಡ್ ಪ್ರಕಟನೆಯಿಂದ ತಿಳಿಯಿತು. ಸಂತೋಷವಾಯಿತು. ಗೆಳೆಯರಿಗೆ ಕಾಫೀ ತಿಂಡಿ ಕೊಡಿಸಿದರು; ಮನೆಗೆ ಹಣ್ಣು ಹೂ ತಂದು ವಿಷಯ ತಿಳಿಸಿದರು.

ಶಾಮರಾಯರ ಸಂತೋಷ ಹೆಚ್ಚು ಕಾಲ ನಿಲ್ಲಲಿಲ್ಲ. ಮಾರನೆಯ ಬೆಳಗ್ಗೆ ಕಾಲೇಜಿಗೆ

ಹೋದಾಗ ಮೊದಲು ತಮ್ಮ ಹೆಸರಿಗೆ ಪ್ರಕಟವಾಗಿದ್ದ ವಿದ್ಯಾರ್ಥಿವೇತನ ಈಗ ಎಂ.ಎ. ವಿದ್ಯಾರ್ಥಿಯೊಬ್ಬರ ಹೆಸರಿಗೆ ಬದಲಾವಣೆಯಾದ್ದು ಕಂಡಿತು. ಆನರ್ಸ್ ವಿದ್ಯಾರ್ಥಿಗಳ ಹೆಸರಿಗೆ ಮೀಸಲಾಗಿದ್ದ ವಿದ್ಯಾರ್ಥಿವೇತನ ಎಂ.ಎ. ವಿದ್ಯಾರ್ಥಿಗೆ ಹೇಗೆ ಕೊಟ್ಟರು? ಇದು ತಿಳಿಯದೆ ಅವರ ಮನಸ್ಸಿಗೆ ತುಂಬ ಕಳವಳವಾಯಿತು.

ಶಾಮರಾಯರು ಪ್ರಿನ್ಸಿಪಾಲ್ ರಾಲೋ ಅವರನ್ನು ನೇರವಾಗಿ ಹೋಗಿ ಕಂಡು ತಮ್ಮ ದುಃಖ ತೋಡಿಕೊಂಡರು. ಅವರು ಸಹ ರೇಗಿದ ದನಿಯಲ್ಲೇ, "ಹೋಗಿ ಆ ಮಹಾರಾಯ ಕನ್ನಡ ಪ್ರೊಫೆಸರನ್ನು ಕೇಳು. ಇದಕ್ಕೆ ಆತನೇ ಜವಾಬ್ದಾರ" ಎಂದರು. ಆಫೀಸಿನಲ್ಲಿ ವಿಚಾರಿಸಿದಾಗ, ಅಲ್ಲಿಯವರು ಹೇಳಿದರು: "ನಿನ್ನೆ ಮಧ್ಯಾಹ್ನವೇ ಪ್ರೊ. ವೆಂಕಣ್ಣಯ್ಯನವರು ಪ್ರಿನ್ಸಿಪಾಲರ ಜೊತೆ ಮಾತಾಡಿ ಇದನ್ನು ಬದಲಾಯಿಸಿದರು. ಈ ವಿಷಯದಲ್ಲಿ ಇಬ್ಬರಿಗೂ ಸ್ವಲ್ಪ ಬಿಸಿಬಿಸಿ ವಾಗ್ವಾದ ನಡೆದ ಹಾಗೆ ತೋರುತ್ತದೆ. ಇಲ್ಲಿ ನೋಡಿ, ನಾವು ವಿದ್ಯಾರ್ಥಿವೇತನದ ನಿಯಮಗಳನ್ನೇ ಬದಲಾಯಿಸಿ, ಈ ದಿನ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುತ್ತಿದ್ದೇವೆ; 'ಬಿ.ಎ. ಆನರ್ಸ್ ವಿದ್ಯಾರ್ಥಿಗೆ' ಎಂದಿದ್ದ ಕಡೆ 'ಬಿ.ಎ. ಆನರ್ಸ್ ಅಥವಾ ಎಂ.ಎ. ವಿದ್ಯಾರ್ಥಿಗೆ' ಎಂದು ಬದಲಾವಣೆ ಮಾಡಿದೆ. ಇದಕ್ಕಾಗಿ ವೆಂಕಣ್ಣಯ್ಯನವರು ನಿನ್ನೆ ದಿನವೇ ವೈಸ್‌ಛಾನ್ಸಲರನ್ನು ಕಂಡಿದ್ದರು."

ಅಣ್ಣನವರ ವರ್ತನೆಯಿಂದ ಶಾಮರಾಯರಿಗೆ ಕೋಪ ಬಂದಿತ್ತು. ತರಗತಿಗೆ ಚಕ್ಕರ್ ಹೊಡೆದು ಮನೆಗೆ ಹೊರಟುಹೋದರು. ಇದನ್ನೆಲ್ಲ ಗಮನಿಸುತ್ತಿದ್ದ ಪ್ರೊ. ವೆಂಕಣ್ಣಯ್ಯನವರು ಸಂಜೆ ಕಾಲೇಜಿನಿಂದ ಮನೆಗೆ ಬರುತ್ತಲೂ ಏನೂ ತಿಳಿಯದವರ ಹಾಗೆ, 'ಏನಯ್ಯಾ, ವಾಕಿಂಗ್ ಬರುತ್ತೀಯಾ, ಹೋಗೋಣ' ಎಂದು ತಮ್ಮನನ್ನು ಕರೆದರು. ಬೇಸರ ನುಂಗಿಕೊಂಡು ಶಾಮರಾಯರು ಅಣ್ಣನನ್ನು ಹಿಂಬಾಲಿಸಿದರು.

ಮೌನವಾಗಿ ಇಬ್ಬರೂ ೧೦ ನಿಮಿಷ ದಾರಿ ನಡೆದರು. ಕಾಲೇಜು ಆವರಣ ದಾಟಿದ ಮೇಲೆ ತಮ್ಮನನ್ನು ಉದ್ದೇಶಿಸಿ, ವೆಂಕಣ್ಣಯ್ಯನವರು "ಯಾಕೆ ಈ ದಿನ ಏನೋ ಒಂದು ತರಹ ಇದ್ದೀಯಲ್ಲ" ಎಂದು ಪ್ರಶ್ನಿಸಿದರು. ಕೂಡಲೇ ಶಾಮರಾಯರು ಕಟುವಾಗಿ, "ನಾನು ನಿಮ್ಮಿಂದ ಒಂದು ಕಾಸೂ ಕೇಳುತ್ತಿಲ್ಲ. ನನ್ನ ಸಂಪಾದನೆಯಿಂದಲೇ ಓದು ಮುಂದುವರಿಸುತ್ತಿದ್ದೇನೆ. ತಾನಾಗಿ ಬಂದಿದ್ದ ನನ್ನ ವಿದ್ಯಾರ್ಥಿವೇತನವನ್ನು ನೀವು ಕಿತ್ತು ಹಾಕಿದ್ದೇಕೆ?" ಎಂದು ಕೇಳಿದರು. ವೆಂಕಣ್ಣಯ್ಯನವರು ನಗುತ್ತ, "ಇಷ್ಟೇನೆ? ಇಷ್ಟು ಸಣ್ಣ ವಿಷಯಕ್ಕೆ ಕೊರಗುತ್ತಿದ್ದೀಯಾ? ನೀನು ಬಹು ಅಲ್ಪಮನುಷ್ಯ" ಎಂದರು. ಆ ಮಾತು ಕೇಳಿ ಶಾಮರಾಯರಿಗೆ ಕಣ್ಣಲ್ಲಿ ನೀರು ಬಂತು.

ವೆಂಕಣ್ಣಯ್ಯನವರು ಅದನ್ನು ಕಂಡರೂ ಕಾಣದವರಂತೆ, ಆಡುತ್ತಿದ್ದ ಮಾತು ಮುಂದುವರಿಸಿದರು. "ನಿನಗೆ ದೇವರು ಏನು ಕಡಿಮೆ ಮಾಡಿದ್ದಾನೆ? ನೀನು ಒಂದು ನೂರು ರೂಪಾಯಿಗಳಿಗೆ ಅಷ್ಟು ಬಾಯಿ ಬಿಡಬೇಕೆ? ನಾನು ಒಂದು ಸಲ ಮದರಾಸಿಗೆ ಹೋಗಿ ಬಂದರೆ, ನನ್ನ ಟಿ.ಎ. ಬಿಲ್ ಅಷ್ಟಾಗುತ್ತದೆ. ಈಗ ತಾನೇ ಒಂದು ಬಿಲ್ಲಿನ ಹಣ ಬಂದಿದೆ. ಅದನ್ನು ನೀನೇ ತೆಗೆದುಕೋ. ಪಾಪ! ಆ ಹುಡುಗ ಹೈದರಾಬಾದಿನಿಂದ ಎಂ.ಎ.

ಓದಲೆಂದು ಬಂದಿದ್ದಾನೆ. ದೊಡ್ಡ ಸಂಸಾರವಂದಿಗ. ಅಲ್ಲಿನ ಸರ್ಕಾರದಿಂದ ಅವನಿಗೆ ಬರುತ್ತಿರುವ ಸಹಾಯಧನ ಏತಕ್ಕೂ ಸಾಲದು. ಅವನ ಖರ್ಚಿಗಾಗಿ ನಾನು ಅಷ್ಟು ಇಷ್ಟು ಸಹಾಯ ಮಾಡುತ್ತಿದ್ದೇನೆ. ಹೆಚ್ಚು ಕೇಳುವುದಕ್ಕೆ ಅವನಿಗೂ ಸಂಕೋಚ. ಸ್ವಲ್ಪ ಸಹಾಯವಾಗಲಿ ಎಂದು ಬಿ.ಎಂ.ಶ್ರೀ ವಿದ್ಯಾರ್ಥಿವೇತನ ಅವನಿಗೆ ಕೊಡಿಸಿದ್ದೇನೆ. ಇದನ್ನು ನೀನು ಸಹಿಸಲಾರೆಯಾ? ದೇವರು ನಿನಗೆ ನನ್ನಂತಹ ಅಣ್ಣನನ್ನು ಕೊಟ್ಟಿಲ್ಲವೇ?"

ಶಾಮರಾಯರಿಗೆ ತನ್ನ ಅಣ್ಣನ ಬಗೆಗೆ ಹೃದಯದಲ್ಲಿ ಹೆಮ್ಮೆಯ ಭಾವ ಮೂಡಿತು. ಅವರಿಗೆ ತಿಳಿಯದಂತೆಯೇ ಅವರ ಬಾಯಿಂದ "ನನ್ನದು ತಪ್ಪಾಯಿತು" ಎನ್ನುವ ಮಾತು ಹೊರಟಿತು.

ಪ್ರ.ಸಂ. ಕುವೆಂಪು, 'ಸವಿನೆನಪು' (ದಿ. ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ), ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೦, ಪು. ೨೭೬-೭೭

೫೦. 'ನನಗೂ ಅಭ್ಯಾಸ ತಪ್ಪಬಾರದು'

ಟಿ. ಎಸ್. ವೆಂಕಣ್ಣಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು; ಪ್ರಸಿದ್ಧರಾದ ಕುವೆಂಪು, ತೀನಂಶ್ರೀ, ಡಿಎಲ್‌ಎನ್ ಮೊದಲಾದವರೆಲ್ಲ ಅವರಿಗೆ ಶಿಷ್ಯರಾಗಿದ್ದವರು; ವಿದ್ಯಾರ್ಥಿವತ್ಸಲರು, ವಿದ್ವಾಂಸರು; ಮೇಲಾಗಿ ಪರಮಸಾತ್ವಿಕರು, ಪರೋಪಕಾರಿಗಳು.

ಒಂದು ದಿನ ಬೆಳಗ್ಗೆ ೯ ಗಂಟೆಯ ಸಮಯ. ವೆಂಕಣ್ಣಯ್ಯನವರು ಡಿವಿಜಿ ಅವರೊಂದಿಗೆ ಬೆಂಗಳೂರು ಕೆ. ಆರ್. ರಸ್ತೆಯಲ್ಲಿ ದೊಡ್ಡಪೇಟೆ ಕಡೆಗೆ ಹೋಗುತ್ತಿದ್ದರು. ವಾಣೀವಿಲಾಸ ವಿದ್ಯಾಶಾಲೆಯ ಹತ್ತಿರ ಬರುವಾಗ್ಗೆ ಅವರಿಗೆ ಬಲಗಡೆಯ ಒಂದು ಓಣಿಯಿಂದ ಯಾರೋ ಒಬ್ಬಾತ ಓಡಿ ಬಂದು ವೆಂಕಣ್ಣಯ್ಯನವರ ಮುಂದೆ ಕೈ ಚಾಚಿ ನಿಂತನು. ಆತನ ಕೋಟು ಪಂಚೆಗಳು ಹರಕುಲು ಹರಕುಲು, ಕೊಳೆ ಕೊಳೆ; ಕಣ್ಣುಗುಡ್ಡೆ ಮುಂಚಾಚಿ ಹೊರಬರುವಂತೆ ಇತ್ತು. ಹಲ್ಲುಬ್ಬು ಎದ್ದು ಕಾಣುತ್ತಿತ್ತು.

ವೆಂಕಣ್ಣಯ್ಯ ಆತನಿಗೆ ದುಡ್ಡು ಕೊಡಲು ತಮ್ಮ ಜೇಬುಗಳನ್ನೆಲ್ಲ ಹುಡುಕಿ ನೋಡಿದರು. ಯಾವ ಜೇಬಿನಲ್ಲಿಯೂ ಏನೂ ಕಾಸಿರಲಿಲ್ಲ. ಡಿವಿಜಿ ಅವರನ್ನು ಕೇಳಿದರು. ಅವರ ಜೇಬಿನಲ್ಲಿಯೂ ಒಂದು ದಮ್ಮಡಿ ಕಾಸು ಸಹ ಇರಲಿಲ್ಲ. ಕೈಚಾಚಿದಾತನನ್ನು ಉದ್ದೇಶಿಸಿ, "ಏನೂ ಇಲ್ಲವಲ್ಲ ಈಗ ನರಸಿಂಹಮೂರ್ತಿ" ಎಂದರು. ಆತ "ಪರವಾಯಿಲ್ಲ ಬಿಡಿ ಸಾರ್, ಕೇಳುವುದು ಅಭ್ಯಾಸ, ಕೇಳಿದೆ" ಎಂದ.

ವೆಂಕಣ್ಣಯ್ಯನವರೂ ಡಿವಿಜಿಯವರೂ ಮುಂದೆ ನಡೆದರು. ೧೦-೧೫ ಅಡಿ ಮುನ್ನಡೆದಾಗ ಗುರುತಿನವರೊಬ್ಬರು ಎದುರಿಗೆ ಸಿಕ್ಕರು. ವೆಂಕಣ್ಣಯ್ಯನವರು ಅವರನ್ನು ಕೇಳಿ ಅರ್ಧಾಣೆ ಸಾಲ ತೆಗೆದುಕೊಂಡರು. ಈಗ ಆ ಯಾಚಕಮನುಷ್ಯ ಇದ್ದ ಕಡೆಗೆ ಹಿಂದಕ್ಕೆ ನಡೆದು ಹೋದರು. ಆತನನ್ನು ಕರೆದು 'ಮೂರ್ತಿ, ಹಿಡಿ' ಎಂದರು. ಆತ "ಇದಕ್ಕೆ ಯಾಕೆ ಸಾರ್ ಇಷ್ಟು ಶ್ರಮ? ಹೇಗೂ ದಿನಾಗಲೂ ಕೊಡುತ್ತೀರಿ. ಒಂದು ದಿನ ಇಲ್ಲದಿದ್ದರೆ ಏನಂತೆ?" ಎಂದು ಹೇಳಿದ. ಆಗ ವೆಂಕಣ್ಣಯ್ಯನವರು, "ನನಗೂ ಅಭ್ಯಾಸ ತಪ್ಪಬಾರದು, ಹೌದಲ್ಲೋ?" ಎಂದು ಆತನಿಗೆ ಹೇಳಿದರು.

"ಇದು ವೆಂಕಣ್ಣಯ್ಯನವರ ಸ್ವಭಾವಕ್ಕೆ ಬೀಗದ ಕೈ. ಕನಿಕರಿಸುವುದು, ಕೊಡುವುದು, ಕೊಟ್ಟದ್ದನ್ನು ಲೆಕ್ಕವಿಡದೆ ಮರೆಯುವುದು."

ಡಿವಿಜಿ, 'ಸಾಹಿತ್ಯೋಪಾಸಕರು', ಜ್ಞಾಪಕಚಿತ್ರಶಾಲೆ-೩, ಕಾವ್ಯಾಲಯ, ಮೈಸೂರು, ೧೯೭೦, ಪು. ೨೫೨-೫೩

೫೧. 'ನನಗೆ ಇರೋದು ಒಬ್ಬರೇ ದೇವರು'

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಮಾವಂದಿರು ನಂಜನಗೂಡಿನಲ್ಲಿದ್ದಾಗ ಅಲ್ಲಿಗೆ ಬರುತ್ತಿದ್ದ ಮಾಸ್ತಿಯವರು ನಂಜುಂಡೇಶ್ವರನ ದೇವಸ್ಥಾನಕ್ಕೆ ಹೋಗಿರಲಿಲ್ಲ. ಅವರಿಗೆ ಆವೂರಿನಿಂದ ವರ್ಗವಾಗುವ ಮುನ್ನ ಆದ ಒಂದು ಅನುಭವ ದೇವರ ದರ್ಶನ ಮಾಡಬೇಕೆನ್ನುವ ಭಾವವನ್ನು ಬಲಿಯುವಂತೆ ಮಾಡಿತು.

ಮೈಸೂರು ಮಾರ್ಗವಾಗಿ ಬೆಳಗಿನ ವಾಯುವಿಹಾರ ಹೊರಟಿದ್ದರು, ಒಂದು ಬೆಳಗ್ಗೆ. ಸೇತುವೆ ದಾಟಿ ಸ್ವಲ್ಪ ದೂರ ನಡೆದಿದ್ದರು. ಚಳಿಯ ದಿನಗಳು ಅವು. ಅವರಿಗೆ ಅರಿವಿಲ್ಲದ ಹಾಗೆಯೇ ಪಕ್ಕದ ಹೊಲದ ಕಡೆಯಿಂದ ಅವರೆ ಹೂಗಳ ಸುಖಕರವಾದ ಸುವಾಸನೆ ಮೂಗು ತಟ್ಟಿತು. ಗಮನ ಅದರತ್ತ ಹೋಯಿತು. "ಜನ ಲಕ್ಷಿಸಲಿ, ಬಿಡಲಿ, ಹೂವು ಹೂವೇ, ಸುವಾಸನೆ ಸುವಾಸನೆಯೇ" ಎಂಬ ಭಾವ ಅವರ ಮನಸ್ಸಿನಲ್ಲಿ ಸುಳಿದು ಹೋಯಿತು. ಜೊತೆಗೇ, ಮುಂದೆ ಮುಂದೆ ಮಾರ್ಗದಲ್ಲಿ ಸಾಗುತ್ತ, ಇನ್ನೊಂದು ಭಾವವೂ ಮನಸ್ಸನ್ನು ಆವರಿಸಿತು. "ನಂಜುಂಡೇಶ್ವರನ ಸನ್ನಿಧಿಯಲ್ಲಿ ಇಷ್ಟು ಹತ್ತಿರ, ಇಷ್ಟು ದಿನದಿಂದ ಇದ್ದೇನೆ. ದೇವರ ದರ್ಶನಕ್ಕೆ ಹೋಗಲಿಲ್ಲ. ಜನ ಲಕ್ಷಿಸಲಿ ಬಿಡಲಿ, ದೇವರು ದೇವರೇ, ಸನ್ನಿಧಿ ಸನ್ನಿಧಿಯೇ" ಎಂಬುದೇ ಆ ಭಾವ.

೧೯೨೬ರ ಮಹಾರಾಜರ ವರ್ಧಂತಿಗೆ ಮೈಸೂರಿಗೆ ಬಂದಾಗ್ಗೆ, ಬಿಡುವಿನ ಒಂದು

ಭಾನುವಾರ ನಂಜುಂಡೇಶ್ವರನ ದರ್ಶನ ಮಾಡಿಕೊಂಡು ಬಂದರು. ಸ್ವಸ್ಥಳವಾದ ಮಾಸ್ತಿಯಲ್ಲಿ ಶಿವಾಲಯದ ಉತ್ಸವದ ದಿನಗಳಲ್ಲಿ ಅವರ ತಂದೆ ತಪ್ಪದೆ ಅಲ್ಲಿಗೆ ಹೋಗಿ ಬರುತ್ತಿದ್ದರು. ತಾವು ಈಗ ದೇವರ ದರ್ಶನ ಮಾಡುವಾಗ ಇದು ತಮ್ಮ ತಂದೆಗೆ ತೃಪ್ತಿ ತರುವ ಸಂಗತಿಯೆನ್ನಿಸಿತು. ತಾವು ದರ್ಶಿಸುತ್ತಿರುವ ದೇವರು ತಿರುಪತಿ ಶ್ರೀನಿವಾಸನ ಒಂದು ರೂಪವೇ ಎಂದು ಅವರಿಗೆ ತೋರಿತು; ಸಾಷ್ಟಾಂಗ ಮಾಡುವಾಗ, 'ಶ್ರೀನಿವಾಸ, ಕಾಪಾಡು' ಎಂದು ಪ್ರಾರ್ಥನೆ ಮಾಡಿದರು.

ಮತ್ತೊಮ್ಮೆ ಮೈಸೂರಿಗೆ ಹೋದಾಗ, ಆಗಲೂ ಒಂದು ಭಾನುವಾರ ಬೇಗನೆ ಕಚೇರಿ ಕೆಲಸ ಮುಗಿಸಿ ನಂಜನಗೂಡಿಗೆ ಹೊರಡಲು ಸಿದ್ಧರಾದರು. ಅವರ ಬಳಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀವೈಷ್ಣವ ಸೂಪರಿಂಟೆಂಡೆಂಟ್ ಒಬ್ಬರು ಮಾಸ್ತಿಯವರ ಅವಸರವನ್ನು ಗಮನಿಸಿದರು. "ಸ್ವಾಮಿ ಎಲ್ಲಿಗೋ ಹೋಗಿ ಬರುವ ಯೋಚನೆಯಲ್ಲಿರುವಂತಿದೆಯಲ್ಲ" ಎಂದರು. ಮಾಸ್ತಿ ಅವರು, "ನಂಜನಗೂಡಿಗೆ ಹೋಗಬೇಕು" ಎಂದರು. "ಯಾಕೆ, ಅಲ್ಲಿ ಯಾರಾದರೂ ನೆಂಟರಿದ್ದಾರೆಯೇ?" ಎಂಬುದು ಮುಂದಿನ ಪ್ರಶ್ನೆ. "ದೇವಸ್ಥಾನಕ್ಕೆ ಹೋಗಿ ಬರೋಣ ಎಂದು ಹೊರಟಿದ್ದೇನೆ" ಎಂಬುದು ಮಾಸ್ತಿಯವರ ಉತ್ತರ. ಆಗ ಆ ಸೂಪರಿಂಟೆಂಡೆಂಟರು "ಅಪಚಾರವನ್ನು ಮನ್ನಿಸಬೇಕು; ಶ್ರೀವೈಷ್ಣವನಿಗೆ ಇದು ನಿಷಿದ್ಧ. ಈಶ್ವರನ ದೇವಸ್ಥಾನಕ್ಕೆ ಶ್ರೀವೈಷ್ಣವ ಹೋಗಬಾರದು." ಮಾಸ್ತಿಯವರು ಅದಕ್ಕೆ ಸಮಾಧಾನ ಹೇಳಿದ್ದು ಹೀಗೆ: "ಆಚಾರ್ಯರೇ, ನೀವು ಪುಣ್ಯಶಾಲಿಗಳು. ನಿಮಗೆ ಹಲವರು ದೇವರಿದ್ದಾರೆ. ನನಗೆ ಇರೋದು ಒಬ್ಬರೇ ದೇವರು. ಎಲ್ಲ ದೇವಸ್ಥಾನಗಳಲ್ಲೂ ನಾನು ಆ ಒಬ್ಬ ದೇವರಿಗೇ ನಮಸ್ಕಾರ ಮಾಡುತ್ತೇನೆ". ಸೂಪರಿಂಟೆಂಡೆಂಟ್ ಅವರು ಮುಂದೆ ಏನೂ ಹೇಳಲಿಲ್ಲ. ಮಾಸ್ತಿಯವರು ನಂಜನಗೂಡಿನ ಪ್ರಯಾಣಮಾಡಿದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ಭಾವ-೨', ಮಾಸ್ತಿವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಬೆಂಗಳೂರು-೧೯, ೧೯೬೦ (ದ್ವಿ), ಪು. ೨೪೭-೫೦.

೫೨. 'ನನಗೆ ಏನೋ ಅಲ್ಲಿ ಹೇಳ್ತದೆ, ಹೀಗೆ ಮಾಡಬೇಕಂತ'

ಡಿ. ವಿ. ಗುಂಡಪ್ಪನವರು (ಡಿ.ವಿ.ಜಿ) ಕರ್ನಾಟಕದ ಪ್ರಸಿದ್ಧ ಸಾಹಿತಿಗಳು, ಸಾರ್ವಜನಿಕರ ವ್ಯಕ್ತಿ. ಅವರು ಸು. ೧೮೯೮-೯೯ರಲ್ಲಿ ಕನ್ನಡ ಎಲ್. ಎಸ್., ಮತ್ತು ಸು. ೧೯೦೦ರಲ್ಲಿ ಇಂಗ್ಲಿಷ್ ಎಲ್. ಎಸ್. ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದರು. ಇಲ್ಲಿಂದ ಮುಂದಿನ ಓದಿನ ವಿಷಯದಲ್ಲಿ ಮನೆಯಲ್ಲಿ ಯಾರೂ ಉತ್ಸಾಹಿಗಳಾಗಿರಲಿಲ್ಲ.

ಸಂದರ್ಭಗಳು ಹಾಗಿದ್ದುವು. ಅಜ್ಜಿಗೆ ತಾನು ಬದುಕಿರುವಷ್ಟು ದಿನ ಮೊಮ್ಮಗ ತನ್ನ ಕಣ್ಣ ಮುಂದೆಯೇ ಇರಬೇಕೆಂಬ ಹಟ; ಅಜ್ಜ ಆಗ್ಗೆ ತೀರಿಕೊಂಡಿದ್ದರಿಂದ ಪರಸ್ಥಳದಲ್ಲಿ ಹುಡುಗನನ್ನು ಬಿಟ್ಟು ಓದಿಸುವುದಕ್ಕೆ ಹಣಕಾಸಿನ ಮುಗ್ಗಟ್ಟು ಇತ್ತು. ಚಿಕ್ಕಜ್ಜ ಅದಕ್ಕೆ ಹಿಂದೇಟು ಹಾಕುತ್ತಿದ್ದರು. ತಂದೆಯ ಮನಸ್ಸು ಡೋಲಾಯಮಾನವಾಗಿತ್ತು. ಅನೇಕ ಆಪ್ತೇಷ್ಟರು "ಓದು ಇಷ್ಟೇ ಸಾಕು, ಹೆಚ್ಚು ಓದಿ ಏನಾಗಬೇಕಾಗಿದೆ? ಅಧ್ಯಯನ ಮಾಡಲಿ, ಸಂಸ್ಕೃತ ಕಲಿಯಲಿ" ಎನ್ನುತ್ತಿದ್ದರು. ಕೆಲವರು "ಈ ಹುಡುಗನನ್ನು ಹೇಗಾದರೂ ಓದಿಸಬೇಕು, ಇವನು ಇಂಗ್ಲಿಷ್ ಕಲಿಯಲೇ ಬೇಕು" ಎಂದು ಯೋಚಿಸುತ್ತಿದ್ದರು. ಹೀಗೆ ಯೋಚಿಸುತ್ತಿದ್ದವರಲ್ಲಿ ತಂದೆಯ ಸ್ನೇಹವರ್ಗದಲ್ಲಿದ್ದ ಬಂಡಿ ರಸೂಲ್ ಖಾನ್ ಮುಖ್ಯರು.

ಬಂಡಿ ರಸೂಲ್ ಖಾನ್ ಅಕ್ಷರಸ್ಥರಲ್ಲ. ಉರ್ದು ಮತ್ತು ಕನ್ನಡ, ತೆಲುಗು ಮಾತಾಡಬಲ್ಲವರಾಗಿದ್ದರು, ಅಷ್ಟೆ. ಅವರಿಗೆ ತಂದೆ ತಮ್ಮಂದಿರಿದ್ದರು. ಕೊಂಚ ಜಮೀನು ಇತ್ತು; ಸಂಸಾರ ತೂಗಿಸುವುದಕ್ಕೆ ಬಾಡಿಗೆಗೆ ರಸೂಲ್‌ಖಾನ್ ಬಂಡಿ ಹೊಡೆಯುತ್ತಿದ್ದರು. ಮುಳಬಾಗಿಲ ಹತ್ತಿರ ಸೋಮೇಶ್ವರನ ಪಾಳ್ಯದಲ್ಲಿ ಅವರದು ಒಂದು ಹಳೆಯ ಮಣ್ಣು ಮಾಳಿಗೆ ಮನೆ. ನಮಾಜುಪಾಳಿಯನ್ನೂ ಸ್ನಾನವನ್ನೂ ತಪ್ಪಿಸುತ್ತಿರಲಿಲ್ಲ. ಮನುಷ್ಯ ಬಡವನಾಗಿದ್ದರೂ ಸಾಧು. ಅವರಿಗೆ "ಹುಡುಗ ಬುದ್ಧಿವಂತ, ಇಂಗ್ಲಿಷ್ ಅಕ್ಷರ ಕೂಡ ಬರದೇ ಇದ್ದವನು ಎರಡೇ ವರ್ಷಗಳಲ್ಲಿ ಎಲ್.ಎಸ್. ಪಾಸುಮಾಡಿಬಿಟ್ಟನಲ್ಲ" ಎಂದು ಡಿ.ವಿ.ಜಿ ಅವರ ಬಗೆಗೆ ಅಭಿಮಾನ, ಆಶ್ಚರ್ಯ.

ಓದಿಸುವ ವಿಷಯದಲ್ಲಿ 'ಮುಂದೇನು' ಎಂಬ ವಿಚಾರ ಚರ್ಚೆಯಾಗುವಾಗ ಡಿವಿಜಿ ಅವರ ತಂದೆ ಪರಸ್ಥಳದ ಓದು ಸಾಧ್ಯವೇ ಇಲ್ಲ ಎಂದು ಹೇಳುತ್ತಿದ್ದರು. ಮಿಕ್ಕವರು ಒಂದು ಕ್ಷಣ ಹೀಗೆ, ಒಂದು ಕ್ಷಣ ಹಾಗೆ ಎಂದು ತೂಗಾಡುತ್ತಿದ್ದರು. ರಸೂಲ್‌ಖಾನ್ ಮಿಕ್ಕವರ ಮಾತು ಮುಗಿದ ಮೇಲೆ ತನ್ನ ತೀರ್ಮಾನವನ್ನು ಹೀಗೆ ಹೇಳಿದರು:

"ನೀವೆಲ್ಲಾ ಏನಾದರೂ ಹೇಳಿ. ಆ ಹುಡುಗನನ್ನು ಓದಿಸಲೇ ಬೇಕು. ನನ್ನ ಕೈಯಲ್ಲಾಗುವಷ್ಟು ನಾನು ಮಾಡಿಬಿಡುತ್ತೇನೆ. ಅದೇನು ಅಂತೀರೋ: ಶನಿವಾರ ನಾನು ಹೇಗಿದ್ದರೂ ಬಂಡಿ ಹೊಡೆದುಕೊಂಡು ಹೋಗುತ್ತೇನೆ, ರಾಬರ್ಟ್‌ಸನ್ ಪೇಟೆಗೆ. ಅಲ್ಲಿಂದ ಬೌರಿಂಗ್‌ಪೇಟೆಗೆ ೩-೪ ಮೈಲಿ. ಈ ಹುಡುಗನನ್ನು ನನ್ನ ಗಾಡಿಯಲ್ಲಿ ಹಾಕಿಕೊಂಡು ಬೌರಿಂಗ್‌ಪೇಟೆ ರೈಲ್ವೇಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಬೆಂಗಳೂರಿಗೆ ಟಿಕೆಟ್ ತೆಗೆದುಕೊಟ್ಟು ಒಂದು ರೂಪಾಯಿ ಕೈಖರ್ಚಿಗೆ ಕೊಡುತ್ತೇನೆ. ಅವನು ತಿರುಪೆ ಮಾಡಿಕೊಂಡಾದರೂ ಅಲ್ಲಿಯೇ ಓದಲಿ. ಅವನ ಓದಂತೂ ನಡೆಯಲೇ ಬೇಕು."

ರಸೂಲ್‌ಖಾನರ ಮಾತು ಕೇಳಿ ಎಲ್ಲ ಬೆರಗಾದರು. "ಇವನಿಗೇನು ಇಷ್ಟು ಹಟ. ಒಂದು ಅಕ್ಷರ ಕಂಡವನಲ್ಲ. ಮನೆಯಲ್ಲಿ ಊಟಕ್ಕೆ ಪರದಾಟ. ಇದು ಯಾತರ ಧೈರ್ಯ?" ಎಂದರು, ಕೆಲವರು. ರಸೂಲ್‌ಖಾನ್ ತಮ್ಮ ಎದೆಯ ಮೇಲೆ ಕೈಯಿಟ್ಟುಕೊಂಡು, "ನನಗೆ ಏನೋ ಅಲ್ಲಿ ಹೇಳ್ತದೆ, ಹೀಗೆ ಮಾಡಬೇಕಂತ' ಎಂದರು. ಸರಿ, ಡಿ.ವಿ.ಜಿ.

ಅವರ ವಿದ್ಯಾಭ್ಯಾಸದ ಪ್ರಯಾಣ ಶನಿವಾರ ರಸೂಲ್‌ಖಾನರ ಬಂಡಿಯಲ್ಲಿ ಎಂದು ನಿಶ್ಚಯವಾಯಿತು.

ರಸೂಲ್‌ಖಾನ್ ತಮ್ಮ ಪ್ರತಿಜ್ಞೆಯಂತೆ ಬಾಲಕ ಡಿ.ವಿ.ಜಿ.ಯನ್ನೂ ಅವರ ಮೂಟೆಯನ್ನೂ ತನ್ನ ಬಂಡಿಗೆ ಹಾಕಿಕೊಂಡು ರಾಬರ್ಟ್‌ಸನ್ ಪೇಟೆಗೆ ಗಾಡಿ ಓಡಿಸಿದರು. ಈ ವೇಳೆಗೆ ಒಂದು ನಿಶ್ಚಯಕ್ಕೆ ಬಂದಿದ್ದ ಡಿವಿಜಿ. ತಂದೆಯವರು ತಾವೂ ಇನ್ನೊಂದು ಬಂಡಿಯಲ್ಲಿ ಕುಳಿತು ಪ್ರಯಾಣಮಾಡಿದರು. ರಾಬರ್ಟ್‌ಸನ್ ಪೇಟೆಗೆ ಬಂಡಿ ತಲುಪಿತು; ಅಲ್ಲಿಂದ ಮುಂದೆ ಬೌರಿಂಗ್ ಪೇಟೆಗೆ ಮತ್ತೆ ಗಾಡಿಪ್ರಯಾಣ ಸಾಗಿತು; ಅಲ್ಲಿ ರೈಲ್ವೇ ಸ್ಟೇಷನ್ನಿನಲ್ಲಿ ರೈಲು ಹತ್ತಿ ಡಿವಿಜಿ. ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಬೆಂಗಳೂರಿನತ್ತ ಪ್ರಯಾಣಬೆಳೆಸಿದರು.

ಡಿ.ವಿ.ಜಿ. 'ಹೃದಯ ಸಂಪನ್ನರು', ಜ್ಞಾಪಕ ಚಿತ್ರಶಾಲೆ-೭, ಕಾವ್ಯಾಲಯ, ಮೈಸೂರು, ೧೯೭೪, ಪು. ೧೭೪-೧೮೦.

೫೩. 'ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ'

ಒಂದು ಸಲ ಉಡುಪಿಯಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ಭಗವದ್ಗೀತೆಯ ಮೇಲೆ ಉಪನ್ಯಾಸಕ್ಕೆ ಆಹ್ವಾನಿತರಾಗಿದ್ದರು. ಆಕಸ್ಮಿಕವಾಗಿ ಭೇಟಿಯಾದ ಬೆಳಗೆರೆ ಕೃಷ್ಣಶಾಸ್ತ್ರಿಗಳನ್ನೂ ತಮ್ಮ ಜೊತೆಗೆ ಬರುವಂತೆ ತಿಳಿಸಿದರು. ಗೊತ್ತಾದ ದಿನ ದೇವುಡು ಮತ್ತು ಪತ್ನಿ ಗೌರಮ್ಮನವರು ಕೃಷ್ಣಶಾಸ್ತ್ರಿಗಳ ಜೊತೆಗೆ ಕಡೂರು ಮಾರ್ಗವಾಗಿ ಉಡುಪಿಗೆ ಬಂದು ತಲುಪಿದರು. ಕಡೂರು ವರೆಗೆ ರೈಲು, ಅಲ್ಲಿಂದ ಕಾರಿನಲ್ಲಿ ಪ್ರಯಾಣ.

ಕೃಷ್ಣದೇವಾಲಯದಲ್ಲಿ ಪೂಜೆ ನಡೆದ ಬಳಿಕ ಉಪನ್ಯಾಸ ನಡೆಯುವಲ್ಲಿಗೆ ಗಣ್ಯರೆಲ್ಲಾ ತೆರಳಿದರು. ಅಲ್ಲಿ ದೊಡ್ಡ ಸಭೆ ನೆರೆದಿತ್ತು. ದೇವುಡು ಅವರನ್ನು ವೇದಿಕೆ ಬಳಿಗೆ ಕರೆದೊಯ್ಯಲಾಯಿತು. ಆಗ ನಡುವೆ ಯಾರೋ ಬಂದು "ನಿಮಗೊಂದು ಟೆಲಿಗ್ರಾಂ" ಎಂದು ತಂದು ಕೊಟ್ಟರು. ಅದನ್ನು ದೇವುಡು ತೆರೆದು ಓದಿಕೊಂಡರು; ಅವರ ಮುಖದಲ್ಲಿ ಆತಂಕದ ಅಲೆ ಬಂದು ಹೋಯಿತು. "ಏನು ವಿಚಾರ" ಎಂದು ಕಾರ್ಯನಿರ್ವಾಹಕರು ಪ್ರಶ್ನಿಸಿದರು. ದೇವುಡು ಟೆಲಿಗ್ರಾಂ ಮುದುರಿ ತಮ್ಮ ಪುಸ್ತಕದೊಳಕ್ಕೆ ಸೇರಿಸಿ, "ಯಾವುದೋ ಒಂದು ಪ್ರಕಾಶನಕ್ಕೆ ಸಂಬಂಧಿಸಿದ್ದು, ಅತಿಮುಖ್ಯವಾದ್ದು, ಕೂಡಲೇ ಬರಹೇಳಿದ್ದಾರೆ, ಹೋಗಲೇ ಬೇಕು. ತಾವು ನನಗಾಗಿ ಒಂದು ತೊಂದರೆ ಸಹಿಸಿಕೊಳ್ಳಬೇಕು" ಎಂದರು. ಕಾರ್ಯಕರ್ತರು, "ಅಗತ್ಯವಾಗಿ ಅಗಬಹುದು, ಸಂಕೋಚವೇಕೆ, ತಾವು ಏನು ಹೇಳಿದರೂ ಮಾಡೋಣ" ಎಂದು ಉತ್ತರಿಸಿದರು. ದೇವುಡು, "ಈಗ ಈ ಉಪನ್ಯಾಸ ಮುಗಿದ

ಕೂಡಲೇ ನನ್ನನ್ನು ಕಾರಿನಲ್ಲಿ ಕಡೂರಿಗೆ ಮುಟ್ಟಿಸಬೇಕು, ಹಾಗೆ ಮಾಡುತ್ತೀರಾ?" ಎಂದರು. ಅವರು ಒಪ್ಪಿದರು.

ದೇವುಡು ಸಭೆಯನ್ನು ಉದ್ದೇಶಿಸಿ, ಭಗವದ್ಗೀತೆಯ ಮೇಲೆ ತಮ್ಮ ಉಪನ್ಯಾಸ ಮಾಡಿದರು. ಉಪನ್ಯಾಸ ಅಮೋಘವಾಗಿತ್ತು. "ಹಲವು ಬಾರಿ ಕೇಳಿದ್ದೆನಾದರೂ ಅಂದಿನ ವ್ಯಾಖ್ಯಾನದ ವೈಖರಿಯೇ ವೈಖರಿ. ಜನರಂತೂ ಅದೆಷ್ಟು ಸಂತೋಷಪಟ್ಟರೋ. ಸಭೆ ಮುಗಿದ ಮೇಲೆ ಬೇರೆ ಸಂಘ ಸಂಸ್ಥೆಗಳವರು ಅವರನ್ನು ಆಹ್ವಾನಿಸಲು ಮುಂದಾದರು." ಎಂದು ಕೃಷ್ಣ ಶಾಸ್ತ್ರಿಗಳು ಬರೆದಿದ್ದಾರೆ. ಮತ್ತೊಮ್ಮೆ ಬಿಡುವಾಗಿ ಬರುವುದಾಗಿ ಎಲ್ಲರಿಗೂ ಸಮಾಧಾನ ಹೇಳಿ ದೇವುಡು ತಮ್ಮ ಪತ್ನಿ ಮತ್ತು ಕೃಷ್ಣ ಶಾಸ್ತ್ರಿಗಳೊಂದಿಗೆ ಸಿದ್ಧವಾದ ಕಾರಿನಲ್ಲಿ ಕಡೂರಿಗೆ ಪ್ರಯಾಣ ಮಾಡಿದರು; ಒತ್ತಾಯ ಮಾಡಿದ್ದರಿಂದ ಕೃಷ್ಣ ಶಾಸ್ತ್ರಿಗಳು ತಮ್ಮ ಪ್ರಯಾಣ ಬೆಂಗಳೂರಿನ ವರೆಗೂ ಮುಂದುವರಿಸಿದರು.

ದೇವುಡು ಪತ್ನಿಯನ್ನು ಕೇಳಿದರು: "ಉಡುಪಿಯ ಉಪನ್ಯಾಸ ಹೇಗಿತ್ತು?" ಆಕೆ ಹೇಳಿದರು: "ಎಂದೂ ಇಷ್ಟು ಚೆನ್ನಾಗಿ ಬಂದಿರಲಿಲ್ಲ". ಅದಕ್ಕೆ ದೇವುಡು, "ಇನ್ನು ಮೇಲೆ ನೀನೇ ನನ್ನನ್ನು ಕೂರಿಸಿ ಉಪನ್ಯಾಸ ನೀಡಬೇಕು" ಎಂದಾಗ, ಆಕೆ "ಹಾಗೇ ಆಗಲಿ" ಎಂದು ನಗುತ್ತ ಉತ್ತರಿಸಿದರು. ಜಟಕಾ ಮಾಡಿಕೊಂಡು ಮೂವರೂ ಶಂಕರಪುರಕ್ಕೆ ಬಂದರು. ಅಲ್ಲಿಯೇ ದೇವುಡು ಅವರ ಮನೆ.

ಈಗ ದೇವುಡು, ಕೃಷ್ಣ ಶಾಸ್ತ್ರಿಗಳು ಶಂಕರಮಠದ ಮೆಟ್ಟಿಲುಗಳ ಮೇಲೆ ಪ್ರತ್ಯೇಕವಾಗಿ ಕುಳಿತರು. "ನಿನ್ನೆ ರಾತ್ರಿ ಟೆಲಿಗ್ರಾಂ ವಿಚಾರ ಗೊತ್ತೇ, ದೇವ್ರು" ಎಂದು ದೇವುಡು ಕೇಳಿದ್ದಕ್ಕೆ ಶಾಸ್ತ್ರಿಗಳು "ಅದೇನೋ ಪ್ರಕಾಶನದ ವಿಷಯ ಅಂದಿರಲ್ಲ" ಎಂದು ಉತ್ತರಿಸಿದರು. "ಹೌದು, ಅದನ್ನು ಈಗ ಪ್ರಕಾಶಪಡಿಸುತ್ತೇನೆ; ಆದರೆ ಗೌರೂಗೆ ಹೇಗೆ ತಿಳಿಸಬೇಕೋ ಗೊತ್ತಿಲ್ಲ. ನಿಮಗೆ ಮೊದಲು ತಿಳಿಸ್ತೇನೆ. ದಯವಿಟ್ಟು ದಿಟ್ಟವಾಗಿ ಸಹಕರಿಸಬೇಕು" ಎಂದು ದೇವುಡು ತಿಳಿಸಿದಾಗ ಕೃಷ್ಣಶಾಸ್ತ್ರಿಗಳು, "ಇದೇನು ಹೀಗೆ ಸುತ್ತುಬಳಸಿನ ಮಾತು" ಎಂಬುದಾಗಿ ಅವರ ಮುಖವನ್ನೇ ದಿಟ್ಟಿಸಿ ನೋಡಿದರು. ಅವರ ಮುಖ ಈಗ ಅತ್ಯಂತ ಗಂಭೀರವಾಗಿತ್ತು, ಕಣ್ಣು ಕೆಂಪೇರಿದ್ದವು. "ಏನು ಸಂದರ್ಭವೋ" ಎಂದುಕೊಳ್ಳುತ್ತಿದ್ದಂತೆಯೇ ದೇವುಡು ಹೇಳಿದರು: "ರಾಮು ತೀರಿಹೋಗಿದ್ದಾನೆ. ಅದೇ ಟೆಲಿಗ್ರಾಂ. ಅಲ್ಲಿ ಇದನ್ನು ತಿಳಿಸಿದರೆ ಎಲ್ಲರಿಗೂ ಅಸಹ್ಯವಾಗುವುದೆಂದು ಸುಮ್ಮನಾದೆ. ಆದ್ದರಿಂದಲೇ ಎಲ್ಲ ಮೊಟಕುಮಾಡಿ ವಾಪಸ್ಸು ಬಂದದ್ದಾಯಿತು."

ಡಿ. ಎನ್. ರಾಮು ದೇವುಡು ಅವರ ಹಿರಿಯ ಮಗ. ಕೋಲಾರದ ಕಾಲೇಜಿನಲ್ಲಿ ಕನ್ನಡದ ಉಪನ್ಯಾಸಕರಾಗಿದ್ದರು. ಇದ್ದಕ್ಕಿದ್ದಂತೆ ತೀರಿಕೊಂಡಿದ್ದರು.

"ಅಲ್ಲಾ ಸ್ವಾಮಿ, ಈ ವಿಚಾರ ತಿಳಿದ ಮೇಲೂ ಅಂಥ ಅಮೋಘವಾದ ಉಪನ್ಯಾಸ ಮಾಡಿದಿರಲ್ಲ, ಹೇಗೆ ಸಾಧ್ಯವಾಯಿತು" ಎಂದು ಕೃಷ್ಣಶಾಸ್ತ್ರಿಗಳು ಆಶ್ಚರ್ಯಗೊಂಡು ಕೇಳಿದಾಗ, ದೇವುಡು ಹೀಗೆಂದರು: "ಹೌದು, ಅಲ್ಲಿ ನಾನು ಸೇರಿದ್ದ ಸಭೆಗೆ ಉಪನ್ಯಾಸ ಮಾಡಲಿಲ್ಲ. ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ; ಸ್ಥಿತಪ್ರಜ್ಞನ ಲಕ್ಷಣವನ್ನು

ನನಗೆ ನಾನೇ ಬೋಧಿಸಿಕೊಂಡೆ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬುದನ್ನು ನನಗೇ ಅನ್ವಯಿಸಿಕೊಂಡೆ. ಆದ್ದರಿಂದಲೇ ಆ ಸಭೆಯನ್ನು ನಿರ್ವಹಿಸುವುದು ಸಾಧ್ಯವಾಯಿತು. ಬಿಡಿ ಬಿಡಿ, ಅದೆಲ್ಲಾ ಆಗಿಹೋದ ಮಾತು. ಈಗ ಗೌರೂಗೆ ಇದನ್ನು ತಿಳಿಸಿ, ಧೈರ್ಯ ತುಂಬಿ, ಅವಳನ್ನು ಆಮೇಲೆ ಮನೆಗೆ ಕರೆದೊಯ್ಯಬೇಕು. ಇಲ್ಲವಾದರೆ ಅವಳು ಯದ್ವಾತದ್ವಾ ಆಡಿ ಮಕ್ಕಳುಮರಿ ಇನ್ನಷ್ಟು ರಾದ್ಧಾಂತ ಮಾಡಿಯಾರು".

ಗೌರಮ್ಮನವರಿಗೆ ವಿಷಯ ತಿಳಿದಾಗ ಆಕೆ ತುಂಬಾ ಗೋಳಾಡಿದರು, ಮೂರ್ಛೆ ಹೋದರು; ಎಚ್ಚತ್ತ ಮೇಲೆಯೂ ಅತ್ತು ಗೋಳಾಡಿದರು. ಆ ವೇಳೆಗೆ ಆಗಲೇ ಶವ ಸಂಸ್ಕಾರ ನಡೆದುಹೋಗಿತ್ತು. ಮಗನ ಮುಖವನ್ನೂ ಆ ತಾಯಿತಂದೆ ನೋಡಲಾಗಲಿಲ್ಲ. ಮನೆಯಲ್ಲಿ ಜನಸಂದಣಿ ಹೆಚ್ಚಿ, ಸಂಜೆಯಾಗುತ್ತ ಬಂತು. "ಇದು ಹೀಗೆಯೇ ದೇವ್ರು. ನಿಮ್ಮನ್ನು ಅನಾವಶ್ಯಕವಾಗಿ ಈ ಗೊಂದಲದಲ್ಲಿ ಸಿಕ್ಕಿಸಿದೆ. ಬನ್ನಿ, ಸ್ವಲ್ಪ ಆಚೆ ಹೋಗೋಣ" ಎಂದು ಕೃಷ್ಣಶಾಸ್ತ್ರಿಗಳನ್ನು ದೇವುಡು ಕರೆದುಕೊಂಡು ಸಾಹಿತ್ಯ ಪರಿಷತ್ತಿನ ವರೆಗೂ ನಡೆದು ಹೋದರು. "ಯಾರಿದ್ದು ಏನು ಮಾಡುವುದಿದೆ. ನೀವಿನ್ನು ಹೊರಡಿ" ಎಂದು ಒತ್ತಾಯ ಮಾಡಿ ಅವರನ್ನು ಕಳುಹಿಸಿ ತಾವು ಹಿಂದಿರುಗಿದರು.

ಸಂ. ಹೊ. ರಾ. ಸತ್ಯನಾರಾಯಣ ರಾವ್, ಗಂಗಾಧರ ದೇವುಡು, "ದೇವುಡು ದರ್ಶನ", ಪ್ರ. ಗಂಗಾಧರ ದೇವುಡು, ಬೆಂಗಳೂರು-೭೮, ಪು. ೬೦-೬೨.

೫೮. 'ನನಗೆ ವಿದ್ಯಾದಾನ ಮಾಡಬೇಕು, ಇನ್ನೇನೂ ಬೇಡ'

ಹೆಗ್ಗಡದೇವನ ಕೋಟೆ ತಾಲ್ಲೂಕು ಮಗ್ಗೆಯ ಸ್ಥಳದವರು ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರು (೧೮೪೪-೧೯೩೩). ಅವರ ತಂದೆ ಎಸ್. ಸುಬ್ಬಯ್ಯನವರ ಮೃತಿಯ ಬಳಿಕ (೧೮೫೪) ತಾಯಿ ಭಾಗೀರಥಮ್ಮನವರು ಮಕ್ಕಳನ್ನು ಮೈಸೂರಿಗೆ ಕರೆತಂದು ಭಾಗವತ ಸುಬ್ಬರಾಯರೆಂಬ ಮಹಾನುಭಾವರನ್ನು ಆಶ್ರಯಿಸಿ ಅವರ ಮನೆಯ ಹಿಂಭಾಗದಲ್ಲಿಯೇ ಚಿಕ್ಕ ಮನೆಯಲ್ಲಿ ವಾಸಿಸತೊಡಗಿದರು.

ವಾಸಕ್ಕೆ ಮನೆಯೇನೋ ದೊರೆಯಿತು. ಜೀವನ ಹೇಗೆ? ತಾಯಿಯೂ ಹೆಣ್ಣುಮಕ್ಕಳೂ ಅವರಿವರ ಮನೆಗಳಲ್ಲಿ ಕೆಲಸ ಮಾಡುತ್ತ ಜೀವನ ನಿರ್ವಹಿಸಬೇಕಾಯಿತು. ಆಗ ಮೈಸೂರು ನಗರದಲ್ಲಿ ಕುಡಿಯುವ ನೀರಿಗೆ ತಾಪತ್ರಯ; ಇನ್ನೂ ಕೊಳಾಯಿನೀರು ಬಂದಿರಲಿಲ್ಲ. ಕಾರಂಜಿ ಕೆರೆಗೆ ಹೋಗಿ ಕೊಡದಲ್ಲಿ ನೀರು ತರಬೇಕಾಗಿತ್ತು. ತಾಯಿ ಭಾಗೀರಥಮ್ಮನವರೂ ಅವರ ಇಬ್ಬರು ಹೆಣ್ಣುಮಕ್ಕಳೂ ದಿನಂಪ್ರತಿ ಕಾರಂಜಿ ಕೆರೆಗೆ ಹೋಗಿ ಕೊಡಗಳಲ್ಲಿ ನೀರು ಹೊತ್ತುತಂದು ಕೆಲವು ಅನುಕೂಲಸ್ಥರ ಮನೆಗೆ ಸರಬರಾಜು

ಮಾಡುತ್ತಿದ್ದರು. ಒಂದು ಕೊಡ ನೀರಿಗೆ ೧ ಕಾಸು, ಕೆಲವು ಸಲ ೩ ಕಾಸು ಕೂಲಿ ಸಿಕ್ಕುತ್ತಿತ್ತು.

ವೆಂಕಟಕೃಷ್ಣಯ್ಯನವರಿಗೆ ಆಗ ಸು. ೧೦ ವರ್ಷ. ಇನ್ನೂ ಉಪನಯನ ಆಗಿರಲಿಲ್ಲ. ಭಾಗವತ ಸುಬ್ಬರಾಯರು ತಾವೇ ನಿಂತು ಧರ್ಮೋಪನಯನ ಮಾಡಿಸಿದರು. ಕೆಲವು ದಿವಸ, ಕಲಿತ ಮಂತ್ರಗಳಿಂದ ಅಲ್ಲಿ ಇಲ್ಲಿ ದೇವರ ಪೂಜೆ ಮಾಡಿಸುವುದು, ವ್ರತ ಮಾಡಿಸುವುದು, ಲಗ್ನ ಕಟ್ಟಿಕೊಡುವುದು ಹೀಗೆ ಅಲ್ಪ ಸ್ವಲ್ಪ ಸಂಪಾದನೆ ಆಗುತ್ತಿತ್ತು, ವೆಂಕಟಕೃಷ್ಣಯ್ಯನವರಿಗೆ. ಆದರೆ ಜೀವನೋಪಾಯಕ್ಕೆ ಕ್ರಮಬದ್ಧವಾಗಿ ವಿದ್ಯೆ ಸಂಪಾದಿಸಬೇಕು, ಇಂಗ್ಲಿಷ್ ಕಲಿಯಬೇಕು ಎಂಬ ಆಸೆ ಬರುಬರುತ್ತ ಬಲವಾಯಿತು. ಆದರೆ ಈ ಆಸೆ ಈಡೇರುವುದು ಹೇಗೆ? ಯಾರನ್ನು ಕೇಳಬೇಕು, ಏನು ಮಾಡಬೇಕು?

ಒಂದು ದಿವಸ ವೆಂಕಟಕೃಷ್ಣಯ್ಯನವರು ಸುಬ್ಬರಾಯರ ಮುಂದೆ ಹೋಗಿ ಕೈ ಮುಗಿದುಕೊಂಡು ಸುಮ್ಮನೆ ನಿಂತುಕೊಂಡರು. ಆಗ ಆ ಹುಡುಗನ ಮೇಲೆ ಸುಬ್ಬರಾಯರಿಗೆ ಕರುಣೆ ಹುಟ್ಟಿತು. ಅವರು, "ನಿನಗೆ ಏನು ಬೇಕಪ್ಪಾ?" ಎಂದು ಕೇಳಿದರು. ತಕ್ಷಣವೇ ಬಾಲಕ ವೆಂಕಟಕೃಷ್ಣಯ್ಯನವರು "ನನಗೆ ವಿದ್ಯಾದಾನ ಮಾಡಬೇಕು, ಇನ್ನೇನೂ ಬೇಡ" ಎಂಬುದಾಗಿ ನಮ್ರನಾಗಿ ನುಡಿದರು. ಅವರ ಕಣ್ಣಿನಲ್ಲಿ ನೀರು ತುಂಬಿ ಬಂತು; ಅಳಲು ಆರಂಭಿಸಿದರು; "ನನಗೆ ನೀವೇ ತಂದೆ, ನಾನು ಅನಾಥ" ಎಂದರು. ಆಗ ಅವರ ವಯಸ್ಸು ೧೪ ವರ್ಷ.

ಸುಬ್ಬರಾಯರು ಹುಡುಗನ ಕಣ್ಣೀರು ಒರಸಿ, "ಅಳಬೇಡಪ್ಪ, ನಾನು ನಿನಗೆ ವಿದ್ಯೆಗೆ ಏರ್ಪಾಡು ಮಾಡುತ್ತೇನೆ" ಎಂದು ಹೇಳಿ ಮರುದಿನವೇ ಅವನನ್ನು ಮಹಾರಾಜರ 'ರಾಜಾಸ್ ಫ್ರೀ ಸ್ಕೂಲ್' ಎಂಬ ಆಂಗ್ಲೋ - ವರ್ನಾಕ್ಯುಲರ್ ಸ್ಕೂಲಿಗೆ (ಎ.ವಿ. ಸ್ಕೂಲ್) ಸೇರಿಸಿದರು. ವಿದ್ಯಾಭ್ಯಾಸ ಮುಗಿದ ಮೇಲೆ ಕ್ರಮವಾಗಿ ಸಾರ್ವಜನಿಕಜೀವನಕ್ಕೆ ವೆಂಕಟಕೃಷ್ಣಯ್ಯನವರು ಪ್ರವೇಶಿಸಿ ಪ್ರಸಿದ್ಧರಾದ ವಿಷಯ ತಿಳಿದಿದೆ.

ಪಿ. ಆರ್. ರಾಮಯ್ಯ, 'ದಯಾಸಾಗರ ಎಂ. ವೆಂಕಟಕೃಷ್ಣಯ್ಯ', ಗೀತಾ ಬುಕ್ ಹೌಸ್, ಮೈಸೂರು, ೧೯೬೯, ಪು. ೮-೯

೫೫. 'ನನ್ನ ಕೆಲಸ ಕಳೆ ಕಟ್ಟುವುದು ಹೇಗೆ?'

ಬಿ. ರಾಮಕೃಷ್ಣರಾವ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೊದಲು ದಿವಾನರ ಕಛೇರಿಯಲ್ಲಿ ಕೆಲಸಕ್ಕಿದ್ದು, ಬಳಿಕ ಅಸಿಸ್ಟೆಂಟ್ ಕಮೀಷನರ್ ಆಗಿ, ಪ್ಯಾಲೇಸ್ ಕಂಟ್ರೋಲರ್ ಆಗಿ ಕೆಲಸಮಾಡಿ ನಿವೃತ್ತರಾದವರು; 'ಶ್ರೀಮನ್ಮಹಾರಾಜರವರ

ವಂಶಾವಳಿ'ಯೆಂಬ ಪ್ರಸಿದ್ಧವಾದ ಗ್ರಂಥದ (ಭಾಗ ೧: ೧೯೧೬; ಭಾಗ ೨: ೧೯೨೨) ಕರ್ತೃ. ಅವರ ಇಂಗ್ಲಿಷ್‌ಭಾಷೆಯ ವಾಕ್ಯಸರಣಿ ಲಾರ್ಡ್ ಮೆಕಾಲೆಯವರ ವಾಕ್ಯಸರಣಿಗೆ ಅನುಸಾರವಾದುದು ಎನ್ನುತ್ತಾರೆ.

ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ದಿವಾನರಾಗಿದ್ದಾಗ ಅವರ ಹಿರಿಯ ಮಗ ದೊರೆಸ್ವಾಮಿ ಅಯ್ಯರ್ ಅವರಿಗೆ ರಾಮಕೃಷ್ಣರಾಯರು ಖಾಸಗಿಯಾಗಿ ಪಾಠಹೇಳುತ್ತಿದ್ದರು. ಅದು ಚಾಮರಾಜ ಒಡೆಯರ್ ಅವರ ಕಾಲ. ರಾಮಕೃಷ್ಣರಾಯರಿಗೆ ನಾಲ್ವರು ಗಂಡು ಮಕ್ಕಳು. ಇವರಲ್ಲಿ ಮೊದಲಿಬ್ಬರು ರಾಮಪ್ಪ, ಕೃಷ್ಣಪ್ಪ. ಇವರು ಬೆಂಗಳೂರು ಮುನಿಸಿಪಲ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ಇವರಿಗೆ ಅಧ್ಯಾಪಕರಾಗಿದ್ದವರು ವಿ. ಲಕ್ಷ್ಮೀಪತಯ್ಯ ನವರು. ಇವರು ಸರ್ ಎಂ. ವಿಶ್ವೇಶ್ವರಯ್ಯನವರ ವಂಶಸ್ಥರು. ಈ ಪ್ರಸಂಗ ಜರುಗಿದ್ದು ೧೮೯೨ರಲ್ಲಿ, ಅಧ್ಯಾಪಕ ಅಯ್ಯನವರು ಭಗವಾನ್ ಪಂಡಿತರೆಂಬವರ ಮನೆಯಲ್ಲಿ ವಾಸವಿದ್ದಾಗ. ಅವರ ಮಾತಿನಲ್ಲಿಯೇ ನಿರೂಪಣೆ:

"ರಾಮಕೃಷ್ಣ ರಾಯರ ಮಕ್ಕಳಲ್ಲಿ ದೊಡ್ಡವನು ಮಂದಬುದ್ಧಿಯವನು; ಚಿಕ್ಕವನು ಮೈಗಳ್ಳ, ತುಂಟಶಿಖಾಮಣಿ. ಒಂದು ದಿನ ಸಾಯಂಕಾಲ ರಾಯರು ಅವರ ಮನೆಯ ಮುಂದೆ ನಿಂತಿರುವುದನ್ನು ನಾನು ನೋಡಿದೆ; ವಿನಯಪೂರ್ವಕವಾಗಿ ನಮಸ್ಕರಿಸಿದೆ. ಮುಂದೆ ನಮ್ಮ ನಡುವೆ ಹೀಗೆ ಸಂಭಾಷಣೆ ಜರುಗಿತು:

ನಾನು: ಸ್ವಾಮಿ, ನಮ್ಮ ಮುನಿಸಿಪಲ್ ಹೈಸ್ಕೂಲ್ ವಿದ್ಯಾರ್ಥಿಗಳಾದ ರಾಮಪ್ಪ ಕೃಷ್ಣಪ್ಪ ಎಂಬ ಹುಡುಗರ ತಂದೆ ತಾವೇನೋ?

ರಾಯರು: ಹೌದು ಸ್ವಾಮಿ, ನಾನೇ ಅವರ ತಂದೆ. ನನ್ನಿಂದ ತಮಗೇನಾಗಬೇಕು?

ನಾನು: ಸ್ವಾಮಿ, ನಾನು ಸ್ಕೂಲುಮಾಸ್ಟರು. ತಾವು ನನ್ನ ಶಿಷ್ಯರಿಗೆ ತಂದೆ ಅನ್ನುತ್ತೀರಿ. ತಮ್ಮ ಸಹಾಯವಿಲ್ಲದಿದ್ದರೆ ನನ್ನ ಕೆಲಸ ಕಳೆ ಕಟ್ಟುವುದು ಹೇಗೆ? ತಮ್ಮ ಮಕ್ಕಳು ಬುದ್ಧಿಶಾಲಿಗಳಲ್ಲ. ಪರಂತು, ಮೈಗಳ್ಳತನ ಬೇಕಾದಷ್ಟಿದೆ. ನಾಳೆ ದಿವಸ ಅವರು ಪ್ಯಾಸಾಗದೆ ಇದ್ದರೆ ಅಪಕೀರ್ತಿ ನನಗೆ ಮಾತ್ರವೇ ಬರುತ್ತದೋ ಅಥವಾ ಅದರಲ್ಲಿ ಒಂದು ಭಾಗ ನಿಮಗೂ ಬರುತ್ತದೋ? ತಾವೇ ಹೇಳಿ ಸ್ವಾಮಿ."

ಬಳಿಕ ರಾಯರು ಅಯ್ಯನವರನ್ನು ತಮ್ಮ ಕೊಠಡಿಯೊಳಕ್ಕೆ ಕರೆದುಕೊಂಡುಹೋಗಿ ಕುಳ್ಳಿರಿಸಿಕೊಂಡು ತುಂಬ ವ್ಯಸನಾಕ್ರಾಂತರಾಗಿ ಹೀಗೆ ಹೇಳಿದರು:

ರಾಯರು: ಸ್ವಾಮಿ, ತಾವು ಎಲ್ಲರಂತೆ ಸ್ಕೂಲ್ಮಾಸ್ಟರಲ್ಲ. ನನ್ನ ಮಕ್ಕಳಿಗೆ ವಿದ್ಯೆ ಬರಲಿಲ್ಲವೆಂಬ ಆದರದಿಂದ ಈ ರೀತಿಯಾಗಿ ನನ್ನನ್ನು ಕೇಳಿದ ಸ್ಕೂಲ್ಮಾಸ್ಟರನ್ನು ನನ್ನ ಜನ್ಮದಲ್ಲಿ ನಾನು ಕಾಣೆನು. ತಾವು ನನ್ನ ಪಾಲಿಗೆ ದೇವರಾಗಿ ನನಗೆ ಕಾಣಿಸಿರುತ್ತೀರಿ.

ನೀನೇನು ಪ್ಯಾಸು ಮಾಡಿದ್ದಿ? ನೀನೇನು ಪ್ಯಾಸು ಮಾಡಿದ್ದಿ? ಎಂದು ನಾನು ಸಿಕ್ಕಿದವರನ್ನೆಲ್ಲಾ, ದುರಾಕ್ಷೇಪಣೆ ಮಾಡುತ್ತಿದ್ದೆನು. ನನ್ನ ಮಾನಭಂಗಕ್ಕಾಗಿ ಈ ಮಕ್ಕಳು ನನ್ನ ಹೊಟ್ಟೆಯಲ್ಲಿ ಹುಟ್ಟಿ ಹೀಗೆ ನನ್ನಲ್ಲಿ ಹಗೆ ಸಾಧಿಸುತ್ತಿದ್ದಾರೆ. ತಾವು ಕೃಪೆಮಾಡಿ

ಅವರನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ತಮ್ಮ ಯಶಸ್ಸು ಶಾಶ್ವತವಾಗಿ ನಿಲ್ಲುತ್ತದೆ. ನಾನು ಹೆಚ್ಚಾಗಿ ಉಪಚಾರ ಹೇಳಲಾರೆ.

ತರುವಾಯ ಲಕ್ಷ್ಮೀಪತಯ್ಯನವರು ಆ ವಿದ್ಯಾರ್ಥಿಗಳ ವಿಷಯದಲ್ಲಿ ಹೆಚ್ಚು ನಿಗಾವಹಿಸಿದರು. ಆ ವರ್ಷವೇ ದೊಡ್ಡಮಗ ರಾಮಪ್ಪ ಎಲ್.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣನಾದನು; ಚಿಕ್ಕಮಗ ಕೃಷ್ಣಪ್ಪ ಮಾರನೆಯ ವರ್ಷ ಮೇಲಿನ ತರಗತಿಗೆ ಹೋದನು. ರಾಮಕೃಷ್ಣರಾಯರು ಲಕ್ಷ್ಮೀಪತಯ್ಯನವರಲ್ಲಿ ತುಂಬಾ ಪ್ರೀತಿ ಗೌರವಗಳನ್ನು ತೋರಿ, ಸೂಕ್ತ ಗುರುದಕ್ಷಿಣೆ ಕೊಟ್ಟು ಅವರಿಂದ ತಮ್ಮ ಮಕ್ಕಳಿಗೆ ಪಾಠಹೇಳಿಸಿದರು; ಮೊಮ್ಮಕ್ಕಳನ್ನು ಸಹ ಅವರಲ್ಲಿ ಪಾಠಕ್ಕೆ ಕಳುಹಿಸಿದರು.

ಮುಂದೆ ಹಲವು ವರ್ಷಗಳ ಮೇಲೆ ಅಯ್ಯನವರನ್ನು ಒಂದು ಔತಣಕ್ಕೆ ಆಹ್ವಾನಿಸಿ ಮಕ್ಕಳು ಮೊಮ್ಮಕ್ಕಳೊಂದಿಗೆ ಲಕ್ಷ್ಮೀಪತಯ್ಯನವರ ಪಾಠಪ್ರವಚನ ಕ್ರಮವನ್ನು ಹೀಗೆ ವಿವರಿಸಿದರಂತೆ:

"ಆಯನ ಪಾಠಂ ಚೆಪ್ಪಿತೆ ಚೆಟ್ಲುಕು ಗುಟ್ಲುಕು, ರಾಳ್ಲುಕು, ಕೊಂಡ್ಲುಕು ಗುಂಡ್ಲುಕು ಅನ್ನಿಟಿಕಿ ಲೆಸ್ಸ ಚದುವು ವಸ್ತುಂದರಾ."

ವಿ. ಲಕ್ಷ್ಮೀಪತಯ್ಯ, ಬಿ.ಎ. ಇವರ ಆತ್ಮಚರಿತ್ರೆ (ಹಸ್ತಪ್ರತಿ), ೧೯೩೬, ಪು. ೧೦೯-೧೧೦

೫೬. 'ನನ್ನನ್ನು ಋಣಮುಕ್ತನನ್ನಾಗಿ ಮಾಡು'

'ಋಣ ಇಟ್ಟುಕೊಂಡು ಸಾಯಬಾರದು' ಎನ್ನುವ ಪ್ರಜ್ಞೆ ಸದಾ ಇರುತ್ತದೆ, ಆತ್ಮಗುಣಸಂಪನ್ನರಲ್ಲಿ. "ಮಹಾಜನಗಳಿಂದ ಚಂದಾ ಸಂಗ್ರಹಿಸಿ ಅದನ್ನು ವಿನಿಯೋಗಿಸದೆ ನಾನೇ ಉಪಯೋಗಿಸಿ ಋಣಿಯಾಗಿದ್ದೇನೆ. ಆ ಋಣದಿಂದ ನನ್ನನ್ನು ವಿಮೋಚನೆಮಾಡು" ಎಂಬ ಒಂದು ಮಂತ್ರ ಕೂಷ್ಮಾಂಡಹೋಮ ಸಂಬಂಧವಾದ ಮಂತ್ರಗಳಲ್ಲಿ ಬರುತ್ತದೆ.

೧೯೫೫ನೆಯ ಇಸವಿ. ಆರ್. ಕೆ. ಶ್ರೀಕಂಠ ಕುಮಾರ ಸ್ವಾಮಿಗಳು ಭದ್ರಾವತಿಯ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದರು. ಆ ವರ್ಷ ಲಾಭ ಚೆನ್ನಾಗಿ ಬಂದು, ಉದ್ಯೋಗಿಗಳಿಗೆ ಮೂರು ತಿಂಗಳ ಬೋನಸ್ ಕೊಟ್ಟಿದ್ದರು. ಕುಮಾರಸ್ವಾಮಿಗಳ ತಂದೆ ಮಗನನ್ನು ಕರೆದು, "ಪುಟ್ಟಣ್ಣ, ನನ್ನ ತಂದೆಯವರ ಋಣ ತೀರಿಸಲು ನನಗೆ ಸಹಾಯಮಾಡುತ್ತೀಯಾ" ಎಂದು ಕೇಳಿದರು. ಮಗನಿಗೆ ಸಂದರ್ಭ ತಿಳಿದಿರಲಿಲ್ಲ; 'ಏನಣ್ಣ' ಎಂದು ಕೇಳಿದರು.

ಆಗ ತಂದೆ ಹೇಳಿದರು: "೧೯೧೮ರಲ್ಲಿ ನನ್ನ ತಂದೆ ಸಾಯುವಾಗ ನನ್ನ ಕೈಹಿಡಿದು 'ಅಪ್ಪಾ! ರುದ್ರಪಟ್ಟಣದಲ್ಲಿದ್ದಾಗ ಮಾರ್ಗಶಿರ ಮಾಸದಲ್ಲಿ ಧಾತ್ರಿಹವನವನ್ನು ಪ್ರತಿವರ್ಷದಂತೆ

ಆ ವರ್ಷವೂ ನಡಸಲು ಮಹಾಜನಗಳಿಂದ ಚಂದಾ ವಸೂಲುಮಾಡಿದ್ದೆ. ೪೫ ರೂ. ಆಗಿತ್ತು. ಆಗ ಸಮಾರಾಧನೆ ನಡಸಬೇಕಾಗಿತ್ತು. ಆದರೆ ಆ ಹೊತ್ತಿಗೆ ಪ್ಲೇಗ್ ಬಂದು ಬಡಿದಿದ್ದರಿಂದ ನಾವೆಲ್ಲ ಊರು ಬಿಟ್ಟು ಬಂದೆವು. ಈಗ ೧೫ ವರ್ಷಗಳಿಂದಲೂ ಒಂದು ವರ್ಷವಾದರೂ ಸಮಾರಾಧನೆ ನಡಸಿ ಋಣಮುಕ್ತನಾಗಬೇಕು ಎಂದು ಪ್ರಯತ್ನಪಟ್ಟೆ. ಅದು ಸಾಧ್ಯವಾಗಲಿಲ್ಲ. ಆ ಮಹಾಜನಗಳ ಋಣ ಇಟ್ಟುಕೊಂಡು ದೇಹತ್ಯಾಗ ಮಾಡಲು ನನಗೆ ಕಷ್ಟವಾಗಿದೆ. ಮುಂದೆ ಯಾವತ್ತಾದರೂ ಗ್ರಾಮದಲ್ಲಿ ಒಂದು ಸಮಾರಾಧನೆ ನಡಸಿ ನನ್ನನ್ನು ಋಣಮುಕ್ತನನ್ನಾಗಿ ಮಾಡು' ಎಂದು ಕಳಕಳಿಯಿಂದ ಕೇಳಿಕೊಂಡರು. 'ಆಗಲಿ' ಎಂದು ಒಪ್ಪಿಕೊಂಡೆ. ಆದರೆ ೩೭ ವರ್ಷಗಳಿಂದ ಅಷ್ಟು ಹಣ ಕೂಡಿಸಲು ನನ್ನ ಕೈಯಲ್ಲಿ ಆಗಲೇ ಇಲ್ಲ. ಈಗ ನೀನೂ ಸಂಪಾದಿಸುತ್ತಿದ್ದೀಯೆ. ನಿನ್ನ ತಾತನ ಋಣ ತೀರಿಸಲು ಸಹಾಯಮಾಡಲು ನಿನಗೆ ಸಾಧ್ಯವೇ?"

ಕುಮಾರಸ್ವಾಮಿಗಳು, "ಅಣ್ಣ! ನಿಮ್ಮ ಕರ್ತವ್ಯಪ್ರಜ್ಞೆಗೆ ನನ್ನ ಅನಂತನಮಸ್ಕಾರಗಳು. ತಾತನ ಋಣವಿಮೋಚನೆ ಖಂಡಿತವಾಗಿ ಮಾಡುತ್ತೇನೆ. ರುದ್ರಪಟ್ಟಣಕ್ಕೆ ಕಾಗದ ಬರೆಯಿರಿ. ಈ ಕಾಲದಲ್ಲಿ ೪೫ ರೂ.ಗಳಿಗೆ ಗ್ರಾಮದಲ್ಲಿ ಸಮಾರಾಧನೆ ಮಾಡಲು ಸಾಧ್ಯವಾಗುವುದಿಲ್ಲ. ಎಷ್ಟಾಗುತ್ತೆ ಎಂದು ತಿಳಿದುಕೊಳ್ಳಿ, ಮಾಡೋಣ" ಎಂದು ಹೇಳಿದರು.

ಕೂಡಲೇ ತಂದೆ ರುದ್ರಪಟ್ಟಣದ ವೇ. ಬ್ರ. ಶ್ರೀ. ಕೃಷ್ಣ ದೀಕ್ಷಿತರಿಗೆ ಕಾಗದ ಬರೆದರು. ಅವರಿಂದ ಕೂಡಲೇ ಉತ್ತರವೂ ಬಂತು. ಆಗ ಒಂದು ದಿನದ ಸಮಾರಾಧನೆಗೆ ಬರಿಯ ಹುಳಿಯನ್ನ ಪಾಯಸ ಆಂಬೊಡೆ ಸೇರಿದ ಹಾಗೆ ಖರ್ಚು ೯೦೦ ರೂಪಾಯಿ ಬೇಕಾಗುವುದೆಂದು ತಿಳಿಯಿತು. ಕುಮಾರಸ್ವಾಮಿಗಳು ತಮ್ಮ ಬೋನಸ್ ಎಲ್ಲಾ ಸೇರಿಸಿ ೮೦೦ ರೂಪಾಯಿ ಕೊಟ್ಟರು; ಹೊಸಪೇಟೆಯಲ್ಲಿದ್ದ ತಮ್ಮ ತಮ್ಮನಿಂದ ಉಳಿದ ೧೦೦ ರೂಪಾಯಿ ತೆಗೆದುಕೊಂಡು ಪೂರ್ತಿಹಣವನ್ನು ರುದ್ರಪಟ್ಟಣಕ್ಕೆ ಕಳಿಸಿಕೊಟ್ಟರು.

ಸಮಾರಾಧನೆಯ ದಿನ ನಿಶ್ಚಯವಾಯಿತು. ಆ ದಿನಕ್ಕೆ ಕುಮಾರಸ್ವಾಮಿಗಳಿಗೆ ರಜ ಸಿಕ್ಕದೆ, ಅವರು ಸಮಾರಾಧನೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಸಮಾರಾಧನೆ ತೃಪ್ತಿಕರವಾಗಿ ನೆರವೇರಿತು.

ತಂದೆ ಕಾಗದ ಬರೆದರು: "ಪುಟ್ಟಣ್ಣ, ಸಮಾರಾಧನೆ ತೃಪ್ತಿಯಾಗಿ ನೆರವೇರಿತು. ಮಹಾಜನಗಳಿಗೆಲ್ಲಾ ನಮಸ್ಕರಿಸಿ 'ನಿನ್ನ ತಂದೆಯ ಋಣ ತೀರಿತು ಎಂದು ಎಲ್ಲರೂ ಒಪ್ಪಿ ನನ್ನನ್ನೂ ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಿದೆ. ಎಲ್ಲಾ ಏಕಕಂಠದಿಂದ ಜಯ ಘೋಷ ಮಾಡಿದರು. ಪುಟ್ಟಣ್ಣ! ನೀನು ಸುಪುತ್ರ. ನಿನ್ನ ತಂದೆಯ, ತಾತನ ಋಣ ತೀರಿಸಲು ಇಷ್ಟರ ಮಟ್ಟಿಗೆ ಸಹಾಯಮಾಡಿದ್ದೀಯೆ.

ದೀನಬಂಧು ಚಿತ್ತರಂಜನ ದಾಸರು ತಮ್ಮ ತಂದೆಯವರು ಸತ್ತಾಗ, ಸಾಲುಗಟ್ಟಿ ಬಂದ ಸಾಲಗಾರರನ್ನೆಲ್ಲ ಕಂಡು ನಮಸ್ಕರಿಸಿ ತಮ್ಮ ತಂದೆ ಮಾಡಿದ್ದ ಸಾಲದ ಒಂದು ಕಾಸು ಸಹ ಬಿಡದೆ ತೀರಿಸುವುದಾಗಿ ಆಶ್ವಾಸನೆ ಕೊಟ್ಟು, ತಾವು ಸಂಪಾದನೆ ಮಾಡಿ, ಬಡ್ಡಿ ಸಮೇತ ಎಲ್ಲಾ ಸಾಲ ತೀರಿಸಿದರಂತೆ. ಹಾಗೆ ನೀನೂ ಮಾಡಿದ್ದೀಯೆ. ನಿನ್ನ ತಾತ

ಯಾವ ಲೋಕದಲ್ಲಿ ಇದ್ದರೂ ತಮ್ಮ ಮೊಮ್ಮಗನ ಧಾರ್ಮಿಕತೆ ಕಂಡು ಖಂಡಿತ ಆನಂದಪಟ್ಟಿರುತ್ತಾರೆ. ಅವರ ಅನುಗ್ರಹ ಸದಾ ನಿನ್ನ ಮೇಲಿರಲಿ".

ಆರ್. ಕೆ. ಶ್ರೀಕಂಠ ಕುಮಾರಸ್ವಾಮಿ, 'ಹೃದಯ ಸಂಪನ್ನತೆ', ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, ೨೦೦೦, ಪು. ೫೨-೫೪.

೫೭. 'ನನ್ನ ರೋಗಿಗಳೇ ನನ್ನ ದೇವರುಗಳು'

ಹಾಲೆಂಡ್ ದೇಶದ ಡಾ. ಕ್ರಾಕ್‌ವಾನ್ ವೀಡ್ ಎಂಬುವರು ಔಷಧಗಳಿಗೆ ಪ್ರಯೋಜನವಾಗುವ ಭಾರತೀಯ ವನಸ್ಪತಿಗಳ ಬಗ್ಗೆ ಸಂಶೋಧನೆ ನಡಸಲು ಸರ್‌ಬಾನ್ ವಿಶ್ವವಿದ್ಯಾನಿಲಯದಿಂದ ನಿಯೋಜಿತರಾಗಿ ಬಂದಿದ್ದರು. ಕ್ರಾಕ್‌ವಾನ್ ೬ ಅಡಿ ೫ ಅಂಗುಲ ಪುರುಷಪ್ರಮಾಣದ ಧೀಮಂತವ್ಯಕ್ತಿ. ಸದಾ ಸೈಕಲ್‌ಕಚ್ಚೆಪಂಚೆ, ರೇಷ್ಮೆ ಜುಬ್ಬ, ಉತ್ತರೀಯ ಧರಿಸುತ್ತಿದ್ದರು. ಇವರನ್ನು ವಿದೇಶೀಯರೆಂದು ಯಾರೂ ಹೇಳುವ ಸ್ಥಿತಿಯಿರಲಿಲ್ಲ.

ಕ್ರಾಕ್‌ವಾನ್ ಅವರು ಒಂದು ದಿನ ಅ. ನ. ಕೃಷ್ಣರಾಯರ ಹತ್ತಿರ "ನನಗೆ ಸರಿಯಾಗಿ ಮಾರ್ಗದರ್ಶನ ಮಾಡುವವರೇ ಸಿಕ್ಕಿಲ್ಲ. ನಿಮ್ಮ ನಾಡಿನ ವನಸ್ಪತಿಗಳು ನಿಮ್ಮ ರಾಷ್ಟ್ರದ ಸಂಪತ್ತು. ಇವುಗಳ ವಿಚಾರ ಇಲ್ಲಿಯ ಜನಕ್ಕೇ ಸರಿಯಾಗಿ ತಿಳಿದಿಲ್ಲ ಎನ್ನುವುದು ಶೋಚನೀಯ" ಎಂದು ಸ್ವಲ್ಪ ನಿರಾಸೆಯಿಂದ ಹೇಳಿದರು. ಆಗ ಅ.ನ.ಕೃ. "ಇಲ್ಲಿಂದ ಸುಮಾರು ೨೦೦ ಮೈಲಿಗಳ ದೂರದಲ್ಲಿ ತುಂಗಭದ್ರ ಎನ್ನುವ ರೈಲುನಿಲ್ದಾಣವಿದೆ. ನಿಲ್ದಾಣಕ್ಕೆ ಅತಿಸಮೀಪದಲ್ಲಿ ಪಂಡಿತ ತಾರಾನಾಥರ ಪ್ರೇಮಾಯತನವೆಂಬ ಆಶ್ರಮವಿದೆ. ಅಲ್ಲಿಗೆ ಹೋಗಿ. ಪಂಡಿತರಿಂದ ನಿಮಗೆ ಯೋಗ್ಯ ಮಾರ್ಗದರ್ಶನ ದೊರೆಯುತ್ತದೆ" ಎಂಬುದಾಗಿ ತಿಳಿಸಿದರು.

ಕ್ರಾಕ್‌ವಾನ್ ವೀಡ್ ಹಾಗೆಯೇ ಪ್ರೇಮಾಯತನಕ್ಕೆ ಹೋದರು. ಅಲ್ಲಿ ತಾರಾನಾಥರ ಸಾನ್ನಿಧ್ಯ ಸಹವಾಸಗಳ ಸುಯೋಗ ಅವರಿಗೆ ಪ್ರಾಪ್ತವಾಯಿತು. ಅಗತ್ಯವಾಗಿದ್ದ ಮಾರ್ಗದರ್ಶನವೂ ದೊರೆಯಿತು. ಒಂದು ವಾರದ ನಂತರ ಅವರು ಕೃಷ್ಣರಾಯರಿಗೆ ಒಂದು ಪತ್ರವನ್ನು ಬರೆದರು. ಅಲ್ಲಿಯ ಒಕ್ಕಣೆಯ ಭಾಗ:

"ನೀವು ನನ್ನನ್ನು ಇಲ್ಲಿಗೆ ಕಳಿಸಿಕೊಟ್ಟು ದೊಡ್ಡ ಉಪಕಾರ ಮಾಡಿದಿರಿ. ಇಂಥ ವ್ಯಕ್ತಿಯನ್ನು ನಾನು ನನ್ನ ಜೀವಮಾನದಲ್ಲಿ ನೋಡಿಲ್ಲ. ತಾರಾನಾಥರಿಗೆ ತಿಳಿಯದ ವಿಷಯವೇ ಇಲ್ಲ. ಸಕಲಶಾಸ್ತ್ರಪ್ರವೀಣರಾದ ಇವರು ಎಲ್ಲ ವಿಷಯಗಳ ಮೇಲೂ ಅಧಿಕಾರವಾಣಿಯಿಂದ ಮಾತನಾಡುತ್ತಾರೆ. ನಾನು ಇಲ್ಲಿಯೇ ಏಕೆ ನೆಲಸಿ ಬಿಡಬಾರದೆಂದು ಯೋಚಿಸುತ್ತಿದ್ದೇನೆ."

ಕ್ರಾಕ್‌ವಾನ್ ನಾಲ್ಕು ತಿಂಗಳುಗಳ ಕಾಲ ಪಂಡಿತ ತಾರಾನಾಥರ ಆಶ್ರಮದಲ್ಲಿ ನಿಂತು ಅವರ ನೆರವಿನಿಂದ ತಮ್ಮ ಸಂಶೋಧನಗ್ರಂಥವನ್ನು ಮುಗಿಸಿ ಪ್ಯಾರಿಸ್‌ಗೆ ಪ್ರಯಾಣ ಬೆಳಸಿದರು. ಊರು ತಲುಪಿದ ಮೇಲೆ ಅವರು ವಿದೇಶೀಯರಿಗೆ ನೀಡಿದ ಪಂಡಿತ ತಾರಾನಾಥರ ವ್ಯಕ್ತಿತ್ವದ ಪರಿಚಯದಿಂದಲೋ ಏನೋ ಅವರಿಗೆ ಹತ್ತಾರು ಸಂಸ್ಥೆಗಳಿಂದ ಆಹ್ವಾನದ ಕರೆಗಳು ಹೋದವು. ಈ ವಿಷಯ ಅ.ನ.ಕೃ. ಅವರಿಗೆ ಸಹ ತಿಳಿದುಬಂತು. ಅವರು ತಾರಾನಾಥರಿಗೆ ಕಾಗದ ಬರೆದು, "ಫ್ರಾನ್ಸಿಗೆ ಹೋಗಿ ಬರುವುದು ಒಳ್ಳೆಯದು. ನಮ್ಮ ದೇಶದ ಕೀರ್ತಿ ಅಪಾರವಾಗಿ ಬೆಳೆಯುತ್ತದೆ" ಎಂಬುದಾಗಿ ಸಲಹೆ ಮಾಡಿದರು.

ಪಂಡಿತ ತಾರಾನಾಥರು ಅ.ನ.ಕೃ. ಅವರಿಗೆ ಪ್ರತ್ಯುತ್ತರವನ್ನು ಹೀಗೆ ಬರೆದರು: "ನನ್ನ ಕೀರ್ತಿಯ ಪ್ರಸಾರಕ್ಕೆ ನಾನು ಫ್ರಾನ್ಸಿಗೆ ಹೋಗುವ ಅಗತ್ಯವಿಲ್ಲ. ಉತ್ಕಟವಾದ ಬೇನೆಗಳಿಂದ ನರಳುತ್ತಿರುವ ಹಲವು ರೋಗಿಗಳು ಇಲ್ಲಿದ್ದಾರೆ. ಅವರು ನನ್ನನ್ನು ನಂಬಿಕೊಂಡು ಇಲ್ಲಿಗೆ ಬಂದಿದ್ದಾರೆ. ಅವರ ಕೈಬಿಡಲಾರೆ. ನನ್ನ ರೋಗಿಗಳೇ ನನ್ನ ದೇವರುಗಳು".

ಡಾ. ಎಂ.ಜಿ.ಆರ್. ಅರಸು, ಗುರುದೇವ ಪಂಡಿತ ತಾರಾನಾಥ, ವೈದ್ಯವಾರ್ತಾಪ್ರಕಾಶನ, ಮೈಸೂರು-೮, ಪು. ೬೫-೭೬

೫೮. 'ನನ್ನಿಂದ ಕಾಣಿಕೆ ಬೇಕಾಗಿಲ್ಲವೇ?'

ಡಾ. ವಿ. ಕೆ. ಆರ್. ವಿ. ರಾವ್ ಭಾರತದ ಪ್ರಖ್ಯಾತ ಅರ್ಥಶಾಸ್ತ್ರಜ್ಞರು. ಭಾರತ ಯೋಜನಾ ಆಯೋಗದ ಸದಸ್ಯರಾಗಿ, 'ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್' ಸ್ಥಾಪಕರಾಗಿ, ದೆಹಲಿ ವಿಶ್ವವಿದ್ಯಾನಿಲಯದ ಪ್ರಥಮ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಉಪಕುಲಪತಿಯಾಗಿ ಹೆಸರಾದವರು.

ರಾಯರು ದೆಹಲಿ ಅರ್ಥಶಾಸ್ತ್ರಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಒಂದು ಸಭಾಭವನವನ್ನು ನಿರ್ಮಿಸಲು ಸಂಕಲ್ಪಿಸಿದರು. ಭವನದ ನಿರ್ಮಾಣಕ್ಕೆ ತಮ್ಮ ಪ್ರಭಾವದಿಂದಾಗಿ ಶ್ರೀಮಂತರಿಂದ ದೊಡ್ಡ ಪ್ರಮಾಣದಲ್ಲಿ ಹಣ ಸಂಗ್ರಹಿಸುವುದು ಅವರಿಗೆ ಕಷ್ಟವೇನೂ ಆಗಿರಲಿಲ್ಲ. ಅಂತಹ ಕಾರ್ಯಗಳನ್ನು ಅವರು ಹಿಂದೆ ಮಾಡಿಯೇ ಇದ್ದರು. ಈಗ ಅವರ ಆಶಯ ಬೇರೆಯೇ ಆಗಿತ್ತು.

ವಿವೇಕಾನಂದರು ದರಿದ್ರನಾರಾಯಣನೇ ತಮ್ಮ ದೇವರೆಂದು ನಂಬಿದ್ದ ಮಹಾನುಭಾವರು. ಅವರಿಗೆ ತಮ್ಮ ಗೌರವ ಸಲ್ಲಿಸಬೇಕಾದರೆ ಭವನಕ್ಕೆ ಹಣವನ್ನು ಜನಸಾಮಾನ್ಯರಿಂದ, ದೀನದಲಿತರಿಂದ ಸಂಗ್ರಹಿಸಬೇಕು ಎಂದು ರಾಯರು ನಿಶ್ಚಯಿಸಿದರು. ಹಾಗೆ ಮಾಡಿದರೆ, ಹೆಚ್ಚು ಜನ ಈ ಕೈಂಕರ್ಯದಲ್ಲಿ ಭಾಗವಹಿಸಿದಂತಾಗುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಡಾ. ರಾಯರು ಪ್ರತಿಯೊಬ್ಬರಿಂದಲೂ ೫ ರೂ.ಗಳಂತೆ ಕಾಣಿಕೆ ಪಡೆಯುತ್ತಿದ್ದರು. ಹೆಚ್ಚಿಗೆ ಸ್ವೀಕರಿಸುತ್ತಿರಲಿಲ್ಲ. ಮೈಸೂರುದೊರೆಗಳಿಂದಲೂ ಅವರು ಬೇಡಿ ಪಡೆದದ್ದು ೫ ರೂ. ಮಾತ್ರ. ಪ್ರಭುಗಳಾದ ಜಯಚಾಮರಾಜೇಂದ್ರ ಒಡೆಯರು ಹೆಚ್ಚು ಹಣ ಕೊಡಲು ಸಂತೋಷದಿಂದ ಮುಂದೆ ಬಂದರಾದರೂ ವಿನಯದಿಂದ ಅದನ್ನು ನಿರಾಕರಿಸಿದರು.

ಹೀಗೆ ಮಾಡಿ, ಸುಮಾರು ೬ ಸಾವಿರ ರೂ. ಹಣ ಕೂಡಿಸಿದರು. ಸೇವಕರು ಸಹ ತಮ್ಮ ಪಾಲಿನ ಕಾಣಿಕೆ ಸಲ್ಲಿಸಿದರು. ಅವರ ಬಳಿಯಲ್ಲಿ ಕೆಲಸಕ್ಕಿದ್ದ ಒಬ್ಬ ಭಂಗಿ ಈ ಸಂಗ್ರಹಣೆಯ ವೇಳೆ ಒಮ್ಮೆ ಅವರಲ್ಲಿಗೆ ಬಂದು ಕೈಮುಗಿದ. ಅವನ ಕಣ್ಣುಗಳಲ್ಲಿ ನೀರು ತುಂಬಿತ್ತು. ತಮ್ಮಿಂದ ಅವನಿಗೆ ಏನಾದರೂ ಅಪಚಾರವಾಗಿರಬಹುದೇ ಎಂದು ರಾಯರು ಖಿನ್ನರಾದರು.

ಭಂಗಿ ರಾಯರಲ್ಲಿ ವಿಜ್ಞಾಪಿಸಿದ: "ನೀವು ಈ ಮಂದಿರಕ್ಕಾಗಿ ಎಲ್ಲರಿಂದಲೂ ನಿಧಿ ಕೂಡಿಸುತ್ತಿದ್ದೀರಿ. ನನ್ನಿಂದ ಕಾಣಿಕೆ ಬೇಕಾಗಿಲ್ಲವೇ? ನನ್ನಲ್ಲಿ ನಿಮಗೆ ಪ್ರೀತಿ ಇಲ್ಲವೇ?"

ರಾಯರು ಅಚ್ಚರಿಗೊಂಡರು. ಬಳಿಕ ಹೇಳಿದರು: "ನಿನ್ನಲ್ಲಿ ಹಣ ಕೇಳದಿದ್ದರೆ, ಪ್ರೀತಿ ಇಲ್ಲ ಎಂದು ಅರ್ಥವೇ? ನಿನ್ನಂಥವರ ಸ್ಥಿತಿ ನನಗೆ ಗೊತ್ತಿಲ್ಲವೇ? ನಾನು ಹೇಗೆ ನಿನ್ನಲ್ಲಿ ಕೇಳಲಿ? ನಿನ್ನ ಒಳ್ಳೆಯ ಮನಸ್ಸೇ ಸಾಕು, ಲಕ್ಷ ರೂಪಾಯಿಗಿಂತ ಹೆಚ್ಚು".

ಆ ಭಂಗಿ ಬಿಡಲಿಲ್ಲ. ರಾಯರ ದೊಡ್ಡ ಕೆಲಸದಲ್ಲಿ ತಾನೂ ನೇರವಾಗಿ ಪಾಲುದಾರ ಆಗಬೇಕಾದ್ದು ತನ್ನ ಕರ್ತವ್ಯ ಎಂದ, ಹಕ್ಕು ಎಂದ. ಒಂದು ರೂಪಾಯಿ ಕಾಣಿಕೆ ನೀಡಿದ.

ಎಚ್ಚೆಸ್ಕೆ: 'ಪ್ರೊಫೆಸರ್ ವಿ. ಕೆ. ಆರ್. ವಿ. ರಾವ್ ಜೀವನ ಮತ್ತು ಸಾಧನೆ', ಗೀತಾ ಬುಕ್ ಹೌಸ್, ಮೈಸೂರು, ೧೯೬೭, ಪು. ೩೩, ೯೧.

೫೯. 'ನಮ್ಮ ಮನೆಗೆ ಹೋಗೋಣ ಬಾ'

ನಮ್ಮ ದೇಶದ ಖ್ಯಾತ ಕೈಗಾರಿಕೋದ್ಯಮಿ ಜಿ. ಎ. ಆಚಾರ್ಯ ಅವರು. ಮಲ್ಲೇಶ್ವರದ ಪ್ರಸಿದ್ಧ ಎಂ.ಇ.ಎಸ್. ಕಾಲೇಜ್ ಸೇರಿದಂತೆ ಅನೇಕ ವಿದ್ಯಾಸಂಸ್ಥೆಗಳನ್ನು ಅವರು ಸ್ಥಾಪಿಸಿದರು. ಬೆಂಗಾಲ್ ಬಲ್ಬ್ಸ್ ಕಾರ್ಖಾನೆಯ ಪಾಲುದಾರರು. ಅವರು ೧೦-೧೨ ವರ್ಷಗಳ ಚಿಕ್ಕವಯಸ್ಸಿನಲ್ಲಿಯೇ ಬಡತನ ಸಹಿಸಲಾಗದೆ ತಂದೆ ತಾಯಿಗಳನ್ನು ತೊರೆದು ಹೊರಟುಹೋದವರು, ಬೊಂಬಾಯಿಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತ ಕಾಲಕ್ರಮದಲ್ಲಿ ಅಭಿವೃದ್ಧಿಗೆ ಬಂದರು. ಗಳಿಸಿದ ಐಶ್ವರ್ಯದಿಂದ ಅವರ ತಲೆ ತಿರುಗಲಿಲ್ಲ; ಅವರು ಬಡವರ ಬಂಧುವೇ ಆದರು. ಅವರೇ ಒಮ್ಮೆ ಸ್ವಾತಂತ್ರ್ಯಯೋಧರೂ

ಹಿರಿಯ ಸಾಮಾಜಿಕರೂ ಆದ ಎಚ್. ಎಸ್. ದೊರೆಸ್ವಾಮಿಗಳಿಗೆ ಈ ಮುಂದಿನ ಸಂಗತಿಯನ್ನು ನಿರೂಪಿಸಿದರು.

ಆಚಾರ್ಯರಿಗೆ ಚಿಕ್ಕಂದಿನಲ್ಲೇ ತಂದೆ ತಾಯಿಗಳ ಸಂಪರ್ಕ ಕಡಿದುಹೋಯಿತು. ಅವರಿಗೆ ನಾಲ್ವರು ತಮ್ಮಂದಿರು, ಒಬ್ಬ ತಂಗಿ. ಅವರು ಎಲ್ಲಿ ಹೋದರು, ಏನಾದರು, ಆಚಾರ್ಯರಿಗೆ ಒಂದೂ ಗೊತ್ತಿಲ್ಲ. ೩೦-೩೫ ವರ್ಷ ಕಳೆದ ಮೇಲೆ, ಮದರಾಸಿನಲ್ಲಿದ್ದ ಒಬ್ಬ ಆತ್ಮೀಯ ಸ್ನೇಹಿತನ ಆಹ್ವಾನದ ಮೇಲೆ ಅವನ ಮನೆಗೆ ಹೋದರು. ಆತ ಆಚಾರ್ಯರಿಗೆ ತನ್ನ ತಾಯಿಯ, ಹೆಂಡತಿ ಮಕ್ಕಳ ಪರಿಚಯ ಮಾಡಿಸಿದರು. ಆ ಸ್ನೇಹಿತನ ತಾಯಿಯನ್ನು ನೋಡಿದಾಗ ಆಚಾರ್ಯರಿಗೆ ಚಿಕ್ಕಂದಿನಲ್ಲಿ ತಾವು ನೋಡಿದ್ದ ತಮ್ಮ ತಂಗಿಯ ನೆನಪಾಯಿತು. ಕೂಡಲೇ ಅವರು ಸ್ನೇಹಿತನಿಗೆ, "ನನ್ನ ತಂಗಿಯೂ ತದ್ವತ್ ಹೀಗೆಯೇ ಇದ್ದ ಹಾಗೆ ನನ್ನ ನೆನಪು; ಚಿಕ್ಕಂದಿನಲ್ಲಿ ಮನೆಬಿಟ್ಟು ಹೋದೆನಾಗಿ ಅವಳ ರೂಪು ನನ್ನ ಮನಸ್ಸಿನಲ್ಲಿ ಅಸ್ಪಷ್ಟವಾಗಿದೆ" ಎಂದು ಹೇಳಿದರು.

ಆ ಸ್ನೇಹಿತರು ಸಹ ಕೂಡಲೇ, "ಇವರು ನಮ್ಮಮ್ಮ ಎಂದೆ ಅಲ್ಲವೇ!? ಇವರನ್ನು ನನ್ನ ಪಾಲಿನ ದೇವರು ಎಂದೇ ನಾನು ಕಾಣುತ್ತೇನೆ. ನಾನು ಮಗುವಾಗಿದ್ದಾಗ ನನ್ನ ತಾಯಿ ಸತ್ತುಹೋದರು. ನನ್ನನ್ನು ನೋಡಿಕೊಳ್ಳಲು ದೇವರೇ ಇವರನ್ನು ಕಳಿಸಿದ ಎಂದು ತೋರುತ್ತದೆ. ನನ್ನನ್ನು ಎತ್ತಿ ಆಡಿಸಿ ದೊಡ್ಡವನನ್ನಾಗಿ ಮಾಡಿದವರು ಇವರೇ. ಇಂದು ನಾನು ಒಬ್ಬ ಗಣ್ಯಮನುಷ್ಯ ಎನಿಸಿರಬೇಕಾದರೆ, ಈಕೆಯ ಅಕ್ಕರೆ ಆಶೀರ್ವಾದಗಳೇ ಕಾರಣ. ಇವರನ್ನು ನನ್ನ ಸಾಕ್ಷಾತ್ ತಾಯಿಯೆಂದೇ ನಾನು ಭಾವಿಸಿದ್ದೇನೆ. ನಮ್ಮ ಮನೆಯಲ್ಲಿ ಎಲ್ಲರೂ ತುಂಬ ಪ್ರೀತಿ ಗೌರವಗಳಿಂದ ಇವರನ್ನು ನೋಡಿಕೊಳ್ಳುತ್ತೇವೆ" ಎಂದರು.

ಜಿ. ಎ. ಆಚಾರ್ಯರು ಆ ಸ್ನೇಹಿತನ ತಾಯಿಯನ್ನು ಕುರಿತು ಯಾರು, ಏನು ಎಂದು ಪ್ರಶ್ನಿಸಿದರು. ಹಾಗೆ ಪ್ರಶ್ನಿಸಿದಾಗ, ಆಕೆ ಸಾಕ್ಷಾತ್ ತಮ್ಮ ತಂಗಿಯೇ ಎಂಬುದಾಗಿ ತಿಳಿಯಿತು. ಹಲವು ವರ್ಷಗಳ ಮೇಲೆ ಸಿಕ್ಕ ಆ ತಂಗಿಯನ್ನು "ನಮ್ಮ ಮನೆಗೆ ಹೋಗೋಣ ಬಾ" ಎಂದು ಕರೆಯಲೇ ಎಂದುಕೊಂಡರು. ಆದರೆ ಮರುಕ್ಷಣದಲ್ಲಿ, ಸ್ನೇಹಿತನ ಆ 'ತಾಯಿ'ಯನ್ನು ಅವನಿಂದ ಬೇರೆಮಾಡಲು ತನಗೇನು ಅಧಿಕಾರವಿದೆ ಎನ್ನಿಸಿತು. ಸುಮ್ಮನಾದರು. ಮುಂದೆ ಆಗಾಗ ಆ ಮದರಾಸಿನ ಸ್ನೇಹಿತನ ಮನೆಗೆ ಹೋಗಿ ತಮ್ಮ ತಂಗಿಯನ್ನು ಕಂಡು ಮಾತಾಡಿಸಿಕೊಂಡು ಬರುವುದನ್ನು ಮಾತ್ರ ತಪ್ಪಿಸಲಿಲ್ಲ.

ಎಚ್. ಎಸ್. ದೊರೆಸ್ವಾಮಿ, 'ನೆನಪಿನ ಸುರುಳಿ ತೆರೆದಾಗ', ಸುವಿದ್ಯಾ ಪ್ರಕಾಶನ, ಬೆಂಗಳೂರು-೧೯, ಪು. ೬೬-೬೭

೬೦. 'ನಮೋ ಶ್ರೀರಂಗರಾಜಃ'

ಎಚ್. ವಿ. ಶ್ರೀರಂಗರಾಜು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ, ಹಂಗಾಮಿ ಉಪ ಕುಲಪತಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದವರು. ನಿಸ್ಪೃಹವ್ಯಕ್ತಿ, ನಿತ್ಯತೃಪ್ತ, ಪರೋಪಕಾರಿ. ಅವರು ನಿವೃತ್ತರಾದ ಮೇಲೆ ಮೈಸೂರಿನಲ್ಲಿ ನೆಲಸಿದರು. ಮುಂದೆ ತಮ್ಮ ಬದುಕನ್ನು ಬೌದ್ಧ ಧರ್ಮಗ್ರಂಥಗಳ ಅನುವಾದಕಾರ್ಯದಲ್ಲಿಯೂ ಬೌದ್ಧ ಧರ್ಮದ ಕಾರ್ಯಮಂದಿರವನ್ನು ಕಟ್ಟಿ ಬೆಳಸುವಲ್ಲಿಯೂ ಮೀಸಲುಮಾಡಿದರು.

ತ. ಸು. ಶಾಮರಾಯರೊಂದಿಗೆ (ಕನ್ನಡ ಭಾಷೆ ಸಾಹಿತ್ಯಗಳ ಹಿರಿಯ ಸಾಹಿತಿಗಳು) ಶ್ರೀರಂಗರಾಜು ಅವರ ಸ್ನೇಹ ವಿಶ್ವಾಸಗಳು ಬಹುಹಿಂದಿನಿಂದಲೂ ನಡೆದುಬಂದದ್ದು. ಮೈಸೂರಿನಲ್ಲಿ ನೆಲಸಿದ ಮೇಲೆ ಪರಸ್ಪರ ಒಡನಾಟ ಹೆಚ್ಚಿತು. ಬೆಳಗಿನ ವಾಯುವಿಹಾರದಲ್ಲಿ ತಪ್ಪದೆ ಸೇರುತ್ತಿದ್ದರು.

ಒಮ್ಮೆ ನಡೆದ ಘಟನೆಯಿದು. ತ. ಸು. ಶಾಮರಾಯರು ಶ್ರೀರಂಗರಾಜು ಮತ್ತು ಇನ್ನೊಬ್ಬ ಸ್ನೇಹಿತರೊಂದಿಗೆ ಬೆಳಗಿನ ವಾಯುವಿಹಾರ ಹೊರಟಿದ್ದರು. ವಿಶ್ವವಿದ್ಯಾನಿಲಯದ ಪುಸ್ತಕಭಂಡಾರದ ಎದುರು ಬರುತ್ತಿದ್ದಾಗ ಶಾಮರಾಯರ ಒಂದು ಚಪ್ಪಲಿ ಕಿತ್ತು ಹೋಯಿತು. ಅದು ಮೂರು ತಿಂಗಳ ಹಿಂದೆ ಕೊಂಡಿದ್ದ, ೭೦ ರೂಪಾಯಿಗಳ ಒಳ್ಳೆಯ ಚಪ್ಪಲಿ. ಎಸೆಯಲು ಮನಸ್ಸಿಲ್ಲ. ಏನು ಮಾಡಬೇಕೆಂದೂ ತಿಳಿಯಲಿಲ್ಲ. ಆಗ ಶ್ರೀರಂಗರಾಜು ರಾಯರ ಚಪ್ಪಲಿಗಳನ್ನು ತಮ್ಮ ಕೈಗೆ ತೆಗೆದುಕೊಂಡರು; ಅವನ್ನು ತಮ್ಮ ಕರವಸ್ತ್ರದಲ್ಲಿ ಕಟ್ಟಿಕೊಂಡು ಮನೆಗೆ ತಲುಪುವ ವರೆಗೂ ಅವನ್ನು ತಮ್ಮೊಂದಿಗೆ ತೆಗೆದುಕೊಂಡು ಹೊರಟರು. ಒತ್ತಾಯಮಾಡಿ ತಮ್ಮ ಚಪ್ಪಲಿಯನ್ನು ಕೊಟ್ಟು, ರಾಯರು ನಡೆಯುವ ಹಾಗೆ ಹೇಳಿ, ಅವರನ್ನು ಒಪ್ಪಿಸಿದರು. ತಾವು ಬರಿಗಾಲಲ್ಲಿ ಸಾಗಿದರು.

ಶಾಮರಾಯರಿಗೆ ತುಂಬ ಕಸಿವಿಸಿಯಾಯಿತು. ಹಾಗೆ ಮಾಡತಕ್ಕದ್ದಲ್ಲವೆಂದು ಶ್ರೀರಂಗರಾಜು ಅವರಿಗೆ ತಿಳಿಸಿದರು. ಆಗ ಶ್ರೀರಂಗರಾಜು ಹೀಗೆ ಹೇಳಿದರು: "ರಾಯರೇ, ನಿಮ್ಮ ಪಾದರಕ್ಷೆಗಳು ನಿಮ್ಮ ಪಾದದಷ್ಟೇ ಪವಿತ್ರ. ಅವನ್ನು ಹೊರುವ ಭಾಗ್ಯವನ್ನು ದೇವರು ನನಗೆ ಇಂದು ಅನುಗ್ರಹಿಸಿದ್ದಾನೆ. ನಾಳೆ ಬೆಳಗ್ಗೆ ನಾನೇ ಅವನ್ನು ಚಮ್ಮಾರನಲ್ಲಿಗೆ ಒಯ್ದು ಸರಿಮಾಡಿಸಿಕೊಂಡು ಬರುತ್ತೇನೆ".

ಶಾಮರಾಯರು ಶ್ರೀರಂಗರಾಜು ಅವರ ಸೌಜನ್ಯವನ್ನೂ ಹಿರಿತನವನ್ನೂ ನೆನೆದು ಆರ್ದ್ರಹೃದಯರಾಗಿ ಹೇಳುತ್ತಾರೆ: "ನಮೋ ಶ್ರೀರಂಗರಾಜಃ".

ತ. ಸು. ಶಾಮರಾಯ, 'ನೆನಪಿನ ಅಲೆಗಳು' ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು-೨, ೨೦೦೧, ಪು. ೧೩೧

೬೧. 'ನಾನಂತೂ ಸುಳ್ಳುಸಾಕ್ಷಿ ಹೇಳಲಾರೆ'

ತುಮಕೂರು ಜಿಲ್ಲೆಯ ಒಂದು ಗ್ರಾಮ. ಗ್ರಾಮದಲ್ಲಿ ಯಾವುದೋ ಒಂದು ಸಣ್ಣ ಕಾರಣಕ್ಕೆ ಜಗಳ ಹುಟ್ಟಿಕೊಂಡಿತು. ಎರಡು ಕಕ್ಷಿಗಳಾದುವು. ವ್ಯಾಜ್ಯ ಕೋರ್ಟಿಗೆ ಹೋಯಿತು. ಮುಖಂಡರಾದವರು ತಂತಮ್ಮ ಪಕ್ಷಕ್ಕೆ ಅನುಕೂಲವಾದ ಸಾಕ್ಷಿಗಳನ್ನು ಕೂಡಿಸುವ ತರದೂದಿನಲ್ಲಿದ್ದರು. ಒಂದು ಪಕ್ಷದವರು ಗುಂಪುಗೂಡಿ ಗ್ರಾಮದ ಗಣ್ಯರಾದ, ಆಯುರ್ವೇದ ವೈದ್ಯರೂ ಆದ ಯಜಮಾನ್ ಪದ್ಮರಾಜ ಪಂಡಿತರಲ್ಲಿಗೆ ಬಂದರು. ಬಂದವರಲ್ಲಿ ಪ್ರಮುಖರಾದವರಿಗೂ ಪಂಡಿತರಿಗೂ ನಡೆದ ಸಂಭಾಷಣೆ ಹೀಗಿತ್ತು:

ಕಕ್ಷಿದಾರರು(ಕ): ಪದ್ದಣ್ಣ, ನೀವು ನಮ್ಮ ಕಡೆ ಸಾಕ್ಷಿ ಹೇಳಬೇಕು. ನೀವು ವಯಸ್ಸಿನಲ್ಲಿ ಹಿರಿಯರು. ಗೌರವ ಘನತೆ ಉಳ್ಳವರು. ನಿಮ್ಮ ಮಾತನ್ನು ಜನ ನಂಬುತ್ತಾರೆ. ವಕೀಲರೂ ಹಾಗೆಯೇ ಹೇಳುತ್ತಾರೆ. ನೀವು ಕೋರ್ಟಿಗೆ ಬಂದು ಸಾಕ್ಷಿ ಹೇಳಬೇಕು.

ಪಂಡಿತರು: (ಪಂ): ಏನು ಸಾಕ್ಷಿ ಹೇಳಬೇಕು?

ಕ: ಅದನ್ನು ನಮ್ಮ ವಕೀಲರೇ ಹೇಳಿಕೊಡುತ್ತಾರೆ. ಅದನ್ನು ನ್ಯಾಯಾಲಯದಲ್ಲಿ ಹೇಳಬೇಕು, ಅಷ್ಟೇ. ಅದಕ್ಕೇ ನಾವೆಲ್ಲ ಬಂದಿರೋದು.

ಪಂ: ಸಾಕ್ಷಿ ಎಂದರೆ ಏನು? ಕಂಡದ್ದನ್ನು ಕಂಡ ಹಾಗೇ ಹೇಳುವುದಲ್ಲವೇ? ಅಥವಾ ನಮಗೆ ತಿಳಿದದ್ದು ಹೇಳುವುದಲ್ಲವೇ?

ಕ: ಹೌದು, ಅಷ್ಟೇ.

ಪಂ: ಆದರೆ, ನಿಮ್ಮ ವ್ಯಾಜ್ಯವೇನೋ ನನಗೆ ಗೊತ್ತಿಲ್ಲ. ನಾನು ಏನೂ ಕಂಡವನಲ್ಲ. ಹೀಗಿರುವಲ್ಲಿ ವಕೀಲರು ಹೇಳಿಕೊಡುವುದನ್ನು ನಿಜವೆಂದು ಹೇಗೆ ನಿರ್ಧರಿಸಲಿ?

ಕ: ಇಲ್ಲದಿದ್ದರೆ, ಕೇಸು ಕೆಟ್ಟು ಹೋಗುತ್ತದೆ.

ಪಂ: ಹೋದರೆ ಹೋಗಲಿ, ಅದರಿಂದ ನನಗೇನಾಗಬೇಕು?

ಕ: ನಿಮಗೆ ನಮ್ಮ ಸ್ನೇಹ ಬೇಡವೋ?

ಪಂ: ನನಗೆ ಎಲ್ಲರ ಸ್ನೇಹವೂ ಬೇಕು. ಸುಳ್ಳುಸಾಕ್ಷಿ ಹೇಳಿದರೆ ಮಾತ್ರ ಸ್ನೇಹ, ಇಲ್ಲದಿದ್ದರೆ ದ್ವೇಷ. ಇದು ತಾನೇ ನಿಮ್ಮ ಅರ್ಥ?

ಕ: ನೀವು ನಮ್ಮ ಪಕ್ಷದ ಮುಖ ನೋಡಬೇಕು. ನಿಮ್ಮ ಆಲೋಚನೆ ಸರಿಯಲ್ಲ.

ಪಂ: ಆದರೆ ನ್ಯಾಯಾಧೀಶರು ನನ್ನಿಂದ ಪ್ರಮಾಣಮಾಡಿಸುತ್ತಾರೆ; 'ಸತ್ಯವನ್ನು ಹೇಳುತ್ತೇನೆ' ಎಂಬುದಾಗಿ ನನ್ನ ಬಾಯಿಂದ ಹೇಳಿಸುತ್ತಾರೆ. ವಕೀಲರು ಹೇಳಿಕೊಡುವುದೆಲ್ಲ ಅಬದ್ಧವಾದರೆ ಏನು ಗತಿ?

ಕ: ನಮಗಾಗಿ ಅಬದ್ಧವನ್ನಾದರೂ ಹೇಳಬೇಕು.

ಪಂ: ಕಾಣದ್ದನ್ನು ಕಂಡಿದ್ದೇನೆಂದು ನಾನು ಹೇಳಲಾರೆ. ನೀವು ಬೇರೆ ಸಾಕ್ಷಿ ನೋಡಿಕೊಳ್ಳಿ. ನಾನಂತೂ ಸುಳ್ಳುಸಾಕ್ಷಿ ಹೇಳಲಾರೆ.

ಕ: ಸಾಕ್ಷಿಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಸೇರಿದೆ; ನಾಳೆ ದಿನ ನೀವು ಮಧುಗಿರಿ ಕೋರ್ಟಿಗೆ ಬರಬೇಕು.

ಪಂ: ಮಧುಗಿರಿ ಕೋರ್ಟಿಗಾದರೂ ಬರುತ್ತೇನೆ, ಎಲ್ಲಿಗಾದರೂ ಬರುತ್ತೇನೆ. ಹೇಳಿದ್ದನ್ನೇ ಹೇಳುತ್ತೇನೆ.

ಆ ಮಾತನ್ನು ಕಕ್ಷಿದಾರರು ಹೇಗೆ ಅರ್ಥ ಮಾಡಿಕೊಂಡರೋ? ಬಂದ ಕೆಲಸವಾಯಿತೆಂದೇ ಬಗೆದರು; ತಮತಮಗೆ ತೋರಿದಂತೆ ಮಾತಾಡಿಕೊಂಡರು.

ಮರುದಿವಸ ಎರಡು ಪಕ್ಷಗಳವರೂ ಬೇರೆ ಬೇರೆ ಗಾಡಿಗಳಲ್ಲಿ ಹೊರಟು ಮಧುಗಿರಿಯನ್ನು ತಲುಪಿದರು. ಎರಡು ಕಡೆ ವಕೀಲರೂ ಬಂದಿದ್ದರು. ಕೇಸು ಆರಂಭವಾಯಿತು. ಕೋರ್ಟಿನಲ್ಲಿ ನ್ಯಾಯಾಧೀಶರು ಸಾಕ್ಷಿಗಳನ್ನು ಕರೆಸಿದರು. ಮೊದಲ ಸಾಕ್ಷಿಯೇ ಪದ್ಮರಾಜ ಪಂಡಿತರು. ಅವರ ಹೆಸರನ್ನು ಕೂಗಿಸಿದಾಗ, ಅವರು ಒಳಗೆ ಹೋಗಿ ನ್ಯಾಯಾಧೀಶರಿಗೆ ವಂದಿಸಿದರು. ಸಾಕ್ಷಿಗಳ ಕಟಕಟೆಯಲ್ಲಿ ನಿಂತರು. ನ್ಯಾಯಾಧೀಶರು ಸಾಕ್ಷಿಯನ್ನು ಕುರಿತು 'ಈ ಕಟ್ಲೆಯ ವಿಷಯದಲ್ಲಿ ನಿಮಗೇನು ಗೊತ್ತಿದೆ?' ಎಂದು ಪ್ರಶ್ನಿಸಿದರು.

ಪಂಡಿತರು, "ಸತ್ಯವಾಗಿ ಹೇಳುತ್ತೇನೆ, ಕೇಸಿನ ವಿದ್ಯಮಾನ ನನಗೇನೂ ತಿಳಿಯದು". "ಹಾಗಾದರೆ, ನೀವೇಕೆ ಇಲ್ಲಿಗೆ ಬಂದಿರಿ?", ನ್ಯಾಯಾಧೀಶರು ಕೇಳಿದರು. ಪಂಡಿತರು ಹೇಳಿದರು: "ಬರಬೇಕೆಂದು ಕೋರ್ಟಿನಿಂದ ಕರೆ ಬಂದಿತ್ತು; ಶಿರಸಾವಹಿಸಿ ಬಂದಿದ್ದೇನೆ, ಅಷ್ಟೇ."

ಈಗ ಈ ಪಕ್ಷದ ವಕೀಲರಿಗೆ ರೇಗಿ ಹೋಯಿತು. ಅವರು ಗಟ್ಟಿಯಾಗಿ "ಈ ಬೆಳಗ್ಗೆ ನನ್ನೊಡನೆ ಏನು ಹೇಳಿದಿರಿ, ಏನು ಹೇಳದಿರಿ?" ಎಂದು ಅಬ್ಬರಿಸಿದರು. "ನಾನು ಏನೂ ಹೇಳದೆ ಸುಮ್ಮನಿದ್ದೆ; ಹೇಳಬೇಕಾದ್ದನ್ನೆಲ್ಲ ನೀವೇ ಹೇಳಿಕೊಟ್ಟಿರಿ. ಈಗ ಅದೆಲ್ಲ ಮರೆತುಹೋಗಿದೆ" ಎಂದರು, ಪಂಡಿತರು.

ನ್ಯಾಯಾಧೀಶರಿಗೆ ನಗು ಬಂತು. ಪಂಡಿತರ ಕಡೆ ತಿರುಗಿ, "ನಿಮ್ಮ ಕೆಲಸವಾಯಿತು, ನೀವು ಹೋಗಬಹುದು" ಎಂದರು.

ಪದ್ಮರಾಜ ಪಂಡಿತರಿಗೆ ಇದೇ ಕೋರ್ಟಿನ ಮೊದಲನೆಯ ಮತ್ತು ಕಡೆಯ ಅನುಭವ.

ತೋವಿನಕೆರೆ ಸೀತಾರಾಮ ಜೋಯಿಸ, 'ನಾ ಕಂಡ ಶ್ರೀಸಾಮಾನ್ಯರು,' ೧೯೯೪, ಮಾನಸ ಪ್ರಕಾಶನ, ಬೆಂಗಳೂರು-೫೬೦ ೦೪೦, ಪು. ೬-೮

೬೨. 'ನಾನು ಅವರ ಹಿರೇಮಗ'

ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ತಂದೆ ಸುಬ್ಬಣ್ಣನವರು ದೊಡ್ಡ ಸಂಸಾರವಂದಿಗರು. ಸಂಸಾರದ ಖರ್ಚು ವೆಚ್ಚ ಜಾಸ್ತಿ. ಹಿರಿಯರೂ ಹಿತೈಷಿಗಳೂ ಆದ ಶಾನುಭೋಗ ಗೋವಿಂದಪ್ಪನವರು ಗೌಡರ ಗುರುಸಿದ್ಧಪ್ಪನೊಂದಿಗೆ ವಿಚಾರಮಾಡಿ, ಅವರ ಮೂಲಕ ಸೇಂದಿ ಕಂಟ್ರಾಕ್ಟರ್ ಮುನಿಯಪ್ಪನೊಂದಿಗೆ ಪಾಲುದಾರರಾಗಿ ಸೇರುವಂತೆ ಸುಬ್ಬಣ್ಣನವರನ್ನು ಕಷ್ಟಪಟ್ಟು ಒಪ್ಪಿಸಿದರು. ಮುನಿಯಪ್ಪನೂ ಸಮ್ಮತಿಸಿದನು. ಕೆಲವು ವರ್ಷ ಎಲ್ಲ ಸುಸೂತ್ರವಾಗಿ ನಡೆಯಿತು. ಒಂದು ವರ್ಷ ಇದ್ದಕ್ಕಿದ್ದಂತೆ ಪ್ಲೇಗು ಅಮರಿಕೊಂಡಿತು. ಜನ ಸಾಯತೊಡಗಿದರು. ಸೇಂದಿ ಅಂಗಡಿಗಳು ಮುಚ್ಚಿಹೋದುವು. ಸರ್ಕಾರಕ್ಕೆ ಹಣ ಕಟ್ಟುವುದು ಸಾಧ್ಯವಾಗದೆ, ಸಾವಿರಾರು ರೂಪಾಯಿ ಕಂದಾಯ ಬಾಕಿ ಉಳಿದುಕೊಂಡಿತು. ಸುಬ್ಬಣ್ಣನವರು ಸುಮಾರು ಮೂರು ಸಾವಿರ ರೂಪಾಯಿ ಸರ್ಕಾರಕ್ಕೆ ಜಮೆ ಮಾಡಬೇಕಾಯಿತು. ವಸೂಲಾತಿಗೆ ಮೇಲಿಂದ ಹುಕುಂ ಬಂತು. ಅಮಲ್ದಾರರು ಸುಬ್ಬಣ್ಣನವರನ್ನು ಕರೆಸಿ ಪರಿಸ್ಥಿತಿ ವಿವರಿಸಿದರು. ಅವರಿಗೆ ದಿಕ್ಕು ತೋಚದಾಯಿತು. ಸ್ವಲ್ಪ ಕಾಲಾವಕಾಶ ಬೇಕೆಂದರು. ಅದನ್ನು ಜಿಲ್ಲಾಧಿಕಾರಿಗಳಿಗೆ ಅರಿಕೆ ಮಾಡುವುದಾಗಿಯೂ ಅವರ ಪರವಾಗಿ ಯಾರಾದರೂ ಜಾಮೀನು ನಿಲ್ಲಬೇಕಾಗಿ ಬರುವುದಾಗಿಯೂ ಅಮಲ್ದಾರರು ವಿವರಿಸಿದರು. ತಲುಕಿನಲ್ಲಿ ಮುಂದಿನ ೧೫ ದಿನಗಳಿಗೆ ಜಮಾಬಂದಿ ಇಟ್ಟುಕೊಳ್ಳುವ ವೇಳೆಗೆ ಅದರ ಏರ್ಪಾಟು ಆಗಬೇಕೆಂದು ಸೂಚಿಸಲಾಯಿತು.

ಈಗ ಸುಬ್ಬಣ್ಣ ತಮಗೆ ಜಾಮೀನು ನಿಲ್ಲುವವರು ಯಾರು ಎಂಬ ಚಿಂತೆಗೆ ಒಳಗಾದರು. ಮನ್ನೆಕೋಟೆಯ ಶಾನಭೋಗ ರಾಮಣ್ಣ ಸುಬ್ಬಣ್ಣನವರ ಜ್ಞಾತಿ. ಆತ ಸುಬ್ಬಣ್ಣನವರ ಕೀರ್ತಿ ಪ್ರತಿಷ್ಠೆಗಳಿಗೆ ಕರುಬುತ್ತಿದ್ದವನು. ಈ ಸಂದರ್ಭ ಬಳಸಿಕೊಂಡು ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಹೇಗಾದರೂ ಅವರ ಮನೆ ಜಪ್ತಿಗೆ ಬರುವಂತೆ ಮಾಡಬೇಕೆಂದು ಆತ ಯೋಚಿಸಿದನು. ಏನೂ ತಿಳಿಯದವನಂತೆ ಅವರಲ್ಲಿಗೆ ಬಂದು, ಅವರ ಕಷ್ಟಸುಖಗಳಲ್ಲಿ ತಲೆ ಕೊಡುವುದು ತನ್ನ ಕರ್ತವ್ಯವೆಂದು ಕಪಟನಾಟಕ ಆಡಿದನು. ಜಮಾಬಂದಿಯ ದಿನ ತಾನು ಬಂಗಲೆಯ ಬಳಿ ಹಾಜರಿದ್ದು, ಜಾಮೀನು ಕೊಡುವುದಾಗಿ ತಿಳಿಸಿದನು. ಸರಳ ಸ್ವಭಾವದ ಸುಬ್ಬಣ್ಣನವರು ಅದನ್ನು ನಂಬಿದರು.

ಜಮಾಬಂದಿಯ ದಿನ ಬಂತು. ಪಟೇಲರು ಮೊದಲಾಗಿ ಸರ್ಕಾರದ ಜನ, ಗ್ರಾಮಸ್ಥರು ಎಲ್ಲಾ ಬಂಗಲೆ ಹತ್ತಿರ ಜಮಾಯಿಸಿದರು. ಸುಬ್ಬಣ್ಣನವರೂ ಬಂದರು. ರಾಮಣ್ಣನಿಗಾಗಿ ಹುಡುಕಾಡಿದರು, ಕಾದರು. ಅನಾರೋಗ್ಯದ ನೆಪ ಹೇಳಿ ಆತ ಬೇಕೆಂದೇ ಬಂದಿರಲಿಲ್ಲ. ಸುಬ್ಬಣ್ಣ ನಿರಾಸೆ ಅವಮಾನಗಳಿಂದ ಯಾರಿಗೂ ಹೇಳದೆ ಮನೆಗೆ ಬಂದುಬಿಟ್ಟರು. ಯಾರೂ ತಮ್ಮ ಪರ ಜಾಮೀನು ನಿಲ್ಲಲಿಲ್ಲ ಎಂದರೆ, ತಮ್ಮ ಮನೆ ಜಪ್ತಿಯಾಗುವುದು ಖಂಡಿತ ಎಂದು ಅದಕ್ಕೆ ಈಗ ಅವರು ಸಿದ್ಧರಾದರು. ಇಷ್ಟದೈವ ಶ್ರೀರಾಮಚಂದ್ರನನ್ನು ನೆನೆದು, ಪಾರಾಯಣದ ಪುಸ್ತಕ ರಾಮಾಯಣವನ್ನು ದೇವರ ಪೀಠದ ಮುಂದಿಟ್ಟುಕೊಂಡು ಕುಳಿತರು.

ಜಮಾಬಂದಿಯ ವೇಳೆ ಸುಬ್ಬಣ್ಣನವರ ಹೆಸರು ಕರೆದಾಗ, ಅವರು ಇರಲಿಲ್ಲ. ಸುತ್ತ ಗುಸುಗುಸು ಮೊದಲಾಯಿತು. "ಸುಬ್ಬಣ್ಣ ಸರ್ಕಾರಕ್ಕೆ ಹಣ ಕಟ್ಟಿಲ್ಲ", "ಮನೆ ಜಫ್ತಿಗೆ ಬಂದಿದೆ" ಎಂದು ಮುಂತಾಗಿ ಮಾತು ಹೊರಟಿತು. ಅಲ್ಲಿ ಸೇರಿದ್ದವರಲ್ಲಿ ಹೊಸಹಳ್ಳಿ ಗೊಲ್ಲರ ಕರಡಪ್ಪ ಸಹ ಇದ್ದ. ಆತನಿಗೇನೋ ಅಲ್ಲಿ ಕೆಲಸವಿತ್ತು. ಆತ 'ಏನು ಸಮಾಚಾರ' ಎಂದು ಅವರಿವರನ್ನು ವಿಚಾರಿಸಿದ. ಕೊಂಚ ವಿಷಯ ತಿಳಿಯಿತು. ತಾನೇ ಅಮಲ್ದಾರರ ಎದುರಿಗೆ ಹೋಗಿ ಕಾಣಿಸಿಕೊಂಡ.

ಚಡ್ಡಿ, ಹೆಗಲ ಮೇಲೆ ಕರಿಯ ಕಂಬಳಿ, ತಲೆಪಾಗು ಧರಿಸಿದ್ದ ಆತನನ್ನು ನೋಡಿ, ಸಾವಕಾಶವಾಗಿ ಅಮಲ್ದಾರರು "ಏನಪ್ಪ ಅಹವಾಲು?" ಎಂದು ಕೇಳಿದರು. "ನನ್ನದೇನೂ ಅಹವಾಲು ಇಲ್ಲ ಸ್ವಾಮಿ. ಏನೋ ವರ್ತಮಾನ ಕಿವಿಗೆ ಬಿತ್ತು. ನಮ್ಮ ಸುಬ್ಬಣ್ಣನವರು ಏನೋ ಸರ್ಕಾರಕ್ಕೆ ದುಡ್ಡು ಕಟ್ಟಬೇಕಂತೆ. ಅದಕ್ಕೆ ಜಾಮೀನು ಕೊಡಬೇಕು ಎಂದು ಯಾರೋ ಅಂದರು. ಅದು ಹಾಗಿದ್ದರೆ, ಜಾಮೀನಾಗೋಣ ಅಂತ ಬಂದಿದೇನೆ" ಎಂದ ಕರಡಪ್ಪ. ಅವನ ವೇಷಭೂಷಣ ನೋಡಿ, ಅವನಿಗೆ ಇದು ಸಾಧ್ಯವೇ ಎಂದು ಅಮಲ್ದಾರರು ಅನುಮಾನಪಟ್ಟರು.

ಅಮಲ್ದಾರ್: ಏನಪ್ಪ, ಸುಬ್ಬಣ್ಣನವರು ಸರ್ಕಾರಕ್ಕೆ ಕಟ್ಟಬೇಕಾದ ಹಣ ಎಷ್ಟು ಗೊತ್ತೇ?

ಕರಡಪ್ಪ: ನಾನೇನು ಬಲ್ಲೆ ಮಹಾಸ್ವಾಮಿ, ಖಾವಂದರು ಹೇಳಿದರೆ ತಿಳಿಯುತ್ತೆ.

ಅಮಲ್ದಾರ್: ಸುಮಾರು ಮೂರು ಸಾವಿರ ರೂಪಾಯಿ ಕಟ್ಟಬೇಕು.

ಕರಡಪ್ಪ: ಇರಬಹುದು ಮಹಾಸ್ವಾಮಿ

ಅಮಲ್ದಾರ್: ಮತ್ತೆ ನಿನ್ನಂಥವನು ಅಷ್ಟು ಹಣಕ್ಕೆ ಜಾಮೀನಾಗಲು ಸಾಧ್ಯವೇ?

ಕರಡಪ್ಪ: ಮಹಾಸ್ವಾಮಿ, ನನಗೆ ಹಳ್ಳೀಲಿ ಒಂದು ಮನೆ, ಐವತ್ತೆಕರೆ ತರಿ ಜಮೀನು, ನೂರೆಕರೆ ಖುಷ್ಕಿ, ಎರಡು ಸಲಿಗೆ ದನ (೧ ಸಲಿಗೆ=೫೦), ಹತ್ತು ಸಲಿಗೆ ಕುರಿ ಇಷ್ಟು ಆಸ್ತಿ ಇದೆ. ಈ ಆಸ್ತಿ ಮೂರು ಸಾವಿರ ಬಾಳೋದಾದರೆ, ಖಾವಂದರು ನನ್ನ ಜಾಮೀನು ಒಪ್ಪಿಕೋಬೇಕು.

ಪಕ್ಕದಲ್ಲಿದ್ದ ಪಟೇಲರು ಅಮಲ್ದಾರರನ್ನು ಕುರಿತು "ಈತ ಹೇಳವುದು ನಿಜ, ಸ್ವಾಮಿ. ಈ ಪ್ರಾಂತ್ಯದ ದೊಡ್ಡರೈತರಲ್ಲಿ ಈತನೂ ಒಬ್ಬ. ಸರ್ಕಾರಕ್ಕೆ ಮುನ್ನೂರು ರೂಪಾಯಿ ಕಂದಾಯ ಕಟ್ತಾನೆ" ಎಂದು ಹೇಳಿ, ಕರಡಪ್ಪನ ಸಾಮರ್ಥ್ಯವನ್ನು ಸಮರ್ಥಿಸಿದರು. ಅಮಲ್ದಾರರಿಗೆ ಕರಡಪ್ಪನನ್ನು ಸ್ವಲ್ಪ ತಮಾಷೆ ಮಾಡಬೇಕೆನ್ನಿಸಿತು. ಹೇಳಿದರು: "ಅದೆಲ್ಲಾ ಸರಿ, ನಿನ್ನ ಜಾಮೀನು ಒಪ್ಪಿಕೋಬಹುದು. ಆದರೆ ಇಷ್ಟು ಹಣಕ್ಕೆ ಜಾಮೀನು ಆಗುವುದಕ್ಕೆ ನೀ ಏನಾಗಬೇಕು, ಸುಬ್ಬಣ್ಣನವರಿಗೆ? ಒಂದು ವೇಳೆ ಅವರು ಹಣ ಕಟ್ಟದಿದ್ದರೆ, ನಿನ್ನ ಆಸ್ತಿಯೆಲ್ಲ ಜಫ್ತಿಯಾಗುತ್ತದಲ್ಲಯ್ಯಾ. ಅದನ್ನು ನೀನು ಯೋಚಿಸಿದ್ದೀಯಾ?" ಕರಡಪ್ಪ ಉತ್ತರ ಹೇಳಿದ: "ಜಾಮೀನಾಗೋದಕ್ಕೆ ಸಂಬಂಧವೇ ಆಗಬೇಕಾ ಸ್ವಾಮಿ? ಹಂಗೂ ಆಗಬೇಕು ಅಂದರೆ, ನಾನು ಅವರ ಹಿರೇಮಗ. ಅವರು ನನಗೆ ತಂದೆ, ದೇವರು,

ಎಲ್ಲಾ. ಇನ್ನು ಆಸ್ತಿಯ ವಿಚಾರ. ತಂದೆಯ ಸಾಲ ಮಗ ತೀರಿಸಬೇಕಾದ್ದು ನ್ಯಾಯ ತಾನೇ? ನಾನು ಎಲ್ಲ ಯೋಚನೆ ಮಾಡಿಯೇ ತಮ್ಮ ಹತ್ತಿರ ಬಂದಿದ್ದೇನೆ."

ಅಮಲ್ದಾರರಿಗೆ ಆಶ್ಚರ್ಯವಾಯಿತು. 'ಮರುಮಾತಾಡದೆ, ಹೊಸಹಳ್ಳಿ ಗೊಲ್ಲರ ಕರಡಪ್ಪನ ಜಾಮೀನು ಒಪ್ಪಿಕೊಂಡರು. ಅಗತ್ಯವಾದ ಕಾಗದ ಪತ್ರಗಳಿಗೆ ಅವನ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡರು.

ತ. ಸು. ಶಾಮರಾಯ, 'ಮೂರು ತಲೆಮಾರು', ಸುವಿದ್ಯಾ ಪ್ರಕಾಶನ, ಬೆಂಗಳೂರು-೪, ೧೯೮೭, ಪು. ೧೫೩-೬೪

೬೩. 'ನಾನು ಏಕೆ ನಿಮ್ಮ ಹಂಗಿಗೆ ಸಿಕ್ಕಬೇಕು?'

ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು; ಕುವೆಂಪು, ತೀನಂಶ್ರೀ, ಡಿಎಲ್ಎನ್ ಮುಂತಾದವರಿಗೆ ಉಪಾಧ್ಯಾಯರಾಗಿದ್ದವರು; 'ವಚನಭಾರತ', 'ಕಥಾಮೃತ', 'ಸಂಸ್ಕೃತನಾಟಕ', 'ಭಾಸ', 'ಬಂಕಿಮಚಂದ್ರ' ಮೊದಲಾದ ಕೃತಿಗಳಿಂದ ಪ್ರಸಿದ್ಧರಾದವರು. ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಸಂದರ್ಭದಲ್ಲಿ ನಡೆದ ಘಟನೆಯಿದು:

ಗಣಿತಶಾಸ್ತ್ರದ ಕೊಠಡಿಯಲ್ಲಿ ಕರ್ನಾಟಕ ಸಂಘದ ಯಾವುದೋ ಒಂದು ಸಭೆ. ರಾತ್ರಿ ಸು. ೮ ಗಂಟೆ ವೇಳೆಗೆ ಸಭೆ ಮುಗಿಯಿತು. ಎಲ್ಲರೂ ಹೊರಟುಹೋದ ಮೇಲೆ, ಡಿವಿಜಿ ಸೇರಿದಂತೆ ೩-೪ ಮಂದಿ ಮಾತ್ರ ಉಳಿದುಕೊಂಡಿದ್ದರು. ಪ್ರಾಣಿಶಾಸ್ತ್ರದ ಪ್ರೊಫೆಸರ್ ಸಿ. ಆರ್. ನಾರಾಯಣ ರಾಯರು ತಮ್ಮ ಬ್ಯೂಕ್‌ಕಾರನ್ನು ಸಭಾಮಂದಿರದ ಮುಂದೆ ನಿಲ್ಲಿಸಿದ್ದರು. ಅವರು ಕೃಷ್ಣಶಾಸ್ತ್ರಿಗಳನ್ನೂ ಡಿವಿಜಿ ಅವರನ್ನೂ ಕಾರಿಗೆ ಹತ್ತಿಕೊಳ್ಳುವಂತೆ ಕರೆದರು. ಡಿವಿಜಿ ಗಾಡಿ ಹತ್ತಿ ಕುಳಿತರು. ಆದರೆ ಕೃಷ್ಣಶಾಸ್ತ್ರಿಗಳು ನಿಂತೇ ಇದ್ದರು.

ನಾರಾಯಣರಾಯರ ಮತ್ತು ಕೃಷ್ಣ ಶಾಸ್ತ್ರಿಗಳ ನಡುವೆ ಮುಂದೆ ಹೀಗೆ ಸಂಭಾಷಣೆ ಜರುಗಿತು:

ಸಿ. ಆರ್. ಎನ್: ಶಾಸ್ತ್ರಿಗಳೆ, ದಯಮಾಡಬೇಕಲ್ಲ'.

ಎ. ಆರ್. ಕೃ: ಇಲ್ಲ, ನಾನು ನಿಮ್ಮ ಗಾಡಿಯಲ್ಲಿ ಬರುವುದಿಲ್ಲ.

ಸಿ. ಆರ್. ಎನ್: ಅದೇಕೆ ನನ್ನ ಮೇಲೆ ಕೋಪ?

ಎ. ಆರ್. ಕೃ: ಕೋಪವಲ್ಲ ಸ್ವಾಮಿ, ನನಗೆ ಬೈಸಿಕಲ್ಲಿದೆ. ಅದರಲ್ಲಿ ನಾನು ಹೋಗುತ್ತೇನೆ.

ಸಿ. ಆರ್. ಎನ್: ಬೈಸಿಕಲ್ ರಾತ್ರಿ ಇಲ್ಲಿಯೇ ಇಟ್ಟಿದ್ದರಾಯಿತು.

ಎ. ಆರ್. ಕೃ: ನಾಳೆ ಪುನಃ ನಾನು ಕಾಲೇಜಿಗೆ ಬರಬೇಕಲ್ಲ. ಆಗ ನಿಮ್ಮ ಕಾರು ಇರುತ್ತದೆಯೇ, ನನಗೆ?

ಸಿ. ಆರ್. ಎನ್: ಅದಕ್ಕೇನು ಕಷ್ಟ? ಅಗತ್ಯವಾಗಿ ಇರುತ್ತದೆ. ನಿಮ್ಮ ಮನೆ ಬಾಗಿಲಲ್ಲಿ ಕಾದಿರುತ್ತದೆ.

ಎ. ಆರ್. ಕೃ: "ಇದು ನಿಮ್ಮ ಒಳ್ಳೆಯತನ ಸ್ವಾಮಿ. ಆದರೆ ನಾನು ಏಕೆ ನಿಮ್ಮ ಹಂಗಿಗೆ ಸಿಕ್ಕಬೇಕು?".

ಕೃಷ್ಣಶಾಸ್ತ್ರಿಗಳು 'ಸಾಣೆ ಹಿಡಿಯದ ವಜ್ರ' ಎನ್ನುತ್ತಾರೆ, ಡಿವಿಜಿ.

'ಡಿವಿಜಿ, 'ಸಾಹಿತ್ಯೋಪಾಸಕರು', ಜ್ಞಾಪಕಚಿತ್ರಶಾಲೆ-೩, ಕಾವ್ಯಾಲಯ, ಮೈಸೂರು, ೧೯೭೦, ಪು. ೨೮೫-೮೬.

೬೪. 'ನಾನು ಗಾಂಧೀಭಕ್ತರ ಸೇವೆ ಮಾಡಿದ್ದೇನೆ'

ಸು. ೧೯೩೩ರ ಅವಧಿಯಲ್ಲಿ ನಡೆದ ಘಟನೆ: ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರದ ಸ್ವಾತಂತ್ರ್ಯಯೋಧ ನಾರಾಯಣ ಹೆಗ್ಗಡೆಯವರು ತುಂಬ ನಂಬಿಕಸ್ಥ ಜನ ಎಂದು ಊರವರ ವಿಶ್ವಾಸ ಗಳಿಸಿದ್ದರು. ಅವರು ಸತ್ಯಾಗ್ರಹದಲ್ಲಿ ಇತರರೊಂದಿಗೆ ಸಕ್ರಿಯವಾಗಿ ಪಾಲುಗೊಂಡು ಕಾರಾಗೃಹದಲ್ಲಿಯೂ ಇದ್ದು ಬಂದವರು. ಕೆಲವರು ತಮ್ಮಲ್ಲಿದ್ದ ಚೂರುಪಾರು ಒಡವೆಗಳನ್ನು ಪೋಲೀಸರ ಕೈಗೆ ಬೀಳದ ಹಾಗೆ ಜೋಕೆಮಾಡಲು ಹೆಗ್ಗಡೆಯವರಿಗೆ ಒಪ್ಪಿಸಿದ್ದರು. ಅವರು ಆ ಒಡವೆಗಳನ್ನೂ ತಮ್ಮ ಸ್ವಂತದ ಒಡವೆಗಳನ್ನೂ ಕೂಡಿಸಿ, ಒಂದು ದೊಡ್ಡ ಭಾಂಡೆಯಲ್ಲಿ ಹಾಕಿ, ಗುಟ್ಟಾಗಿ ಸ್ಥಳದ ಕಾನಿನಲ್ಲಿ ಒಂದು ಗೊತ್ತಾದೆಡೆ ಹೂತಿಟ್ಟು ಬಂದಿದ್ದರು.

ಹೆಗ್ಗಡೆಯವರ ಮನೆಯ ದನ ಕಾಯುವ ಹೆಂಗಸು ದೇವಿ. ಸಿದ್ಧಾಪುರದ ಕಡೆ ಜೋರುಮಳೆಯಾಗಿ, ಮೇಲಿನ ಮಣ್ಣು ಕೊಚ್ಚಿಹೋಗಿ ಒಡವೆಯ ಭಾಂಡೆಯ ಸ್ವಲ್ಪ ಭಾಗ ಮೇಲಕ್ಕೆ ಕಾಣುತ್ತಿದ್ದುದು, ಕಾನಿನಲ್ಲಿ ದನ ಮೇಯಿಸಲು ಹೋಗಿದ್ದ ವೇಳೆ ಆಕೆಯ ಕಣ್ಣಿಗೆ ಒಮ್ಮೆ ಆಕಸ್ಮಿಕವಾಗಿ ಬಿತ್ತು. ತಕ್ಷಣ ಗಂಡನನ್ನು ಕರೆತಂದು ಆ ಜಾಗವನ್ನು ಅಷ್ಟು ಅಗೆದು ತೆಗೆದು ನೋಡಿದರೆ, ಅದು ತನ್ನ ಒಡೆಯರ ಮನೆಯ ಭಾಂಡೆಯೆಂದು ಸುಲಭವಾಗಿ ತಿಳಿಯಿತು. ಇಬ್ಬರೂ ಸೇರಿ ಜಾಗ ಬದಲಿಸಿ, ಬೇರೆ ಕಡೆ ಅದನ್ನು ಹೂತಿಟ್ಟರು.

ಆದರೆ ಈ ಸಮಾಚಾರ ಪೋಲೀಸರಿಗೆ ಹೇಗೋ ತಿಳಿಯಿತು. ದೇವಿಯನ್ನೂ ಅವಳ ಗಂಡನನ್ನೂ ಕರೆಸಿ ಭಾಂಡೆ ಹೂತಿಟ್ಟಿರುವ ಜಾಗ ತೋರಿಸುವಂತೆ ಕೇಳಿದರು. ಅವರು ಹೇಳಲಿಲ್ಲ. ಚೆನ್ನಾಗಿ ಥಳಿಸಿ, ಚಿತ್ರಹಿಂಸೆ ಕೊಟ್ಟರು. ಆದರೂ ಗಂಡ ಹೆಂಡತಿ

ಗುಟ್ಟು ಬಿಟ್ಟುಕೊಡಲಿಲ್ಲ. ಹಿಂಸೆಯ ಪರಿಣಾಮವಾಗಿ ದೇವಿಯ ಗಂಡನು ಮೃತನಾದನು.

ಇದೆಲ್ಲ ನಡೆದಾಗ ನಾರಾಯಣ ಹೆಗ್ಗಡೆ ಕಾರಾಗೃಹದಲ್ಲಿದ್ದರು. ಬಿಡುಗಡೆಯಾಗಿ ಮೊದಲೇ ಊರಿಗೆ ಬಂದಿದ್ದ ಅನೇಕರು ಹೆಗ್ಗಡೆಯವರ ಬಳಿ ಇರಿಸಿದ್ದ ತಮ್ಮ ಒಡವೆಗಳನ್ನು ಮರಳಿ ಪಡೆಯಲು ಅವರ ಬಿಡುಗಡೆಯ ದಿನವನ್ನೇ ನಿರೀಕ್ಷಿಸುತ್ತಾ ಇದ್ದರು. ಕೊಂಚ ದಿನಗಳಿಗೆ ಹೆಗ್ಗಡೆಯವರಿಗೆ ಸೆರೆಯಿಂದ ಬಿಡುಗಡೆಯಾಯಿತು. ಊರಿಗೆ ಬಂದರು. ಒಡವೆ ಕೊಟ್ಟಿದ್ದವರು ಅವರ ಹತ್ತಿರ ಬಂದು ಮರಳಿಸುವಂತೆ ಕೋರಿದರು.

ಹೆಗ್ಗಡೆಯವರು ತಾವು ಭಾಂಡೆ ಹೂತಿಟ್ಟಿದ್ದ ಬಯಲಿನತ್ತ ಹೋಗಿ, ಸ್ಥಳದಲ್ಲಿ ಹುಡುಕಿದರು. ಭಾಂಡೆ ಕಾಣಸಲಿಲ್ಲ. ಹೂತಿಟ್ಟ ಜಾಗದ ಸುಳಿವೂ ಸರಿಯಾಗಿ ಸಿಗಲಿಲ್ಲ. ಕಳವಳಪಟ್ಟು ಹುಚ್ಚರ ಹಾಗೆ ಆಡಲಾರಂಭಿಸಿದರು.

ದೇವಿ ಆ ವೇಳೆಗೆ ಅಲ್ಲಿಗೆ ಬಂದಳು. ವಿಷಯ ತಿಳಿಯಿತು. ಹೆಗ್ಗಡೆಯವರ ಅಣ್ಣಂದಿರನ್ನು ತಾನು ಭಾಂಡೆ ಹೂತಿಟ್ಟ ಬೇರೆ ಸ್ಥಳಕ್ಕೆ ಕರೆದುಕೊಂಡು ಹೋದಳು. ಏನು ನಡೆಯಿತು ಎನ್ನುವುದನ್ನು ಅವರಿಗೆ ವಿವರಿಸಿದಳು. ಬೇರೆ ಹೂತಿಟ್ಟ ಕಡೆಯಿಂದ ಭಾಂಡೆಯನ್ನು ಹೊರತೆಗೆದು ತರಲಾಯಿತು. ಒಳಗಿದ್ದ ಒಡವೆಗಳನ್ನೆಲ್ಲ ಪರೀಕ್ಷಿಸಿ ನೋಡಲಾಗಿ, ಎಲ್ಲಾ ಇದ್ದುದು ಇದ್ದಂತೆಯೇ ಇತ್ತು.

ಇಷ್ಟೊಂದು ನಂಬಿಕೆಯಿಂದ ಒಡೆಯರ ಮನೆಯ ಒಡವೆಭಾಂಡೆಗೆ ರಕ್ಷಣೆ ಒದಗಿಸಿದ ದೇವಿಗೆ ಏನಾದರೂ ಒಂದು ಒಡವೆಯನ್ನು ಬಹುಮಾನವಾಗಿ ಕೊಡಬೇಕೆಂದು ಹೆಗಡೆಯ ಮನೆಯವರೂ ಇತರರೂ ಆಲೋಚಿಸಿದರು. ಅವಳು ಏನನ್ನೂ ತೆಗೆದುಕೊಳ್ಳಲು ಒಪ್ಪಲಿಲ್ಲ. "ನೀವೆಲ್ಲ ಜೈಲಿಗೆ ಹೋಗಿ ಗಾಂಧೀಸೇವೆ ಮಾಡಿದಿರಿ. ನಾನು ಗಾಂಧೀಭಕ್ತರ ಸೇವೆ ಮಾಡಿದ್ದೇನೆ. ಈ ಪುಣ್ಯವೇ ನನಗೆ ಸಾಕು" ಎಂದುಬಿಟ್ಟಳು.

ಗಾಂಧೀಜಿ ಈ ಭಾಗಕ್ಕೆ ಭೇಟಿ ನೀಡಿದಾಗ ಜನ ದೇವಿಯನ್ನು ಅವರಿಗೆ ಪರಿಚಯಿಸಿದರು. ತಮ್ಮ ಕಾಲಿಗೆ ಬಿದ್ದ ದೇವಿಯನ್ನು ಗಾಂಧೀಜಿ ಮೇಲೆತ್ತಿ, ಮೆಚ್ಚು ಮಾತಾಡಿ, ತಮ್ಮ ತೃಪ್ತಿ ಸಂತೋಷ ವ್ಯಕ್ತಪಡಿಸಿದರು.

ಪ್ರೇಮಲತಾ ಸುಂದರೇಶನ್, ಅಗರಂ ರಂಗಯ್ಯ ಇ. (ಸಂ.), 'ಸ್ವಾತಂತ್ರ್ಯದೆಡೆಗೆ' (ಎಂ. ಎನ್. ಜೋಯಿಸ್ ಅಭಿನಂದನ ಗ್ರಂಥ), ಡಿ.ವಿ.ಕೆ. ಮೂರ್ತಿ, ಮೈಸೂರು-೪, ೧೯೯೧, ಪು. ೩೫-೩೬

೬೫. 'ನಾನೇ ಬರ್ತೀನಿ'

ದುರ್ಗದ ಹಳ್ಳಿಯ ಒಬ್ಬರು ಚಿಕ್ಕಮಗಳೂರಿನ ಜನರಲ್ ಆಸ್ಪತ್ರೆಗೆ ದಾಖಲಾಗಿದ್ದರು. ಯಾವುದೋ ವ್ಯಾಧಿ ಉಲ್ಬಣವಾಗಿ, ಅವರಿಗೆ ತುರ್ತಾಗಿ ಆಪರೇಷನ್ ಆಗಬೇಕಾಗಿತ್ತು.

ಆದರೆ ರೋಗಿಯ ಕಡೆಯವರು ಯಾರೂ ಇರಲಿಲ್ಲ. ವೈದ್ಯರು ಆತನಿಗೆ "ಇಲ್ಲಿ ನಿನಗೆ ಯಾರಾದರೂ ಪರಿಚಯದವರು ಇದ್ದರೆ ಹೇಳಪ್ಪ, ಆಪರೇಷನ್ ಮಾಡುವ ಮೊದಲು ನಿಮ್ಮವರು ಯಾರಾದರೂ ಒಬ್ಬರು ಇರಬೇಕು" ಎಂದರು. ಆತನಿಗೆ ಚಿಕ್ಕಮಗಳೂರಿನಲ್ಲಿ ಪರಿಚಯದವರು ಯಾರೂ ಇರಲಿಲ್ಲ. ಕಡೆಗೆ, ತನ್ನ ಊರಿನ ಸಮೀಪದ ಒಬ್ಬರನ್ನು ಜ್ಞಾಪಿಸಿಕೊಂಡು, ಅವರಿಗೆ ವರ್ತಮಾನ ಕಳುಹಿಸಬಹುದೆಂದು ತಿಳಿಸಿದ. ಆ ಒಬ್ಬರು, ವಕೀಲರಾಗಿದ್ದ ಟಿ. ಆರ್. ಚಂದ್ರಯ್ಯ ಹೆಗಡೆ ಅವರು.

ವೈದ್ಯರು ಹೆಗಡೆಯವರ ಮನೆಗೆ ಫೋನ್ ಮಾಡಿದರು. ಅವರು ಇರಲಿಲ್ಲ. ಅವರ ಭಾವನವರಾದ ಬಾಳೆಹಳ್ಳಿ ರಂಗೇಗೌಡರು ಆಗ ಅವರ ಮನೆಗೆ ಬಂದಿದ್ದರು. ಅವರೇ ಫೋನ್ ಎತ್ತಿಕೊಂಡರು. ಅವರ ನಡುವೆ ಹೀಗೆ ಸಂಭಾಷಣೆ ನಡೆಯಿತು:

ವೈದ್ಯರು: ಚಂದ್ರಯ್ಯ ಹೆಗಡೆಯವರು ಬೇಕಾಗಿತ್ತು.

ಗೌಡರು: ಅವರು ಇಲ್ಲ; ಏನು ವಿಚಾರ ಹೇಳಿ.

ವೈದ್ಯರು: ದುರ್ಗದ ಹಳ್ಳಿಯವನು, ಒಬ್ಬ ರೋಗಿ, ಆಸ್ಪತ್ರೆ ಸೇರಿದ್ದಾನೆ.

ಅವನಿಗೆ ಆಪರೇಷನ್ ಆಗಬೇಕಾಗಿದೆ. ಯಾರೂ ಅವನಿಗೆ ಇಲ್ಲಿ ಪರಿಚಯ ಇಲ್ಲವಂತೆ. ಕೇಳಿದ್ದಕ್ಕೆ ಹೆಗಡೆಯವರ ಹೆಸರು ಹೇಳಿದ. ಅದಕ್ಕೇ ಫೋನ್‌ಮಾಡಿದೆ.

ಗೌಡರು: ಹೆಗಡೆ ಅವರಿಲ್ಲ. ಆದರೂ ಪರವಾಗಿಲ್ಲ. ನಾನೇ ಬರ್‍ತೀನಿ. ಗೌಡರು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಬಂದರು. ವೈದ್ಯರನ್ನು ಕಂಡರು. ಗೌಡರು ಆ ಪ್ರಾಂತಕ್ಕೆ ಜನಪ್ರಿಯರಾಗಿದ್ದುದರಿಂದ, ರೋಗಿಗೆ ಉತ್ತಮದರ್ಜೆ ಚಿಕಿತ್ಸೆ ದೊರೆಯಿತು. ಆತ ಗುಣಮುಖನಾದ.

ಚಂದ್ರಯ್ಯನಾಯ್ಡು, 'ಬಾಳೇಹಳ್ಳಿ ರಂಗೇಗೌಡರು', ಹಾಂದಿ ಅಂಚೆ, ಚಿಕ್ಕಮಗಳೂರು ತಾ. ೧೯೮೮, ಪು. ೪೪-೪೫

೬೬. 'ನಿಜವಾದ ಸಂಗೀತದ ಲಕ್ಷಣವೇ ಇದು'

ವೀಣೆ ಶೇಷಣ್ಣನವರೂ ಕೆ. ವಾಸುದೇವಾಚಾರ್ಯರೂ ಮೈಸೂರು ಆಸ್ಥಾನದ ಸಂಗೀತ ವಿದ್ವಾಂಸರಾಗಿ ಪ್ರಸಿದ್ಧರು. ವೃತ್ತಿದ್ವೇಷವೆನ್ನುವಂತೆ ಅವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿರಲಿಲ್ಲ; ಕತ್ತಿ ಮಸೆಯುತ್ತಿದ್ದರು. ಇದಕ್ಕೆ ಚಾಡಿಕೋರರು ಕಾರಣ. ಆಮೇಲೆ ಹಿತೈಷಿಗಳು ಇಬ್ಬರನ್ನೂ ಸಮಾಧಾನಪಡಿಸಿ ಹತ್ತಿರ ತರುತ್ತಿದ್ದರು.

ಒಮ್ಮೆ ಸು.೬ ತಿಂಗಳ ಕಾಲ ಇಬ್ಬರೂ ಮಾತುಬಿಟ್ಟಿದ್ದರು. ಇವರನ್ನು ಒಗ್ಗೂಡಿಸಿ

ಇಬ್ಬರ ಸಂಗೀತವನ್ನೂ ಒಟ್ಟಿಗೆ ಕೇಳಲು ಆಶಿಸಿ ಕೆಲವರು ಕಲಾಭಿಮಾನಿಗಳು ಇಬ್ಬರಿಗೂ ತಿಳಿಯದ ಹಾಗೆ ಕಛೇರಿ ಏರ್ಪಡಿಸಿದರು. ಸ್ಥಳ ಮೈಸೂರು ಕಾಡಯ್ಯನವರ ಛತ್ರ.

ಆಚಾರ್ಯರು ಶಿಷ್ಯರ ಸಂಗಡ ತಂಬೂರಿ ತೆಗೆಸಿಕೊಂಡು ಗೊತ್ತಾದ ವೇಳೆಗೆ ಛತ್ರಕ್ಕೆ ಬಂದರು. ಆ ವೇಳೆಗೆ ಅಲ್ಲಿಗೆ ಬಂದಿದ್ದ ಶೇಷಣ್ಣನವರು ಕೆರಳಿ ಕೆಂಡವಾದರು. ಏಕಕಾಲದಲ್ಲಿ ಒಂದೇ ಕಡೆ ಇಬ್ಬರ ಕಛೇರಿಗೂ ತಮಗೆ ತಿಳಿಯದಂತೆ ಏರ್ಪಾಟುಮಾಡಿದ್ದಕ್ಕಾಗಿ ವ್ಯವಸ್ಥಾಪಕರ ಮೇಲೆ ಇಬ್ಬರೂ ಹಾರಾಡಿದರು. ಆಗ ಅವರು "ನಿಮ್ಮಂಥ ದೊಡ್ಡ ವಿದ್ವಾಂಸರು ಹೀಗೆ ಜಗಳಕ್ಕೆ ನಿಲ್ಲಬಹುದೇ? ಇಬ್ಬರ ಸಂಗೀತವನ್ನೂ ಒಟ್ಟಿಗೇ ಕೇಳುವುದು ನಮ್ಮ ಆಸೆ. ಹಾಗಾಗಿ ಈ ಸಂಚು ಮಾಡಿದೆವು. ನಿಮ್ಮ ವೈಮನಸ್ಯ ಮರೆತು, ಸಂಗೀತದ ಸವಿಯನ್ನು ಧಾರೆಯೆರೆಯಿರಿ" ಎಂದು ವಿನಯದಿಂದ ಕೇಳಿಕೊಂಡರು.

ಯಾರು ಪ್ರಾರಂಭಿಸಬೇಕು, ಕಛೇರಿಯನ್ನು? ಈ ಸಮಸ್ಯೆ ಬಗೆಹರಿಯಲು ಸ್ವಲ್ಪ ಕಾಲ ಹಿಡಿಯಿತು. ಶೇಷಣ್ಣನವರು 'ನಾನೇ ಮೊದಲು ನುಡಿಸಿಬಿಡುತ್ತೇನೆ. ನನಗೆ ಸ್ವಲ್ಪ ತುರ್ತುಕೆಲಸವಿದೆ. ನಾನು ಕಛೇರಿ ಆದ ಕೂಡಲೇ ಹೊರಟುಬಿಡಬೇಕು' ಎಂದರು.

ಶೇಷಣ್ಣನವರ ವೀಣಾವಾದನ ತುಂಬ ದಿವ್ಯವಾಗಿತ್ತು. ವಾಸುದೇವಾಚಾರ್ಯರಿಗೆ 'ಇಂಥವರೊಂದಿಗೆ ಹಗೆತನವೇ' ಎನ್ನಿಸಿತು. ಅವರ ಪಾದಗಳ ಮೇಲೆ ಬಿದ್ದು ಹೊರಳಾಡಿ ಕ್ಷಮೆ ಯಾಚಿಸಬೇಕು ಎಂದು ತೋರಿತು. ಆದರೆ ಸ್ವಾಭಿಮಾನದಿಂದಾಗಿ ಸುಮ್ಮನೆ ಕುಳಿತರು. ಅವರ ಮನಸ್ಸು ಆ ವೀಣಾಧ್ವನಿಯೊಂದಿಗೆ ಪೂರ್ತಿ ಕರಗಿಹೋಗಿತ್ತು. ವಾದನ ಮುಗಿದ ಮೇಲೆ, "ಆಯಿತು, ಇಷ್ಟರ ಮೇಲೆ ಯಾವ ವಿದ್ವಾಂಸ ಹಾಡಿ ಸಭೆಗೆ ಕಳೆಕೊಡುತ್ತಾನೋ, ನೋಡೋಣ" ಎಂದು ನುಡಿದು, ತಮ್ಮ ವೀಣೆಯನ್ನು ಪಕ್ಕಕ್ಕಿಟ್ಟು, ಒರಗುದಿಂಬಿಗೆ ಆತುಕೊಂಡು ಕುಳಿತರು. ಸಭಿಕರಿಗೆ ಮುಂದೆ ಹೇಗೋ ಏನೋ ಎಂಬ ಕುತೂಹಲ, ಆಶ್ಚರ್ಯ.

ಆಚಾರ್ಯರು ಮೇಲೆದ್ದರು. ದೇವರನ್ನೂ ಗುರುಗಳನ್ನೂ ಸ್ಮರಿಸಿ, 'ಹಾಡಿಯೇ ಹಾಡುತ್ತೇನೆ, ಕಳೆ ಕಟ್ಟಿಸಿಯೇ ಕಟ್ಟಿಸುತ್ತೇನೆ' ಎಂದು ಹಠ ತೊಟ್ಟರು. ಶಕ್ತಿಮೀರಿ ಹಾಡಿದರು.

ಈಗ ಶೇಷಣ್ಣನವರ ಕಣ್ಣುಗಳು ಒದ್ದೆಯಾಗಿದ್ದವು. ಅಂಗವಸ್ತ್ರದಿಂದ ಆಗಾಗ ಕಣ್ಣೀರು ತಡೆಯುತ್ತಿದ್ದರು. ಹಾಡಿಕೆ ಮುಗಿದ ಕೂಡಲೇ, ೬ ತಿಂಗಳ ಮೌನವ್ರತ ಅರೆಕ್ಷಣದಲ್ಲಿ ಮಾಯವಾಯಿತು. ಅವರು ಆಚಾರ್ಯರನ್ನು ಉದ್ದೇಶಿಸಿ ಹೇಳಿದರು: "ಆಚಾರ್ಯರೇ, ಚಾಡಿಕೋರರ ಮಾತು ಕೇಳಿ ನಾವು ಹೀಗೆ ೬ ತಿಂಗಳ ಕಾಲ ಪರಸ್ಪರ ನೋಡದೆ, ಮಾತುಕತೆ ಆಡದೆ ಇದ್ದೆವಪ್ಪ. ಒಂದು ರೀತಿ ಈ ಪೈಪೋಟಿ ಏರ್ಪಾಡಾದ್ದು ಒಳ್ಳೆಯದೇ ಆಯಿತು. ನಿಮ್ಮ ನಿಜವಾದ ಸತ್ತ್ವ ಬೆಳಕಿಗೆ ಬಂತು, ಇವತ್ತು. ಎಷ್ಟಾದರೂ ವಾದ್ಯ ವಾದ್ಯವೆ, ಹಾಡಿಕೆ ಹಾಡಿಕೆಯೇ. ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ. ನಮ್ಮನ್ನ ಹೀಗೆ ಒಂದುಗೂಡಿಸಿದ ಕಲಾಭಿಮಾನಿಗಳಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು".

ಆಚಾರ್ಯರು ಮಗುವಿನಂತೆ ಅತ್ತರು. ಶೇಷಣ್ಣನವರಲ್ಲಿ ಕ್ಷಮಾಪಣೆ ಕೇಳಿದರು. ಸಭೆಯಲ್ಲಿ ಸಮಾಧಾನ ಸಂತೋಷಗಳು ತುಂಬಿ ಸೂಸಿದುವು. ಇಬ್ಬರೂ ಒಟ್ಟಿಗೆ ದಾರಿ

ನಡೆಯುತ್ತ ಸಾಗಿದಾಗ, ಶೇಷಣ್ಣನವರು, "ನಿಜವಾದ ಸಂಗೀತದ ಲಕ್ಷಣವೇ ಇದು, ಆಚಾರ್ಯರೇ. ಹಗೆತನ, ಕೋಪ ತಾಪ, ನೋವು ಸಂಕಟ ಎಲ್ಲವನ್ನೂ ಒಂದು ಗಳಿಗೆಯಲ್ಲಿ ಮರೆಸುತ್ತದೆ. ಸುಖಭೋಜನ, ಸ್ತ್ರೀವ್ಯಾಮೋಹ ಮೊದಲಾದ ಭೋಗವಿಲಾಸಗಳ ಕಡೆಗೆ ಮನಸ್ಸನ್ನು ಯಾವುದು ಹರಿಯಬಿಡುವುದಿಲ್ಲವೋ ಅದೇ ನಿಜವಾದ ಸಂಗೀತ" ಎಂದರು.

ಕೆ. ವಾಸುದೇವಾಚಾರ್ಯ, 'ನೆನಪುಗಳು', ಕಾವ್ಯಾಲಯ, ಮೈಸೂರು, ೧೯೭೮, ಪು. ೮೪-೮೬

೬೭. 'ನಿನಗೆ ಹತ್ತುದಿನಗಳು ಪಾಠ ತಪ್ಪಿಹೋಯಿತಲ್ಲಾ'

ಶ್ರೀಕಂಠ ಕುಮಾರಸ್ವಾಮಿಗಳು (ವಿಶ್ರಾಂತ ಪ್ರಾಧ್ಯಾಪಕರು, ಐಐಟಿ, ಚನ್ನೈ) ಬಿ.ಎಸ್‌ಸಿ. ಮುಗಿಸಿ ಮೆಟಲರ್ಜಿ ವ್ಯಾಸಂಗಕ್ಕೆಂದು ವಿದ್ಯಾರ್ಥಿವೇತನದ ಸೌಕರ್ಯ ದೊರಕಿಸಿಕೊಂಡು ಕಾಶಿ ಹಿಂದೂ ವಿಶ್ವವಿದ್ಯಾನಿಲಯವನ್ನು ಸೇರಲು ವಾರಣಾಸಿಗೆ ಹೊರಟರು. ಅಲ್ಲಿ ಇರುವುದು ೨ ವರ್ಷಗಳ ಅವಧಿಗೆ ಎಂದಾಯಿತು. ಅಷ್ಟರಲ್ಲಿ ತಾವು ಆ ಮೊದಲೇ ಆರಂಭಿಸಿದ್ದ ವೇದಾಧ್ಯಯನವನ್ನು ಮುಂದುವರಿಸಬೇಕೆಂದು ಆಸೆಪಟ್ಟರು. 'ಕಂಚಿಯ ಆಚಾರ್ಯರ ಮಠದಲ್ಲಿ ಶಂಕರ ಭಗವತ್ಪಾದರ ಪೂಜೆ ಮಾಡಿಕೊಂಡಿದ್ದ ತೆನ್ನಂತೋಟಂ ಯಜ್ಞನಾರಾಯಣ ದೀಕ್ಷಿತರಲ್ಲಿಗೆ ಹೋಗಿ ಕೇಳಿ' ಎಂದು ಯಾರೋ ಅವರಿಗೆ ಹೇಳಿದರು.

ಕುಮಾರಸ್ವಾಮಿಗಳು ದೀಕ್ಷಿತರನ್ನು ಕಂಡು, ನಮಸ್ಕರಿಸಿ, ಅವರಿಗೆ ತಮ್ಮ ಅಪೇಕ್ಷೆಯನ್ನು ಅರಿಕೆಮಾಡಿದರು. ಅವರು ಈ ಶಿಷ್ಯನ ಸಾಮರ್ಥ್ಯವನ್ನು ಸ್ವಲ್ಪ ಪರೀಕ್ಷಿಸಿ, ಸಂಹಿತಾಪಾಠವನ್ನೇ ಆರಂಭಿಸುವುದೆಂದು ನಿಶ್ಚಯಿಸಿದರು. 'ಎಷ್ಟು ಹೊತ್ತಿಗೆ ಪಾಠಕ್ಕೆ ಬರಲಿ?' ಎಂದು ಕೇಳಿದ್ದಕ್ಕೆ, ದೀಕ್ಷಿತರು ಸ್ವಾಮಿಗಳ ಕಾಲೇಜು ಕೆಲಸ ಮುಗಿದ ಮೇಲೆ ತಾವೇ ಅವರು ಇರುವ ಕಡೆ ಬಂದು ಪಾಠಮಾಡುವುದಾಗಿ ತಿಳಿಸಿದರು. ಹಾಗೆಯೇ ಪಾಠವನ್ನು ಆರಂಭಿಸಿಯೂ ಬಿಟ್ಟರು.

ಮೊದಮೊದಲು ಪಕ್ಷಕ್ಕೊಂದು ಪ್ರಶ್ನೆಯ ಪಾಠ; ಬಳಿಕ ಏಳು ಕಾಂಡಗಳ ಸಂಹಿತೆಯ ಎಲ್ಲಾ ೪೪ ಪ್ರಶ್ನೆಗಳನ್ನೂ ೨ ವರ್ಷದ ಅವಧಿಯಲ್ಲಿ ಬೇಗ ಮುಗಿಸಲು ಸಂಕಲ್ಪಿಸಿ ೬ ದಿನಗಳಿಗೆ ೧ ಪ್ರಶ್ನೆಯಂತೆ ಪಾಠದ ಏರ್ಪಾಡಾಯಿತು. ಏನಾದರೂ ದೀಕ್ಷಿತರು ಪಾಠಕ್ಕೆ ತಮ್ಮ ಶಿಷ್ಯ ತಮ್ಮ ಮನೆಗೇ ಬರುವುದಕ್ಕೆ ಅವಕಾಶ ಕೊಡಲೇ ಇಲ್ಲ. ಅಷ್ಟು ಮಾತ್ರವಲ್ಲ, ಶಿಷ್ಯ ಕಾಲೇಜಿನಿಂದ ಬರುವುದನ್ನು ಎದುರುನೋಡುತ್ತ ನಿಂತಿರುತ್ತಿದ್ದರು. ಸ್ವಾಮಿಗಳಿಗೆ ಸ್ವಲ್ಪ ಉಪಾಹಾರವಾದ ಕೂಡಲೇ, ಸು. ಒಂದೂವರೆ ಗಂಟೆ ಪಾಠ. ಮೆಟಲರ್ಜಿ ಪಾಠದ ಸಹಪಾಠಿಗಳು ಒಂದೊಂದು ವೇಳೆ ಸಂಜೆ ಈ ಪಾಠದ ಹೊತ್ತಿಗೆ ತಮ್ಮ ಪಾಠಪ್ರವಚನ ಗಳಿಗಾಗಿ ಬಂದರೆ, ಯಾವಾಗ ಪುರುಸೊತ್ತು ಆಗುವುದೆಂದು ಕೇಳಿ ತಿಳಿದುಕೊಂಡು ಅಂಥ

ದಿನ ರಾತ್ರಿ ೧೦-೩೦ ರಿಂದ ೧೨ ಗಂಟೆ ವರೆಗೆ ಪಾಠಮಾಡಿ ಹೋಗುತ್ತಿದ್ದರು.

ದೀಕ್ಷಿತರದು ಭವ್ಯಾಕೃತಿ; ಧಾರ್ಯಾಗ್ನಿಯನ್ನು ಉಪಾಸನೆಮಾಡಿದ ತೇಜಸ್ಸು. ಕಂಚಿನ ಕಂಠದಲ್ಲಿ ವೇದಪಾಠ. ಅವರ ಉಚ್ಚಕಂಠದ ವೇದಪಠನಕ್ಕೆ ಗಂಗಾತೀರವೇ ಪ್ರತಿಧ್ವನಿಗೊಳ್ಳುವಂತೆ ಇರುತ್ತಿದ್ದಿತು. ಒಮ್ಮೆ ಕುಮಾರಸ್ವಾಮಿಗಳಿಗೆ ಜ್ವರ, ಕೆಮ್ಮಲು; ಮಲಗಿದ್ದರು. ಕಿಟಕಿಯಲ್ಲಿ ಏನೋ ನೆರಳು ಕಾಣಿಸಿತು. ಕತ್ತೆತ್ತಿ ನೋಡಿದರೆ, ಗುರುಗಳು ದೀಕ್ಷಿತರು. ಧಿಗ್ಗನೆ ಎದ್ದರು, ಕುಮಾರಸ್ವಾಮಿಗಳು. 'ಇನ್ನೂ ಜ್ವರ ಇದೆಯೇ' ಎಂದು ಗುರುಗಳು ಪ್ರಶ್ನಿಸಿದರು. 'ಇಲ್ಲ ಸುಸ್ತು, ಕೆಮ್ಮಲು ಇದೆ' ಎಂದರು, ಸ್ವಾಮಿಗಳು. 'ಹಾಗೇ ಸ್ವಲ್ಪ ಮೆಲ್ಲಗೆ ಹೇಳಿಬಿಡೋಣ ಬಾ' ಎಂದರು, ದೀಕ್ಷಿತರು. ಅವರೇ ಹಾಗೆ ಹೇಳುತ್ತಿರಬೇಕಾದರೆ ಇಲ್ಲವೆನ್ನುವುದು ಹೇಗೆ?

ಪಾಠವೇನೋ ಮೊದಲಾಯಿತು. ಆದರೆ ಎರಡನೆಯ ಪದಕ್ಕೇ ಕೆಮ್ಮು ಬಾಧಿಸ ತೊಡಗಿತು. ಮುಂದಿನ ೨ ದಿನಗಳೂ ಹೀಗೆಯೇ ಆಯಿತು. ಒಂದೊಂದೇ ಪದ ಹೇಳಿ ಪಾಠ ಮುಗಿಸಿದ್ದಾಯಿತು. ಬಿಟ್ಟದ್ದನ್ನು ಮುಂದಿನ ಪ್ರಶ್ನೆಯ ಪಾಠಕ್ಕೆ ಕೂಡಿಸಿಕೊಳ್ಳೋಣ ಎಂದು, ಮುಂದಿನ ಪ್ರಶ್ನೆಗೆ ಏರ್ಪಾಡಿನಂತೆ ಹೋದದ್ದೂ ಆಯಿತು.

ವಿದ್ಯಾರ್ಥಿವೇತನದ ಹಣದಲ್ಲಿ ಕುಮಾರಸ್ವಾಮಿಗಳು ತಮ್ಮ ನಾಲ್ಕು ಜನರ ಸಂಸಾರವನ್ನು ಸಾಕಬೇಕಾಗಿತ್ತು. ಹೀಗಾಗಿ ದೀಕ್ಷಿತರಿಗೆ ಅವರು ಯಾವ ಗುರುದಕ್ಷಿಣೆಯನ್ನೂ ಕೊಡುವ ಸ್ಥಿತಿಯಲ್ಲಿರಲಿಲ್ಲ. ಏನಾದರೂ ಭೌತಿಕವಾಗಿ ಸಹಾಯ ಮಾಡೋಣವೇ ಎಂದರೆ ಅದಕ್ಕೆ ಅವರು ಅವಕಾಶ ಕೊಡುತ್ತಿರಲಿಲ್ಲ. ಒಮ್ಮೆ ಗುರುಗಳು ಗಯೆಗೆ ಹೋಗಿದ್ದ ದಿನದಲ್ಲಿ, ಗೋದಿಯ ಡಬ್ಬವನ್ನು ಗಿರಣಿಗೆ ತಾವೇ ಎತ್ತಿಕೊಂಡು ಹಿಟ್ಟು ಮಾಡಿಸಿ ತಂದುದಕ್ಕೆ 'ನೀನೇಕೆ ಎತ್ತಿಕೊಂಡು ಹೋದೆ' ಎಂದು ತುಂಬ ಒದ್ದಾಡಿದರು.

೧೯೫೨ರ ಮಾರ್ಚ್ ತಿಂಗಳು. ಇನ್ನೂ ೨ ಕಾಂಡ ಪಾಠ ಬಾಕಿ ಇತ್ತು. ಕಾಶಿಯಲ್ಲಿ ಕಾಲರಾ ಪಿಡುಗು ಆರಂಭವಾಗಿತ್ತು. ದೀಕ್ಷಿತರ ೧೩ ವರ್ಷದ ಬೆಳೆದ ಮಗ ತೀರಿಕೊಂಡ. ಎರಡನೆಯ ದಿನ ಮಗನ ಅಂತ್ಯಕ್ರಿಯೆಗಳನ್ನು ತೀರಿಸಿ ಶಿಷ್ಯನ ಮನೆಯ ಕಡೆಗೆ ಬಂದರು, ದೀಕ್ಷಿತರು. ಚಿಕ್ಕ ವಯಸ್ಸಿನವರೂ ವಿದ್ಯಾರ್ಥಿಯೂ ಆದ ಕುಮಾರಸ್ವಾಮಿಗಳಿಗೆ ಅವರನ್ನು ಕಂಡಾಗ ಏನು ಸಮಾಧಾನ ಹೇಳುವುದು, ತಿಳಿಯಲಿಲ್ಲ. ತಲೆ ತಗ್ಗಿಸಿ ನಿಂತಿದ್ದರು. ಆಗ ದೀಕ್ಷಿತರೇ ಮಾತಾಡಿ, "ಕುಮಾರಸ್ವಾಮಿ, ಮಗ ೧೩ ವರ್ಷ ಇದ್ದ. ಏನೇನು ಮಾಡಬೇಕೋ ಎಲ್ಲಾ ಮಾಡಿದೆ. ಆದರೆ ವಿಧಿ ಅವನನ್ನು ಎಳೆದುಕೊಂಡು ಹೋಯಿತು. ಅವನು ಹೋದದ್ದರಿಂದ ದುಃಖವಾಯಿತು, ನಿಜ. ಆದರೆ ಅದಕ್ಕಿಂತ ಹೆಚ್ಚಾಗಿ ನಿನಗೆ ಹತ್ತು ದಿನಗಳು ಪಾಠ ತಪ್ಪಿ ಹೋಯಿತಲ್ಲಾ ಎಂದು ದುಃಖವಾಗುತ್ತಿದೆ. ಏನು ಮಾಡಲಿ?" ಎಂದು ಕಣ್ಣಲ್ಲಿ ನೀರು ತುಂಬಿಕೊಂಡರು.

ಕುಮಾರಸ್ವಾಮಿಗಳಿಗೂ ಅಳು ತಡೆಯಾಗಲಿಲ್ಲ, ಬಿಕ್ಕಿ ಬಿಕ್ಕಿ ಅತ್ತರು.

ಎಚ್. ಕೆ. ಶ್ರೀಕಂಠ ಕುಮಾರಸ್ವಾಮಿ, 'ಹೃದಯ ಸಂಪನ್ನತೆ', ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, ೨೦೦೦, ಪು. ೪೧-೪೫

೬೮. 'ನಿಮಗೆ ಬೇಕೆನಿಸುವಷ್ಟು ದಿನ ಅವು ನಿಮ್ಮಲ್ಲಿರಲಿ'

ರಂಗತಜ್ಞ, ಲೇಖಕ ಡಾ. ಎಚ್. ಕೆ. ರಂಗನಾಥ್ ೧೯೫೨ರ ಸುಮಾರಿನಲ್ಲಿ ಧಾರವಾಡದಲ್ಲಿದ್ದರು. ಕನ್ನಡ ರಂಗಭೂಮಿಯ ಬಗೆಗೆ ಸಂಶೋಧನೆ ನಡಸುತ್ತಿದ್ದರು. ಹೆಸರಾಂತ ಸಾಹಿತಿ ಸಂಶೋಧಕರ ನೆರವಿನಿಂದ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದ್ದರೂ ಕ್ಷೇತ್ರಕಾರ್ಯವನ್ನು ವ್ಯಾಪಕವಾಗಿಯೇ ಕೈಕೊಂಡಿದ್ದರೂ ಹಿಂದಿನ ವೃತ್ತಿರಂಗಭೂಮಿಯ ವಿಶಿಷ್ಟ ಮಾಸಪತ್ರಿಕೆ 'ರಂಗಭೂಮಿ'ಯ ಎಲ್ಲ ಸಂಚಿಕೆಗಳೂ ಅವರಿಗೆ ಲಭಿಸಿರಲಿಲ್ಲ. ಅವನ್ನು ದೊರಕಿಸಿಕೊಳ್ಳಲು ಮಾಡಿದ ಪ್ರಯತ್ನಗಳೂ ವಿಫಲವಾಗಿ, ಅವರು ಕಳವಳಗೊಂಡಿದ್ದರು.

ಈ ವೇಳೆಗೆ ಕರ್ನಾಟಕ ಕಾಲೇಜಿನ ಆಹ್ವಾನವನ್ನು ಒಪ್ಪಿ, ಪ್ರಸಿದ್ಧ ಸಾಹಿತಿ ಅ. ನ. ಕೃಷ್ಣರಾಯರು ಧಾರವಾಡಕ್ಕೆ ಒಮ್ಮೆ ಬಂದರು. ಅಲ್ಲಿ ಕೆಲವು ಅಮೋಘವಾದ ಭಾಷಣಗಳನ್ನು ಮಾಡಿದರು; ಸಂವಾದಗಳನ್ನು ನಡಸಿದರು; ಇವುಗಳಿಂದ ಅಲ್ಲಿಯ ಜನ ಸಮುದಾಯದ ಮೇಲೆ ಅಚ್ಚಳಿಯದ ಪ್ರಭಾವವನ್ನು ಉಂಟುಮಾಡಿದರು.

ಅ.ನ.ಕೃ. ಅವರ ವಾಗ್ಮಿತೆ ಅನನ್ಯವಾದ್ದು, ಜನಾಕರ್ಷಕವಾದ್ದು. ಆಗ ಒಂದು ಭಾಷಣದ ವೇಳೆ ರಂಗನಾಥ್ ಅವರನ್ನು ಗುರುತಿಸಿ, ಅವರನ್ನು ವಿಶ್ವಾಸದಿಂದ ಕಂಡರು. ಅವರ ಕೋರಿಕೆಯಂತೆ ಅವರ ಮನೆಗೆ ಉಪಾಹಾರಕ್ಕೆ ಸಹ ಹೋದರು. ಪ್ರಾಸಂಗಿಕವಾಗಿ ರಂಗನಾಥ್ ಅವರು ಅನಕೃ ಅವರಲ್ಲಿ ತಮ್ಮ ಕನ್ನಡ ರಂಗಭೂಮಿಯ ಸಂಶೋಧನೆಯ ವಿಚಾರ ತಿಳಿಸಿದರು; ರಂಗಭೂಮಿಯ ಸಂಚಿಕೆಗಳ ಅಲಭ್ಯತೆಯ ವಿಷಯವನ್ನೂ ಪ್ರಸ್ತಾಪಿಸಿದರು. ಆಗ ಅ.ನ.ಕೃ. ಏನೂ ಮಾತಾಡಲಿಲ್ಲ. ಅವರ ಸಂಶೋಧನೆಗಾಗಿ ಅವರ ಬೆನ್ನು ತಟ್ಟಿದರು.

ಒಂದು ವಾರ ಕಳೆಯಿತು. ಒಂದು ದಿನ ರಂಗನಾಥ್ ಅವರಿಗೆ ಅಂಚೆಯಲ್ಲಿ ಒಂದು ರೈಲ್ವೇ ಪಾರ್ಸಲ್ ರಸೀತಿ ಬಂತು. ಅವರಿಗೆ ಆಶ್ಚರ್ಯ, ಅವರು ರೈಲ್ವೇಸ್ಟೇಷನ್ನಿಗೆ ಧಾವಿಸಿದರು. ಆ ಕಾಲಕ್ಕೆ ಪಾರ್ಸಲ್ ಸಾಗಣೆ ವೆಚ್ಚವಾದ ಹದಿನೇಳೂ ಚಿಲ್ಲರೆ ರೂಪಾಯಿಗಳನ್ನು ಸಹ ಅನಕೃ ತಾವೇ ಪಾವತಿ ಮಾಡಿ, ಆ ಪಾರ್ಸಲ್ ರವಾನಿಸಿದ್ದರು.

ರಂಗನಾಥ್ ಅವರು ತಮ್ಮ ಮನೆಗೆ ಆ ಪಾರ್ಸಲ್ ಕೊಂಡೊಯ್ದು, ಕಟ್ಟುಬಿಚ್ಚಿ ನೋಡಿದರು. ಅದರಲ್ಲಿ 'ರಂಗಭೂಮಿ' ಮಾಸಪತ್ರಿಕೆಯ ಎಲ್ಲ ಸಂಚಿಕೆಗಳೂ ಜೊತೆಗೆ 'ಥಿಯೇಟರ್' ಎಂಬ ಆಂಗ್ಲ ಮಾಸಿಕದ ಎಲ್ಲ ಸಂಚಿಕೆಗಳೂ ನೀಟಾಗಿ ರಟ್ಟುಕಟ್ಟಿದ್ದವು, ಕಂಡುಬಂದುವು. ಅವರು ಏಕಕಾಲದಲ್ಲಿ ಸಂತೋಷ ಆಶ್ಚರ್ಯಗಳನ್ನು ಅನುಭವಿಸಿದರು. ಸದ್ದಿಲ್ಲದೆ ಮಾಡಿದ ಆ ಸಹಾಯಕ್ಕೆ ಅನಕೃ. ಅವರಿಗೆ ಏನು ಹೇಳಬೇಕೋ ಏನು ಬರೆಯಬೇಕೋ ಅವರಿಗೆ ತಿಳಿಯದಾಯಿತು. ಕೃತಜ್ಞತೆಯನ್ನು ತಿಳಿಸಿ, ತಿಂಗಳೊಳಗೆ ಓದಿ ಟಿಪ್ಪಣಿಮಾಡಿಕೊಂಡು ಹಿಂದಿರುಗಿಸುವುದಾಗಿ ಪತ್ರ ಬರೆದರು. ಅದರ ಮಾರನೆಗೇ ಅನಕೃ. ಅವರಿಂದ "ಏನೇನೂ ಅವಸರವಿಲ್ಲ, ನಿಮಗೆ ಬೇಕೆನಿಸುವಷ್ಟು ದಿನ ಅವು ನಿಮ್ಮಲ್ಲಿ

ಇರಲಿ" ಎಂಬುದಾಗಿ ಪ್ರತ್ಯುತ್ತರ ಬಂದಿತು. ಆದರೂ ರಂಗನಾಥ್ ೨೦ ದಿನಗಳ ಒಳಗಾಗಿಯೇ ಆ ಎಲ್ಲವನ್ನೂ ಓದಿದರು; ಟಿಪ್ಪಣಿ ಮಾಡಿಕೊಂಡರು; ಮತ್ತೆ ತಿಂಗಳಿಂದೊಳಗೆ ಆ ಸಾಹಿತ್ಯವನ್ನೆಲ್ಲಾ ಒಪ್ಪವಾಗಿ ಪ್ಯಾಕ್‌ಮಾಡಿ ಸ್ವತಃ ಬೆಂಗಳೂರಿಗೆ ಬಂದು ಅನಕೃ ಅವರನ್ನು ಅವರ ಮನೆ 'ಅನ್ನಪೂರ್ಣ'ದಲ್ಲಿ ಕಂಡು, ಅವರಿಗೆ ಅದನ್ನು ಒಪ್ಪಿಸಿದರು.

ಅನಕೃ ಅವರಿಗೆ ಸಹ ಈ ಕಾಲನಿಷ್ಠೆ, ಶ್ರದ್ಧೆ ಪ್ರಾಮಾಣಿಕತೆಗಳಿಗೆ ಆಶ್ಚರ್ಯವಾಗಿರಬೇಕು. ರಂಗನಾಥ್ ಅವರಿಗೆ ಸೊಗಸಾಗಿ ಆತಿಥ್ಯ ಮಾಡಿದರು. ನಂತರ ತಾವೇ ಆ ಪತ್ರಿಕೆಗಳ ಪಾರ್ಸಲ್ ಬಿಚ್ಚಿದರು. ರಂಗನಾಥ್ ಅವರ ಸಂಶೋಧನೆಗಾಗಿ ಕಳಿಸಿದ್ದ ಕೆ. ಶ್ರೀನಿವಾಸ ರಾವ್ ಎಂಬುವರು ೧೯೦೪ರಲ್ಲಿ ಬರೆದು ಪ್ರಕಟಿಸಿದ್ದ The Dramatic History of the World ಎಂಬ ಅಪರೂಪದ ಪುಸ್ತಕವನ್ನು ತೆಗೆದು, ಅದರ ವಿಶೇಷತೆಯನ್ನು ಮೆಚ್ಚಿ ಮಾತಾಡಿ, ಅವರಿಗೇ ಅದನ್ನು ತಮ್ಮ ಪ್ರೀತಿಯ ಕಾಣಿಕೆಯಾಗಿ ನೀಡಿದರು.

ಡಾ. ಎಚ್. ಕೆ. ರಂಗನಾಥ್, 'ನೆನೆದವರು ಮನದಲ್ಲಿ', ವಿ.ಸೀ. ಸಂಪದ, ಬೆಂಗಳೂರು-೮೫, ೧೯೯೯ (ಪ್ರ. ಮು. ೧೯೯೬), ಪು.೭೦-೭೧

೬೯. 'ನಿಮಗೆ ಶುಭವಾಗಲಿ'

ಶೃಂಗೇರಿ ಜಗದ್ಗುರು ಅಭಿನವ ವಿದ್ಯಾತೀರ್ಥಗಳ ದರ್ಶನಕ್ಕೆಂದು ಬೆಂಗಳೂರಿಂದ ಒಂದು ಸಂಸಾರ ಒಂದು ಟ್ಯಾಕ್ಸಿ ಗೊತ್ತುಮಾಡಿಕೊಂಡು ಶೃಂಗೇರಿಗೆ ಬಂದಿತ್ತು. ಕೆಲವು ದಿನ ಅಲ್ಲಿಯೇ ವಾಸ್ತವ್ಯ ಹೂಡಿ, ಸುತ್ತ ಮುತ್ತಲ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಿದರು, ಆ ಸಂಸಾರದವರು.

ಶೃಂಗೇರಿಯಲ್ಲಿ ಉಳಿದಿರುವಷ್ಟು ದಿನವೂ ಟ್ಯಾಕ್ಸಿಚಾಲಕ ಈ ಸಂಸಾರದವರ ಚಟುವಟಿಕೆಗಳನ್ನು ಗಮನಿಸುತ್ತಿದ್ದನು. ನಿತ್ಯ ಹೊಳೆಯಲ್ಲಿ ಮಿಂದು ತಾನೂ ಶಾರದಾ ದೇವಾಲಯಕ್ಕೆ ಹೋಗುತ್ತಿದ್ದನು. ದೂರದಿಂದಲೇ ಶ್ರೀಗಳ ದರ್ಶನವನ್ನೂ ಮಾಡುತ್ತಿದ್ದನು. ಹೀಗೆ ಮಾಡುವಾಗಲೆಲ್ಲ ಅವನಿಗೆ ಏನೋ ಒಂದು ತೃಪ್ತಿ ಸಂತೋಷಗಳಾಗುತ್ತಿದ್ದುವು.

ದರ್ಶನಾರ್ಥಿಯಾಗಿ ಬಂದಿದ್ದ ಸಂಸಾರ ಬೆಂಗಳೂರಿಗೆ ಹೊರಡುವ ದಿನ ಹತ್ತಿರವಾಯಿತು. ಫಲ ಮಂತ್ರಾಕ್ಷತೆಗಾಗಿ ಎಲ್ಲರೂ ಸಚ್ಚಿದಾನಂದ ವಿಲಾಸದಲ್ಲಿ ಬಂದು ಸೇರಿದರು. ಟ್ಯಾಕ್ಸಿ ಚಾಲಕ ತಾನೂ ಸ್ನಾನಮಾಡಿ ಮಡಿಯುಟ್ಟು ದೂರದಲ್ಲಿ ಒಂದು ಕಡೆ ನಿಂತಿದ್ದನು. ಶ್ರೀಗಳು ಒಬ್ಬೊಬ್ಬರಾಗಿ ಎಲ್ಲರ ಕುಶಲಪ್ರಶ್ನೆಯನ್ನೂ ಮಾಡುತ್ತ, ಫಲ

ಮಂತ್ರಾಕ್ಷತೆ ಕೊಡುತ್ತಿದ್ದರು; ಎಲ್ಲರಿಗೂ ಫಲಮಂತ್ರಾಕ್ಷತೆ ನೀಡಿ ಮುಗಿದ ಮೇಲೆ, ದೂರದಲ್ಲಿ ವಿನೀತನಾಗಿ ನಿಂತಿದ್ದ ಟ್ಯಾಕ್ಸಿ ಚಾಲಕನತ್ತ ನೋಡಿದರು. ಆತನನ್ನು ಹತ್ತಿರಕ್ಕೆ ಕರೆದು, "ಎಲ್ಲಿಂದ ಬಂದಿದ್ದೀರಿ" ಎಂದು ಪ್ರಶ್ನಿಸಿದರು. ಆತನ ಉದ್ಯೋಗಸ್ಥಿತಿ ಮನೆವಾರ್ತೆ ಎಲ್ಲಾ ವಿಚಾರಿಸಿಕೊಂಡರು. ಆತನಿಗೂ ಫಲಮಂತ್ರಾಕ್ಷತೆ ನೀಡಿ, "ಶ್ರೀ ಶಾರದಾ ಚಂದ್ರಮೌಳೀಶ್ವರರ ಅನುಗ್ರಹ ನಿಮ್ಮ ಮೇಲೆ ಸದಾ ಇರುತ್ತದೆ; ನಿಮಗೆ ಶುಭವಾಗಲಿ" ಎಂಬುದಾಗಿ ಹರಸಿದರು. ಟ್ಯಾಕ್ಸಿ ಚಾಲಕನ ಸಂತೋಷಕ್ಕೆ ಪಾರವೇ ಇಲ್ಲ. ಆತ ಭಕ್ತಿಯಿಂದ ಗುರುಗಳಿಗೆ ಸಾಷ್ಟಾಂಗನಮಸ್ಕಾರ ಮಾಡಿದನು.

ಪ್ರಯಾಣ ಬೆಂಗಳೂರು ಕಡೆಗೆ ಸಾಗಿತು. ಕರೆದೊಯ್ದಿದ್ದ ಸಂಸಾರದ ಜನವನ್ನು ಅವರ ಮನೆಯಲ್ಲಿ ಡ್ರೈವರ್ ಇಳಿಸಿದ. "ನಿಮ್ಮ ದಯೆಯಿಂದ ನನಗೂ ಗುರುಗಳ ದರ್ಶನವಾಯಿತು. ನಾನು ನಿಮಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಮುಂದೆ ಎಂದಾದರೂ ಸರಿಯೆ, ಶೃಂಗೇರಿಗೆ ಹೋಗುವಾಗ ನನ್ನನ್ನು ಮರೆಯಬೇಡಿ" ಎಂಬುದಾಗಿ ಕೇಳಿಕೊಂಡನು. ಮನೆಯಲ್ಲಿ ತನ್ನ ಅನುಭವ ತಿಳಿಸಿ, ಗುರುಗಳು ನೀಡಿದ್ದ ಪ್ರಸಾದವನ್ನು ಹೆಂಡತಿ ಮಕ್ಕಳಿಗೆ ನೀಡಿದನು. ಅವನು ಬದುಕಿನಲ್ಲಿ ಏನೋ ಒಂದು ಬಗೆಯ ಸಾತ್ತ್ವಿಕವಾದ ಪರಿವರ್ತನೆ ಕಾಣಿಸಿಕೊಂಡಿತು. ಟ್ಯಾಕ್ಸಿಯನ್ನು ಲಾಭಕ್ಕಾಗಿ ಓಡಿಸುವುದನ್ನು ನಿಲ್ಲಿಸಿದನು. ಸತ್ಸಂಗದಲ್ಲಿರಲು ಬಯಸುತ್ತಿದ್ದನು. ಆಗಾಗ ಕನ್ನಡದಲ್ಲಿ ದೇವರ ನಾಮಗಳನ್ನು ಕಟ್ಟುತ್ತಿದ್ದನು. ಬೆಂಗಳೂರು ಸಮೀಪದಲ್ಲಿಯೇ ಸ್ವಲ್ಪ ಜಮೀನು ಕೊಂಡು ಸಾಗುವಳಿ ನಡಸುತ್ತ ಸಾತ್ತ್ವಿಕಜೀವನ ಸಾಗಿಸತೊಡಗಿದನು.

ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ, 'ಗುರುದೇವ ಶ್ರೀ ವಿದ್ಯಾತೀರ್ಥ', ವಿದ್ಯಾಶಂಕರ ಪ್ರಕಾಶನ, ಮೈಸೂರು-೪, ೧೯೭೭, ಪು. ೧೫೧-೫೨

೭೦. 'ನಿಮ್ಮ ಋಣ ನನ್ನ ಎಗಲ ಮೇಗೈತೆ'

ಸಮೇತನ ಹಳ್ಳಿ ರಾಮರಾಯರು ಮಧುಗಿರಿಯಲ್ಲಿ ಹೆಲ್ತ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದರು. ಪುರಸಭೆಗೆ ಸಂಬಂಧಪಟ್ಟಂತೆ ಅವರ ಕೆಲಸ. ನಿಷ್ಠೆಯಿಂದ ದುಡಿಯುತ್ತಿದ್ದುದು ಕಾರಣವಾಗಿ, ಕಾಮಗಾರಿಗಳ ಗುತ್ತಿಗೆದಾರರು ಅವರನ್ನು ಯಾವುದೇ ಪ್ರಲೋಭನೆಗಳಿಗೆ ಸಿಕ್ಕಿಸುವುದು ಸಾಧ್ಯವಾಗಿರಲಿಲ್ಲ. ಹಲವರು ಪ್ರಯತ್ನಿಸಿ ವಿಫಲರಾಗಿದ್ದರು. ನ್ಯಾಯವಾಗಿಯೇ ದೊರಕಿಸಿಕೊಂಡಿದ್ದ ಗುತ್ತಿಗೆಗಳಿಂದ ಪ್ರಯೋಜನ ಪಡೆದ ಒಬ್ಬ ಮುಸ್ಲಿಂ ಯುವಕ ರಾಮರಾಯರಿಗೆ ತನ್ನ ಋಣ ತೀರಿಸಬೇಕೆಂದು ಯೋಚಿಸಿದ. ಹಿಂದೆ ಯಾವಾಗಲೂ ಅವರನ್ನು ಅವನು ಭೇಟಿ ಮಾಡಿರಲಿಲ್ಲ.

ರಾಮರಾಯರ ಮನೆಗೆ ಯುವಕ ಒಂದು ಸಂಜೆ ಬಂದ. 'ಸಾಬ್' ಎಂದು ಕರೆದ. ಬರೆಯುವ ಕೋಣೆಯಲ್ಲಿದ್ದ ರಾಯರು ಅವನನ್ನು ಬರಮಾಡಿಕೊಂಡು ಹತ್ತಿರ ಕೂಡಿಸಿಕೊಂಡರು. ಮಾತು ಮೊದಲು ಮಾಡಿ, ಯುವಕ ಒಂದು ನೋಟಿನ ಕಟ್ಟು ತೆಗೆದು ಅವರ ಮುಂದಿದ್ದ ಮೇಜಿನ ಮೇಲಿರಿಸಿದ. ಎದ್ದು ನಿಂತು, ಕೈ ಮುಗಿದು ಹೇಳಿದ: "ಇದನ್ನು ನೀವು ಒಪ್ಕೋಬೇಕು ಸಾಬ್. ನಿಮ್ಮ ಋಣ ನನ್ನ ಎಗಲ ಮೇಗೈತೆ. ಅದು ಭಾಳ ದಿನದಿಂದ ಎದೆಯಲ್ಲಿ ಒತ್ತತ ಐತೆ. ಇದನ್ನು ತಮಗೆ ಕೊಡದೇ (ಇದ್ರೆ) ನನ್ನ ಅಲ್ಲಾ ಒಪ್ಪೋದಿಲ್ಲ".

ರಾಯರು ಹೇಳಿದರು: "ನಾನು ತಗೋಬಾರದ್ದನ್ನು ತಗೊಂಡರೆ ಅದೇ ಅಲ್ಲಾ ನನ್ನನ್ನೂ ಒಪ್ಪೋದಿಲ್ಲಾ ಸಾಹೇಬ್ರೇ. ಹಾಗೆ ತಗೊಂಡರೆ, ಅದು ನನ್ನ ರಕ್ತದಲ್ಲಿ, ನನ್ನ ಮಕ್ಕಳ ರಕ್ತದಲ್ಲಿ ವಿಷ ಆಗುತ್ತೆ ಎಂದು ನಾನು ತಿಳಿದಿದ್ದೇನೆ. ನೀವು ನನಗೆ ಒಳ್ಳೆಯದು ಬಯಸಿ ಬಂದಿದ್ದೀರಿ. ಅಂಥ ನೀವು ಹಾಗೆ ವಿಷ ಬೆರೆಯೋದನ್ನ ಒಪ್ತೀರೇನು?"

ಯುವಕ: "ಸಾಬ್, ಏನ್ ಹೇಳ್ತೀರಿ. ನೀವು ಒಂದು ಓಟಲ್‌ನಾಗೆ ಒಂದು ಕಪ್ ಚಾ ಕುಡಿದಿಲ್ಲ. ಒಬ್ರ ಅತ್ರ ಒಂದು ಕವಡೇಗೆ ಆಸೆಪಟ್ಟ ಮನಸರಲ್ಲ. ನಿಮ ನಿಯತ್ ಎಂತಾದೈತೆ ಅಂತ ಊರು ಏಳ್ತೈತೆ ಸಾಬ್. ನಾನು ಕೊಡ್ತಾ ಇರಾದು ಲಂಚ ಅಲ್ಲ ಸಾಬ್. ಯಾಕಂತೀರಾ? ನನ್ನ ಕೆಲಸಗಳೆಲ್ಲಾ ಯಾವಾಗ್ಲೋ ನಡೆದೋಗ್ಬಿಟ್ಟೈತೆ. ಬಿಲ್ಲು ಆಗೋಕ್ಮುಂಚೆ ಕೊಟ್ಟಿದ್ರೆ ಲಂಚ. ಇದು ನಾನು ಖುಷಿಯಿಂದ ಕೊಡ್ತಾ ಇದೀನಿ. ನನ್ನ ಇಸ್ವಾಸಾನ ಬೇಡ ಅಂತ ತೊರೆಕೋಬ್ಯಾಡ್ರಿ, ತಕ್ಕೋಬೇಕು. ನನಗೆ ಸಂತೋಸ ಕೊಡಬೇಕು".

ರಾಯರು: ನಾನು ನಿಮ್ಮ ಕೆಲಸ ನೋಡಿದ್ದು ಉಂಟು. ಸರಿಯಾಗಿ ಇಲ್ಲಾಗ ಕೀಳಿಸಿ ಹಾಕಿ ನಿಮಗೆ ನಷ್ಟಮಾಡಿದ್ದೂ ಉಂಟು. ಅಂತಹ ಬಿಲ್ಲು ಪಾಸಾಗದ ಹಾಗೆ ನಿಧಾನ ಮಾಡಿದ್ದು ಸಹ ಉಂಟು. ಇದರಲ್ಲಿ ಉಪಕಾರ ಏನು ಬಂತು? ನಾನು ಮಾಡಬೇಕಾದ್ದು ಮಾಡಿದೀನಿ. ಇದಕ್ಕೆ ಮುನಿಸಿಪಾಲಿಟಿ ನನಗೆ ಸಂಬಳ ಕೊಡುತ್ತೆ. ಅಷ್ಟು ನನಗೆ ಸಾಕು".

ಯುವಕ: ನಂಗೊತ್ತೈತೆ ಸಾಬ್. ಇದು ನಿಮಗೆ ಎಚ್ಚುವರಿ ಕೆಲಸ. ಇದಕ್ಕೆ ನಿಮಗೆ ಏನೂ ಅಲೋಯನ್ಸ್ ಕೊಡೋದಿಲ್ಲ. ಈ ಸಂತೋಸಾನ ತಗೊಳ್ಳೋದ ತಪ್ಪಲ್ಲ. ಕೈಮುಗ್ದು ಕೇಳ್ಕೋತೀನಿ; ಸಾಬ್, ಮಾಫ್ ಮಾಡಿ ತಕ್ಕೊಳ್ಳಿ".

ರಾಯರು: "ನೀವು ನನ್ನ ವಿಷಯ ಒಂದು ಒಳ್ಳೇ ಮಾತು ಹೇಳಿದಿರಿ. ನನಗೆ ಆ ಭಾಗ್ಯ ಸಾಕು".

ಯುವಕ: "ನನ್ನ ಇಸ್ವಾಸಾನ ನೀವು ಬೇಡ ಅಂತ ತಳ್ತಾ ಇದೀರಿ, ಸಾಬ್.

ರಾಯರು: ಇಲ್ಲ, ನಾನು ಹೋದ ಕಡೇಲೆಲ್ಲ ಇದನ್ನು ನೆನಪು ಮಾಡ್ಕೋತೀನಿ. ಇಂಥ ಸ್ನೇಹಿತರು ಒಬ್ರು ಇದ್ರು ಅಂತ ನೆನಕೋತೀನಿ. ನಿಮ್ಮ ಈ ವಿಶ್ವಾಸ ನನಗೆ ಈ ಹಣದ ಕಟ್ಟಿಗಿಂತ ದೊಡ್ಡದು. ಅದನ್ನು ನಾನು ಉಳಿಸ್ಕೋತೀನಿ.

ಮುಂದೆ ಆ ಮುಸ್ಲಿಮ್ ಯುವಕನಿಗೆ ಏನು ಹೇಳಲೂ ತೋಚಲಿಲ್ಲ. ಗಳಗಳನೆ ಅತ್ತನು. ರಾಯರು ಸಮಾಧಾನಮಾಡಿದರು. ಬಳಿಕ ಆ ಯುವಕ ಕಣ್ಣೊರಸಿಕೊಂಡು ನೋಟಿನ ಕಂತೆ ಜೇಬಿಗಿಟ್ಟುಕೊಂಡು ನಮಸ್ಕರಿಸಿ ಹೊರಟುನಿಂತನು. ಆಗ ರಾಯರು ಆತನಿಗೆ "ನೀವು ನನ್ನ ಪರಮ ಸ್ನೇಹಿತರು. ಒಂದು ಲೋಟ ಟೀ ಕುಡಿದು ಹೋಗಬೇಕು" ಎಂದರು. ಆತ "ಆಗಲಿ ಸಾಬ್, ನಿಮ್ಮಂಥಾವರ ಋಣ ನನ್ನ ಮೇಗೆ ಎಷ್ಟಿದ್ರೂನೂ ಒಳ್ಳೇದೇನೆ. ಕೊಡಿ ಸಾಬ್, ಕುಡಿತೀನಿ" ಎಂದು ಮತ್ತೆ ಕುಳಿತ. ಟೀ ಕುಡಿಯುತ್ತ ಹೇಳಿದ. "ಇದು ಅಮೃತ ಐತೆ ಸಾಬ್, ಅಮೃತ. ನಿಮ್ಮಂಥಾವರನ್ನು ನಾನು ಹಿಂದೆ ನೋಡ್ಲಿಲ್ಲ; ಮುಂದೆ ನೋಡೋದಿಲ್ಲ. ಅಪ್ಪಣೆ ಕೊಡಿ, ಬರ್ತೀನಿ". ಹೀಗೆ ಹೇಳಿ ಹೊರಟ ಆ ಮುಸ್ಲಿಂ ಯುವಕನ ಅದೊಂದು ಬಗೆಯ ಧರ್ಮಭೀತಿ, ಪ್ರಾಮಾಣಿಕತೆ ಇವನ್ನೇ ನೆನೆಯುತ್ತ ರಾಯರು ಮಲಗಿದರು; ಬಹಳ ಹೊತ್ತು ನಿದ್ದೆ ಬರಲಿಲ್ಲ.

ಸಮೇತನ ಹಳ್ಳಿ ರಾಮರಾಯ, 'ಕೋಟೆಮನೆ', ರಾಸ ಪ್ರಕಾಶನ, ಮೈಸೂರು-೨, ೧೯೯೧, ಪು. ೨೮೬-೮೮

೭೧. 'ನಿಮ್ಮಂಥವರು ಬಂದದ್ದೇ ಊರಿಗೆಲ್ಲ ಗೌರವ'

ಪ್ರೊ. ವಿ. ಸೀತಾರಾಮಯ್ಯನವರಿಗೆ ಅವರ ನಿವೃತ್ತಿಯ ಬಳಿಕ ಕಾಲೇಜೊಂದರ ಪ್ರಿನ್ಸಿಪಾಲರಾಗುವಂತೆ ಆಹ್ವಾನ ಬಂತು. ಅವರು ನಿವೃತ್ತರಾಗಿ ೧೦-೧೧ ವರ್ಷಗಳೇ ಆಗಿದ್ದುವು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಹೊಸದಾಗಿ ಆರಂಭವಾಗಲಿದ್ದ ಕಾಲೇಜಿನಿಂದ ಬಂದ ಆಹ್ವಾನ ಅದು. ಆರ್ಥಿಕವಾಗಿ ಉತ್ತಮಸ್ಥಿತಿ ಇರದಿದ್ದ ಕಾರಣ, ಸಂಸಾರದ ನಿರ್ವಹಣೆಗೆ ಸ್ವಲ್ಪ ಅನುಕೂಲವಾಗಬಹುದು ಎಂದು ಯೋಚಿಸಿ ವಿ.ಸೀ. ಆ ಆಹ್ವಾನವನ್ನು ಒಪ್ಪಿಕೊಂಡರು. ಆರುನೂರು ರೂಪಾಯಿ ತಿಂಗಳ ಸಂಭಾವನೆ ಮತ್ತು ವಾಸಕ್ಕೆ ಮನೆ ಕೊಡುವುದು ಸಾಧ್ಯವಾದರೆ ತಾವು ಕೆಲಸವನ್ನು ಒಪ್ಪುವುದಾಗಿ ಹಾಕಿದ ನಿಬಂಧನೆಯನ್ನು ಕಾಲೇಜು ಆಡಳಿತಮಂಡಳಿ ಒಪ್ಪಿತ್ತು.

ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರು ಕರ್ಕಿಯ ಆರ್. ಎಸ್. ಹೆಗಡೆಯವರು. ಇವರು ಸ್ಥಳೀಯ ಹವ್ಯಕರು, ಸ್ವಭಾವತಃ ಸಜ್ಜನರು. ವಿ. ಸೀ. ಉದ್ಯೋಗದ ಮೇಲೆ ಹಾಜರಾದ ಬಳಿಕ ಮೊದಲು ಬಂದ ಹಬ್ಬ ಗಣೇಶನ ಹಬ್ಬ. ವಿ.ಸೀ. ಮನೆಯವರನ್ನು ಇನ್ನೂ ಕರೆಸಿಕೊಂಡಿರಲಿಲ್ಲ. ಅವರು ವಾಸವಿದ್ದ ಮನೆ ಸ್ಥಳದ ವಕೀಲರಾದ ಎಲ್. ಎಚ್. ಪ್ರಭು ಅವರದು. ಹಬ್ಬದ ದಿನ ಅವರು ವಿ. ಸೀ. ಅವರನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು.

ಮಾರನೆಯ ದಿನ ಕಾಲೇಜು ಆಡಳಿತಮಂಡಳಿ ಅಧ್ಯಕ್ಷ ಹೆಗಡೆಯವರು ವಿ. ಸೀ. ಅವರನ್ನು ತಮ್ಮ ಮನೆಗೆ ಬರುವಂತೆ ಆಹ್ವಾನಿಸಿ ತಮ್ಮ ಸ್ವಂತ ಸ್ಥಳಕ್ಕೆ ಕರೆದಕೊಂಡು ಹೋದರು. ಅಲ್ಲಿ ಅವರನ್ನು ತಮ್ಮ ತಾಯಿಗೆ ಪರಿಚಯ ಮಾಡಿಕೊಟ್ಟರು. ಆ ದಿನ ಮನೆಯಲ್ಲಿ ಗಣಪತಿಹೋಮ ನಡೆಯಿತು. ಹೋಮದ ಕಲಾಪ ಮುಗಿದ ಮೇಲೆ, ಹೆಗಡೆಯವರೂ ಅವರ ಶ್ರೀಮತಿಯವರೂ ವಿ.ಸೀ. ಅವರನ್ನು ಮಣೆಯ ಮೇಲೆ ಕುಳ್ಳಿರಿಸಿ ನಮಸ್ಕಾರ ಮಾಡಿದರು; ಅವರ ಆಶೀರ್ವಾದ ಬೇಡಿದರು.

ಈ ವರ್ತನೆಯಿಂದ ವಿ. ಸೀ. ಅವರಿಗೆ ಸ್ವಲ್ಪ ಕಸಿವಿಸಿಯಾಯಿತು. ಎರಡನೆಯ ದಿನ ಹೆಗಡೆ ಅವರನ್ನು ಕಂಡಾಗ ಅವರೊಂದಿಗೆ ಹೇಳಿದರು: "ಸ್ವಾಮಿ, ಹೀಗೆ ಮಾಡಬೇಡಿ. ನನ್ನ ವಯಸ್ಸಿಗೆ ನೀವು ಗೌರವ ಕೊಡುವುದೇನೋ ಸರಿ. ಬೇಕಾದರೆ ಮನೆಗೆ ಕರೆದು ಊಟ ಉಪಚಾರ ಮಾಡಿ. ನೀವು ಕಾಲೇಜು ಆಡಳಿತಸಮಿತಿಯ ಅಧ್ಯಕ್ಷರು. ನಿಮ್ಮ ಮನೆಯಲ್ಲಿ ನೀವು ಹೀಗೆ ಮರ್ಯಾದೆ ಮಾಡಿದಿರಿ ಎಂಬ ಸುದ್ದಿ ಕೂಡ ಲೌಕಿಕವಾಗಿ ಕೆಲವರಿಗೆ ಸರಿ ಎಂದು ತೋರದಿರಬಹುದು. ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ".

ಅಧ್ಯಕ್ಷರಾದ ಹೆಗಡೆಯವರು ವಿ.ಸೀ. ಅವರಲ್ಲಿ ವಿನಯದಿಂದ ಹೀಗೆ ಅರಿಕೆ ಮಾಡಿದರು: "ನಮ್ಮ ಊರಿಗೆ ನಿಮ್ಮಂಥವರು ಬಂದದ್ದೇ ಊರಿಗೆಲ್ಲ ಗೌರವ. ನೀವು ಏನೇ ಕೇಳಿದ್ದರೂ ನಾವು ಧಾರಾಳವಾಗಿ ಕೊಡುತ್ತಿದ್ದೆವು. ನಾವು ವಯಸ್ಸಿನಲ್ಲಿ ಮಾತ್ರವಲ್ಲ, ಇತರ ವಿಧಗಳಲ್ಲಿಯೂ ಚಿಕ್ಕವರು. ನಮ್ಮನ್ನು ನಡಸಿಕೊಳ್ಳುವ ಭಾರ ನಿಮ್ಮದು. ನಮ್ಮದು ಬಡತನವೋ ಸಿರಿತನವೋ ಏನಾದರೂ ಇರಲಿ, ನಿಮ್ಮ ಬೇಡಿಕೆಗೆ ನಾವು ಸಿದ್ಧರಾಗಿದ್ದೆವು. ನೀವೇ ಆರುನೂರು ರೂಪಾಯಿ ಎಂದು ಹೇಳಿಬಿಟ್ಟಿರಿ. ನೀವು ಬಂದ ಮೇಲೆ ನಮಗೆಲ್ಲರಿಗೂ ಮನಸ್ಸಿಗೆ ತೃಪ್ತಿಯಾಗಿದೆ. ನಾನು ಹೀಗೆ ಮಾಡಿದೆ ಎಂದು ಊರಲ್ಲಿ ಯಾರೂ ಅಪಾರ್ಥ ಮಾಡಿಕೊಳ್ಳುವುದಿಲ್ಲ."

"ಆದರೆ ಈ ಮಾತು ನಾನು ಒಪ್ಪುವುದು ತರವಲ್ಲ" ಎಂದೇನೋ ವಿ.ಸೀ. ಹೇಳಿದರು. ಕಾಂಗ್ರೆಸ್ ಉಮೇದುವಾರರಾಗಿ ಕರ್ನಾಟಕ ಶಾಸನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದ ಹೆಗಡೆಯವರು ಸ್ಥಳದ ಬೇರೆ ಬೇರೆ ಸಾಮಾಜಿಕವರ್ಗದವರ ವಿಶ್ವಾಸ ಗಳಿಸಿ, ಕಾಲೇಜು ಬೆಳೆಯಲು ಪ್ರಾರಂಭದ ದಿನಗಳಲ್ಲಿ ವಿ.ಸೀ. ಅವರಿಗೆ ಸಹಕಾರ ನೀಡಿದರು.

ವಿ. ಸೀತಾರಾಮಯ್ಯ, 'ವ್ಯಕ್ತಿಚಿತ್ರ ಸಂಪುಟ, ಭಾಗ-೨', ವಿ.ಸೀ. ಸಂಪದ, ಬೆಂಗಳೂರು-೮೫, ಪು. ೩೧೭-೩೨೩.

೭೨. 'ನಿಮ್ಮನ್ನು ನನ್ನ ತಂದೆಯ ಪಂಕ್ತಿಯಲ್ಲಿ ಸೇರಿಸಿದ್ದೇನೆ'

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಿಯೂ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟಿ, ಜಡ್ಜಿ ಡಿ. ಕೆ. ರಾಮರಾವ್, ವಿ. ಮಾಣಿಕ್ಯವೇಲು ಮೊದಲಿಯಾರ್ ಮೊದಲಾದವರು ಸದಸ್ಯರಾಗಿಯೂ ಇರುವಂತೆ, ಬೆಂಗಳೂರು ಸುಲ್ತಾನ್‌ಪೇಟೆಯ ಗಣಪತಿ ವಿಗ್ರಹ ಸಂಬಂಧವಾದ ಗಲಭೆಯ ವಿಷಯದಲ್ಲಿ ಸರ್ಕಾರ ನೇಮಿಸಿದ ಸಮಿತಿ ಬಹಿರಂಗವಿಚಾರಣೆ ನಡಸಿ ದೀರ್ಘವಾದ ವರದಿಯೊಂದನ್ನು ಸಿದ್ಧಪಡಿಸಿತು. ಆ ವರದಿಯನ್ನು ವಿಶ್ವೇಶ್ವರಯ್ಯ ನವರ ಕಛೇರಿಯಿಂದ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಲ್ಲಿಗೆ ಕಳಿಸಿದ್ದು ಒಂದು ಮಧ್ಯಾಹ್ನ. ಅದೇ ದಿನ ಸಂಜೆ ವಿಶ್ವೇಶ್ವರಯ್ಯನವರು ಮಾಮೂಲಿನಂತೆ ವಾಕಿಂಗ್ ಹೊರಟು ಮಿರ್ಜಾ ಅವರ ಮನೆಗೆ ಬಂದರು. ಅಲ್ಲಿ ಅವರನ್ನು ಕಂಡ ಬಳಿಕ, ಅಲ್ಲಿಯೇ ಅತಿಥಿಗಳನ್ನು ಬರಮಾಡಿಕೊಳ್ಳುವ ಕೊಠಡಿಯ ಒಂದು ಸ್ಥಳದಲ್ಲಿ ಅತಿಥಿಗಳು ಕುಳಿತುಕೊಳ್ಳುವ ಸೋಫಾದ ಹಿಂದುಗಡೆ ಗೋಡೆಯ ಮೇಲೆ ತಗುಲಿ ಹಾಕಿದ್ದ ತಮ್ಮ ಭಾವಚಿತ್ರದ ಕಡೆಗೆ ಕೋಲು ತೋರಿಸಿ, 'ಇನ್ನು ಇಲ್ಲಿ ಇದಕ್ಕೆ ಜಾಗವಿಲ್ಲ, ತೆಗೆದುಹಾಕಿಬಿಡಿ' ಎಂದರು.

ಮಿರ್ಜಾ ಅವರು ಆಶ್ಚರ್ಯದಿಂದ 'ಅದೇಕೆ ಹಾಗೆನ್ನುತ್ತೀರಿ?' ಎಂದು ಪ್ರಶ್ನಿಸಿದರು. ವಿಶ್ವೇಶ್ವರಯ್ಯನವರು, 'ನಾನು ನಿಮಗೆ ವರದಿ ಕಳಿಸಿದೆನಲ್ಲ. ಅದರಿಂದ ನಿಮಗೆ ಸಮಾಧಾನವಾಗಿರಲಾರದು, ಅಸಮಾಧಾನವಾಗಿರಬೇಕು' ಎಂದು ಉತ್ತರಿಸಿದರು.

ಮಿರ್ಜಾ ಸಾಹೇಬರ ಬೈಠಕ್‌ಖಾನೆಯಲ್ಲಿ ಮುಖ್ಯವಾದ ಜಾಗದಲ್ಲಿ ನಾಲ್ಕು ಚಿತ್ರಪಟಗಳಿದ್ದುವು. ಅವುಗಳಲ್ಲಿ ಒಂದು ಪರ್ಷಿಯನ್ ಮಹಾಕವಿ ಫಿರ್ದೂಸಿಯದು. ಇದನ್ನು ಆ ಕೊಠಡಿಯಲ್ಲೇ ಪ್ರತ್ಯೇಕವಾದ ಸ್ಥಾನದಲ್ಲಿಟ್ಟದ್ದರು. ಮಿಕ್ಕ ಮೂರರಲ್ಲಿ ಒಂದು ಮಿರ್ಜಾ ಅವರ ತಂದೆ ಆಗಾ ಜಾನ್ ಅವರದು, ಇನ್ನೊಂದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರದು, ಮತ್ತೊಂದು ಸರ್ ಎಂ. ವಿಶ್ವೇಶ್ವರಯ್ಯನವರದು. ಇವನ್ನು ಅವರು ಅತಿಥಿಗಳು ಕುಳಿತುಕೊಳ್ಳುವ ಸೋಫಾದ ಹಿಂದುಗಡೆ ಸಾಲಾಗಿ ತಗುಲಿ ಹಾಕಿದ್ದರು.

ಈಗ ವಿಶ್ವೇಶ್ವರಯ್ಯನವರು ಆಡಿದ ಅಸಮಾಧಾನದ ಮಾತಿಗೆ ಮಿರ್ಜಾ ಸಾಹೇಬರು ಹೀಗೆ ಜವಾಬು ಹೇಳಿದರು:

"ನಿಮ್ಮನ್ನು ನನ್ನ ತಂದೆಯ ಪಂಕ್ತಿಯಲ್ಲಿ ಸೇರಿಸಿದ್ದೇನೆ. ನನ್ನ ತಂದೆಯ ಸ್ಥಾನ ನನ್ನ ಜೀವನದಲ್ಲಿ ಹೇಗೆ ಖಾಯಂ ಆದದ್ದೋ ನಿಮ್ಮ ಸ್ಥಾನವೂ ನನ್ನ ದೃಷ್ಟಿಯಲ್ಲಿ ಹಾಗೆಯೇ ಖಾಯಂ ಆದದ್ದು."

ಗಣಪತಿ ಗಲಾಟೆ ಮುಗಿದು ೪-೫ ವರ್ಷಗಳಾದ ಮೇಲೆ ತಮ್ಮ ಆ ಹಿಂದಿನ ವಿಷಮಪರೀಕ್ಷಾಕಾಲದಲ್ಲಿ ತಮ್ಮ ಸುತ್ತ ಮುತ್ತ ಇದ್ದುಕೊಂಡು ಹಿತಚಿಂತಕರಂತೆ ಸುದ್ದಿ

ಸಲಹೆಗಳನ್ನು ಕೊಡುತ್ತಿದ್ದವರು ದಿಟವಾಗಿ ಹಿತಚಿಂತಕರಾಗಿರಲಿಲ್ಲವೆಂದೂ ತಮ್ಮನ್ನು ತಪ್ಪುದಾರಿಗೆಳೆದು ವಂಚಿಸಿದರೆಂದೂ ಪಶ್ಚಾತ್ತಾಪಪಟ್ಟರೆಂದು ಡಿ.ವಿ.ಜಿ. ಹೇಳುತ್ತಾರೆ.

ಡಿ.ವಿ.ಜಿ, 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ. ೪, ಕಾವ್ಯಾಲಯ, ಮೈಸೂರು, ೧೯೭೧, ಪು. ૩૭೯-૩૩೦

೭೩. 'ನಿಮ್ಮನ್ನೂ ನಿಮ್ಮ ಕೆಲಸವನ್ನೂ ಜನ ನೆನೆಯುತ್ತಿರುತ್ತಾರೆ'

ವರ್ಷದ ದಸರಾ ಉತ್ಸವದಲ್ಲಿ ಸರ್ಕಾರದ ಅಧಿಕಾರಿಗಳಿಗೂ ಸಾರ್ವಜನಿಕ ಗಣ್ಯರಿಗೂ ಆಗಿನ ಮೈಸೂರು ದೊರೆಗಳು ಜಯಚಾಮರಾಜೇಂದ್ರ ಒಡೆಯರ್ ಅವರು ಬಿರುದುನೀಡಿ ಸನ್ಮಾನಿಸುವ ಕಾರ್ಯಕ್ರಮವಿರುತ್ತಿತ್ತು. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಎಕ್ಸೈಸ್ ಕಮೀಷನರ್ ಆಗಿ ಅಧಿಕಾರ ವಹಿಸಿಕೊಂಡ ૩ನೆಯ ವರ್ಷ, ದೊರೆಗಳು ಅವರಿಗೆ 'ರಾಜಸೇವಾಪ್ರಸಕ್ತ' ಬಿರುದುನೀಡಿ ಸನ್ಮಾನಿಸಿದರು. ಆ ಸಂದರ್ಭದ ಪ್ರಶಸ್ತಿ ವಾಚನದಲ್ಲಿ ಅವರ ಸೇವೆಯ ದಕ್ಷತೆಯನ್ನೂ ಸಾಹಿತ್ಯಕೃಷಿಯನ್ನೂ ಮೆಚ್ಚಿದ ಮಾತುಗಳು ಉಲ್ಲೇಖವಾಗಿದ್ದುವು.

ಮಾಸ್ತಿಯವರು ದೊರೆಗಳಿಗೆ ತಮ್ಮ ಕೃತಜ್ಞತೆ ಸಲ್ಲಿಸಲು ಸಂದರ್ಶನದ ಅವಕಾಶ ಕೋರಿ ಅವರ ಕಾರ್ಯದರ್ಶಿಗಳಿಗೆ ಪತ್ರ ಬರೆದರು. ಸನ್ಮಾನಿತರಾದವರು ಪ್ರತ್ಯಕ್ಷವಾಗಿ ಪ್ರಭುಗಳನ್ನು ಸಂದರ್ಶಿಸಿ ಹಾಗೆ ತಮ್ಮ ಕೃತಜ್ಞತೆ ಸಲ್ಲಿಸುವುದು ಒಂದು ಶಿಷ್ಟಾಚಾರವಾಗಿತ್ತು. ಸಂದರ್ಶನಕ್ಕೆ ತೇದಿ, ವೇಳೆ ಗೊತ್ತಾದುವು. ಇಟ್ಟಿಗೆಗೂಡು ಬಡಾವಣೆಯ ಅರಮನೆಯಲ್ಲಿ ಮಾಸ್ತಿಯವರು ಪ್ರಭುಗಳ ಸಂದರ್ಶನಕ್ಕೆ ಹೋದಾಗ, ಮೊದಲೇ ಪ್ರಭುಗಳು ತಮ್ಮ ಸಂದರ್ಶನಕೋಣೆಗೆ ಬಂದಿದ್ದು, ಪೀಠದ ಬಳಿ ನಿಂತುಕೊಂಡಿದ್ದರು. ಮಾಸ್ತಿಯವರು ಬಗ್ಗಿ ನಮಸ್ಕರಿಸಿದ ಮೇಲೆ ಒಡೆಯರು ಅವರಿಗೆ ಕುಳಿತುಕೊಳ್ಳಲು ಹೇಳಿದರು; ಅಲ್ಲದೆ ಅವರು ಕುಳಿತ ಮೇಲೆಯೇ ತಾವು ತಮ್ಮ ಪೀಠದಲ್ಲಿ ಕುಳಿತುಕೊಂಡರು.

ಒಡೆಯರು 'ಕುಳಿತುಕೊಳ್ಳಿ' ಎಂಬ ಮಾತನ್ನು ಇಂಗ್ಲಿಷಿನಲ್ಲಿ ಹೇಳಿದರಾದ್ದರಿಂದ ಮಾಸ್ತಿಯವರೂ ಇಂಗ್ಲಿಷಿನಲ್ಲೇ ಮಾತಾಡಬೇಕಾಯಿತು.

ಮಾಸ್ತಿ : I am grateful to your Highness for the honour which you have graciously conferred on me (ಮಹಾಸ್ವಾಮಿಗಳು ಕೃಪೆಯಿಟ್ಟು ನನಗೆ ದಯಪಾಲಿಸಿದ ಬಿರುದಿಗಾಗಿ ನಾನು ಕೃತಜ್ಞ).

ಒಡೆಯರು: It is nothing. You have enriched our language and our literature by your immortal works (ಅದರಲ್ಲೇನೂ ವಿಶೇಷವಿಲ್ಲ. ನೀವು ನಿಮ್ಮ ಚಿರಕೃತಿಗಳಿಂದ ನಮ್ಮ ಭಾಷೆ ಸಾಹಿತ್ಯಗಳನ್ನು ಸಂಪನ್ನಗೊಳಿಸಿದ್ದೀರಿ).

ಮಾಸ್ತಿ : I feel honoured, Your Highness, that you think so highly of my work (ನನ್ನ ಕೆಲಸ ಅಷ್ಟು ಘನವಾದ್ದೆಂದು ತಾವು ಭಾವಿಸುವುದು ನನ್ನ ಪಾಲಿಗೆ ದೊಡ್ಡ ಮರ್ಯಾದೆ, ಮಹಾಸ್ವಾಮಿ)

ಒಡೆಯರು : Why? When I and the rest of us are forgotten, hundreds of years hence, you and your work will be remembered (ಏಕೆ? ನಾನೂ ಉಳಿದ ನಮ್ಮವರೂ ಎಲ್ಲಾ ಮರೆತುಹೋದ ಮೇಲೆಯೂ, ನೂರಾರು ವರ್ಷಗಳ ಅನಂತರವೂ, ನಿಮ್ಮನ್ನೂ ನಿಮ್ಮ ಕೆಲಸವನ್ನೂ ಜನ ನೆನೆಯುತ್ತಿರುತ್ತಾರೆ).

ಮಾಸ್ತಿ : I am very grateful for all this kindness. Your uncle was bequally gracious to me. Your Highness may remember that he visited Tumkur when I was Deputy Commissioner there (ತಮ್ಮ ಕರುಣೆಗೆ ನಾನು ತುಂಬ ಕೃತಜ್ಞ. ತಮ್ಮ ದೊಡ್ಡಪ್ಪನವರು ಸಹ ಹೀಗೆಯೇ ನನ್ನ ಮೇಲೆ ಕೃಪೆ ಮಾಡಿದ್ದರು. ನಾನು ಡೆಪ್ಯುಟಿ ಕಮೀಷನರ್ ಆಗಿದ್ದಾಗ ತುಮಕೂರಿಗೆ ಅವರು ದಯಮಾಡಿಸಿದ್ದು ತಮ್ಮ ನೆನಪಿನಲ್ಲಿರಬಹುದು).

ಬಳಿಕ ಮಾಸ್ತಿಯವರು ಜನರ ಭಕ್ತ್ಯಾದರಗಳು, ಒಡೆಯರ ಸೌಲಭ್ಯ ವಾತ್ಸಲ್ಯಗಳು ಇವನ್ನು ಕುರಿತು ಸ್ವಲ್ಪ ಮಾತಾಡಿದರು. ಒಡೆಯರು ಮುಂದಕ್ಕೆ ಏನೂ ಹೇಳಲಿಲ್ಲ. ಇನ್ನು ಮಾತು ಬೆಳಸುವುದು ಯುಕ್ತವಲ್ಲ ಎಂದು ಮಾಸ್ತಿ ಕ್ಷಣಕಾಲ ಸುಮ್ಮನಿದ್ದು, ನಿಲ್ಲುವುದೇ ಎಂದು ಯೋಚಿಸಿದರು. ಈಗ ಒಡೆಯರು ಎದ್ದು ನಿಂತರು. ಮಾಸ್ತಿಯವರು ಬಗ್ಗಿ ನಮಸ್ಕರಿಸಿ, ನೆಟ್ಟಗೆ ನಿಂತು, "I again thank Your Highness for the honour bestowed on me". (ಮಹಾಸ್ವಾಮಿ, ತಾವು ದಯಪಾಲಿಸಿದ ಸನ್ಮಾನಕ್ಕೆ ಮತ್ತೊಮ್ಮೆ ನನ್ನ ವಂದನೆಗಳು) ಎಂದು ಹೇಳಿದರು. ಆಗ ಒಡೆಯರು, "Oh! No. It is a great thing to have a person like you in the state" (ಅಯ್ಯೋ! ಹಾಗಲ್ಲ. ಸಂಸ್ಥಾನದಲ್ಲಿ ತಮ್ಮಂಥ ವ್ಯಕ್ತಿಯನ್ನು ಪಡೆದಿರುವುದೇ ಒಂದು ದೊಡ್ಡವಿಷಯ) ಎಂದು ಹೇಳಿ a person (ವ್ಯಕ್ತಿ) ಎಂಬ ಮಾತು ಸರಿಹೋಗಲಿಲ್ಲ ಎಂದು ಭಾವಿಸಿಯೋ ಏನೋ, ತಕ್ಷಣವೇ a citizen (ಪ್ರಜೆ) ಎಂದು ಮೆಲ್ಲಗೆ ಹೇಳಿದ ಹಾಗೆ ಇತ್ತು, ಎಂದಿದ್ದಾರೆ ಮಾಸ್ತಿಯವರು. ಇಲ್ಲಿಗೆ ಸಂದರ್ಶನ ಮುಗಿದು ಮಾಸ್ತಿ ಒಡೆಯರಿಗೆ ಕೈಮುಗಿದು ನಿರ್ಗಮಿಸಿದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ಭಾವ-೩', ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಬೆಂಗಳೂರು-೧೯, ೧೯೯೦ (ದ್ವಿ. ಮು.) ಪು. ೨೨೯-೩೧

೭೪. 'ನಿಮ್ಮಿಂದ ಒಂದು ಉಪಕಾರವಾಗಬೇಕು'

ಶಿಕ್ಷಣತಜ್ಞ, ವಾಗ್ಗೇಯಕಾರ ಎಚ್. ಯೋಗನರಸಿಂಹಂ (೧೮೯೭-೧೯೭೧) ಅವರು ಅಂತಹ ಅನುಕೂಲಸ್ಥರ ಮನೆಯಿಂದ ಬಂದವರಲ್ಲ. ಅವರು ಬಿ.ಎ. ಪರೀಕ್ಷೆಗೆ ಕುಳಿತುಕೊಳ್ಳಲು (೧೯೧೭-೧೮) ಕಟ್ಟಬೇಕಾಗಿದ್ದ ಪರೀಕ್ಷಾಶುಲ್ಕ ಅವರ ಹತ್ತಿರ ಇರಲಿಲ್ಲ. ಈ ಸುದ್ದಿ ಅವರ ಗುರುಗಳಾದ, ವಿಖ್ಯಾತ ತತ್ತ್ವಶಾಸ್ತ್ರಜ್ಞ ಪ್ರೊ. ಹಿರಿಯಣ್ಣನವರ ಕಿವಿಗೆ ಬಿತ್ತು. ಶಿಷ್ಯನಿಗೆ ಮನೆಗೆ ಬರುವಂತೆ ಹೇಳಿ ಕಳಿಸಿದರು. ಯೋಗನರಸಿಂಹಂ ಗುರುಗಳ ಮನೆಗೆ ಹೋದರು. ಅವರನ್ನು ಉದ್ದೇಶಿಸಿ ಹಿರಿಯಣ್ಣನವರು, "ನಿಮ್ಮಿಂದ ಒಂದು ಉಪಕಾರವಾಗಬೇಕು" ಎಂದರು. ಶಿಷ್ಯ ಅವಕ್ಕಾದರು. ಆಗ ಗುರುಗಳು, ಹಿರಿಯಣ್ಣನವರು, ಅವರ ಕೈಯಲ್ಲಿ ಒಂದು ಲಕೋಟೆಯಿಟ್ಟು, "ನಿಮಗೆ ಕೊಡುವಂತೆ ಮಿತ್ರರೊಬ್ಬರು ಕೊಟ್ಟಿದ್ದಾರೆ. ಬೇರೆ ಯಾರಿಗೂ ಇದು ತಿಳಿಯಬಾರದು. ಹಾಗೆಂದು ನೀವು ಮಾತು ಕೊಡಬೇಕು" ಎಂದರು.

ಯೋಗನರಸಿಂಹಂ ಮನೆಗೆ ಹೋಗಿ ಲಕೋಟೆ ಒಡೆದು ನೋಡಿದರು. ಅದರಲ್ಲಿ ಪರೀಕ್ಷೆಗೆ ಕಟ್ಟಲು ಬೇಕಾಗುವಷ್ಟು ಹಣವಿತ್ತು. ಅದನ್ನು ತೆಗೆದುಕೊಂಡು ತಮ್ಮ ಪರೀಕ್ಷೆಯ ಶುಲ್ಕವನ್ನು ಪಾವತಿಮಾಡಲು ವಿಶ್ವವಿದ್ಯಾನಿಲಯದ ಕಚೇರಿಗೆ ಹೋದರು. ಆದರೆ ಕಚೇರಿಯಲ್ಲಿ ಸಂಬಂಧಪಟ್ಟವರು, "ನಿಮ್ಮ ಶುಲ್ಕ ಆಗಲೇ ಸಂದಿದೆಯಲ್ಲಾ" ಎಂದು ಹೇಳಿದರು. ಬಳಿಕ ವಿಷಯ ತಿಳಿಯಿತು. ಯೋಗನರಸಿಂಹಂ ಅವರ ಸಹಪಾಠಿ ಎನ್. ವೆಂಕಟಾಚಾರ್ಯರು ತಮ್ಮ ಹೆಂಡತಿಯ ಚಿನ್ನದ ಬಳೆ ಮಾರಿ ಗೆಳೆಯನ ಪರೀಕ್ಷೆಯ ಶುಲ್ಕವನ್ನು ತಾವೇ ಸಂದಾಯಮಾಡಿದ್ದರು.

ಈ ವಿಷಯವನ್ನು ತಮ್ಮ ಮಗ ಎಚ್. ವೈ. ಮೋಹನ ರಾಮ್ ಅವರಿಗೆ ತಿಳಿಸುತ್ತ ಯೋಗನರಸಿಂಹಂ ಅವರು, "ಅಂತಹ ಗುರುಗಳು, ಸಹಪಾಠಿಗಳು ಒದಗಿ ಬರುವುದು ಪುಣ್ಯ" ಎಂದು ಹೇಳುತ್ತಿದ್ದರಂತೆ.

ಸಂ. ಎಚ್. ವೈ. ಶಾರದಾಪ್ರಸಾದ್, 'ಸಂಗೀತದ ಸಿರಿ ಎಚ್. ಯೋಗನರಸಿಂಹಂ', ವಿ.ಸೀ. ಸಂಪದ, ಬೆಂಗಳೂರು ೧೯೯೮, ಪು. ೫೧

೭೫. 'ನೀರು ಕುಡಿ, ನೀರು ಕುಡಿ'

ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನವನ್ನು ಆಳುತ್ತಿದ್ದಾಗ (೧೭೯೯-೧೮೬೮) ದೊರೆಗಳ ಖಾಸ ಬೊಕ್ಕಸದಲ್ಲಿ ಅಧಿಕಾರಿಗಳಾಗಿ ಭಾಗವತ

ಸುಬ್ಬರಾಯರೆಂಬ ಮಹನೀಯರಿದ್ದರು. ಇವರು ಭಾಗವತ ನಾರಾಯಣಪ್ಪನವರ ಮಗ. ದೊರೆಗಳಿಗೆ ಸುಬ್ಬರಾಯರಲ್ಲಿ ತುಂಬ ನಂಬಿಕೆ. ಪರೋಪಕಾರದ ಕೆಲಸಗಳಲ್ಲಿ ಸುಬ್ಬರಾಯರಿಗೆ ಸಾಲ ಹೆಚ್ಚಾದರೆ ದೊರೆಗಳೇ ಅರಮನೆಯಿಂದ ಅದನ್ನು ತೀರಿಸುತ್ತಿದ್ದರು.

ಮೈಸೂರಿನ ಮಧ್ಯೆ ಇರುವ ಸುಬ್ಬರಾಯನ ಕೆರೆ, ಆ ಕೆರೆಯ ಈಶಾನ್ಯದಿಕ್ಕಿಗಿರುವ ಶ್ರೀನಿವಾಸ ದೇವರ ಗುಡಿ, ನಂಜನಗೂಡು ಕಪಿಲಾನದಿ ತೀರದ ಚಾಮುಂಡೇಶ್ವರೀ ದೇವಾಲಯದ ಒಳಗಿನ ಈಶ್ವರನ ಗುಡಿ, ಮೈಸೂರು-ಬೆಂಗಳೂರು ರಸ್ತೆಯ ಸಿದ್ಧಲಿಂಗ ಪುರದ ಬಳಿಯ ಸುಬ್ಬರಾಯನ ದೇವಸ್ಥಾನ, ಮೈಸೂರಿನಲ್ಲಿ ವೈದಿಕರಿಗಾಗಿ ಮನೆಗಳನ್ನು ಕಟ್ಟಿಸಿದ್ದು – ಹೀಗೆ ಅನೇಕ ಧರ್ಮಕಾರ್ಯಗಳನ್ನು ಜನೋಪಕಾರಕ್ಕೆಂದು ಮಾಡಿದ ಮಹಾನುಭಾವರು, ಇವರು. ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರು, ಸಾಹಿತ್ಯರತ್ನ ಮಂಡಿಕಲ್ ರಾಮಶಾಸ್ತ್ರಿಗಳು, ಧರ್ಮಾಧಿಕಾರಿ ಚಾಮರಾಜನಗರ ಶ್ರೀಕಂಠಶಾಸ್ತ್ರಿಗಳು ಹೀಗೆ ಎಷ್ಟೋ ಜನಕ್ಕೆ ವಿದ್ಯಾಭ್ಯಾಸಕ್ಕೆ ಜೀವನೋಪಾಯಕ್ಕೆ ಅವಕಾಶಮಾಡಿದವರು, ಇವರು. ನೂರಿನ್ನೂರು ಜನರ ವರೆಗೆ ಇವರು ತಮ್ಮ ಮನೆಯಲ್ಲಿ ಎರಡು ಹೊತ್ತೂ ಅನ್ನ ಹಾಕಿ ನೋಡಿಕೊಳ್ಳುತ್ತಿದ್ದರು.

ಸುಬ್ಬರಾಯರ ದಿನಚರಿ ಹೀಗೆ: ಸುಬ್ಬರಾಯರು ಸಂಪ್ರದಾಯಸ್ಥರು, ಪರಮ ಸಾತ್ತ್ವಿಕರು, ಬೆಳಗ್ಗೆ ಪಂಚ-ಪಂಚ ಉಷಃಕಾಲಕ್ಕೆ ಎದ್ದು ನಿತ್ಯಕರ್ಮಗಳನ್ನೂ ಪಾರ್ಥಿವ ಪೂಜೆಯನ್ನೂ ಮುಗಿಸಿಕೊಂಡು ಅರಮನೆ ಕೆಲಸಕ್ಕೆ ಹಾಜರಾಗುತ್ತಿದ್ದರು. ಮಧ್ಯಾಹ್ನ ನವಬತ್ತು ನಿಂತ ಮೇಲೆ, ಎಂದರೆ ೧೨ ಗಂಟೆ ವೇಳೆಗೆ ಮನೆಗೆ ಮರಳುತ್ತಿದ್ದರು. ಮಾಧ್ಯಾಹ್ನಿಕ ಮುಗಿಸಿಕೊಂಡು ಊಟಕ್ಕೆ ಕೂರುತ್ತಿದ್ದರು. ವಿದ್ಯಾರ್ಥಿಗಳೂ ಇತರರೂ ಊಟಕ್ಕೆ ಕುಳಿತುಕೊಳ್ಳುವ ಹೊತ್ತಿಗೆ ತಾವು ಸಹ ಅವರ ಪಂಕ್ತಿಯಲ್ಲೇ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. 'ಯಜಮಾನರ ಎಲೆ' ಎಂದು ಪ್ರತ್ಯೇಕವಾಗಿ ಅಗ್ರಾಸನದಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಉಳಿದವರಿಗೆಲ್ಲ ಏನು ಅಡಿಗೆ ಬಡಿಸುವರೋ ಅದನ್ನೇ ತಮಗೆ ಸಹ ಬಡಿಸುವ ಹಾಗೆ ಏರ್ಪಾಡು ಮಾಡಿದ್ದರು. ಪಂಕ್ತಿಭೇದ ಕೂಡದೆಂದು ತಿಳಿಸಿದ್ದರು.

ಒಂದು ಸಲ ಹೀಗಾಯಿತು: ಅವರ ಮಗನನ್ನು ಎಂದಿನಂತೆ ತಮ್ಮೊಂದಿಗೆ ಊಟಕ್ಕೆ ಕುಳ್ಳಿರಿಸಿಕೊಂಡಿದ್ದರು. ಇವರ ಮಗನ ಎಳೆಬಾಯಿಗೆ ಖಾರ ಹತ್ತಿತು. ಕಣ್ಣು ಮೂಗುಗಳಲ್ಲಿ ನೀರು ಸುರಿಯತೊಡಗಿತು. ಆಗ ಸುಬ್ಬರಾಯರು ಮಗನಿಗೆ ತುಪ್ಪ ತರಿಸಿ ಹಾಕಲಿಲ್ಲ. 'ನೀರು ಕುಡಿ, ನೀರು ಕುಡಿ' ಎಂದು ಮಾತ್ರ ಹೇಳಿ ಉಪಚಾರಮಾಡಿದರು. ಆತ್ಮ ಪೋಷಣೆ, ಸ್ವಜನಪಕ್ಷಪಾತ ಇದಕ್ಕೆ ಸ್ವಲ್ಪ ಕೂಡ ಅವಕಾಶಕೊಡದ ಸಮದೃಷ್ಟಿ ಅವರದು.

ಎಂ. ಎಸ್. ಪುಟ್ಟಣ್ಣ, 'ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ', ಕಾವ್ಯಾಲಯ, ಮೈಸೂರು, ೧೯೫೨ (ದ್ವಿ. ಮು.), ಪು. ೪೭, ೪೮ ಮತ್ತು ಇತರ ಮೂಲಗಳು.

೭೬. 'ನೀವು ಬರ ಕೆಲಸವಿಲ್ಲ'

ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ (೧೭೯೪-೧೮೬೮) ಆಸ್ಥಾನದಲ್ಲಿ ಸಮ್ಮುಖದ ಪ್ರಥಮ ಮಹಾವಿದ್ವಾಂಸರಾಗಿ ಇದ್ದವರು ಕರೂರು ಶ್ರೀನಿವಾಸಾಚಾರ್ಯರು (೧೭೮೫-೧೮೩೦). ಆಚಾರ್ಯರು, ಒಮ್ಮೆ ದೇಹಾರೋಗ್ಯ ಸರಿಯಿಲ್ಲದೆ ಇದ್ದು ಸ್ವಲ್ಪಮಟ್ಟಿಗೆ ಚೇತರಿಸಿಕೊಳ್ಳುತ್ತಿರುವುದಾಗಿ ಮಹಾರಾಜರಿಗೆ ಸುದ್ದಿ ಕಳಿಸಿದರು. ಅದಕ್ಕೆ ಮಹಾರಾಜರು ೧೫-೫-೧೮೨೬ರಲ್ಲಿ ಆಚಾರ್ಯರಿಗೆ ಹೀಗೆ ಒಂದು ನಿರೂಪ ಬರೆದು ಕಳಿಸಿದರು.

"ಈಗ ದೇಹಸ್ಥಿತಿ ಹೇಗೆ ಇರುವದೆಂದೂ ಯಾವ ಪಣ್ಡಿತರು ಔಷಧವನ್ನು ಕೊಡುತ್ತಿರುವರೆಂದೂ ಈ ವಿಚಾರಗಳಿಗೆಲ್ಲ ಬರಸಿ ಕಳುಹಿಸುವುದೆಂದೂ ನಿಮ್ಮ ಶರೀರ ಸ್ಥಿತಿ ಪರಾಂಬರಿಸಲು ಖಾಸ್ ಸವಾರಿಯೇ ಚಿತ್ತೈಸಬೇಕೆಂಬದಾಗಿತ್ತು. ಇಷ್ಟರಲ್ಲೇ ಮಾತೃಶ್ರೀ ನಂಜಮ್ಮ ಹೆತ್ತಮ್ಮನವರ ಪ್ರಯುಕ್ತ ದಶರಾತ್ರಾಶೌಚ ಪ್ರಾಪ್ತಿಯಾದುದರಿಂದ ಆಶೌಚ ನಿವೃತ್ತಿಮಾಡಿಕೊಂಡು ಒಂದಾವೃತ್ತಿ ಅಲ್ಲಿಗೆ ಸವಾರಿ ಚಿತ್ತೈಸಿ ಪರಾಂಬರಿಕೆ ತೆಗೆದು ಕೊಳ್ಳಲಾದೀತು.

ಈ ಬಗ್ಗೆ ಇಷ್ಟರಲ್ಲಿ ಒಂದಾವೃತ್ತಿ ಇಲ್ಲಿಗೆ ನೀವು ಬಂದು ಹುಜೂರಲ್ಲಿ ಭೇಟಿ ತೆಗೆದುಕೊಳ್ಳಬೇಕೆಂಬದಾಗಿ ನೀವು ಬರ ಕೆಲಸವಿಲ್ಲ. ಸದ್ಯದಲ್ಲಿ ಪಣ್ಡಿತರು ಹೇಳಿದ ಮೇರೆ ಇದ್ದು, ಆರೋಗ್ಯವನ್ನು ಉಂಟುಮಾಡಿಕೊಳ್ಳುವದು. ಇದರ ಮೇಲೆ ತಾವು ಬಹುದೊಡ್ಡವರಾಗಿ ಯೋಗ್ಯರಾದುದರಿಂದ ನಿಮ್ಮಂಥವರಿಗೆ ಏನು ಉಪದ್ರವ ಬಂದಾಗ್ಯೂ ಶೀಘ್ರದಲ್ಲಿ ಪರಿಹಾರವಾಗಿ ಆರೋಗ್ಯವಾಗುತ್ತದೆಯೇ ಹೊರ್ತು ಮತ್ತೇನೂ ಮಾಡಲಾರದು".

[ಈಗ ತಮ್ಮ ದೇಹಸ್ಥಿತಿ ಹೇಗಿದೆ? ಯಾವ ಪಂಡಿತರು ಔಷಧಿ ಕೊಡುತ್ತಿದ್ದಾರೆ? ಈ ವಿಚಾರಗಳಿಗೆ ಬರಸಿ ಕಳಿಸಿ. ನಿಮ್ಮ ಶರೀರಸ್ಥಿತಿಯನ್ನು ವಿಚಾರಿಸಲು ಪ್ರಭುಗಳೇ ಖುದ್ದಾಗಿ ಬರಬೇಕೆಂದಿದ್ದರು. ಆದರೆ ಅಷ್ಟರಲ್ಲೇ ಮಾತೋಶ್ರೀ ನಂಜಮ್ಮನವರು ತೀರಿಕೊಂಡು ಹತ್ತು ರಾತ್ರಿಗಳ ಮೈಲಗೆ ಬಂತು. ಮೈಲಗೆ ಕಳೆದ ಮೇಲೆ ಒಂದು ಸಲ ಪ್ರಭುಗಳೇ ತಮ್ಮಲ್ಲಿಗೆ ಬಂದು ತಮ್ಮ ಆರೋಗ್ಯ ವಿಚಾರಿಸುತ್ತಾರೆ.

ಅಷ್ಟರಲ್ಲಿ ತಾವೇ ಇಲ್ಲಿಗೆ ಒಂದು ಸಲ ದಯಮಾಡಿಸಿ ಪ್ರಭುಗಳ ಭೇಟಿ ತೆಗೆದುಕೊಳ್ಳಬೇಕೆಂದಿದ್ದರೆ, ಹಾಗೆ ಬರುವ ಆವಶ್ಯಕತೆಯೇ ಇಲ್ಲ. ಸದ್ಯದಲ್ಲಿ ಪಂಡಿತರು ಹೇಳಿದ ಹಾಗೆ ಇದ್ದುಕೊಂಡು, ಆರೋಗ್ಯವಾಗುವುದು ನೋಡಿಕೊಳ್ಳಿ. ಇಷ್ಟರ ಮೇಲೆ ತಾವು ದೊಡ್ಡವರು, ಯೋಗ್ಯರು; ಹೀಗಿರುವಾಗ ನಿಮ್ಮಂಥವರಿಗೆ ಏನು ಕಷ್ಟಬಂದರೂ ಬೇಗ ಪರಿಹಾರವಾಗಿ ಆರೋಗ್ಯ ಸುಧಾರಿಸುತ್ತದೆ; ಅನ್ಯಥಾ ಏನೂ ಆಗುವುದಿಲ್ಲ.]

ತಿರು ಶ್ರೀನಿವಾಸಗೋಪಾಲಾಚಾರ್ಯ, 'ಕರೂರು ಶ್ರೀ ಶ್ರೀನಿವಾಸಾಚಾರ್ಯರ ಚರಿತವು', ಮೈಸೂರು, ೧೯೪೮, ಪು. ೫೬-೫೭

೭೭. 'ನೀವು ಮಾಡಿದ್ದು ಸರಿಯಲ್ಲ'

ಶೃಂಗೇರಿಯಲ್ಲಿ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿಗಳು ಜಗದ್ಗುರುಗಳಾಗಿದ್ದಾಗ ಅಂದಿನ ಮೈಸೂರು ಸಂಸ್ಥಾನದಲ್ಲಿ ಸರ್ ಪಿ. ಎನ್. ಕೃಷ್ಣಮೂರ್ತಿಗಳು ದಿವಾನರಾಗಿದ್ದರು. ಅವರು ಸ್ವಾಮಿಗಳು ಬೆಂಗಳೂರಿನಲ್ಲಿರುವಾಗಲೇ ಮಠದ ಆವರಣದಲ್ಲಿ ಶ್ರೋತ್ರಿಯ ಬ್ರಾಹ್ಮಣರಿಗೆ ಭೂರಿದಕ್ಷಿಣೆ ನೀಡುವ ಆಸೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಅರ್ಹರಾದ ಬ್ರಾಹ್ಮಣ ಅಧಿಕಾರಿಯನ್ನು ನೇಮಿಸುವಂತೆ ಕೇಳಿಕೊಂಡರು. ಹಾಗೆಯೇ ಮಾಡಿದ್ದೂ ಆಯಿತು. ಬೆಳಗಿಂದಲೇ ಅನೇಕ ಜನ ಬ್ರಾಹ್ಮಣರು ಬಂದು ದಕ್ಷಿಣೆ ಪಡೆದು ಹೋಗುತ್ತಿದ್ದರು. ಮಧ್ಯಾಹ್ನದ ವೇಳೆಗೆ ಗುಂಪು ಕರಗುತ್ತ ಬಂತು. ಆ ವೇಳೆಗೆ ಆವರಣದಲ್ಲಿದ್ದವರಿಗೆಲ್ಲ ದಕ್ಷಿಣೆಯ ವಿನಿಯೋಗವಾಗಿತ್ತು. ಇನ್ನು ಯಾರೂ ಇಲ್ಲವೆಂದು ತಿಳಿದಾಗ ಬ್ರಾಹ್ಮಣ ಅಧಿಕಾರಿ ಮಠದೊಳಗೆ ಹೋಗುವುದೆಂದು ಆಲೋಚಿಸಿದರು. ಅಲ್ಲದೆ ನಿಂತು ನಿಂತು ಅವರಿಗೆ ಕಾಲು ನೋಯುತ್ತಿತ್ತು, ದಣಿವಾಗಿತ್ತು.

ಆ ವೇಳೆಗೆ ಹೊರಗಿನಿಂದ ಬ್ರಾಹ್ಮಣನೊಬ್ಬನು ಬಂದು 'ಸ್ವಾಮೀ' ಎಂದು ಕೂಗಿದನು. ಆಯಾಸವಾಗಿದ್ದ ಕಾರಣ ಅಧಿಕಾರಿ, "ಎಲ್ಲಾ ಮುಗಿದುಹೋಯಿತು, ಇನ್ನು ವಿತರಣೆ ಸಾಧ್ಯವಿಲ್ಲ" ಎಂದು ಅಸಮಾಧಾನ ಬೆರೆತ ದನಿಯಲ್ಲಿ ಗಟ್ಟಿಯಾಗಿ ಹೇಳಿ, ಮಠದ ಒಳಕೋಣೆಗೆ ಹೋಗಿಬಿಟ್ಟರು. ಹಿಂದಿನ ಕೊಠಡಿಯಲ್ಲಿ ಬಿಡಾರವಾಗಿದ್ದ ಗುರುವರ್ಯರಲ್ಲಿ ತನ್ನ ಕೆಲಸವನ್ನು ತೃಪ್ತಿಕರವಾಗಿ ತಾನು ನಿರ್ವಹಿಸಿರುವುದಾಗಿ ಬಿನ್ನವಿಸಿಕೊಳ್ಳಲು ಅವರಲ್ಲಿಗೆ ಬಂದರು. ಆತ ಬರುತ್ತಿದ್ದ ಹಾಗೆಯೇ ಗುರುವರ್ಯರು, "ಏನು, ನಿಮ್ಮ ದನಿ ಸ್ವಲ್ಪ ಜೋರಾಗಿತ್ತಲ್ಲ; ಏನಾದರೂ ವಿಶೇಷ ನಡೆಯಿತೇನು?" ಎಂದು ಕೇಳಿದರು. ಅವರಿಗೆ ಆಶ್ಚರ್ಯವಾಯಿತು! ವಿನಯದಿಂದ ಉತ್ತರಿಸಿದರು: "ಬೆಳಗಿಂದಲೂ ನಿಂತಿದ್ದು ದಕ್ಷಿಣೆಯನ್ನು ವಿತರಣೆ ಮಾಡಿದೆ. ಕೆಲಸವೆಲ್ಲಾ ಮುಗಿದು, ನಾನು ಒಳಕ್ಕೆ ಹೊರಟಾಗ ಯಾರೋ ಒಬ್ಬರು ಬಂದರು. 'ವಿತರಣೆ ಮುಗಿಯಿತು' ಎಂದು ಹೇಳಿ ಅವರನ್ನು ಹಿಂದಕ್ಕೆ ಕಳಿಸಿದೆ."

ಆಗ ಸ್ವಾಮಿಗಳು ಆ ಅಧಿಕಾರಿಯನ್ನು ಉದ್ದೇಶಿಸಿ ಹೀಗೆ ತಿಳಿಸಿದರು: "ನಿನ್ನೆಯ ದಿನ ಯಾರಾದರೂ ಬಂದು ನಿಮ್ಮಲ್ಲಿ ದಕ್ಷಿಣೆ ಕೇಳಿದರೇನು? ಈ ದಿನ ನೀವು ಆ ಕೆಲಸಕ್ಕೆ ಒಪ್ಪಿಕೊಂಡಿರಿ. ಅದನ್ನು ಪೂರ್ತಿಯಾಗಿ ತೃಪ್ತಿಕರವಾಗಿ ನಿರ್ವಹಿಸಬೇಕಾದ್ದು ನಿಮ್ಮ ಕರ್ತವ್ಯವಲ್ಲವೇ? ನಮ್ಮ ದಾತೃಗಳು ಈ ದಿನ ಬರುವವರೆಲ್ಲರಿಗೂ ದಕ್ಷಿಣೆ ವಿತರಿಸಬೇಕೆಂದು ಪ್ರಾರ್ಥಿಸಿ ಧಾರಾಳವಾಗಿ ನಿಮ್ಮಲ್ಲಿ ಹಣ ಕೊಟ್ಟಿರುವಾಗ, ಬಂದ ಆ ಒಬ್ಬನನ್ನು ಹಾಗೆಯೇ ಕಳಿಸಬಹುದೇ? ನೀವು ಮಾಡಿದ್ದು ಸರಿಯಲ್ಲ. ಕೂಡಲೇ ಹೋಗಿ; ಆ ಬ್ರಾಹ್ಮಣ ಇಲ್ಲಿಯೇ ಮಠದ ಆವರಣದಲ್ಲಿ ಎಲ್ಲಿಯೋ ಇರಬೇಕು. ಆತನನ್ನು ಪತ್ತೆ ಮಾಡಿ; ಆತನಿಗೆ ದಕ್ಷಿಣೆ ಕೊಟ್ಟು ಬನ್ನಿ".

ಮಠದ ಬ್ರಾಹ್ಮಣ ಅಧಿಕಾರಿಗಳು ಹಿಂದೆ ತೆರಳಿದರು; ಸಹನೆ ಸಮಾಧಾನಗಳನ್ನು ಕಲಿಯಲು ಮನಸ್ಸುಮಾಡಿದರು.

ಲ. ನ. ಶಾಸ್ತ್ರೀ, 'ಶೃಂಗೇರಿಯ ರಾಜಯೋಗಿ ಶ್ರೀ ನರಸಿಂಹ ಭಾರತೀ', ವಿದ್ಯಾಶಂಕರ ಪ್ರಕಾಶನ, ಬೆಂಗಳೂರು, ೧೯೭೪, ಪು. ೧೩೬-೩೮

೭೮. 'ನೋಡಿ, ಆ ಬಸವಣ್ಣಗಳು ಬಿಸಿಲಲ್ಲಿ ದುಡಿಯುತ್ತಿಲ್ಲವೇ?'

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿ ಅನಾಥಸೇವಾಶ್ರಮದ ಸ್ವಾಮೀಜಿ ಶ್ರೀ ರಾಘವೇಂದ್ರ ಸ್ವಾಮಿಗಳು ಆಗಾಗ ಹತ್ತಿರದ ಹಳ್ಳಿಗಳಲ್ಲಿ ತಮ್ಮ ಶಿಷ್ಯರೊಂದಿಗೆ ಯೋಗಪ್ರದರ್ಶನ ಕೊಡುತ್ತಿದ್ದರು. ಹೀಗೆಯೇ ಒಮ್ಮೆ ಅಂತಹ ಪ್ರದರ್ಶನ ಚನ್ನಗಿರಿಯ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಸಹ ನಡೆದಿತ್ತು. ಅದು ೧೯೪೮-೪೯ರಲ್ಲಿ. ಆಗ ಅದನ್ನು ನೋಡಿ ಅಚ್ಚರಿಪಟ್ಟಿದ್ದ ಜಿ. ಗೋವಿಂದರಾಜು ಎಂಬುವರು ೧೯೬೩-೬೪ರ ಸುಮಾರಿನಲ್ಲಿ, ತಾವು ಉಪಾಧ್ಯಾಯರಾಗಿದ್ದ ಅವಧಿಯಲ್ಲಿ, ತಮ್ಮ ಸಹೋದ್ಯೋಗಿಗಳೊಂದಿಗೆ ಆಶ್ರಮಕ್ಕೆ ಭೇಟಿಕೊಟ್ಟರು.

ಮಧ್ಯಾಹ್ನ ೧೨ ಘಂಟೆಯ ಸಮಯ. ರಾಘವೇಂದ್ರ ಸ್ವಾಮೀಜಿ ಒಬ್ಬಿಬ್ಬರು ಕೆಲಸಗಾರರೊಂದಿಗೆ ಕಣದಲ್ಲಿ ಹುಲ್ಲು ಎತ್ತಿಹಾಕುತ್ತ, ಎತ್ತುಗಳ ಜೊತೆಗೇ ತಾವೂ ದುಡಿಯುತ್ತಿದ್ದರು. ಪರಸ್ಥಳದಿಂದ ಬಂದ ಅತಿಥಿಗಳನ್ನು ಕಾಣುತ್ತಲೇ ಕೆಲಸದ ಸ್ಥಳದಿಂದ ಜಿಂಕೆಯಂತೆ ಓಡುತ್ತ ಬಂದರು. ಅವರು ಆ ಉರಿಬಿಸಿಲಲ್ಲಿ ಹಾಗೆ ಕೆಲಸ ಮಾಡುತ್ತಿದ್ದುದು ಕಂಡು, ಮೈಯಲ್ಲಿ ಬೆವರಿಳಿಯುತ್ತಿದ್ದುದು ಕಂಡು, ಗೋವಿಂದರಾಜು ಸಹಾನುಭೂತಿಯ ಮಾತು ಹೇಳಬೇಕೆಂದು ಯೋಚಿಸಿದರು: "ಸ್ವಾಮೀಜಿ, ವಿಪರೀತ ಬಿಸಿಲು; ತಾವು ಈ ಬಿಸಿಲಲ್ಲೇ ಹೀಗೆ...." ಎಂದೇನೊ ಹೇಳಲು ಹೊರಟರು. ತಕ್ಷಣವೇ ಸ್ವಾಮೀಜಿ, "ಏನಂದಿರಿ, ನನಗೊಬ್ಬನಿಗೇ ಬಿಸಿಲೇ? ನೋಡಿ, ಆ ಬಸವಣ್ಣಗಳು ಬಿಸಿಲಲ್ಲಿ ದುಡಿಯುತ್ತಿಲ್ಲವೇ?" ಎಂದರು.

ಒಂದೆರಡು ವರ್ಷ ಈಚೆಗೆ ಚಿಕಿತ್ಸೆಗಾಗಿ ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯನು ಸ್ವಾಮೀಜಿ ಸೇರಿದ್ದರು. ಗೋವಿಂದರಾಜು ಮತ್ತು ಅವರ ಸ್ನೇಹಿತರು ಸ್ವಾಮಿಗಳನ್ನು ನೋಡಿ ಹೋಗಲು ಆಸ್ಪತ್ರೆಗೆ ಬಂದರು. ವಿಶೇಷ ವಾರ್ಡಿನಲ್ಲಿರುವುದು ತಿಳಿಯಿತು. ಹೋಗಿ ನೋಡಿದಾಗ, ಕೊಠಡಿಯನ್ನು ಅಗರುಬತ್ತಿಯ ಕಂಪು ಆವರಿಸಿತ್ತು; ಸ್ವಾಮೀಜಿ ಪದ್ಮಾಸನದಲ್ಲಿ ಕುಳಿತು ಧ್ಯಾನಸ್ಥರಾಗಿದ್ದರು. ಅವರು ಸ್ವಲ್ಪ ಹೊತ್ತಿನ ಮೇಲೆ ಕಣ್ಣು ತೆರೆದು ಬಂದವರೆ ೦ದಿಗೆ ನಗುತ್ತ ಮಾತಾಡಿದರು. ಆಗ "ಇದೇನು ಸ್ವಾಮೀಜಿ, ತಮಗೆ ತೀವ್ರವಾಗಿ ಹೀಗೆ

ಅನಾರೋಗ್ಯವಾಗಿದ್ದರೂ ಧ್ಯಾನದ ಚಿಂತೆಯೇಕೆ?" ಎಂಬುದಾಗಿ ಪ್ರಶ್ನಿಸಿದರು. ಅವರು ಮುಗುಳುನಗುತ್ತ, "ಹಾಗಲ್ಲ, ಪಕ್ಕದ ಕೊಠಡಿಯಲ್ಲಿ ಒಂದು ಹೆಣ್ಣುಮಗು ಹೊಟ್ಟೆ ನೋವಿನಿಂದ ತುಂಬ ಒದ್ದಾಡುತ್ತಿದೆ. ಈಗ ತಾನೇ ನೋಡಿಬಂದೆ. ಆ ಮಗುವಿನ ಸಂಕಟ ದೂರವಾಗಲಿ ಎಂಬುದಾಗಿ ಪರಮೇಶ್ವರನನ್ನು ಧ್ಯಾನಿಸುತ್ತ ಕುಳಿತಿದ್ದೆ" ಎಂದರು.

ಪ್ರ.ಸಂ. ತ.ಸು. ಶಾಮರಾಯ, 'ನಂದನವನ', ಮಲ್ಲಾಡಿಹಳ್ಳಿ, ೧೯೭೮, ಪು. ೧೧೯-೧೨೦

೭೯. 'ನೋಡಿಕೊಂಡೇ ಹೋಗ್ತೀನಿ, ಕ್ಲಾಸ್ ಎಲ್ಲಿ ಓಡಿಹೋಗುತ್ತೆ?'

ಹಳೆಯ ಪೀಳಿಗೆಯ ಶಸ್ತ್ರವೈದ್ಯರಲ್ಲಿ ಡಾ. ಎ.ಕೆ. ಗೋಪಾಲರಾಜನ್ ಎಂಬವರು ತುಂಬ ಜನಪ್ರಿಯರಾಗಿದ್ದವರು. ಅವರು ವೃತ್ತಿಗೆ ಸೇರಿದ ಹೊಸದರಲ್ಲಿ ಅವರ ಮೊದಲ ನೇಮಕ ಚಾಮರಾಜನಗರಕ್ಕೆ ಆಯಿತು. ಅವರಿಗೆ ದ್ರವ್ಯಮೋಹ ಎನ್ನುವುದು ಸ್ವಲ್ಪವೂ ಇರಲಿಲ್ಲ; ರೋಗಿಗಳ ವಿಷಯದಲ್ಲಿ ತುಂಬ ಕಾಳಜಿ, ಕರುಣೆ. ಆಕೃತಿ ಉನ್ನತವಾದ್ದು, ವ್ಯಕ್ತಿತ್ವ ಗಂಭೀರವಾದ್ದು; ಆದರೂ ದೊಡ್ಡವರಿಗಾಗಲಿ ಮಕ್ಕಳಿಗಾಗಲಿ ಅವರನ್ನು ಕಂಡರೆ ಸ್ವಲ್ಪವೂ ಭಯವಿಲ್ಲ. ಅಷ್ಟರ ಮಟ್ಟಿಗೆ ಸರಳರು, ವಾತ್ಸಲ್ಯಪರರು.

ಡಾ. ಗೋಪಾಲರಾಜನ್ ಚಾಮರಾಜನಗರದ ವೈದ್ಯಕೀಯವಲಯದಲ್ಲಿ ಚಿರಪರಿಚಿತರಾದರು. "ಅವರ ಹಸ್ತಗುಣ ಚೆನ್ನಾಗಿದೆ. ಅವರು ನೋಡಿಬಿಟ್ಟರೆ ಸಾಕು, ಔಷಧ ಕೊಡುವುದೇ ಬೇಡ, ರೋಗ ವಾಸಿಯಾಗಿಬಿಡುತ್ತದೆ" ಎಂದು ಜನ ಹೇಳಿಕೊಳ್ಳುತ್ತಿದ್ದರು. ಅವರ ಗಳಿಸಿದ ಜನಪ್ರಿಯತೆಯಿಂದಾಗಿ, ಸ್ಥಳದ ಮೂರು ಖಾಸಗೀ ವೈದ್ಯಶಾಲೆಗಳು ಮುಚ್ಚಿಹೋದುವು.

ಕೆಲ ಕಾಲದ ಮೇಲೆ ಡಾ. ಗೋಪಾಲರಾಜನ್ ಅವರಿಗೆ ಚಾಮರಾಜನಗರದಿಂದ ಬೇರೆ ಯಾವುದೋ ಊರಿಗೆ ವರ್ಗವಾಯಿತು. ಅವರು ಸ್ಥಳ ಬಿಡಬೇಕಾಗಿ ಬಂತು. ಜನಕ್ಕೆ ಇದು ಆಘಾತಕಾರಕವಾದ ವಿದ್ಯಮಾನವಾಯಿತು. ಎಷ್ಟೋ ಜನ, "ಇಂಥ ನಮ್ಮಪ್ಪ ಇನ್ನೆಲ್ಲಿ ಬರುತ್ತಾರೆ" ಎಂದು ಬಹಿರಂಗವಾಗಿ ದುಃಖಿಸಿದರು. ಅವರು ಪ್ರಯಾಣ ಮಾಡಬೇಕಾದ ದಿನ ಬಂತು. ದೊಡ್ಡವರಿರಲಿ, ಚಿಕ್ಕ ಮಕ್ಕಳಿಗೂ ಅಳು ಬಂತು. ಮಕ್ಕಳಿಗೆ ಆಟಕ್ಕೆ ಹಳೆಯ ಟೆನ್ನಿಸ್ ಚೆಂಡುಗಳನ್ನು ಆಗಾಗ ಡಾಕ್ಟರು ಒದಗಿಸುತ್ತಿದ್ದರು.

ರೈಲು ಸಂಜೆ ಸು. ೬ ಗಂಟೆಗೆ ಹೊರಡುವ ಕಾರಣ, ೧-೨ ಗಂಟೆ ಮುಂಚಿತವಾಗಿಯೇ ಅವರು ಮನೆ ಬಿಟ್ಟರು. ಮನೆಯ ಹೊರಗಡೆ ಜನರ ಭಾರಿ ಗುಂಪು

ಸೇರಿತ್ತು. ಭಾರಿ ಮೆರವಣಿಗೆಯಲ್ಲಿ ಡಾಕ್ಟರನ್ನು ರೈಲುನಿಲ್ದಾಣದ ತನಕ ಜನ ಕರೆದುಕೊಂಡು ಹೋದರು. ಜನ ಗುಂಪುಗುಂಪಾಗಿ ಡಾ. ಗೋಪಾಲರಾಜನ್ ಅವರನ್ನು ಹೊತ್ತುಕೊಂಡು ನಾಲ್ಕು ಹೆಜ್ಜೆ ಮುಂದೆ ಸಾಗಿ, ಬಳಿಕ ಇಳಿಸುವರು. ಡಾಕ್ಟರ್ ಸ್ವಲ್ಪ ಸುಧಾರಿಸಿಕೊಳ್ಳುವರು. ಹತ್ತಾರು ಹಾರಗಳು ಅವರ ಕೊರಳಿಗೆ ಬೀಳುತ್ತಿದ್ದುವು. ಈಗ ಅಲ್ಲಿಂದ ಮುಂದೆ ಮತ್ತೊಂದು ಗುಂಪು ಅವರನ್ನು ಎತ್ತಿಕೊಳ್ಳುವುದು. ಮತ್ತೆ ನಾಲ್ಕು ಹೆಜ್ಜೆ ಮುಂದೆ ಸಾಗುವುದು, ಬಳಿಕ ಇಳಿಯುವುದು. ಈಗ ಡಾಕ್ಟರ್ ಸ್ವಲ್ಪ ನೆಮ್ಮದಿಯಾಗಿ ಉಸಿರಾಡುವರು. ಮತ್ತೆ ಹಾರ ಸಮರ್ಪಣೆ, ಮೆರವಣಿಗೆ. ಯಾರೋ ಬಂದು ಅವರ ಕೈಯಲ್ಲಿ ಒಂದು ಬೆಳ್ಳಿಬಟ್ಟಲು ಇಡುವರು, ಮತ್ತೊಬ್ಬರು ಬೆಳ್ಳಿತಟ್ಟೆ ಕಾಣಿಕೆ ನೀಡುವರು. ಡಾಕ್ಟರ ವಸತಿಯಿಂದ ನಿಲ್ದಾಣಕ್ಕೆ ಈ ಮೆರವಣಿಗೆ ಸಾಗಿ ನಿಲ್ದಾಣವನ್ನು ಬಂದು ಮುಟ್ಟಲು ದೂರ ಸುಮಾರು ಅರ್ಧಮೈಲಿಯಾದರೂ ಹಿಡಿದ ಕಾಲ ಸುಮಾರು ಎರಡುಗಂಟೆ.

ಅನಂತರ ಡಾ. ಗೋಪಾಲರಾಜನ್ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಶಸ್ತ್ರವೈದ್ಯದ ಪ್ರಾಧ್ಯಾಪಕರಾಗಿಯೂ ಕೆ. ಆರ್. ಆಸ್ಪತ್ರೆಯಲ್ಲಿ ಶಸ್ತ್ರವೈದ್ಯರಾಗಿಯೂ ಹಲವು ಕಾಲ ಇದ್ದರು. ವಿದ್ಯಾರ್ಥಿಗಳ, ರೋಗಿಗಳ ಪ್ರೀತಿ ಗೌರವಗಳನ್ನು ಗಳಿಸಿದರು.

೧೯೬೩ರ ಒಂದು ರಾತ್ರಿ; ಕನ್ನಡ ಅಧ್ಯಾಪಕ ಡಾ. ಪ್ರಭುಶಂಕರ ಅವರ ಶ್ರೀಮತಿಯವರಿಗೆ ತಡೆಯಲಾರದಷ್ಟು ಮಟ್ಟಿಗೆ ಹೊಟ್ಟೆನೋವು ಕಾಣಿಸಿತು. ಬೆಳಗಿನ ಜಾವದ ವರೆಗೆ ಹೇಗೋ ಸಹಿಸಿಕೊಂಡರು. ಇನ್ನು ಸಾಧ್ಯವಿಲ್ಲ ಎನ್ನಿಸಿದಾಗ ಡಾ. ಪ್ರಭುಶಂಕರ ಅವರು ಡಾ. ಗೋಪಾಲರಾಜನ್ ಅವರ ಮನೆಗೇ ಓಡಿಹೋಗಿ ವಿಷಯ ತಿಳಿಸಿದರು. ಅವರು ಇನ್ನೂ ಸ್ನಾನ ಮಾಡಿರಲಿಲ್ಲ; ಸ್ನಾನ ಮಾಡಿ, ಕಾಲೇಜಿಗೆ ಹೋಗಿ ಬೆಳಗ್ಗೆ ೭ ಗಂಟೆಯ ಎಂ.ಎಸ್. ಕ್ಲಾಸ್ ಮುಗಿಸಿಕೊಂಡು ಕೂಡಲೇ ಮನೆಗೆ ಬಂದು ರೋಗಿಯನ್ನು ನೋಡುವುದಾಗಿ ತಿಳಿಸಿದರು. ಮನೆಯ ವಿಳಾಸ ವಿಚಾರಿಸಿಕೊಂಡರು. ಪ್ರಭುಶಂಕರ ಆಗ ಒಂಟಿಕೊಪ್ಪಲ್ ರಾಮಕೃಷ್ಣಾಶ್ರಮದ ಹತ್ತಿರದ ಒಂದು ಮನೆಯಲ್ಲಿ ಮಹಡಿಯ ಮೇಲಿದ್ದರು. ಡಾಕ್ಟರೂ ಆಗ್ಗ ಅದೇ ಬಡಾವಣೆಯಲ್ಲಿದ್ದರು.

ಪ್ರಭುಶಂಕರ ಹಿಂದಿರುಗಿದ ಮೇಲೆ, ಶ್ರೀಮತಿಯವರಿಗೆ ವಿಷಯ ತಿಳಿಸಿ, ತಾವು ಮಹಡಿಯ ಮೇಲೆ ಬಿಸಿಲುಮಾಳಿಗೆಯಲ್ಲಿ ನಿಂತಿದ್ದರು. ಕೆಲವೇ ನಿಮಿಷಗಳಲ್ಲಿ ಮನೆಯ ಮುಂದೆ ಡಾ. ಗೋಪಾಲರಾಜನ್ ಅವರ ಕಾರು ಬಂದು ನಿಂತಿತು. ಅವರು ಕಾರಿನಿಂದ ಇಳಿದವರು ಅಲ್ಲಿ ಇಲ್ಲಿ ವಿಚಾರಿಸತೊಡಗಿದರು. ಆಗ ಪ್ರಭುಶಂಕರ ಅವರಿಗೆ ಇದು ಕಂಡಿತು. ಕೂಡಲೇ ಸರ್ರನೆ ಮಹಡಿಯಿಳಿದು ಹೋಗಿ, "ಇದೇನ್ ಸಾರ್, ಆಮೇಲೆ ಬರುತ್ತೇನೆ ಅಂದಿದ್ದರಲ್ಲ?" ಎಂದು ಕೇಳಿದರು. ಅವರು "ಮನಸ್ಸು ತಡೀಲಿಲ್ಲಯ್ಯ, ನೀವು ಬೆಳಗ್ಗೆ ಅಷ್ಟು ಬೇಗ ಬರಬೇಕಾದರೆ ತೊಂದರೆ ಎಷ್ಟಿರಬೇಕು ಅಂತ ಯೋಚಿಸಿದೆ; ನೋಡಿಕೊಂಡೇ ಹೋಗ್ತೀನಿ, ಕ್ಲಾಸ್ ಎಲ್ಲಿ ಓಡಿ ಹೋಗುತ್ತೆ?" ಎಂದರು. ಒಳಕ್ಕೆ ಬಂದು ರೋಗಿಯನ್ನು ಪರೀಕ್ಷಿಸಿ, "ಈಗಲೇ ಆಸ್ಪತ್ರೆಗೆ ಸೇರಿಸಬೇಕು, ಆಪರೇಷನ್ ಮಾಡಬೇಕಾಗುತ್ತೆ ಅಂತ ತೋರುತ್ತೆ" ಎಂದವರೇ, ತಮ್ಮ ಜೊತೆಯಲ್ಲೇ ಪ್ರಭುಶಂಕರ

ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು; ಆಸ್ಪತ್ರೆಯಲ್ಲಿ ರೋಗಿಯನ್ನು ದಾಖಲು ಮಾಡಲು ಬೇಕಾದ ಕ್ರಮಗಳನ್ನೆಲ್ಲ ಮುಗಿಸಲು ತಾವೇ ಅವರಿಗೆ ಸಹಾಯವಾದರು; ಸ್ಪೆಷಲ್ ವಾರ್ಡ್ ಸಹ ದೊರಕಿಸಿಕೊಟ್ಟರು.

ಅನಂತರದ ಪರೀಕ್ಷೆಯಲ್ಲಿ ತೊಂದರೆ ಸೋಂಕಿಗೆ ಸಂಬಂಧಿಸಿದ್ದು, ಆಪರೇಷನ್ ಬೇಕಾಗುವುದಿಲ್ಲ ಎಂಬುದಾಗಿ ತಿಳಿಯಿತು.

ಪ್ರಭುಶಂಕರ, 'ಜನ-ಮನ', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೭, ೧೯೮೩, ಪು. ೧೪೪-೪೯

೮೦. 'ಪರಂಗಿಜನದ ಠೇಂಕಾರ ತಪ್ಪಿಸಿದರು'

ಎಂ. ವಿಶ್ವೇಶ್ವರಯ್ಯನವರು ದಿವಾನರಾದ ಮೇಲೆ ಅವರಿಗೆ ಎಲ್ಲ ಕಡೆಯೂ ಸಲ್ಲುತ್ತಿದ್ದ ಮನ್ನಣೆ ಯಶಸ್ಸುಗಳೇ ಅವರಿಗೆ ವಜ್ರಕವಚವಾಯಿತು. ಯಾವ ರೆಸಿಡೆಂಟನೂ ಯಾವ ಬ್ರಿಟಿಷ್ ಅಧಿಕಾರಿಯೂ ಅವರ ವಿಷಯದಲ್ಲಿ ಸಲಿಗೆ ತೆಗೆದುಕೊಳ್ಳುತ್ತಿರಲಿಲ್ಲ. ಎಲ್ಲರೂ ಅವರಿಗೆ ಹೆದರಿ ನಡೆಯುತ್ತಿದ್ದರು.

ಮೈಸೂರು ಅರಮನೆಯಲ್ಲಿ ದೊರೆಗಳ ವರ್ಷವರ್ಧಂತಿಯ ದರ್ಬಾರಿನಲ್ಲಿಯೂ ಪ್ರತಿವರ್ಷದ ದಸರಾ ಉತ್ಸವಗಳ ದರ್ಬಾರಿನಲ್ಲಿಯೂ ಒಂದು ವಿಶೇಷ ನಡೆಯುತ್ತಿತ್ತು. ದೇಶೀಯರಾದ ಜನ ಎಲ್ಲರೂ ಸಭಾಮಂಟಪದಲ್ಲಿ ಪದ್ಮಾಸನ ಹಾಕಿ ಕುಳಿತುಕೊಳ್ಳುತ್ತಿದ್ದರು. ಯೂರೋಪಿಯನ್ ಜನ ಮಾತ್ರ ಕುರ್ಚಿಯನ್ನಲಂಕರಿಸುತ್ತಿದ್ದರು. ಹೀಗೆ ನಡೆಯುವುದಾದರೆ ತಾವು ದರ್ಬಾರಿಗೆ ಬರತಕ್ಕವರಲ್ಲವೆಂದು ವಿಶ್ವೇಶ್ವರಯ್ಯನವರು ಸ್ಪಷ್ಟವಾಗಿ ತಿಳಿಸಿಬಿಟ್ಟರು. ಇದಕ್ಕೆ ಪರಂಗಿಯವರು ಹೀಗೆ ಸಮಜಾಯಿಷಿ ಕೊಟ್ಟರು: "ನಾವು ಷರಾಯಿ ತೊಟ್ಟು ಬರುವವರು. ನಮಗೆ ಪಂಚೆ ಧೋತ್ರಗಳ ಅಭ್ಯಾಸವಿಲ್ಲ. ಉತ್ತರೀಯ ನಮ್ಮ ಸಂಪ್ರದಾಯವಲ್ಲ. ನಮ್ಮ ಉಡುಪಿಗೆ ತಕ್ಕ ಪೀಠ ಎಂದರೆ ಕುರ್ಚಿ".

ಇದನ್ನು ಆಲೋಚಿಸಿ ವಿಶ್ವೇಶ್ವರಯ್ಯನವರು ಹೇಳಿದರು: "ಯೂರೋಪಿಯನ್ ಜನರಿಗೋಸ್ಕರ ಬೇರೆ ದರ್ಬಾರು ನಡೆಯಲಿ. ಆ ಹೊತ್ತು ದೇಶೀಯ ಮಹಾಜನರೂ ಕುರ್ಚಿಯ ಮೇಲೆಯೇ ಕೂಡುವರು. ವಿದೇಶೀಯರಿಗೂ ಸ್ವದೇಶೀಯರಿಗೂ ಮಾನ ಮರ್ಯಾದೆಗಳು ಸಮಾನವಾಗಿರಬೇಕು. ಸ್ವದೇಶಿ ಜನ ಮಾತ್ರ ಇರುವ ಸಭೆಯಲ್ಲಿ ನಾವು ನಮ್ಮ ಸಂಪ್ರದಾಯವನ್ನು ಅನುಸರಿಸಬೇಕು".

ಮಹಾರಾಜರು ಇದನ್ನು ಒಪ್ಪಿದರು. ಹೀಗೆ ಇನ್ನೂ ಎಷ್ಟೋ ವಿಷಯಗಳಲ್ಲಿ

ವಿಶ್ವೇಶ್ವರಯ್ಯನವರು ಪರಂಗಿಜನದ ಠೇಂಕಾರ ತಪ್ಪಿಸಿದರು. ಅವರ ಕಾಲದಲ್ಲಿ ಬಂದ ರೆಸಿಡೆಂಟರು ಈ ಮಹನೀಯರ ಮನೋಗತವನ್ನು ಕಂಡುಕೊಂಡು ನಮ್ರರಾದರು.

ಡಿ.ವಿ.ಜಿ. 'ಮೈಸೂರಿನ ದಿವಾನರುಗಳು', ಜ್ಞಾಪಕ ಚಿತ್ರಶಾಲೆ, ಸಂ. ೪, ಕಾವ್ಯಾಲಯ, ಮೈಸೂರು, ೧೯೭೧, ಪು. ೧೮-೧೯

೮೧. 'ಪ್ರತಿತಿಂಗಳೂ ೩೦೦ ರೂಪಾಯಿ ಕೊಟ್ಟಿರಲೇ?'

ಕೆ. ಅನಂತರಾಮಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದ ಹಿರಿಯ ಇಂಗ್ಲಿಷ್ ಪ್ರಾಧ್ಯಾಪಕರು. ಅವರು ಸೆಂಟ್ರಲ್ ಕಾಲೇಜಿನಲ್ಲಿ ಇಲಾಖೆಯ ಮುಖ್ಯಸ್ಥರಾಗಿದ್ದಾಗ ಎ. ಎನ್. ಮೂರ್ತಿರಾಯರು ಸಹ ಅಲ್ಲಿಯೇ ಕೆಲಸ ಮಾಡುತ್ತಿದ್ದರು. ಬೆಂಗಳೂರು ವಾಸ, ಸೆಂಟ್ರಲ್ ಕಾಲೇಜು ವಾತಾವರಣ ಅಷ್ಟು ಹಿಡಿಸದೆ ರಜೆಗೆ ಅರ್ಜಿ ಸಲ್ಲಿಸಿದರು (೧೯೫೪-೫೫). ಕಾಲೇಜಿನಿಂದ ಹೊರಬಿದ್ದ ಮೇಲೆ, ೨-೩ ದಿನಗಳ ಬಳಿಕ, ಅನಂತರಾಮಯ್ಯನವರು ಒಂದು ಸಂಜೆ ಕಾಲೇಜಿನಿಂದ ನೇರವಾಗಿ ಮೂರ್ತಿರಾಯರ ಮನೆಗೆ ಬಂದು, "ನಿಮ್ಮ ರಜ ವಿಧ್ಯುಕ್ತವಾಗಿ ಮಂಜೂರಾಗಲು ೭-೮ ತಿಂಗಳಾದರೂ ಬೇಕು. ಅಲ್ಲಿಯ ವರೆಗೆ ನಿಮಗೆ ಸಂಬಳ ಬರುವುದಿಲ್ಲ. ನಿಮಗೆ ಸಂಸಾರ ತೂಗಿಸುವುದು ಕಷ್ಟವಾಗಬಹುದು. ನಾನು ಪ್ರತಿ ತಿಂಗಳೂ ೩೦೦ ರೂಪಾಯಿ ಕೊಟ್ಟಿರಲೇ? ಸಂಬಳ ಬಂದ ಮೇಲೆ ನೀವು ವಾಪಸು ಕೊಡಬಹುದು. ನೀವು ಸಂಕೋಚ ಪಟ್ಟುಕೊಳ್ಳಬೇಕಾದ್ದಿಲ್ಲ. ನನಗೆ ಏನೇನೂ ತೊಂದರೆಯಾಗುವುದಿಲ್ಲ" ಎಂದರು.

ಮೂರ್ತಿರಾಯರಿಗೆ ಕೆಲವು ಕಾರಣಗಳಿಂದ ಖರ್ಚು ಹೆಚ್ಚಾಗಿತ್ತು; ಸಹಾಯ ಬೇಕಾಗಿತ್ತು. ಇದರಿಂದ ಬ್ಯಾಂಕಿನಲ್ಲಿ ಸಾಲ ಮಾಡುವುದು ತಪ್ಪಿತು. ಅನಂತರಾಮಯ್ಯನವರು ಹೋಗಿ ಅವರಿಗೆ ೩೦೦ ರೂಪಾಯಿ ಕೊಟ್ಟು ಅನಂತರ ತಮ್ಮ ಮನೆಗೆ ಹೋಗುತ್ತಿದ್ದರು. ೬ ತಿಂಗಳ ಬಳಿಕ ಮೂರ್ತಿರಾಯರ ರಜಾ ಮಂಜೂರಾಗಿ, ಹಿಂದಿನ ಸಂಬಳವೆಲ್ಲ ಒಟ್ಟಿಗೆ ಬಂತು; ಅನಂತರಾಮಯ್ಯನವರ ಹಣ ಹಿಂದಿರುಗಿಸಿದರು.

ಈಚೆಗೆ ವಿದೇಶದಲ್ಲಿದ್ದ ಮಗ ಮತ್ತು ಅವನ ಸಂಸಾರ ಬೆಂಗಳೂರಿಗೆ ನೆಲೆಸಲು ಬಂದಾಗ, ಇದ್ದ ಮನೆ ದೊಡ್ಡದು ಮಾಡಬೇಕಾಗಿ ಬಂತು; ಅಷ್ಟು ಕಾಲಕ್ಕೆ ಬಾಡಿಗೆಮನೆ ಹುಡುಕಬೇಕಾಯಿತು. ಇದು ತಿಳಿದು ಅನಂತರಾಮಯ್ಯ ದಂಪತಿಗಳೇ ಮೂರ್ತಿರಾಯರ ಮನೆಗೆ ಹೋಗಿ, "ನೀವು ಮನೆ ಹುಡುಕಿಕೊಂಡು ಪರಬಾಡಬೇಡಿ. ನಮ್ಮ ಮನೆಯಲ್ಲಿರುವವರು ನಾವಿಬ್ಬರೇ. ನಾವು ಮಹಡಿಯ ಮೇಲಿದ್ದೇವೆ; ಕೆಳಭಾಗವೆಲ್ಲ ಖಾಲಿ ಇದೆ. ನಿಮ್ಮ ಮನೆ ರಿಪೇರಿಯಾಗುವ ವರೆಗೆ ಸ್ವಸ್ಥವಾಗಿ ನಮ್ಮ ಮನೆಯಲ್ಲಿದ್ದುಬಿಡಿ. ನೀವು ಇದ್ದರೆ ನಮಗೂ ಸಹಾಯವಾಗುತ್ತೆ" ಎಂದರು.

ಸುಮಾರು ೨ ತಿಂಗಳು ಹಾಗೆ ಇದ್ದು, ಸ್ವಂತ ಮನೆಗೆ ಮರಳಿದಾಗ, ಮೂರ್ತಿರಾಯರ ಮಗ ಅನಂತರಾಮಯ್ಯನವರ ಪತ್ನಿಗೆ ಬಾಡಿಗೆ ಕೊಡಲು ಹೋದರು. ಆಕೆ ಕೂಡಲೇ, "ನಿನಗೆ ಇದೇನು ಬುದ್ಧಿ ಬಂತೋ ಮಗು! ಸದ್ಯಕ್ಕೆ ಅವರು (ಅನಂತರಾಮಯ್ಯನವರು) ಮನೆಯಲ್ಲಿಲ್ಲ. ನಿನ್ನ ಮಾತು ಅವರ ಕಿವಿಗೆ ಬಿದ್ದರೆ ನಿನ್ನನ್ನು ಸುಮ್ಮನೆ ಬಿಟ್ಟಾರೇ! ನಿನ್ನ ಹಣ ಜೇಬಿಗೆ ಹಾಕಿಕೋ" ಎಂದು ಗದರಿಸಿ ಕಳುಹಿಸಿದರು.

ಎ. ಎನ್. ಮೂರ್ತಿರಾವ್, 'ಸಂಜೆಗಣ್ಣಿನ ಹಿನ್ನೋಟ', ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಕೃಷ್ಣಮೂರ್ತಿಪುರಂ, ಮೈಸೂರು ೧೯೯೦, ಪು. ೩೫೫-೫೭

೮೨. 'ಪಾಪ, ಪೂರ್ಫೆಲೋ!

ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯನವರು ಒಂದಲ್ಲ ಒಂದು ಮೀಟಿಂಗ್‌ಗೆ ಪ್ರತಿವಾರವೂ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುತ್ತಿದ್ದರು. ಮೈಸೂರಿನಿಂದ ರಾತ್ರಿರೈಲು ಹಿಡಿಯಲು ಸ್ಟೇಷನ್ನಿಗೆ ಮನೆಯಿಂದ ನಡೆದುಕೊಂಡೇ ಹೋಗುತ್ತಿದ್ದರು; ಬೆಂಗಳೂರು ತಲುಪಿದ ಮೇಲೆ ಬೆಳಗಿನ ಕಾಫಿ ವೇಳೆಗೆ ಯಾರಾದರೂ ಗೆಳೆಯರ ಮನೆಗೆ ಸ್ಟೇಷನ್ನಿಂದ ನಡೆದೇ ಹೋಗುತ್ತಿದ್ದರು. ಹೀಗಾಗಿ ಜಟಕಾಖರ್ಚು ಉಳಿಯುತ್ತಿತ್ತು. ಆ ಖರ್ಚು ಉಳಿಸಿದರೆ, ಒಂದು ಬಡಕುಟುಂಬದ ಒಂದು ದಿನದ ಊಟದ ಖರ್ಚು ಆಗುತ್ತದೆ ಎಂದು ಹೇಳುತ್ತಿದ್ದರು. ನಶ್ಯದ ಸಲುವಾಗಿ ತಾವು ಮಾಡುವ ಮೂರುಕಾಸು ಖರ್ಚು ಅನ್ಯಾಯವಾದ್ದು, ಯಾರಾದರೊಬ್ಬ ದಾಸಯ್ಯನಿಗೆ ಕೊಡಬಹುದಾಗಿತ್ತು ಎಂದೂ ಮರುಗುತ್ತಿದ್ದರು.

ಈ ಮಾತು ಒಮ್ಮೆ ಆಡುತ್ತಿರುವಾಗಲೇ ಅಂದಿನ ಟಪಾಲು ಒಳಗೆ ಬಂದು ಬಿತ್ತು. ಒಂದೊಂದಾಗಿ ಕಾಗದಗಳನ್ನು ಓದುತ್ತ, ಒಂದು ಲಕೋಟೆಯ ದೀರ್ಘವಾದ ಪತ್ರವನ್ನು ಓದುವಾಗ ಅವರ ಮುಖದಲ್ಲಿ ಏನೇನೋ ಭಾವಗಳು ಹುಟ್ಟಿ ಅಡಗುತ್ತಿದ್ದುವು. ಕಾಗದ ಓದಿ ಮುಗಿದ ಮೇಲೆ ನಿಟ್ಟುಸಿರಿಟ್ಟು ಅಂತರ್ಮುಖಿಗಳಾದರು.

ಕೆಲವು ಕ್ಷಣಗಳಾದ ಮೇಲೆ, "ಶಾಮಣ್ಣ (ತಮ್ಮ ತ. ಸು. ಶಾಮರಾವ್) ಆ ಬೀರುವಿನಲ್ಲಿ ಎಷ್ಟು ಹಣ ಇದೆ, ನೋಡು" ಎಂದರು. ಶಾಮರಾಯರು ಬೀರು ತೆಗೆದು ನೋಡಿ, 'ನೂರೈವತ್ತು ರೂಪಾಯಿ' ಎಂದರು. "ಅದು ಸಾಲದು; ಸೊಸೈಟಿಗೆ ಹೋಗಿ ಇನ್ನೊಂದು ನೂರು ತೆಗೆದುಕೊಂಡು ಬಾ" ಎಂದರು, ವೆಂಕಣ್ಣಯ್ಯನವರು. ಆದರೆ ಸೊಸೈಟಿಯ ಪಾಸ್‌ಬುಕ್ ತೆಗೆದು ನೋಡಿದಾಗ ಬ್ಯಾಲೆನ್ಸ್ ನಲವತ್ತು ರೂ. ಮಾತ್ರ ಇರುವುದು ತಿಳಿಯಿತು. ಇದು ತಿಳಿದಾಗ ವೆಂಕಣ್ಣಯ್ಯನವರು, "ಚಿಂತೆಯಿಲ್ಲ, ನನಗೆ

ನೂರು ರೂಪಾಯಿ ಓವರ್ ಡ್ರಾ ಮಾಡುವ ಸೌಲಭ್ಯ ಇದೆ" ಎಂದು ಹೇಳಿ, ಒಂದು ಚೆಕ್ ಬರೆದು ಕಳಿಸಿದರು. ಶಾಮರಾವ್ ಬ್ಯಾಂಕಿಗೆ ಹೋಗಿ ಹಣ ತಂದರು.

ಹೀಗೆ ಇನ್ನೂರೈವತ್ತು ರೂಪಾಯಿ ಜೊತೆ ಆಯಿತು. ಈಗ ವೆಂಕಣ್ಣಯ್ಯನವರು ತಾವು ಓದುತ್ತಿದ್ದ ಕಾಗದದ ಕವರ್ ಮೇಲೆಯೇ ಅಡ್ರೆಸ್ ಬರೆದು ಕೊಟ್ಟು ತಗ್ಗಿದ ದನಿಯಲ್ಲಿ, "ಈ ವಿಳಾಸಕ್ಕೆ ಇನ್ನೂರೈವತ್ತು ರೂಪಾಯಿ ಮನಿಯಾರ್ಡರ್ ಮಾಡಿ ಬಾ. ಪಾಪ, ಪೂರ್ ಫೆಲೋ! ಲಾ ಕಾಲೇಜಿನ ಫೀಸ್ ಕಟ್ಟಿಲ್ಲ. ಪರೀಕ್ಷೆಗೆ ಕಟ್ಟಲು ಹಣ ಇಲ್ಲ. ವರ್ಷವೆಲ್ಲಾ ಓದಿದ್ದು ವ್ಯರ್ಥವಾಗುತ್ತದೆ" ಎಂದರು, ಶಾಮರಾಯರಿಗೆ.

ಶಾಮರಾಯರು ಅಣ್ಣನ ಅಪ್ಪಣೆ ಪಾಲಿಸಲು ಹೊರಟರು. ಹಾಗೆ ಹೊರಡುವಾಗ ವೆಂಕಣ್ಣಯ್ಯನವರು ಅವರನ್ನು ಮತ್ತೆ ಕರೆದು, "ಮನಿಯಾರ್ಡರ್ ರಸೀತಿಯನ್ನೂ ವಿಳಾಸ ಬರೆದಿರುವ ಕವರನ್ನೂ ಅಲ್ಲೇ ಹರಿದು ಹಾಕಿ ಬಾ. ಮನೆಯಲ್ಲಿ ಯಾರಿಗೂ ಗೊತ್ತಾಗುವುದು ಬೇಡ" ಎಂಬುದಾಗಿ ಎಚ್ಚರಿಸಿದರು. ತಮ್ಮ ಕೈಯಲ್ಲಿದ್ದ ಆ ಲಾ ಕಾಲೇಜು ವಿದ್ಯಾರ್ಥಿಯ ಪತ್ರವನ್ನು ಹರಿದು ಹೊರಕ್ಕೆಸೆದರು.

"ನಶ್ಯ ಕೊಂಡರೆ ಅನ್ಯಾಯವಾಗಿ ಮೂರು ಕಾಸು ಖರ್ಚಾಗುತ್ತದೆಯಲ್ಲ" ಎಂದು ಕಳವಳಿಸಿ ಮಾರುದ್ದ ಭಾಷಣಮಾಡುವ ವೆಂಕಣ್ಣಯ್ಯನವರ ಈ ವರ್ತನೆ ನೋಡಿ ಶಾಮರಾಯರು ಆಶ್ಚರ್ಯಪಟ್ಟರು.

ಪ್ರಧಾನ ಸಂಪಾದಕರು: ಕುವೆಂಪು, 'ಸವಿನೆನಪು' (ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ), ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೦, ಪು. ೨೭೪-೭೫

೬೩. 'ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅಪೇಕ್ಷಿಸಿದರು'

ಮೈಸೂರು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಒಂದು ಸಲ ತಮ್ಮ ಹುಟ್ಟೂರು ಮುದ್ದೇನಹಳ್ಳಿಗೆ ಹೋಗಿ ಅಲ್ಲಿಯೇ ತಂಗಿದ್ದರು. ಅಂದು ಸಂಜೆ ಹಳ್ಳಿಯ ಪ್ರಾಥಮಿಕ ಶಾಲೆಯ ಬಳಿಯಲ್ಲಿ ಹೋಗುತ್ತಿದ್ದರು; ಅವರಿಗೆ ಶಾಲೆಯಿಂದ ಮಕ್ಕಳು ಕೇಕೆ ಹಾಕುತ್ತ ನಗುತ್ತ ಕುಣಿಯುತ್ತ ಹೊರಬರುತ್ತಿರುವುದು ಕಂಡಿತು. ವಿಶ್ವೇಶ್ವರಯ್ಯನವರಿಗೆ ಅವರನ್ನು ನೋಡಿ ಸಂತೋಷವಾಯಿತು. ಉಪಾಧ್ಯಾಯರನ್ನು ಕರೆದು, ಅವರ ಕೈಯಲ್ಲಿ ಹತ್ತುರೂಪಾಯಿ ನೋಟು ಕೊಟ್ಟು, "ಮಕ್ಕಳಿಗೆ ಏನಾದರೂ ತರಿಸಿಕೊಡಿ, ಬಾಯಿ ಸಿಹಿಯಾಗಲಿ" ಎಂದರು. ಇದನ್ನು ನೋಡುತ್ತಿದ್ದ ವೃದ್ಧರೊಬ್ಬರು "ಸ್ವಾಮಿ, ಅವರಿಗೆ ಪೆಪ್ಪರ್‌ಮೆಂಟ್ ಹಂಚಿದರೆ ಸಾಕೇ? ನಾಲ್ಕು ಬುದ್ಧಿಯ ಮಾತೂ ಅಪ್ಪಣೆಯಾಗಬೇಕು" ಎಂದರು.

ಹುಡುಗರೆಲ್ಲಾ ಈಗ ಶಾಲೆಯೊಳಕ್ಕೆ ಬಂದರು. ವಿಶ್ವೇಶ್ವರಯ್ಯನವರು ಅವರನ್ನು ಉದ್ದೇಶಿಸಿ ಐದು ನಿಮಿಷ ಮಾತಾಡಿದರು. ಆದರೆ ಹೊರಬಂದ ಮೇಲೆ ತಮ್ಮ ವಿಷಯದಲ್ಲೇ ತಮಗೆ ಅಸಮಾಧಾನವಾಯಿತು. ಎಂದೂ ಮಾಡದ ಕೆಲಸವನ್ನು ಅಂದು ಮಾಡಿದ್ದೇ ಅದಕ್ಕೆ ಕಾರಣ; ಎಂದರೆ ಪೂರ್ವಸಿದ್ಧತೆಯಿಲ್ಲದೆ ತಾವು ಭಾಷಣ ಮಾಡಿದ್ದರು. ಅದು ಅವರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅಪೇಕ್ಷಿಸಿದರು.

ಒಂದು ವಾರದೊಳಗೆ ತಮ್ಮ ಹಳ್ಳಿ ಮುದ್ದೇನಹಳ್ಳಿಗೆ ಅವರು ಹಿಂದಿರುಗಿದರು. ೨೫ ರೂಪಾಯಿ ಖರ್ಚುಮಾಡಿ ಮಕ್ಕಳಿಗೆ ತಿಂಡಿ ತೀರ್ಥಗಳನ್ನು ತರಿಸಿ ಹಂಚಿದರು. ಈಗ ಮತ್ತೆ ಅವರನ್ನು ಉದ್ದೇಶಿಸಿ ಒಂದು ಭಾಷಣ ಮಾಡಿದರು. ವಿಶ್ವೇಶ್ವರಯ್ಯನವರು ತಮ್ಮ ಭಾಷಣವನ್ನು ಜಾಗರೂಕತೆಯಿಂದ ತಯಾರಿ ಮಾಡಿಕೊಂಡು ಬಂದಿದ್ದರು. ಹೀಗೆ ಮಾಡಿ ತಮ್ಮ ಮೊದಲಿನ ಅಶಿಸ್ತಿಗೆ ಪರಿಹಾರವನ್ನು ತಾವು ಕಂಡುಕೊಂಡ ಸಮಾಧಾನವನ್ನು ಪಡೆದಿದ್ದರು.

'ಮಕ್ಕಳು ಚಿಕ್ಕವರು, ಅವರಿಗೆ ದೊಡ್ಡವರಾದ ತಾವು ಏನು ಹೇಳಿದರೂ ನಡೆಯುತ್ತದೆ' ಎಂಬುದಾಗಿ ವಿಶ್ವೇಶ್ವರಯ್ಯನವರು ಭಾವಿಸಲಿಲ್ಲ. ಅವರು ಮೇಧಾವಿಗಳಾದ, ವಿಚಾರಪರರಾದ ಶ್ರೋತೃಗಳಿಗೆ ಎಷ್ಟು ಗೌರವ ಸಲ್ಲಿಸಬೇಕೋ ಅಷ್ಟೇ ಗೌರವವನ್ನು ಆ ಹಸುಮಕ್ಕಳಿಗೂ ಸಲ್ಲಿಸಿದರು.

ತನ್ನ ಕೆಲಸ ಯಾವುದು, ಸರ್ಕಾರದ ಕೆಲಸ ಯಾವುದು ಎಂದು ಯೋಚಿಸಿ ವೆಚ್ಚವನ್ನು ನಿರ್ವಹಿಸುತ್ತಿದ್ದರು. ಸ್ವಂತ ವ್ಯವಹಾರದಲ್ಲಿ ಸರ್ಕಾರಿ ಕಾಗದ ಬಳಸಲು ಇಷ್ಟಪಡುತ್ತಿರಲಿಲ್ಲ. ಕರಡು ಸಿದ್ಧಪಡಿಸುವಾಗ ಸ್ವಂತದ್ದು, ಶುದ್ಧಪ್ರತಿಯಲ್ಲಿ ಸರ್ಕಾರಿ ಕಾಗದ. ಬಳಸಿದ ಕಾಗದವನ್ನು ಬೆಳಕಿಗೆ ಹಿಡಿದು ವಾಟರ್‌ಮಾರ್ಕ್ ಗುರುತಿನಿಂದ ಸರ್ಕಾರದ್ದು ಅಲ್ಲವೇ ಹೌದೇ ಎಂದು ನಿಶ್ಚಯಿಸುತ್ತಿದ್ದರು. ಸ್ವಂತ ಕೆಲಸಕ್ಕೆ ಹೋಗುವಾಗ ಬರುವಾಗ ಸ್ವಂತ ಕಾರು, ಸರ್ಕಾರದ ಕೆಲಸದ ಮೇಲೆ ಹೋಗುವಾಗ ಸರ್ಕಾರದ ಕಾರು. ಪ್ರವಾಸ ಹೊರಟ ವೇಳೆ ಎಲ್ಲೆಡೆಯೂ ವಿದ್ಯುಚ್ಛಕ್ತಿ ಇರುತ್ತಿರಲಿಲ್ಲವಾದ್ದರಿಂದ ಮೇಣದ ಬತ್ತಿಯ ಎರಡು ಕಟ್ಟುಗಳನ್ನು ಜೊತೆಗೆ ಒಯ್ಯುತ್ತಿದ್ದರು. ಅವುಗಳಲ್ಲಿ ಒಂದು ಸ್ವಂತದ್ದು, ಇನ್ನೊಂದು ಸರ್ಕಾರದ್ದು. ಸ್ವಂತ ಕೆಲಸ ಮಾಡುವಾಗ ಸ್ವಂತದ ಮೇಣದ ಬತ್ತಿ, ಸರ್ಕಾರದ ಕೆಲಸ ಮಾಡುವಾಗ ಸರ್ಕಾರದ ಖರ್ಚಿನ ಮೇಣದ ಬತ್ತಿ.

ಸಂ. ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ಸರ್ ವಿಶ್ವೇಶ್ವರಯ್ಯ', ಜೀವನ ಕಾರ್ಯಾಲಯ, ಬೆಂಗಳೂರು-೧೯, ೧೯೯೦ (೨), ಪು. ೨೨೪, ೨೫೨-೫೩

೬೪. 'ಬುದ್ಧಿ, ನಾನು ರಾಮಚಂದ್ರನ್ನ ನೋಡಿದೀನಿ'

ಬೆಂಗಳೂರು ಜಿಲ್ಲೆ ಗೊಟ್ಟಿಗೆರೆ ಹತ್ತಿರದ ಒಂದು ಹಳ್ಳಿ. ಅಲ್ಲಿಯ ಗ್ರಾಮದ ತೋಟಿ ತೋಟಿ ರಾಮ. ಅವನಿಗೆ ಸುಮಾರು ೬೦ ವರ್ಷ. ಓದು ಬರಹ ತಿಳಿದವನಲ್ಲ. ಮಕ್ಕಳು ಪ್ರಾಯಸ್ಥರಾಗಿ ತಮ್ಮ ಪಾಡಿಗೆ ತಾವಿದ್ದರು. ಇವನು ಹಳ್ಳಿಯ ಯಾವ ತಂಟೆ ತಕರಾರುಗಳಿಗೂ ಹೋಗುತ್ತಿರಲಿಲ್ಲ. ತನಗೆ ಕೆಲಸವಿದ್ದಾಗ ಹಳ್ಳಿಯಲ್ಲಿರುತ್ತಿದ್ದ, ಉಳಿದಂತೆ ಊರಾಚೆ ಹಾಳುಗುಡಿಯಲ್ಲಿ ಒಂಟಿಯಾಗಿ ವಾಸ. ಅವನ ಚರ ಆಸ್ತಿಯೆಂದರೆ, ಬಿಳಿಯ ಬಟ್ಟೆ ಲಪೇಟ, ಹಳೆಯ ಅಂಗಿ, ಮೊಣಕಾಲುವರೆಗೆ ದಟ್ಟಿ ಪಂಚೆ. ಜನ ಇವನನ್ನು ಒಳ್ಳೆಯವ ಎನ್ನುತ್ತಿದ್ದರು.

೧೯೫೬-೫೭ರಲ್ಲಿ ಮೋಜಣೀದಾರ ಟಿ. ಸೀತಾರಾಮ ಜೋಯಿಸರು ಈ ಹಳ್ಳಿಗೆ ಸರ್ವೆ ಕೆಲಸಕ್ಕೆ ಎಂದು ಬಂದರು. ಇವರಿಗೆ ಸಹಾಯ ಮಾಡಬಹುದಾದ ವ್ಯಕ್ತಿ ಎಂದರೆ ತೋಟಿ ರಾಮ ಒಬ್ಬನೇ ಎಂದ ಒಬ್ಬ ಗೃಹಸ್ಥ; "ಆದರೆ ಇವನನ್ನು ಸುಲಭದಲ್ಲಿ ಕಾಣುವುದು ಕಷ್ಟ, ಎಲ್ಲೋ ಹಾಳುಗುಡಿಯಲ್ಲಿರುತ್ತಾನೆ, ಗುಡಿಯ ಸುತ್ತ ರಾಮಭಜನೆ ಮಾಡುತ್ತ ಸುತ್ತುತ್ತಿರುತ್ತಾನೆ" ಎಂದ ಇನ್ನೊಬ್ಬಾತ. "ಅವನೊಬ್ಬ ಹುಚ್ಚ" ಎಂದ ಒಬ್ಬ; "ಹುಚ್ಚನೂ ಅಲ್ಲ ಬೆಪ್ಪನೂ ಅಲ್ಲ, ಚೆನ್ನಾಗೇ ಮಾತಾಡ್ತಾನೆ" ಎಂದ ಇನ್ನೊಬ್ಬ. ಹೀಗೆಂದಾತ ಜೋಯಿಸರನ್ನು ಕರೆದುಕೊಂಡು ಹೊರಟು, ಸ್ವಲ್ಪ ದೂರದಲ್ಲಿ ಆ ಹಾಳುಗುಡಿ ತೋರಿಸಿದನು. ಅಲ್ಲದೆ, "ಕನಸು ಕಾಣುತ್ತಾ, ಭಜನೆ ಮಾಡುತ್ತಾ, ಅಲ್ಲೇ ಎಲ್ಲೋ ಇರ್ತಾನೆ ನೋಡಿ. ಅಮಾವಾಸ್ಯೆಯೋ ಹುಣ್ಣಿಮೆಯೋ ಏನಾದರೂ ಸರಿ, ಆ ಗುಡಿಗೆ ಸುತ್ತು ಹಾಕ್ತಾನೆ. ಅಳ್ತಾನೆ, ನಗ್ತಾನೆ. ಈಗ ಹುಚ್ಚನಲ್ಲ, ಮುಂದೆ ಹುಚ್ಚು ಹಿಡಿಯಬಹುದು" ಎಂದನು. ಈ ಹೊತ್ತಿಗೆ ತೋಟಿ ರಾಮ ಜೋಯಿಸರ ಕಡೆಗೇ ಬರುವುದು ಕಂಡಿತು. ಗುಡಿ ತೋರಿಸಿದ ಗೃಹಸ್ಥ ಅಲ್ಲಿಂದ ಹೊರಟುಹೋದ.

ರಾಮ ಸಾಹೇಬರಿಗೆ ನಮಸ್ಕರಿಸಿದ. ಮಾತು ಆರಂಭವಾಯಿತು. ಅದು ನಡೆದದ್ದು ಹೀಗೆ:

ಜೋಯಿಸರು: ರಾಮಯ್ಯ, ನಾನು ಬಂದ ಸಮಾಚಾರ ನಿನಗೆ ಯಾರು ಹೇಳಿದರು?

ರಾಮ: ಇನ್ಯಾರು ಹೇಳಾರು ಬುದ್ಧಿ? ಶ್ರೀ ರಾಮಚಂದ್ರನೇ ಏಳಿರಬೇಕು. ಇಲ್ಲಿ ನೀನೇ ಅನ್ನೋರಿಲ್ಲ. ಶ್ರೀರಾಮಚಂದ್ರ ಒಬ್ಬನೇ ಇರೋದು. 'ಸಾಯೇಬ್ರು ಬಂದವ್ರೆ, ಓಗು' ಅಂತ ಅವನೇ ಏಳಿರಬೇಕು.

ಜೋಯಿಸರು: ಆ ಗುಡೀಲಿ ದೇವರಿದಾನೆಯೇ?

ರಾಮ: ಇರಬೋದೇನೊ. ನಮ್ಮ ಮುತ್ತಜ್ಜನ ಕಾಲದಲ್ಲಿ ದೇವರು ಪೂಜಾರಿ ಎಲ್ಲ ಇದ್ದರಂತೆ. ಈಗ ಪೂಜೇನೂ ಇಲ್ಲ, ಪೂಜಾರಯ್ಯನೂ ಇಲ್ಲ.

ಜೋಯಿಸರು: ಹಾಗಾದ್ರೆ ಇಲ್ಲಿ ಒಬ್ಬನೇ ಇದ್ದು ಏನು ಮಾಡ್ತೀಯ?

ರಾಮ: ಇಲ್ಲಾದರೆ ಒತ್ತು ಓಗುತ್ತೆ. ಊರಲ್ಲಿ ಬೇಜಾರು.

ಜೋಯಿಸರ ಸರ್ವೇ ಕೆಲಸ ಮುಗಿಯಿತು. ತೋಟಿ ರಾಮ ಅವರ ಜೊತೆಗಿದ್ದ. ಹವೆ ತಂಪಾಗಿತ್ತು. ಅರ್ಧದಾರಿ ನಡೆದ ಮೇಲೆ ರಾಮ ಇದ್ದಕ್ಕಿದ್ದ ಹಾಗೆ ನಿಂತುಬಿಟ್ಟ. ಅವನ ಕಣ್ಣುಗಳಲ್ಲಿ ನೀರಾಡುತ್ತಿತ್ತು. ಜೋಯಿಸರಿಗೆ ಗಾಬರಿಯಾಯಿತು. ಸೂಕ್ಷ್ಮವಾಗಿ ಅವನ ಮುಖವನ್ನೇ ನೋಡಿದರು. ಮುಖದಲ್ಲಿ ದುಃಖವಿರಲಿಲ್ಲ, ಅದು ಪ್ರಶಾಂತವಾಗಿತ್ತು. ಮಂದಹಾಸಿ ಸೂಸಿ ಅವನು ಏನೋ ಮಾತಾಡಲು ಪ್ರಯತ್ನಿಸಿದ. ಮಾತು ಹೊರಡಲಿಲ್ಲ. ಇವರೂ ಅವನನ್ನೇ ನೋಡುತ್ತ ನಿಂತುಬಿಟ್ಟರು.

ಈಗ ರಾಮನ ತುಟಿಗಳು ಅದುರಿದುವು. 'ಬುದ್ಧಿ' ಎಂದ. ಜೋಯಿಸರು "ಏನಪ್ಪ ರಾಮಯ್ಯ, ಏನಾಗ್ತಿದೆ ನಿನಗೆ? ಹಗಲೆಲ್ಲ ನನ್ನ ಜೊತೆಗೇ ಇದ್ದೆ. ಊಟ ಮಾಡಿದ್ದೆಯೋ ಇಲ್ಲವೋ? ಸ್ವಲ್ಪ ಸುಧಾರಿಸಿಕೋ" ಎಂದರು. "ವಯಸ್ಸಾದವನು, ಸುಸ್ತಾಗಿರಬೇಕು" ಎಂದುಕೊಂಡರು. ಆದರೆ ರಾಮ ಈಗ ಗೆಲುವಾಗಿ ಮಾತಾಡತೊಡಗಿದ. ಸಂಭಾಷಣೆ ಹೀಗೆ ಸಾಗಿತು.

ರಾಮ: 'ಬುದ್ಧಿ, ನಾನು ರಾಮಚಂದ್ರನ್ನ ನೋಡಿದೀನಿ'

ಜೋಯಿಸರು: 'ನೀನು ಕಂಡಿದ್ದು ಯಾವ ರಾಮಚಂದ್ರನ್ನ? (ಮನಸ್ಸಿಗೆ ಗಲಿಬಿಲಿಯಾಗಿತ್ತು)

ರಾಮ: ಗುಡೀಲಿ ಪೂಜಿಸೋ ರಾಮಚಂದ್ರ.

ಜೋಯಿಸರು: ಆಹಾ! ರಾಮಚಂದ್ರ ಹೇಗಿದಾನೆ, ನನಗೂ ಹೇಳ್ತೀಯ?

ರಾಮ: ಅದು... ಅದು... ನಾ ಏಳಲಾರೆ. ಅಮಾಸೆ ಕತ್ತಲಲ್ಲಿ ಉಣ್ಣಿಮೆ ಚಂದ್ರಮ ಒಂದು ಕಣದಗಲ ಮೂಡಿ ಬಂದ್ರೆ ಎಂಗಾದೀತೋ ಅಂಗೆ! ಬೆಳಕೋ ಬೆಳಕು, ತಂಪಾಗಿ ತುಂಬಿರುತ್ತೆ, ಮೈ ಬೆವರಿ, ಕಣ್ಣು ಮಂಜಾಗಿ ನೀರು ಸುರಿದೀತು. ನಾ ಮೂಡ, ಎಂಗೆ ತಿಳಿಸಲಿ, ನೀವೇ ಏಳಿ.

ಜೋಯಿಸರು: ಅವನೇ ರಾಮಚಂದ್ರ ಅಂತ ನಿನಗೆ ಹೇಗೆ ತಿಳೀತು?

ರಾಮ: ಅವನೇ ಏಳಿರಬೇಕು.

ಜೋಯಿಸರು: ಯಾರಿಗಾದರೂ ಹೇಳಿದ್ದೀಯಾ, ಈ ವಿಷಯಾನ?

ರಾಮ: ಯಾರಿಗೂ ಏಳಿಲ್ಲ. ಅವರಿಗೆ ಏಳಿದರೆ, ಇವನೊಬ್ಬ ಮುಕ್ಕ, ರಾಮನಂತೆ ರಾಮ. ಇವನಿಗೆ ತಲೆ ಕೆಟ್ಟಿದೆ ಅಂದಾರು. ನೀವು ಓದಿದೋರು, ತಿಳಿದೋರು, ನೀವೇ ಏಳಿ, ಇದು ದಿಟವೋ ಸಟೆಯೋ?

ಜೋಯಿಸರು: ಆ ಹಾಳುಬಿದ್ದ ಗುಡಿಗೆ ಯಾಕೆ ಹೋಗ್ತೀಯ?

ರಾಮ: ಬೇರೆ ಗುಡಿಗೆ ನಮ್ಮನ್ನು ಸೇರಿಸೋದಿಲ್ಲ. ಈ ಗುಡೀಲಿ ಯಾರ ಅಡ್ಡೀನೂ ಇಲ್ಲ. ಮೇಷ್ಟ್ರು ಸ್ವಾಮಿರಾಯರು ಇಲ್ಲಿಗೆ ಓಗು ಅಂತ ಏಳಿದ್ದರು.

ಜೋಯಿಸರು: ಯಾರು ಸ್ವಾಮಿರಾಯರು? ಅವರು ನಿನಗೆ ಏನು ಹೇಳಿದ್ದರು?

ರಾಮ: ಅವರು ಮೇಷ್ಟು. ಊರ ಜನಕ್ಕೆ ಅಕ್ಷರ ಕಲ್ಸಿದೋರು. ಅವರನ್ನ 'ಮೂದೇವಿ ಮೇಷ್ಟ್ರು' ಅಂತಾ ಇದ್ದರು ಜನ. ಒಂದು ದಿನ ಕೆರೆಯೇರಿ ಮೇಲೆ ಕೂರ್ಸಿಕೊಂಡು ನನಗೆ ಏಳಿದರು: "ರಾಮನೇ ಕರ್ತ. ಅವನು ಎಲ್ಲಿ ನೂಕಿದ್ರೆ ಅಲ್ಲಿ ಬಿದ್ದಿರು. ತಿನ್ನೋ ಒತ್ತಿಗೆ ಅವನು ಏನು ಕಳಿಸಿದರೆ ಅದನ್ನೇ ತಿನ್ನು. ಎಲ್ಲಿ ಕೆಡವಿದ್ರೆ ಅಲ್ಲಿ ಮಲಗು. ಕಷ್ಟದಲ್ಲೂ ಸುಖದಲ್ಲೂ 'ರಾಮ ರಾಮ' ಅನ್ನು. ಅವನ್ನ ಎಲ್ಲಿ ಉಡುಕಿದ್ರೆ, ತಡಕಿದರೆ ಅಲ್ಲೇ ಸಿಕ್ಕಿಯಾನು. ನೀನು ರಾಮನ್ನ ನೋಡ್ತೀ" ಅಂತ ಏಳಿ, ಆ ಆಳ ಗುಡಿ ಕಡೆ ಬೆಟ್ಟುಮಾಡಿ ತೋರಿಸಿದರು.

ಜೋಯಿಸರು: ಸ್ವಾಮಿರಾಯರು ಎಲ್ಲಿದಾರೆ?

ರಾಮ: ಆಗ ಇಲ್ಲಿದ್ರು. ನಾನಿನ್ನೂ ಉಡುಗ. ಆಮೇಲೆ ಏನಾದ್ರೋ ಗೊತ್ತಿಲ್ಲ. ಜೋಯಿಸರು ದಿಟ-ಸಟೆಗಳ ಸುಳಿಯಲ್ಲಿ ಸಿಕ್ಕಿಕೊಂಡ ಮನಃಸ್ಥಿತಿಗೆ ಬಿದ್ದರು. ಯಾವ ಹುತ್ತದಲ್ಲಿ ಎಂಥ ಹಾವೋ ಎಂದುಕೊಂಡರು. ರಾಮನ ಕಣ್ಣೀರು ಆನಂದಬಾಷ್ಪವೇ ಇರಬೇಕು ಎಂದು ತೋರಿತು.

ತೋವಿನಕೆರೆ ಸೀತಾರಾಮ ಜೋಯಿಸ್, 'ನೆನಪಿನ ತರಂಗ', ಮಾನಸ ಪ್ರಕಾಶನ, ಬೆಂಗಳೂರು, ೧೯೮೯, ಪು. ೯೧-೯೭

೮೫. 'ಬೇರೆ ಏನನ್ನಾದರೂ ಮಾತಾಡುವುದಿದ್ದರೆ ಬನ್ನಿ'

ಕೆಂಗಲ್ ಹನುಮಂತಯ್ಯನವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭ. ಬೆಂಗಳೂರಿನ ಒಂದೇ ಬಡಾವಣೆಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳೂ ಮುನಿಸ್ವಾಮಪ್ಪ ಎಂಬ ಒಬ್ಬ ಗೃಹಸ್ಥರೂ ವಾಸಮಾಡುತ್ತಿದ್ದರು ದೇವುಡು ಅವರನ್ನು ಕಂಡರೆ ಮುನಿಸ್ವಾಮಪ್ಪನವರಿಗೆ ಅಭಿಮಾನ, ಗೌರವ. ಆಗಾಗ ಅವರ ಮನೆಗೆ ಇವರು ಬಂದು ಹೋಗುತ್ತಿದ್ದರು.

ಮುನಿಸ್ವಾಮಪ್ಪನವರಿಗೆ ಸೇರಿದ ಕೆಲವು ಎಕರೆಗಳಷ್ಟು ಸ್ಥಳವನ್ನು ನಗರಾಭಿವೃದ್ಧಿ ಮಂಡಳಿ ಸ್ವಾಧೀನಪಡಿಸಿಕೊಳ್ಳಲು ಯೋಚಿಸಿ ಆಜ್ಞೆಯನ್ನು ಹೊರಡಿಸಿತು. ಹಾಗೆ ಸ್ವಾಧೀನ ಪಡಿಸಿಕೊಂಡರೆ ದೊರೆಯುತ್ತಿದ್ದ ಪರಿಹಾರ ಸಾಂಕೇತಿಕವಾಗಿ ಇರುತ್ತಿತ್ತು. ತಮ್ಮ ಮಕ್ಕಳ ಜೀವನೋಪಾಯಕ್ಕೆ ಅದೊಂದೇ ಅವರಿಗೆ ಆಧಾರವಾಗಿದ್ದ ಕಾರಣ, ಅದನ್ನು ತಕ್ಕ ಕಾಲದಲ್ಲಿ ಚಿಕ್ಕ ಚಿಕ್ಕ ನಿವೇಶನಗಳನ್ನಾಗಿ ಮಾಡಿದರೆ ತಮಗೆ ಅನುಕೂಲವಾಗುವುದೆಂದು ಅವರು ನಂಬಿದ್ದರು.

ದೇವುಡು ಅವರಿಗೂ ಮುಖ್ಯಮಂತ್ರಿ ಕೆಂಗಲ್ ಅವರಿಗೂ ಒಳ್ಳೆಯ ಪರಿಚಯವಿದ್ದ ವಿಷಯ ಮುನಿಸ್ವಾಮಪ್ಪನವರಿಗೆ ತಿಳಿದಿತ್ತು. ಹೀಗಾಗಿ, ಅವರು ದೇವುಡು ಅವರನ್ನು

ಕಂಡು ತಮ್ಮ ಕಷ್ಟ ಹೇಳಿಕೊಂಡು, ಸಮಸ್ಯೆಯನ್ನು ವಿವರಿಸಿ, ಸಹಾಯಕ್ಕಾಗಿ ಪ್ರಾರ್ಥಿಸಿದರು; ಸರ್ಕಾರಿ ಪ್ರಕಟನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿದರೆ ತಮ್ಮ ಸಂಸಾರಕ್ಕೆ ದೊಡ್ಡ ಸಹಾಯವಾಗುವುದು ಎಂದರು.

ದೇವುಡು ಅವರು ತಾವು ಪ್ರಯತ್ನಿಸುವುದಾಗಿ ಮುನಿಸ್ವಾಮಪ್ಪನವರಿಗೆ ಆಶ್ವಾಸನೆ ನೀಡಿ, ಮುಖ್ಯಮಂತ್ರಿಗಳನ್ನು ಕಂಡು, ಅವರಿಗೆ ಸಂದರ್ಭವನ್ನು ವಿವರಿಸಿ, ಸಹಾಯ ಮಾಡುವಂತೆ ಕೇಳಿಕೊಂಡರು.

"ದೇವುಡು ಅವರು ತಮಗಾಗಿ ಏನನ್ನೂ ಕೇಳುತ್ತಿಲ್ಲ, ತಮ್ಮ ಪರಿಚಿತರ ಸಲುವಾಗಿ ಕೇಳಿಕೊಳ್ಳುತ್ತಿದ್ದಾರೆ" ಎಂಬುದನ್ನು ಮುಖ್ಯಮಂತ್ರಿಗಳು ಅರ್ಥಮಾಡಿಕೊಂಡರು. ಪ್ರಾರ್ಥನೆ ನ್ಯಾಯವಾಗಿಯೂ ಇದೆಯೆಂದು ಅವರಿಗೆ ಕಂಡಿರಬೇಕು. ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತಾಡಿ, ಸರ್ಕಾರಿ ಪ್ರಕಟನೆ ಹಿಂತೆಗೆದುಕೊಳ್ಳುವಂತೆ ಆದೇಶ ನೀಡಿದರು.

ಮುನಿಸ್ವಾಮಪ್ಪನವರಿಗೆ ಬಹಳ ಸಂತೋಷವಾಯಿತು. ಅವರು ದೇವುಡು ಅವರಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ಅನಂತರ ಅವರು ತಮ್ಮ ಯೋಜನೆಯಂತೆ ತಮ್ಮ ಸ್ವಾಧೀನದ ಸ್ಥಳವನ್ನು ಚಿಕ್ಕ ಚಿಕ್ಕ ನಿವೇಶನಗಳನ್ನಾಗಿ ಮಾಡಿ ಮಾರಿದರು. ಹಾಗೆ ಮಾಡುವಾಗ, ದೇವುಡು ಅವರ ಮನೆಗೆ ಒಂದು ದಿನ ಬಂದು, ಅವರೊಂದಿಗೆ, "ಶಾಸ್ತ್ರಿಗಳೇ, ನಿಮಗೆ ಇಬ್ಬರು ಗಂಡುಮಕ್ಕಳಿದ್ದಾರೆ; ಹೇಗೂ ನಾನು ನಿವೇಶನಗಳನ್ನು ಮಾರಿ ನಾಲ್ಕು ಕಾಸು ಸಂಪಾದಿಸುತ್ತಿದ್ದೇನೆ; ನಿಮ್ಮ ಇಬ್ಬರು ಮಕ್ಕಳ ಹೆಸರಿನಲ್ಲಿ ಒಂದೊಂದು ನಿವೇಶನ ಮಾಡಿಕೊಡುತ್ತೇನೆ; ನೀವು ಇದಕ್ಕೆ ದಯಮಾಡಿ ಒಪ್ಪಿಕೊಳ್ಳಬೇಕು" ಎಂಬುದಾಗಿ ವಿನಂತಿಸಿಕೊಂಡರು.

ದೇವುಡು ನರಸಿಂಹಶಾಸ್ತ್ರಿಗಳು ಇದಕ್ಕೆ ಏನು ಮಾಡಿದರೂ ಒಪ್ಪಲಿಲ್ಲ. ಈ ವಿಷಯದಲ್ಲಿ ಮುನಿಸ್ವಾಮಪ್ಪನವರು ಮತ್ತೆ ಮತ್ತೆ ಒತ್ತಾಯ ಮಾತಾಡಿದಾಗ, ಒಂದು ಸಲ, "ಮುನಿಸ್ವಾಮಪ್ಪನವರೇ, ನನ್ನ ಮಕ್ಕಳಿಗೆ, ನನಗೆ ಸೈಟು ಪಡೆಯಲು ನಾನು ಈ ಕೆಲಸ ಮಾಡಲಿಲ್ಲ. ನೀವು ಈ ವಿಷಯವಾಗಿ ನನ್ನನ್ನು ಬಲವಂತಪಡಿಸಬಾರದು. ಇನ್ನು ಮುಂದೆ ಈ ವಿಷಯ ಬಿಟ್ಟು ಬೇರೆ ಏನನ್ನಾದರೂ ಮಾತಾಡುವುದಿದ್ದರೆ ನಮ್ಮ ಮನೆಗೆ ಬನ್ನಿ" ಎಂಬುದಾಗಿ ಸ್ವಲ್ಪ ನಿಷ್ಠುರವಾಗಿಯೇ ಹೇಳಿಬಿಟ್ಟರು.

ಮುನಿಸ್ವಾಮಪ್ಪನವರಿಗೆ ಇದರಿಂದ ನಿರಾಸೆಯಾಯಿತು. ಆದರೆ ಅವರು ಮುಂದೆ ಏನೂ ಹೇಳುವಂತಿರಲಿಲ್ಲ.

ಸಂ. ಹೊ. ರಾ. ಸತ್ಯನಾರಾಯಣರಾವ್, ಗಂಗಾಧರ ದೇವುಡು, 'ದೇವುಡು ದರ್ಶನ', ಗಂಗಾಧರ ದೇವುಡು, ಬೆಂಗಳೂರು-೭೮, ಪು. ೧೧೭-೧೮.

೮೬. 'ಮಕ್ಕಳಿಗೆಲ್ಲಾ ಟಿಕೆಟ್ಟು'

ತಮ್ಮವರ ನಡುವೆ ದೊಡ್ಡ ಮನುಷ್ಯರೆಂದೂ ಉಪಕಾರಿಗಳೆಂದೂ ಹೆಸರಾಗಿದ್ದವರು ಬಾಳೆಹಳ್ಳಿ ರಂಗೇಗೌಡರು. ಸ್ವಂತ ಕಾರಿತ್ತು, ಆ ಕಾರು ಬೇರೆಯವರ ಉಪಯೋಗಕ್ಕೇ ಹೆಚ್ಚು ಬಳಕೆಯಾಗುತ್ತಿತ್ತು.

ಒಂದು ಸಲ ರಂಗೇಗೌಡರು ಬಾಳೆಹಳ್ಳಿ ಹ್ಯಾಂಡ್ ಪೋಸ್ಟ್‌ನಿಂದ ಎಲ್ಲಿಗೋ ಹೊರಡಲು ಬಸ್ ಹತ್ತಿದರು. ಬಸ್ ಒಂದು ಕಿಲೋಮೀಟರ್ ಪ್ರಯಾಣಿಸಿದ ಮೇಲೆ ಒಂದು ಕಡೆ ೧೦-೧೫ ಜನ ಮಕ್ಕಳು ಬಸ್ಸಿಗಾಗಿ ಕಾಯುತ್ತಿದ್ದುದು ಕಂಡಿತು. ಅವರೆಲ್ಲ ಕೈ ತೋರಿಸಿದರೂ ಚಾಲಕ ಬಸ್ ನಿಲ್ಲಿಸಲಿಲ್ಲ. ಅದು ಮುಂದೆ ಸಾಗಿತು.

ಗೌಡರು ಬಸ್ ನಿಲ್ಲಿಸುವಂತೆ ಚಾಲಕನಿಗೆ ಹೇಳಿದರು. ಅವರು ಗಣ್ಯರಾದ್ದರಿಂದ ಚಾಲಕ ಬಸ್ ನಿಲ್ಲಿಸಿದ. ಆ ವೇಳೆಗೆ ಬಸ್ ೨ ಫರ್ಲಾಂಗ್ ಮುಂದೆ ಬಂದಿತ್ತು. ಮಕ್ಕಳು ಬಸ್ಸು ನಿಂತದ್ದು ನೋಡಿ ಹಿಂದಿನಿಂದ ಓಡೋಡಿ ಬರುತ್ತಿದ್ದರು. ಗೌಡರು ಬಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಹೇಳಿದರು. "ಇದು ಷಟ್ಲ್ ಬಸ್ಸು, ಕೈ ತೋರಿಸಿದ ಕಡೆ ಬಸ್ ನಿಲ್ಲಿಸಬೇಕಪ್ಪ" ಎಂದು ಕಂಡಕ್ಟರ್‌ಗೆ ಹೇಳಿದರು. ಅವನು ಒಪ್ಪಲಿಲ್ಲ, ಬದಲಾಗಿ ಗೌಡರ ಮೇಲೆ ರೇಗಿದ.

ಈಗ ಇತರ ಪ್ರಯಾಣಿಕರು ಗಲಾಟೆ ಮಾಡಲು ಶುರು ಮಾಡಿದರು. ಕಂಡಕ್ಟರನನ್ನು ಹೊಡೆಯಲು ಮುನ್ನುಗ್ಗಿದರು. ಆಗ ಗೌಡರು ಮಧ್ಯೆ ಪ್ರವೇಶಿಸಿ ಅವರನ್ನು ಸಮಾಧಾನ ಪಡಿಸಿದರು. ಮಕ್ಕಳನ್ನೆಲ್ಲಾ ಬಸ್ಸಿಗೆ ಹತ್ತಿಸಿ ಕೊಂಡದ್ದಾಯಿತು. ಕಂಡಕ್ಟರ್ ಕೈಗೆ ೫೦ ರೂ. ನೋಟು ಕೊಟ್ಟು ಮಕ್ಕಳಿಗೆಲ್ಲಾ ಟಿಕೆಟ್ಟು ಕೊಡುವ ಹಾಗೆ ತಿಳಿಸಿದರು, ಗೌಡರು.

ಎಲ್ಲರಿಗೂ ಟಿಕೆಟ್ಟು ಕೊಟ್ಟದ್ದಾಯಿತು. ಟಿಕೆಟ್ ಕೊಟ್ಟ ಮೇಲೆ ೧೩ ರೂ. ಚಿಲ್ಲರೆ ಉಳಿಯಿತು. ಕಂಡಕ್ಟರ್ ಗೌಡರಿಗೆ ಹಿಂದಿರುಗಿಸಲು ಹೋದನು. ಆಗ ಗೌಡರು "ಇಲ್ಲ, ನೀವೇ ಇಟ್ಟುಕೊಳ್ಳಿ; ನಿಮ್ಮ ಮಕ್ಕಳಿಗೆ ಏನಾದರೂ ತಿಂಡಿ ತೆಗೆದುಕೊಂಡುಹೋಗಿ" ಎಂದು ಹೇಳಿದರು.

ಮುಂದೆ ಬಸ್ಸು ವಸ್ತಾರೆ ಬಸ್ ನಿಲ್ದಾಣಕ್ಕೆ ಬಂತು. ಕಂಡಕ್ಟರ್ ಗೌಡರಲ್ಲಿ ಕ್ಷಮೆ ಕೋರಿದ. "ಇರಲಿ ಬಿಡಿ; ಆದರೆ ಪ್ರಯಾಣಿಕರಿಗೆ ಯಾವತ್ತೂ ತೊಂದರೆ ಕೊಡಬೇಡಿ, ಅಪ್ಪ" ಎಂದು ಹೇಳಿ ಅವನನ್ನು ಕಳಿಸಿಕೊಟ್ಟರು.

ಸಂ. ಚಂದ್ರಯ್ಯ ನಾಯ್ಡು, ಬಾಳೆಹಳ್ಳಿ ರಂಗೇಗೌಡರು, ಹಾಂದಿ ಅಂಚೆ, ಚಿಕ್ಕಮಗಳೂರು ತಾ. ೧೯೮೮, ಪು. ೮೦-೮೧

೮೭. 'ಮಗು ಬದುಕಲಿ, ಬೆಳೆಯಲಿ'

ಬಿ. ಎಂ. ಶ್ರೀಕಂಠಯ್ಯನವರು ಹೊಸಗನ್ನಡ ನವೋದಯದ ಪ್ರವರ್ತಕರೆಂದು ಪ್ರಸಿದ್ಧರಾದವರು. ಅವರು ಸ್ವತಃ ಹೊಸಗನ್ನಡ ಭಾಷೆಯನ್ನು ಬಳಸಿ ಕವಿತೆಗಳನ್ನು ರಚಿಸಿದರು, ಅಂತಹ ರೀತಿಯಲ್ಲಿ ಕವಿತೆಗಳನ್ನು ಬರೆಯಲು ಯುವಕವಿಗಳನ್ನು ಪ್ರೋತ್ಸಾಹಿಸಿದರು. ಅವರು ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರಾಗಿದ್ದುದು ಕಾರಣವಾಗಿ, ಒಮ್ಮೆ ಧಾರವಾಡದಲ್ಲಿ ಕೆ. ಇ. ಬೋರ್ಡ್ ಆರ್ಟ್ಸ್ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದಾಗ ಒಬ್ಬ ವಿದ್ಯಾರ್ಥಿ ಇಂಗ್ಲಿಷ್ ಭಾಷೆಯಲ್ಲಿ ಕೆಲವು ಕವಿತೆಗಳನ್ನು ಬರೆದು ಅವರಿಗೆ ಅವನ್ನು ಅಭಿಪ್ರಾಯಕ್ಕಾಗಿ ತೋರಿಸಿದ. ಹಾಗೆ ತೋರಿಸಿದಾಗ ಅಲ್ಲಿಯೇ ಉದ್ಯೋಗಿಗಳಾಗಿದ್ದ ರಾ. ಯ. ಧಾರವಾಡಕರ ಅವರೂ ಇದ್ದರು. ಅವರು ಕನ್ನಡ, ಇಂಗ್ಲಿಷ್ ಎರಡು ಪಾಠಗಳನ್ನೂ ಮಾಡುತ್ತಿದ್ದ ಅಧ್ಯಾಪಕರಾಗಿದ್ದರು.

ಶ್ರೀಕಂಠಯ್ಯನವರು ಏನೋ ಒಬ್ಬ ದೊಡ್ಡ ಕವಿಯ ಕವಿತೆಗಳನ್ನು ಓದುವವರ ಹಾಗೆ ಆ ವಿದ್ಯಾರ್ಥಿ ಬರೆದ ಎಲ್ಲ ಕವಿತೆಗಳನ್ನೂ ಒಂದೂ ಬಿಡದ ಹಾಗೆ ಓದಿದರು. ಬಳಿಕ, "ಪರವಾ ಇಲ್ಲ; They are very fine. Keep it up. You have a very good promise" ಎಂದು ಹೇಳಿ ಅವನ ಬೆನ್ನು ತಟ್ಟಿದರು. ಆ ವಿದ್ಯಾರ್ಥಿ ಸಂತೋಷಪಟ್ಟು ಹೊರಟುಹೋದನು.

ಆ ವಿದ್ಯಾರ್ಥಿ ಅತ್ತ ಹೋಗುತ್ತಲೂ ಧಾರವಾಡಕರರು ಶ್ರೀಯವರಿಗೆ ಹೇಳಿದರು: "ಸರ್, ನಿಜವಾಗಿಯೂ ಆ ಕವಿತೆಗಳು ಅಷ್ಟು ಚೆನ್ನಾಗಿದ್ದವೇ? ಆ ಕವಿತೆಗಳನ್ನು ಅವನು ನನಗೂ ತೋರಿಸಿದ್ದ. ಏಕೋ ಅವು ನನ್ನ ಮನಸ್ಸಿಗೆ ಹಿಡಿಸಿರಲಿಲ್ಲ. ನೀವು ತುಂಬಾ ಮೆಚ್ಚಿಕೊಂಡಿರಲ್ಲಾ". ಅವರ ಗಮನಕ್ಕೆ ಆ ಪದ್ಯಗಳನ್ನು ಆ ವಿದ್ಯಾರ್ಥಿ ಹಿಂದೊಮ್ಮೆ ತಂದಾಗ, ಅವುಗಳಲ್ಲಿ ಹಾಗೂ ಹೀಗೂ ಪ್ರಾಸ ತಂದಿದ್ದರೂ ಭಾವ ರಸಗಳೇನೂ ಇರಲಿಲ್ಲವೆಂಬುದು ಅವರ ಅಭಿಮತವಾಗಿತ್ತು.

ಶ್ರೀಕಂಠಯ್ಯನವರು ಧಾರವಾಡಕರರಿಗೆ ಹೀಗೆ ಉತ್ತರವಿತ್ತರು: "ಇಲ್ಲಿ ನೋಡಿ ಧಾರವಾಡಕರ್, ನಿಮಗೊಂದು ಮಾತು ಹೇಳುತ್ತೇನೆ. ಬರೆಯುವವರ ಬಗ್ಗೆ ನಾವು ಕೆಟ್ಟ ಮಾತಾಡಬಾರದು; ನಾಲ್ಕು ಒಳ್ಳೆಯ ಮಾತು ಆಡೋಣ. ಆ ವ್ಯಕ್ತಿಯಲ್ಲಿ ನಿಜವಾದ ಅಂತಃಸತ್ತ್ವವಿದ್ದರೆ ಅವನು ತನ್ನ ಪ್ರಯತ್ನ ಮುಂದುವರಿಸಿ ಹೆಚ್ಚು ಹೆಚ್ಚು ಬರೆಯುತ್ತಾನೆ; ಇಲ್ಲವಾದರೆ ಅಲ್ಲಿಯೇ ಕಮರಿಹೋಗುತ್ತಾನೆ. 'ಹುಟ್ಟಿದ ಮಗುವಿನ ಜಾತಕ ಬರೆ' ಎಂದರೆ, ನಾವು ಅದರ ಮರಣದ ದಿನ ಹೇಳುವುದೇ? ಮಗು ಬದುಕಲಿ, ಬೆಳೆಯಲಿ; ದೇವರ ಕೃಪೆಯಿದ್ದರೆ ಅದು ಘನವಂತ ಆದೀತು".

ರಾ.ಯ. ಧಾರವಾಡಕರ ಅವರಿಗೆ ಆಗ ತೋರಿತು: "ಎಂಥ ಅಮೋಘ ಉಕ್ತಿಗಳು,

ಇವು. ಯಾರಾದರೂ ಸಾಯುವುದಾದರೆ, ಅವರು ನಮ್ಮ ಕೈಯಿಂದ ಏಕೆ ಸಾಯಬೇಕು? ಸತ್ತ್ವವಿದ್ದ ಬೀಜ ಎಂಥ ಕಂಟಿಯಲ್ಲಿ ಬಿದ್ದರೂ ಫಲಿಸುತ್ತದೆ".

ಸಂ. ಜಿ. ಎಸ್. ಶಿವರುದ್ರಪ್ಪ, "ಶ್ರೀನಿಧಿ" (ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ನೆನಪಿನ ಸಂಪುಟ), ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯, ೧೯೮೫, ಪು. ೧೦೯-೧೧೦

೮೮. 'ಮದುವೆಗೆ ಒಪ್ಪಿಗೆ ಕೊಡಬಹುದು'

ಶೃಂಗೇರಿಯ ಜಗದ್ಗುರು ಅಭಿನವ ವಿದ್ಯಾತೀರ್ಥರ ಬಳಿಗೆ ಒಮ್ಮೆ ವೃದ್ಧದಂಪತಿಗಳು ದರ್ಶನಕ್ಕೆ ಬಂದರು. ಅವರು ಗುರುಗಳಿಗೆ ಪರಿಚಿತರು, ಆಪ್ತಶಿಷ್ಯರೇ ಆಗಿದ್ದವರು. ಅವರನ್ನು ಯಾವುದೋ ಚಿಂತೆ ಕಾಡುತ್ತಿತ್ತು. ಅದನ್ನು ಗುರುತಿಸಿ ಗುರುಗಳು ಅವರನ್ನು ಸಮಾಧಾನಪಡಿಸಿ, ವಿಷಯವೇನೆಂದು ಪ್ರಶ್ನಿಸಿದರು.

ಆ ದಂಪತಿಗಳ ಪುತ್ರ ವಿದ್ಯಾವಂತ, ಒಳ್ಳೆಯ ಉದ್ಯೋಗದಲ್ಲಿದ್ದವನು. ತಂದೆ ತಾಯಿಗಳ ಮೇಲೆ ಗೌರವವಿದ್ದವನಾದರೂ ತನ್ನ ಮದುವೆ ವಿಷಯವನ್ನು ಪ್ರಸ್ತಾಪಿಸಿದರೆ ಒಪ್ಪದೆ ಮುಂದೂಡುತ್ತಿದ್ದನು. ಕೊನೆಗೆ ಒತ್ತಾಯಿಸಲಾಗಿ, ತಾನು ಒಬ್ಬ ಹುಡುಗಿಯನ್ನು ಪ್ರೀತಿಸಿರುವುದಾಗಿಯೂ ಆಕೆಯೂ ಒಪ್ಪಿರುವುದಾಗಿಯೂ ಸಂಕೋಚದಿಂದ ತಿಳಿಸಿದನು. ಆ ಕನ್ಯೆಯ ಕುಲ ಗೋತ್ರಗಳು, ಸಾಂಸ್ಕೃತಿಕ ಹಿನ್ನೆಲೆ ಇವನ್ನೆಲ್ಲ ವಿಚಾರಮಾಡುವಾಗ ಮಗನು ತಿಳಿಸಿದ ವಿವರಗಳು ಅವರಿಗೆ ಸಮಾಧಾನಕರವಾಗಿ ಕಾಣಲಿಲ್ಲ. ಕನ್ಯೆಯ ಕಡೆಯವರು ಕೊಂಕಣಸ್ಥರು, ತಮಗೆ ಸ್ವಜನವಲ್ಲ, ಪಂಗಡ ಬೇರೆ, ಸಂಪ್ರದಾಯ ಬೇರೆ ಎಂದು ತಿಳಿಯಿತು. ಹೀಗಾಗಿ ತಂದೆ-ಮಗ ಇವರ ನಡುವೆ ಭಿನ್ನಾಭಿಪ್ರಾಯವಿತ್ತು.

ಆ ಕನ್ಯೆಗಿಂತ ಎಲ್ಲ ವಿಧದಿಂದಲೂ ಉತ್ತಮವಾದ ಸಂಬಂಧವನ್ನೇ ತಾವು ಹುಡುಕಿ ತರುವುದಾಗಿ ತಂದೆ ತಾಯಿಗಳು ಎಷ್ಟು ವಿಧದಲ್ಲಿ ಹೇಳಿದರೂ ಮಗ ಕೇಳದೆ ಮದುವೆಯಾದರೆ ತಾನು ಇಷ್ಟಪಟ್ಟ ಕನ್ಯೆಯನ್ನೇ ಆಗಬೇಕು, ಇಲ್ಲವಾದರೆ ಮದುವೆಯೇ ಬೇಡ ಎಂದು ಅಖೈರುತೀರ್ಮಾನ ಹೇಳಿಬಿಟ್ಟಿದ್ದನು.

ಅಭಿನವ ವಿದ್ಯಾತೀರ್ಥರು ಸಾವಧಾನವಾಗಿ ತಂದೆಯ ಮಾತನ್ನು ಆಲಿಸಿದರು. ಬಳಿಕ ಈ ರೀತಿ ತಮ್ಮ ಸಮಾಧಾನಹೇಳಿದರು:

"ರಾಯರೇ, ನಮ್ಮ ದೇಶದ ಒಂದೊಂದು ಪ್ರಾಂತದಲ್ಲಿಯೂ ಬ್ರಾಹ್ಮಣರು ಇದ್ದಾರೆಯಷ್ಟೆ. ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಬ್ರಾಹ್ಮಣರು ಅಧ್ಯಯನಮಾಡುವ ವೇದ ಶಾಸ್ತ್ರಗಳು ಸರ್ವತ್ರ ಒಂದೇ ಆಗಿದೆ; ಎಲ್ಲರೂ ಜಪಮಾಡುವ ಗಾಯತ್ರಿಮಂತ್ರ ಒಂದೇ ಆಗಿದೆ. ಹೀಗಿರುವಾಗ ಬ್ರಾಹ್ಮಣರ ನಡುವೆ ಏಕೆ ಭೇದಭಾವನೆ, ವ್ಯತ್ಯಾಸದ ದೃಷ್ಟಿ?"

ಮತ್ತೆ ಸ್ವಾಮಿಗಳು ಮುಂದುವರಿಸಿದರು:

"ನಾವು ಆಡುವ ಭಾಷೆಗಳು ಬೇರೆ ಬೇರೆ ಇರಬಹುದು. ನೀವು ಕನ್ನಡ ಮಾತಾಡುತ್ತೀರಿ, ಅವರು ಕೊಂಕಣಿ ಮಾತಾಡುತ್ತಾರೆ. ನಮ್ಮ ಮಠದಲ್ಲಿಯೇ ಇರುವ ನೌಕರರು ಕನ್ನಡ ತೆಲುಗು ತುಳು ತಮಿಳು ಭಾಷೆಗಳನ್ನು ಆಡುತ್ತಾರೆ. ದೇಶಾಚಾರ ಕುಲಾಚಾರಗಳಲ್ಲಿ ನಿಮ್ಮನಿಮ್ಮ ನಡುವೆ ಸ್ವಲ್ಪ ಭಿನ್ನತೆ ಇರಬಹುದು. ಮೂಲತಃ ಎಲ್ಲಾ ಬ್ರಾಹ್ಮಣರೂ ಗಂಗಾ ಯಮುನಾ ತೀರಪ್ರದೇಶಗಳಿಂದ ಬಂದವರು ತಾನೇ? ಬ್ರಾಹ್ಮಣರಲ್ಲಿಯೇ ಭಿನ್ನತೆಯನ್ನು ಹುಡುಕುವುದೂ ಕಾಣುವುದೂ ಬೇಡ. ಆ ಹುಡುಗಿಯ ಕಡೆಯವರ ಆಚಾರ ವಿಚಾರಗಳಲ್ಲಿ ನಿಮಗೆ ಅನುಮಾನವಿದ್ದರೆ, ನಿಮ್ಮ ಆಚಾರ ವಿಚಾರಗಳನ್ನೂ ಸಂಪ್ರದಾಯಗಳನ್ನೂ ಅವರಿಗೆ ತಿಳಿಸಿಕೊಡಿ. ಅವರ ಆಹಾರವಿಷಯದಲ್ಲಿ ನಿಮಗೆ ಸಂಶಯವಿದ್ದರೆ, ನಿಮ್ಮ ಆಹಾರನಿಯಮಗಳನ್ನು ಅವರಿಗೆ ಸ್ಪಷ್ಟವಾಗಿ ಹೇಳಿಬಿಡಿ. ಆ ಕನ್ಯೆಯ ಮನೆತನ, ಸಾಂಸ್ಕೃತಿಕ ಹಿನ್ನೆಲೆ ಇವೆಲ್ಲಾ ನಿಮಗೆ ಸಮಾಧಾನಕರವಾಗಿದ್ದಲ್ಲಿ ನೀವು ಮದುವೆಗೆ ಒಪ್ಪಿಗೆ ಕೊಡಬಹುದು. ನೀವು ಒಂದು ಪಕ್ಷ ಒಪ್ಪಲಿಲ್ಲ ಎನ್ನಿ. ಆಗ ನಿಮ್ಮ ಮಗ ಅವಿವಾಹಿತನಾಗಿಯೇ ಉಳಿಯುತ್ತಾನೆ. ಅದರಿಂದ ನಿಮಗೆ ಶಾಂತಿ ಸಮಾಧಾನಗಳು ಸಿಕ್ಕುತ್ತವೆಯೇ? ಆ ಕನ್ಯೆ ನಿಮ್ಮ ಮನೆಗೆ ಬಂದ ನಂತರ ನಿಮ್ಮ ಆಚಾರ ಸಂಪ್ರದಾಯಗಳನ್ನು ತಾನೇ ರೂಢಿಸಿಕೊಳ್ಳುತ್ತಾಳೆ".

ಈ ಸಲಹೆ ಆ ವೃದ್ಧದಂಪತಿಗಳಿಗೆ ಸಮಾಧಾನ ತಂದಿತು.

ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ, 'ಗುರು ಶ್ರೀ ಅಭಿನವ ವಿದ್ಯಾತೀರ್ಥರು: ನಾ ಕಂಡಂತೆ', ವಿದ್ಯಾಶಂಕರ ಪ್ರಕಾಶನ, ಮೈಸೂರು, ೫೨೦೦೨೪, ಪು. ೧೧೨-೧೩

೮೯. 'ಮನುಷ್ಯನಿಗೆ ಕೃತಜ್ಞತೆ ಎಂಬುದೇ ಬೇಡವೇ?'

೧೯೭೧ರ ಒಂದು ದಿನ, ರಾತ್ರಿ ೮ ಗಂಟೆಯ ಸಮಯ. ಆ ದಿನ ನಾಗಪಂಚಮಿ. ವಿ. ಸೀತಾರಾಮಯ್ಯನವರ ಮನೆಗೆ ಅವರನ್ನು ಕಾಣಲು ಎಸ್. ಆರ್. ರಾಮಸ್ವಾಮಿ ಹೋಗಿದ್ದರು. ಬಂದ ಅತಿಥಿಗೆ ಕಡುಬಿನ ಉಪಾಹಾರವಾಯಿತು. ಆದರೆ ವಿ.ಸೀ. ಅವರು ಅಂದು ಗೆಲುವಾಗಿ ಕಾಣುತ್ತಿರಲಿಲ್ಲ. ರಾಮಸ್ವಾಮಿಗಳು ಕಾರಣವನ್ನು ವಿಚಾರಿಸಿದರು.

ಯಾವುದೋ ಬಾಬಿನಲ್ಲಿ ವಿ.ಸೀ. ಅವರ ಮಕ್ಕಳಿಗೆ ಮನೆಗೆಲಸದ ಹೆಂಗಸಿನ ವಿಷಯದಲ್ಲಿ ಏನೋ ಅಸಮಾಧಾನವುಂಟಾಗಿತ್ತು. ಅವರು "ನೀನು ಇನ್ನು ಮೇಲೆ ಕೆಲಸಕ್ಕೆ ಬರಬೇಡ, ಹೊರಟುಹೋಗು" ಎಂದು ಹೇಳಿದ್ದರು. ಅವಳು ಕೂಡ, "ಆಯಿತು, ಹೋಗುತ್ತೇನೆ" ಎಂದು ಹೇಳಿ ಗೇಟಿನ ಕಡೆಗೆ ಹೆಜ್ಜೆ ಹಾಕಿದಳು.

ಈ ಅವಾಂತರ ವಿ.ಸೀ. ಅವರ ಗಮನಕ್ಕೆ ಬಂತು. ಅವರು ಹೊರಗೆ ಬಂದು ವಿಷಯ ಏನೆಂದು ಕೇಳಿದರು. ವಿಷಯ ಹೀಗೆ ಎಂದು ತಿಳಿದ ಮೇಲೆ ಕೆಲಸದಾಕೆಯನ್ನು ಸಮಜಾಯಿಷಿ ಮಾಡಿ ಹಿಂದಕ್ಕೆ ಕರೆತಂದರು. "ನಾನು ಇಲ್ಲಿರುವ ವರೆಗೆ ನೀನು ನಮ್ಮ ಮನೆಯನ್ನು ಬಿಟ್ಟು ಹೋಗತಕ್ಕದ್ದಲ್ಲ. ಯಾರು ಏನೇ ಹೇಳಲಿ. ನೀನು ೧೫ ವರ್ಷಗಳಿಂದ ನಮ್ಮ ಮನೆಯಲ್ಲಿ ಪರಿಚಾರಿಕೆ ಮಾಡಿದ್ದೀಯ. ಬೇರೆಯವರಿಗೆ ಬೇಡವಾದರೆ, ಅವರು ಬೇರೆ ಏರ್ಪಾಟು ಮಾಡಿಕೊಳ್ಳಲಿ. ನನಗಾಗಿ ನೀನು ಇಲ್ಲಿ ಇರತಕ್ಕದ್ದು."

ಆಮೇಲೆ ಮಕ್ಕಳನ್ನು ಕರೆದು ಹೇಳಿದ್ದರು: "೧೫ ವರ್ಷಗಳಿಂದ ಕೆಲಸ ಮಾಡಿಕೊಂಡಿರುವ ಈ ಹೆಂಗಸನ್ನು ನಿಂತ ಕಾಲ ಮೇಲೆ 'ಹೊರಡು' ಎಂದು ಹೇಳಲು ನಿಮಗೇನು ಅಧಿಕಾರ? ನಿಮ್ಮ ಫ್ಯಾಕ್ಟರಿಯಲ್ಲಿ ನಿಮ್ಮನ್ನು ಹಾಗೆಯೇ 'ಹೋಗು' ಎಂದರೆ ನೀವು ಸುಮ್ಮನೆ ಹೋಗುತ್ತೀರೇನು? ಫ್ಯಾಕ್ಟರಿಯಲ್ಲಾದರೆ ನಿಮಗೆ ಎಲ್ಲಾ ಸೌಕರ್ಯಗಳೂ ಬೇಕು. ನೀವು ಮಾಡುವ ಮಹಾ ಕೆಲಸಕ್ಕೆ ಬೋನಸ್ ಬೇಕು. ಆಸ್ಪತ್ರೆ ಸೌಲಭ್ಯ ಬೇಕು. ಕೆಲಸದಿಂದ ತೆಗೆದು ಹಾಕುವಾಗ ಎಷ್ಟೋ ತಿಂಗಳ ನೋಟೀಸ್ ಕೊಡಬೇಕು. ರಿಟ್ರೆಂಚ್ ಮೆಂಟ್ ಕಾಂಪೆನ್‌ಸೇಷನ್ ಬೇಕು. ಯಥೇಚ್ಛವಾಗಿ ರಜೆಗಳು ಬೇಕು. ನಿಮಗೆ ನಿಮ್ಮ ಫ್ಯಾಕ್ಟರಿಯಲ್ಲಿ ಕೊಡುವ ಸೌಕರ್ಯದಲ್ಲಿ ಹತ್ತರಲ್ಲಿ ಒಂದು ಭಾಗದಷ್ಟಾದರೂ ನೀವು ಈ ಕೆಲಸದ ಹೆಂಗಸಿಗೆ ಕೊಟ್ಟಿದ್ದಿರೇನು? ಅವಳು ನಿಮಗಾಗಿ ಎಷ್ಟು ದುಡಿದಿದ್ದಾಳೆ! ಹಗಲೆನ್ನದೆ ರಾತ್ರಿಯೆನ್ನದೆ, ಭಾನುವಾರವೆನ್ನದೆ ಹಬ್ಬವೆನ್ನದೆ ಅಂಗಡಿ ಸಾಮಾನು ತರುವುದು, ಹಾಲು ಮೊಸರು ತರಕಾರಿ ತರುವುದು, ಪಾತ್ರೆ ತೊಳೆಯುವುದು, ಮನೆ ಗುಡಿಸುವುದು ಎಲ್ಲಾ ಕೆಲಸವನ್ನೂ ತನ್ನ ಕೆಲಸ ಎನ್ನುವಂತೆ ಮಾಡುತ್ತಾಳೆ. ಅವಳ ಶ್ರಮಕ್ಕಾಗಿ ನೀವು ಕೊಡುವ ಪ್ರತಿಫಲ ಇಷ್ಟೇನೆ? ಮನುಷ್ಯನಿಗೆ ಕೃತಜ್ಞತೆ ಎಂಬುದೇ ಬೇಡವೇ....?"

ವಾಸ್ತವವಾಗಿ ವಿ.ಸೀ. ಅವರ ಮಕ್ಕಳು ಕಠಿನರೇನಲ್ಲ. ದೈನಂದಿನ ಒತ್ತಡಗಳ ಒಂದು ಕ್ಷಣಿಕ ಆವೇಶ ಆ ಘಟನೆಗೆ ಎಡೆಮಾಡಿತ್ತು. ವಿ.ಸೀ. ಗುಡುಗಾಡಿ ಮುಗಿದ ಮೇಲೆ, ಮತ್ತೆ ಎಲ್ಲ ಸುಮುಖವಾಯಿತು.

ಸಂ. ಎಲ್. ಎಸ್. ಶೇಷಗಿರಿ ರಾವ್, ಎಂ. ವಿ. ವೆಂಕಟೇಶ ಮೂರ್ತಿ, ವಿ.ಸೀ. 'ನೂರರ ನೆನಪು', ವಿ.ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ), ರಾಜೀವನಗರ, ಬನಶಂಕರಿ ೩ನೆಯ ಹಂತ, ಬೆಂಗಳೂರು-೮೫, ಪು. ೩೦೬-೩೦೭

೯೦. 'ಮನೆತನಕ್ಕೆ ಕೆಟ್ಟಹೆಸರು ತರಬಾರದು'

ಚಿಕ್ಕಮಗಳೂರು ಜಿಲ್ಲೆಯ ಬಾಳೆಹಳ್ಳಿ ರಂಗೇಗೌಡರು (೧೯೧೮-೮೮) ತಮ್ಮ ಕಾಲದ ಒಬ್ಬ ಪರೋಪಕಾರಿಗಳಾದ ದೊಡ್ಡ ಮನುಷ್ಯರೆಂದು ಎಲ್ಲರಿಂದಲೂ ಪ್ರಶಂಸೆಗೆ ಪಾತ್ರರಾಗಿದ್ದವರು.

ಒಂದು ದಿನ ರಂಗೇಗೌಡರ ಮನೆಗೆ ಅಪರಿಚಿತನಾದ ಒಬ್ಬ ಬಂದನು. ಅವರಿಗೆ ಪರಿಚಯವಿದ್ದ ಪಕ್ಕದ ಹಳ್ಳಿಯ ಗೌಡರೊಬ್ಬರು ತನ್ನನ್ನು ಕಳಿಸಿರುವರೆಂದೂ ತಮ್ಮ ಮನೆಯ ಮದುವೆಗಾಗಿ ಒಡವೆಗಳನ್ನು ಕೊಟ್ಟಿರಬೇಕೆಂದು ಅವರು ಸಂದೇಶ ಕಳಿಸಿರುವರೆಂದೂ ಅವರಿಗೆ ತಿಳಿಸಿದನು. ಮರುಮಾತಾಡದೆ ಒಡವೆಗಳನ್ನು ಕೊಟ್ಟು ಕಳಿಸಿದರು. ಆದರೆ ಮದುವೆ ಕಾರ್ಯಮುಗಿದು ತಿಂಗಳಾದರೂ ಒಡವೆಗಳು ವಾಪಸಾಗಲಿಲ್ಲ. ಈಗ ಗೌಡರು ಒಡವೆಗಳಿಗಾಗಿ ಪಕ್ಕದ ಹಳ್ಳಿಯ ಗೌಡರ ಮನೆಗೆ ಹೇಳಿ ಕಳಿಸಿದರು.

ವಿಚಾರ ತಿಳಿಯುತ್ತಲೇ ಆ ಮನೆಯವರಿಗೆ ಗಾಬರಿಯಾಯಿತು. ಸ್ನೇಹಿತರು ಪರಿಚಯವಿರುವ ನಾಲ್ಕಾರು ಜನರನ್ನು ರಂಗೇಗೌಡರ ಹತ್ತಿರ ಉಪಾಯಾಂತರದಿಂದ ಕರೆದುಕೊಂಡು ಬಂದು, ಅವರಲ್ಲಿ ಒಡವೆ ಕೊಂಡೊಯ್ದವನನ್ನು ಗುರುತಿಸಲು ಸಾಧ್ಯವೇ ಎಂದು ಅವರನ್ನು ಕೇಳಿದರು. ಗೌಡರು 'ಯಾರೂ ಅಲ್ಲ' ಎಂದರು.

ಹೇಗೋ ಸ್ನೇಹಿತರಿಗೆ ತಮ್ಮ ಒಬ್ಬ ಬಂಧುವಿನ ಮೇಲೆ ಸಂಶಯ ಬಂದಿತು. ಅವನನ್ನೂ ಮೆಲ್ಲಗೆ ಉಪಾಯಮಾಡಿ ಬಾಳೆಹಳ್ಳಿಗೆ ಕರೆತಂದರು. ಒಡವೆ ಒಯ್ದವನು ಅವನೇ ಆಗಿದ್ದ. ಗೌಡರೂ ಅವನನ್ನು ಗುರುತಿಸಿದರು. ನೀವೇ ಅಲ್ಲವೆ ಅವತ್ತು ಹೆಸರು ಹೇಳಿ ಒಡವೆ ತೆಗೆದುಕೊಂಡು ಹೋದವರು" ಎಂದರು. ಆ ವ್ಯಕ್ತಿ 'ಹೌದು' ಎಂದನು.

ಆಗ ಸ್ನೇಹಿತರು ಆ ವ್ಯಕ್ತಿಯನ್ನು ವಿಚಾರಿಸಿದಾಗ, ಅವನು ರಂಗೇಗೌಡರ ಮನೆಯಿಂದ ಒಡವೆಗಳನ್ನು ತೆಗೆದುಕೊಂಡು ಹೋಗಿ ಚಿಕ್ಕಮಗಳೂರಿನ ಒಂದು ಅಂಗಡಿಯಲ್ಲಿ ಗಿರವಿಯಿಟ್ಟಿದ್ದನೆಂದು ತಿಳಿಯಿತು. ಗೌಡರ ಸ್ನೇಹಿತರೊಬ್ಬರು ಅವನೊಂದಿಗೆ ಹೋಗಿ ಅಂಗಡಿಯಿಂದ ಒಡವೆಗಳನ್ನು ಬಿಡಿಸಿಕೊಂಡು ತಂದರು. ಬಾಳೆಹಳ್ಳಿಗೆ ಬಂದು ರಂಗೇಗೌಡರಿಗೆ ಅವನ್ನು ಒಪ್ಪಿಸಿದರಲ್ಲದೆ, ನಡೆದ ಅಚಾತುರ್ಯಕ್ಕೆ ತುಂಬ ನೊಂದುಕೊಂಡರು.

ಆಗ ರಂಗೇಗೌಡರು ಆ ವಂಚಕವ್ಯಕ್ತಿಯನ್ನು ಉದ್ದೇಶಿಸಿ ಹೀಗೆ ಹೇಳಿದರು:

"ಈ ರೀತಿ ಮಾಡಬಾರದಪ್ಪ! ಒಳ್ಳೆಯ ಮನೆತನದಲ್ಲಿ ಹುಟ್ಟಿದ್ದೀಯೆ, ಮನೆತನಕ್ಕೆ ಕೆಟ್ಟ ಹೆಸರು ತರಬಾರದು".

ಹೀಗೆ ಹೇಳಿ, ಒಂದು ತಟ್ಟೆ ಎಲಕ್ಕಿ, ೨೫ ಕಿತ್ತಳೆ ಹಣ್ಣು, ೫ ರೂಪಾಯಿ ಖರ್ಚಿಗೆ ಕೊಟ್ಟು, ಮರ್ಯಾದೆ ಮಾಡಿ, ಅವನನ್ನು ಕಳಿಸಿಕೊಟ್ಟರು.

ಅವನು ಹೋದ ಮೇಲೆ ಅವನನ್ನು ಗುರುತಿಸಿ ಕರೆತಂದ ಸ್ನೇಹಿತರಿಗೆ ಹೇಳಿದರು:

"ಅವನು ಹೀಗೆ ಮಾಡಿದ ಅಂತ ನೀವೇನೂ ಅವನ ಮನಸ್ಸಿಗೆ ನೋವಾಗುವ ಹಾಗೆ ಮಾತಾಡಬೇಡಿ. ಒಡವೆ ಬಿಡಿಸಿ ತಂದಿರಲ್ಲ, ಆ ಹಣ ಒಟ್ಟು ಎಷ್ಟಾಯಿತು, ದಯವಿಟ್ಟು ಹೇಳಿ, ನಾನು ಕೊಡುತ್ತೇನೆ".

ಆ ಗೆಳೆಯರಾದರೋ 'ಅಯ್ಯೋ! ಎಲ್ಲಾದರೂ ಉಂಟೇ?' ಎಂದು ಹೇಳಿ ಗೌಡರಿಗೆ ಕೈಮುಗಿದು ಹೊರಟುಹೋದರು.

ಸಂ. ಚಂದ್ರಯ್ಯ ನಾಯ್ಡು, ಬಾಳೆಹಳ್ಳಿ ರಂಗೇಗೌಡರು, ಪ್ರ . ದಿವ್ಯಪ್ರಸಾದ್ ಗೌಡ, ಹಾಂದಿ ಎಸ್ಟೇಟ್, ಹಾಂದಿ ಅಂಚೆ, ಚಿಕ್ಕಮಗಳೂರು ತಾಲ್ಲೂಕು, ೧೯೮೮, ಪು. ೪೨-೪೩.

೯೧. 'ಮನೆಯಲ್ಲಿ ಯಾರೂ ಒಂದುಹನಿ ಹಾಲೂ ಬಳಸಬಾರದು'

ಉಬ್ರಾಣಿ ಮಠದ ಶಿವಲಿಂಗಯ್ಯನವರು ಧರ್ಮಾಭಿಮಾನಿಗಳು, ಪ್ರಾಮಾಣಿಕರು, ಪರೋಪಕಾರಿಗಳು. ಅವರ ತಂದೆ ಮರುಳಯ್ಯನವರು. ಅವರು ಸಹ ಅಂಥವರೇ. ಅವರ ಮನೆಯಲ್ಲಿ ನೂರಾರು ಆಕಳು ಹಾಲು ಕರೆಯುತ್ತಿದ್ದುವು. ಮನೆಯ ಮುಂದೆ ಒಂದು ದೊಡ್ಡ ಹಾಸುಗಲ್ಲಿತ್ತು. ದಿನವೂ ಬಡವರೂ ಹಾಲು ಕೊಳ್ಳಲು ಶಕ್ತಿಯಿಲ್ಲದವರೂ ತಮ್ಮ ಮಕ್ಕಳಿಗಾಗಿ ಹಾಲಿಗೆ ಎಂದು ಬಟ್ಟಲುಗಳನ್ನು ಹಾಸುಗಲ್ಲಿನ ಮೇಲೆ ಸಾಲಾಗಿ ತಂದಿಡುತ್ತಿದ್ದರು.

ಆಳುಗಳು ಹಾಲು ಕರೆದು ಮುಗಿದ ಮೇಲೆ ಹಾಲನ್ನು ಮನೆಯ ಒಳಕ್ಕೆ ತೆಗೆದುಕೊಂಡು ಹೋಗುವ ಮುನ್ನ ಈ ಬಟ್ಟಲುಗಳಲ್ಲಿ ಹಾಲು ತುಂಬಿಸಿ ಹೋಗುವುದು ರೂಢಿಯಾಗಿತ್ತು.

ಮರುಳಯ್ಯನವರ ಮನೆಯಲ್ಲಿ ಅವರ ವಿಧವೆಯಾದ ಸೋದರಿ ಒಬ್ಬರಿದ್ದರು. ಈಕೆ ಮನೆಗಾಗಿ ತುಂಬಾ ದುಡಿಯುತ್ತಿದ್ದರು. ಅವರಿಗೆ ಈ ರೀತಿ ಹೊರಗಿನವರಿಗೆ ಹಾಲು ವಿತರಣೆಯಾಗುವುದು ಇಷ್ಟವಾಗಲಿಲ್ಲ. ಇದು ನಷ್ಟವಾಗುವ ಬಾಬತ್ತು ಎಂದು ಆಕೆ ತಿಳಿದರು. ಅಣ್ಣನ ಧಾರಾಳತನ ಸರಿಯಲ್ಲ ಎಂದು ಆಕೆ ಭಾವಿಸಿದ್ದರು.

ಒಂದು ದಿನ ಮನೆಯಲ್ಲಿ ಮರುಳಯ್ಯನವರಿಲ್ಲದ ವೇಳೆ ನೋಡಿ, ಹಾಲಿಗೆ ಬಂದವರನ್ನೆಲ್ಲ ಗದರಿಸಿಕೊಂಡು ಹಾಲು ಹಾಕಿಸದೆ ಕಳಿಸಿಬಿಟ್ಟರು. ಮನೆಗೆ ಬಂದ ಮೇಲೆ ಮರುಳಯ್ಯನವರಿಗೆ ವಿಷಯ ತಿಳಿಯಿತು. ಅವರಿಗೆ ಕೋಪ ಬಂತು. ಆ ದಿನ ಮನೆಯಲ್ಲಿ ಯಾರೂ ಒಂದು ಹನಿ ಹಾಲೂ ಬಳಸಬಾರದು ಎಂದು ಕಟ್ಟುಮಾಡಿದರು. ಕರೆದ ಹಾಲನ್ನೆಲ್ಲ ಬಡಬಗ್ಗರನ್ನು ಕರೆಯಿಸಿ ಪೂರ್ತಿ ಹಂಚಿಸಿಬಿಟ್ಟರು.

ಲಲಿತಾಂಬಾ ವೃಷಭೇಂದ್ರಸ್ವಾಮಿ, 'ಪತ್ರೆ ಚನ್ನವೀರಪ್ಪಯ್ಯ', ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ, ೧೯೮೬, ಪು. ೧೬-೧೭

೯೨. 'ಯಾಕಪ್ಪ, ಹೀಗೆ ಮೂರ್ಖತನ ಮಾಡುತ್ತೀಯೆ?''

ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಕುಣಿಗಲ ರಾಮಶಾಸ್ತ್ರಿಗಳೆಂಬ (೧೮೦೭-೬೦) ಘನವಿದ್ವಾಂಸರಿದ್ದರು. ಇವರು ತರ್ಕಶಾಸ್ತ್ರದಲ್ಲಿ ಪರಿಣತರು. ಇವರ ಶಿಷ್ಯರನೇಕರು ಇವರ ಮನೆಯಲ್ಲಿಯೇ ಇರುತ್ತ, ಭೋಜನವನ್ನೂ ಮಾಡಿಕೊಂಡು

ವಿದ್ಯಾಭ್ಯಾಸ ಮಾಡುತ್ತಿದ್ದರು. ಇವರಲ್ಲಿ ಕಣಿವೆ ಕೆಳಗಿನ ಸೀಮೆಗೆ ಸೇರಿದ ಸುಬ್ರಹ್ಮಣ್ಯ ಶಾಸ್ತ್ರಿ ಎಂಬುವನೂ ಒಬ್ಬ.

ಒಂದು ದಿನ ಸುಬ್ರಹ್ಮಣ್ಯಶಾಸ್ತ್ರಿಗೆ ಜ್ವರ ಬಂತು. ಪಿತ್ತವಿಕಾರ ಹೆಚ್ಚಾಗಿತ್ತು. ರಾಮಶಾಸ್ತ್ರಿಗಳು ಇವನಿಗೆ ಔಷಧ ಕೊಟ್ಟರು. ಅವನು ತೆಗೆದುಕೊಳ್ಳಲಿಲ್ಲ. 'ಹೊಟ್ಟೆಯಲ್ಲಿ ಅನ್ನವಿಲ್ಲದೆ ಸಂಕಟವಾಗಿರಬೇಕು' ಎಂದು ಶಾಸ್ತ್ರಿಗಳೂ ಅವರ ಪತ್ನಿಯೂ ಅನ್ನ ಕಲಸಿಕೊಂಡು ಎಲೆಯ ಮೇಲೆ ಹಾಕಿ ಶಿಷ್ಯನ ಹಾಸಿಗೆಯ ಹತ್ತಿರವೇ ತಂದರು. ಗುರುಗಳು ಶಿಷ್ಯನನ್ನು ಮೆಲ್ಲಗೆ ಮೇಲಕ್ಕೆಬ್ಬಿಸಿದರು. ಶಿಷ್ಯ ಅನ್ನವನ್ನು ಸ್ವಲ್ಪ ಬಾಯಿಗಿಟ್ಟುಕೊಂಡು ಓಕರಿಸಿದನು. ಶಾಸ್ತ್ರಿಗಳ ಪತ್ನಿ ಅನ್ನವನ್ನು ಕಿವಿಚಿ ಒಂದು ಬಟ್ಟಲಲ್ಲಿ ಹಾಕಿ, ಅದನ್ನಾದರೂ ಕುಡಿಯುವಂತೆ ಹೇಳಿದರು. ಜ್ವರಪೀಡಿತನಾಗಿದ್ದ ಶಿಷ್ಯ ಸುಬ್ರಹ್ಮಣ್ಯ ಬಾಯಲ್ಲಿದ್ದ ಅನ್ನವನ್ನು ಹೊಟ್ಟೆಗಿಳಿಸಲಾರದೆ ಉಗುಳಿದನು. ದಂಪತಿಗಳಿಬ್ಬರ ಮೇಲೂ ಎಂಜಲು ಬಿತ್ತು.

ಆಗ ರಾಮಶಾಸ್ತ್ರಿಗಳು ನಗುತ್ತ, "ಸುಬ್ರಹ್ಮಣ್ಯ, ಯಾಕಪ್ಪ ಹೀಗೆ ಮೂರ್ಖತನ ಮಾಡುತ್ತೀಯೆ? ನಿನಗೆ ಯಾಕೆ ಜ್ವರ ಬರುತ್ತೋ ತಿಳಿಯದು. ಚಿಂತೆಯಿಲ್ಲ. ಮಲಗಿಕೋ" ಎಂದು ಹೇಳಿ ಎದ್ದರು. ಅವರ ಪತ್ನಿ ಸಮಾಧಾನವಾಗಿಯೇ ಎಂಜಲೆಲ್ಲವನ್ನೂ ಬಳಿದು ತೆಗೆದು, ಆ ಸ್ಥಳವನ್ನು ಗೋಮಯದಿಂದ ಶುದ್ಧಿ ಮಾಡಿದರು. ಬಳಿಕ ದಂಪತಿಗಳಿಬ್ಬರೂ ಸ್ನಾನಮಾಡಿದರು. 'ಸುಬ್ರಹ್ಮಣ್ಯನಿಗೆ ಹೀಗಾಯಿತಲ್ಲಾ' ಎಂಬುದಾಗಿ ಚಿಂತಿಸುತ್ತಿದ್ದರೇ ಹೊರತು, ಅವನು ತಮ್ಮ ವಿಷಯದಲ್ಲಿ ತಪ್ಪಾಗಿ ನಡೆದುಕೊಂಡನೆಂದು ಅವರು ಯೋಚಿಸಲೇ ಇಲ್ಲ.

ಇಂಥ ಸಹನೆ ಸಾಮಾನ್ಯರಿಗೆ ಸಾಧ್ಯವಿಲ್ಲ. ಹೆತ್ತ ಮಕ್ಕಳು ಹೀಗೆ ಮಾಡಿದಾಗ್ಗೂ ಜನ ಸಹಿಸುವುದು ಕಷ್ಟ.

ಎಂ. ಎಸ್. ಪುಟ್ಟಣ್ಣ, 'ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ', ಕಾವ್ಯಾಲಯ, ಮೈಸೂರು, ೧೯೫೨ (ದ್ವಿ. ಮು.), ಪು. ೧೨೨

೯೩. 'ಯಾವ ವಿದ್ಯಾಕ್ಕೆ ನಿಧಿಯೋ ನೀನು?'

ಪ್ರಸಿದ್ಧ ಸಂಸ್ಕೃತವಿದ್ವಾಂಸ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳಿಗೆ ಇಂಡಿಯಾ ಸರ್ಕಾರದವರು 'ಮಹಾಮಹೋಪಾಧ್ಯಾಯ' ಬಿರುದು ಕೊಟ್ಟರು; ಮೈಸೂರಿನ ಶ್ರೀಮನ್ಮಹಾರಾಜರು 'ವಿದ್ಯಾನಿಧಿ' ಬಿರುದು ಕೊಟ್ಟರು; ಅವರ ಶಿಷ್ಯವರ್ಗದಿಂದ ಅವರಿಗೆ ಒಂದು ಸತ್ಕಾರಸಮಾರಂಭ ಇಟ್ಟುಕೊಳ್ಳಲು ಸಮಿತಿ ಏರ್ಪಾಡಾಯಿತು. ಶಿಷ್ಯವರ್ಗದ ಬಿ. ವಿ. ಲಕ್ಷ್ಮಣರಾಯರು, ಡಿವಿಜಿ. ಮೊದಲಾದವರು ಸಮಿತಿಯಲ್ಲಿದ್ದರು.

ಈ ಸತ್ಕಾರಕ್ಕೆ ಶಾಸ್ತ್ರಿಗಳು ಮೊದಲು ಒಪ್ಪಿರಲಿಲ್ಲ. ಏನೇನೋ ತಕರಾರು ತೆಗೆದಿದ್ದರು. ಒತ್ತಾಯ ಹೆಚ್ಚಿದ ಮೇಲೆ 'ನೋಡೋಣ' ಎಂದರು. ಸನ್ಮಾನಸಭೆ ಒಂದು ಭಾನುವಾರ ಸಂಜೆ ೫ ಗಂಟೆಗೆ ಏರ್ಪಟ್ಟಿತು. ಸ್ಥಳ ಬೆಂಗಳೂರಿನ ಶಂಕರ ಮಠ. ಶಾಸ್ತ್ರಿಗಳಿಗೆ ಜ್ಞಾಪಕ ಮಾಡಲು ಸುಮಾರು ೪ ಗಂಟೆಗೆ ಅವರ ಮನೆಗೆ ಡಿವಿಜಿ ಮೊದಲಾದವರು ಹೋದರು. ಮನೆಯಲ್ಲಿ ಶಾಸ್ತ್ರಿಗಳು ಇರಲಿಲ್ಲ. 'ಹೋಗಿ ಬಹಳ ಹೊತ್ತಾಯಿತು' ಎಂದರು, ಮನೆಯವರು. ೪-೪೫ರ ವರೆಗೆ ಅವರಿಗಾಗಿ ಎಲ್ಲೆಲ್ಲಿಯೋ ಹುಡುಕಾಡಿದ್ದಾಯಿತು. ಕೊನೆಗೆ ಗುರುದೇವಾಲಯದ ಪಶ್ಚಿಮಭಾಗದಲ್ಲಿ, ಚರಂಡಿ ಪಕ್ಕದ ಹುಲ್ಲಿನ ಮೇಲೆ ಕುಳಿತಿದ್ದುದು ಪತ್ತೆಯಾಯಿತು. 'ಇದೇನು ಇಲ್ಲಿ' ಎಂದು ಪ್ರಶ್ನಿಸಿದರೆ, 'ಗುರುಗಳು ದಯಮಾಡಿಸುತ್ತಾರೆ, ಅದಕ್ಕೆ' ಎಂದರು. 'ಸದ್ಯ ಇದ್ದಾರಲ್ಲ' ಎಂದುಕೊಂಡು ಮತ್ತೆ ೧೦ ನಿಮಿಷ ಬಿಟ್ಟು ಸಮಾರಂಭಕ್ಕೆ ಕರೆದೊಯ್ಯಲು ನೋಡಿದರೆ, ಮತ್ತೆ ಪತ್ತೆಯಿಲ್ಲ. 'ಆದದ್ದಾಯಿತು' ಎಂದು ಕಾರಿನಲ್ಲಿ ಕುಳಿತು ಚಾಮರಾಜಪೇಟೆಯ ೫ನೆಯ ರಸ್ತೆಯಲ್ಲಿ ಈ ಶಿಷ್ಯವರ್ಗ ಶಾಸ್ತ್ರಿಗಳಿಗಾಗಿ ಹುಡುಕಾಡಿತು.

ಸಮೀಪದಲ್ಲಿಯೇ ಶಾಸ್ತ್ರಿಗಳು ಬೇಗ ಬೇಗ ಹೆಜ್ಜೆ ಹಾಕಿ ಸಾಗುತ್ತಿದ್ದರು. ಡಿವಿಜಿ 'ಎಲ್ಲಿಗೆ ಪ್ರಯಾಣ?' ಎಂದು ಕೇಳಿದಾಗ, ಶಾಸ್ತ್ರಿಗಳು 'ನಮ್ಮ ಗುರುಗಳ ಮನೆಗೆ' ಎಂದರು; ಮತ್ತೆ 'ಯಾರು ತಮ್ಮ ಗುರುಗಳು?' ಎಂದು ಪ್ರಶ್ನಿಸಿದಾಗ 'ವಿದ್ವಾಂಸರು ನುಗ್ಗೆಹಳ್ಳಿ ತಿರುಮಲಾಚಾರ್ಯರು' ಎಂದರು. ಸರಿ, ಈಗ ಆ ಇಬ್ಬರನ್ನೂ ಬೇಗ ಕಾರಿನಲ್ಲಿ ಕುಳ್ಳಿರಿಸಿಕೊಂಡು ಶಂಕರಮಠಕ್ಕೆ ಎಲ್ಲರೂ ಬಂದರು.

ಸನ್ಮಾನಿತರಾಗಬೇಕಾಗಿದ್ದ ವಿರೂಪಾಕ್ಷ ಶಾಸ್ತ್ರಿಗಳಿಗೆಂದು ವಿಶೇಷವಾಗಿ ಒಂದು ಪೀಠವನ್ನು ಸಿದ್ಧಪಡಿಸಿ ಅದರ ಮೇಲೆ ಒಂದು ಸಣ್ಣ ರತ್ನಗಂಬಳಿ ಹಾಸಿ ಅಣಿಮಾಡಿತ್ತು. ಶಾಸ್ತ್ರಿಗಳು ಮಾಡಿದ್ದೇನು? ಆ ಪೀಠದ ಮೇಲೆ ತಮ್ಮ ಗುರುಗಳು ನುಗ್ಗೆಹಳ್ಳಿ ತಿರುಮಲಾಚಾರ್ಯರನ್ನು ಕೂಡಿಸಿ ಗುರುವಂದನಕ್ಕೆ ಉಪಕ್ರಮಿಸಿದರು. ಗುರುವಂದನೆಯ ಅವರ ಪದ್ಧತಿ ಎಂದರೆ, ಕನಿಷ್ಠ ೧೦-೧೨ ಬಾರಿ ಸಾಷ್ಟಾಂಗನಮಸ್ಕಾರ ಮಾಡುವುದು.

ಈಗ ಶಿಷ್ಯರು ಮಠದ ಉಗ್ರಾಣದಲ್ಲಿ ಹುಡುಕಾಡಿ ಕೆಲವು ನಿಮಿಷಗಳಲ್ಲಿ ಬೇರೆ ಒಂದು ಮಣೆ ತಂದು ಪಕ್ಕದಲ್ಲಿ ಹಾಕಿದರು. ಶಾಸ್ತ್ರಿಗಳು ಆ ಮಣೆಯ ಮೇಲೆ ಕುಳಿತರು. ಆಮೇಲೆ ಸಮಾರಂಭದ ಭಾಗವಾಗಿ ಭಾಷಣಗಳು ನಡೆದುವು. ಸತ್ಕಾರಕ್ಕೆ ಶಾಸ್ತ್ರಿಗಳು ಪ್ರತ್ಯುತ್ತರ ಹೇಳುವ ಸಂದರ್ಭವೂ ಬಂತು. ಶಾಸ್ತ್ರಿಗಳು ಹೇಳಿದರು:

"ತಾವೆಲ್ಲ ಬಹುಸಂತೋಷಪಟ್ಟಿದ್ದೀರಿ. ನನಗೂ ಬಹುಸಂತೋಷ. 'ನೀ ವಿದ್ಯಾನಿಧಿ', 'ನೀ ಮಹಾಮಹೋಪಾಧ್ಯಾಯ' ಎಂದರೆ ಯಾರಿಗೆ ತಾನೆ ಸಂತೋಷವಾಗಲಿಕ್ಕಿಲ್ಲ. ಇದನ್ನು ನಮ್ಮ ಮಹಾರಾಜರು ಕೊಟ್ಟಿದ್ದಾರೆ, ಸಾರ್ವಭೌಮ ಸರ್ಕಾರದವರು ಕೊಟ್ಟಿದ್ದಾರೆ. ಇದೆಲ್ಲ ಸಂತೋಷಪಡಬೇಕಾದ ವಿಷಯವೇ. ಆದರೆ, ಇನ್ನೊಬ್ಬ ಮಹಾರಾಜ ಇದ್ದಾನಲ್ಲ, ಸಾರ್ವಭೌಮರಿಗಿಂತ ದೊಡ್ಡರಾಜ, 'ಧರ್ಮರಾಜಃ ಪಿತೃಪತಿಃ' ಎಂದು; ಎಂದೋ ಒಂದು ದಿನ ಅಲ್ಲಿಗೆ ಹೋಗಬೇಕಾಗುತ್ತದಲ್ಲ; ಆಗ ಅವ ಕೇಳ್ಯಾನು; ಎಲಾ! ಅವ ಕೊಟ್ಟ, ನೀ

ತಗೊಂಡಿ! ಯಾವ ವಿದ್ಯಾಕ್ಕೆ ನಿಧಿಯೋ ನೀನು? ಅಂತ ಕೇಳತಾನಲ್ಲ - ಆಗ ನಾವು ಏನು ಹೇಳಬೇಕು?"

ಸಮಾರಂಭ ಮುಗಿಯಿತು. ಶಾಸ್ತ್ರಿಗಳನ್ನು ಮನೆಗೆ ಕರೆದುಕೊಂಡು ಹೋದರು, ಬಿಟ್ಟು ಬರುವುದಕ್ಕೆ. ಮನೆಯಲ್ಲಿ ಹೆಣ್ಣುಮಕ್ಕಳು ಮನೆಯ ಮುಂದೆ ರಂಗೋಲಿಯಿಟ್ಟು ಶಾಸ್ತ್ರಿಗಳಿಗೆ ಆರತಿ ಮಾಡಲು ಸಿದ್ಧಪಡಿಸಿಕೊಂಡಿದ್ದರು. ಶಾಸ್ತ್ರಿಗಳು ಆ ಸಮಯದಲ್ಲಿ ತಮ್ಮ ಪಕ್ಕದಲ್ಲಿ ನಿಂತಿದ್ದ ವೈದ್ಯನಾಥ ಶಾಸ್ತ್ರಿಗಳನ್ನು ರಟ್ಟೆ ಹಿಡಿದೆಳೆದು ಆ ರಂಗೋಲಿ ಮಣೆಯ ಮೇಲೆ ನಿಲ್ಲಿಸಿದರು. ವೈದ್ಯನಾಥ ಶಾಸ್ತ್ರಿಗಳು ನಗುತ್ತ, "ಒಂದು ಕ್ಷಣ ಹೇಳಿದ ಮಾತು ಕೇಳಬಾರದೇ? ನಿಮ್ಮ ಹೆಣ್ಣುಮಕ್ಕಳಲ್ಲವೇ ಅವರು?" ಎಂದರು; ಪ್ರತಿಯಾಗಿ ವಿರೂಪಾಕ್ಷ ಶಾಸ್ತ್ರಿಗಳು,"ಅವರನ್ನು ನೀವೂ ನಿಮ್ಮ ಹೆಣ್ಣುಮಕ್ಕಳಂತೆ ನೋಡತಕ್ಕವರು ತಾನೇ?" ಎಂದರು.

ಡಿ.ವಿ.ಜಿ.; 'ವೈದಿಕಧರ್ಮ ಸಂಪ್ರದಾಯಸ್ಥರು', ಜ್ಞಾಪಕಚಿತ್ರಶಾಲೆ-೫, ಕಾವ್ಯಾಲಯ, ಮೈಸೂರು, ೧೯೭೨, ಪು. ೧೫೪-೫೬

೯೪. 'ವಯಸ್ಸು ದಾಟಿದೆಯೇ?'

ಕೃಷ್ಣಗಿರಿ ಕೃಷ್ಣರಾಯರು, ಎಂದರೆ ಭಾರತವಾಚನದ ಕೃಷ್ಣರಾಯರು (೧೮೯೩-೧೯೬೬), ಮೈಸೂರು ಮಹಾರಾಜ ಕಾಲೇಜಿನ ಪುಸ್ತಕಭಂಡಾರದ ಅಧಿಕಾರಿಯಾಗಿದ್ದು ವಿಶ್ವವಿದ್ಯಾನಿಲಯದ ಅಧ್ಯಾಪಕರ, ಅಧಿಕಾರಿಗಳ, ವಿದ್ಯಾರ್ಥಿಗಳ ವಿಶ್ವಾಸ ಗೌರವಗಳಿಗೆ ಪಾತ್ರರಾಗಿದ್ದರು. ಅವರು ಗ್ರಂಥಾಲಯದಲ್ಲಿ ದಕ್ಷತೆಯಿಂದ ತೃಪ್ತಿಕರವಾಗಿಯೇ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೂ ಅಸಹನೆಯಿಂದ ಯಾರೋ ಕೆಲವರು ಅವರ ಮೇಲೆ ಆಪಾದನೆ ಬರುವ ಹಾಗೆ ಸಂಚುಮಾಡಿ ಕೆಲಸದಿಂದಲೇ ಅವರು ನಿವೃತ್ತಿಯಾಗುವ ಹಾಗೆ ಒಂದು ಮನವಿಯನ್ನು ಸಿದ್ಧ ಪಡಿಸಿದರು. ಅದು ಕೆಳಪಟ್ಟ ಅಧಿಕಾರಿಗಳ ಗಮನಕ್ಕೆ ಬಾರದೆ ನೇರವಾಗಿ ಉಪಕುಲಪತಿಯ ಕಛೇರಿಯನ್ನೂ ಅದನ್ನು ದಾಟಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಛೇರಿಯನ್ನೂ ತಲುಪುವಂತೆ ಏರ್ಪಾಡಾಯಿತು.

ಆಗ ಮುಖ್ಯಕಾರ್ಯದರ್ಶಿಗಳು ಎನ್. ಎಸ್. ಹಿರಣ್ಣಯ್ಯನವರು. ಅವರು ತಮ್ಮ ವಿದ್ಯಾರ್ಥಿದಶೆಯಿಂದಲೂ ಕೃಷ್ಣರಾಯರನ್ನು ಹತ್ತಿರದಿಂದ ನೋಡಿ ಬಲ್ಲವರಾಗಿದ್ದರು. ತಾವು ಅಸಿಸ್ಟೆಂಟ್ ಕಮೀಷನರ್ ಆಗಿದ್ದಾಗ ಹಾಸನ ಚನ್ನರಾಯಪಟ್ಟಣ ಮೊದಲಾದೆಡೆಯಲ್ಲಿ ಕ್ಯಾಂಪ್ ಮಾಡಿದ್ದಾಗ ರಾಯರನ್ನು ಕರಸಿಕೊಂಡು ಅವರಿಂದ ಕಾವ್ಯವಾಚನ ಮಾಡಿಸಿ ಸಂತೋಷಪಟ್ಟಿದ್ದರು. ಅಂಥ ಸಂದರ್ಭಗಳಲ್ಲಿ ರಾಯರು ಕ್ಯಾಂಪಿನಲ್ಲಿ ಉಳಿದು ಕೊಳ್ಳುವುದಾಗಿದ್ದರೆ, ತಾವೇ ರಾಯರ ಹಾಸಿಗೆಯನ್ನು ಹಾಸಿ, ಸುತ್ತಿ, ತಮ್ಮ ಸೇವೆಯನ್ನು

ಮಾಡುತ್ತಿದ್ದರು. ಕೃಷ್ಣರಾಯರು ಸಂಕೋಚದಿಂದ "ನೀವು ಅಸಿಸ್ಟೆಂಟ್ ಕಮೀಷನರು, ನಿಮಗೆ ನೌಕರರು ಚಾಕರರು ಇದ್ದಾರೆ. ನೀವು ಏಕೆ ಈ ಕೆಲಸ ಮಾಡಬೇಕು? ನಾನೇ ಮಾಡಿಕೊಳ್ಳುತ್ತೇನೆ; ಇಲ್ಲದಿದ್ದರೆ, ಯಾರಾದರೂ ನೌಕರರು ಮಾಡುತ್ತಾರೆ" ಎಂದು ಹೇಳುತ್ತಿದ್ದರು. ಪ್ರತಿಯಾಗಿ ಹಿರಣ್ಣಯ್ಯನವರು, "ನೌಕರರು ಇದ್ದಾರೆ, ನಿಜ; ಅವರು ನನ್ನ ಕೆಲಸ ಮಾಡುತ್ತಾರೆ; ನಾನು ತಮ್ಮ ಸೇವೆ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತೇನೆ" ಎನ್ನುತ್ತಿದ್ದರು.

ಹೀಗಿರಬೇಕಾದರೆ ಕೃಷ್ಣರಾಯರ ಮೇಲಿನ ವೃತ್ತಿಸಂಬಂಧವಾದ ಆಪಾದನೆಯ ಮನವಿ ಈಗ ಮುಖ್ಯಕಾರ್ಯದರ್ಶಿಗಳ ಸ್ಥಾನದಲ್ಲಿದ್ದ ಹಿರಣ್ಣಯ್ಯನವರ ಕೈಗೆ ಬಂದಿತು. ಅವರು ಮನವಿಯನ್ನು ಓದಿ ಕ್ರುದ್ಧರಾದರು. ಅವರಿಗೆ ಕೃಷ್ಣರಾಯರ ಗುಣಶೀಲಗಳ ಪರಿಚಯವಿದ್ದಿತಾದ್ದರಿಂದ ಮನವಿ ದುರುದ್ದೇಶದಿಂದ ಪ್ರೇರಿತವಾದುದೆಂದು ತಿಳಿಯುವುದು ಕಷ್ಟವಾಗಲಿಲ್ಲ. ಅವರು ಉಪಕುಲಪತಿಗಳ ಕಛೇರಿಗೆ ಪತ್ರ ಬರೆದು, ಕೆಲವು ಪ್ರಶ್ನೆಗಳನ್ನು ಹಾಕಿದರು. ಆ ಪ್ರಶ್ನೆಗಳೆಂದರೆ: "ಕೃಷ್ಣರಾಯರಿಗೆ ವೃತ್ತಿಯಲ್ಲಿರಬೇಕಾದ ವಯಸ್ಸು ದಾಟಿದೆಯೇ? ಅವರಿಗೆ ಅನಾರೋಗ್ಯವೇ? ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೇ? ಯಾವ ಕಾರಣಕ್ಕೆ ಅವರನ್ನು ಸರ್ಕಾರ ನಿವೃತ್ತಿಗೊಳಿಸಬೇಕು? ಈ ಪತ್ರ ಈ ಕಛೇರಿಗೆ ಕ್ರಮತಪ್ಪಿ ಹೇಗೆ ರವಾನೆಯಾಯಿತು? ಉತ್ತರಿಸಿರಿ."

ಈಗ ಈ ಪತ್ರದ ವಿಚಾರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ತಮ್ಮ ಗಮನಕ್ಕೆ ಸಹ ಬಾರದೆ ಸರ್ಕಾರಕ್ಕೆ ಹೋದುದು ತಿಳಿದು ಅಂದಿನ ಉಪಕುಲಪತಿಗಳಿಗೆ ತುಂಬ ಕಳವಳವಾಯಿತು. ಈ ಅವ್ಯವಹಾರದಿಂದ ಅವರು ಕೆರಳಿದರು. ತಮ್ಮ ಕೈಕೆಳಗಿನ ಅಧಿಕಾರಿಗಳನ್ನು ಕರೆದು ಅವರನ್ನು ಎಚ್ಚರಿಸಿದರು. ಅತ್ತ ಮತ್ತೊಬ್ಬರಿಂದ ವಿಷಯ ಕೃಷ್ಣರಾಯರಿಗೆ ಸಹ ತಿಳಿಯಿತು; ಅವರು 'ಎಲ್ಲಾ ದೈವಚಿತ್ತ' ಎಂದುಕೊಂಡು ಸುಮ್ಮನಾದರು.

ಸಂ. ಕೃಷ್ಣಗಿರಿ ಮುರಳೀಧರ, 'ಭಾರತದ ಕೃಷ್ಣರಾಯರು', ರವೀಂದ್ರ ಪ್ರಕಾಶನ, ರಾಯಚೂರು, ೧೯೬೩, ಪು. ೬೨-೬೩

೬೫. 'ವಾಧ್ಯಾರಿಗೆ ಪವಿತ್ರದ ಉಂಗುರ, ಭೀಮೇಶ್ವರನಿಗೆ ಬೆಳ್ಳಿಯ ಕೊಡ'

೧೯೬೭ರಲ್ಲಿ ರುದ್ರಪಟ್ಟಣದಲ್ಲಿ ಒಂದು ಅತಿರುದ್ರಯಾಗ ನಡೆಯಿತು. ಆಗ ಶೃಂಗೇರಿ ಜಗದ್ಗುರುಗಳು ೧೦ ದಿನ ಅಲ್ಲಿಯೇ ವಾಸ್ತವ್ಯ ಮಾಡಿದ್ದರು. ಭಾರಿ ಏರ್ಪಾಡು. ೧೨೧ ಜನ ವೇದಾಧ್ಯಾಯಿಗಳಿಂದ ಏಕಾದಶವಾರ ರುದ್ರಪಾರಾಯಣ, ಪ್ರಧಾನಾಚಾರ್ಯರಿಂದ ೧೨೧ ರುದ್ರಕಲಶಗಳಿಗೆ ಪೂಜೆ ಇತ್ಯಾದಿ.

ಪ್ರಧಾನಾಚಾರ್ಯರು ವೇ. ಬ್ರ. ಶ್ರೀ ಕೇಶವಮೂರ್ತಿ ಘನಪಾಠಿಗಳು; ಕೊನೆಯ ದಿನ ರುದ್ರಸ್ವಾಹಾಕಾರ, ೧೧ ಕುಂಡಗಳಲ್ಲಿ ಹೋಮ. ಪ್ರಧಾನಕುಂಡದ ಆಚಾರ್ಯತ್ವ ಕೇಶವ ಮೂರ್ತಿಗಳದು. ಪಾಲ್‌ಘಾಟಿನ ಹತ್ತಾರು ಕಡೆ ಅತಿರುದ್ರಗಳನ್ನು ನಡೆಸಿದ್ದ ಮಹಾಪ್ರವೀಣ ಮಯೂರನಾಥ ವಾಧ್ಯಾರ್ ಪ್ರಧಾನಬ್ರಹ್ಮರು. ಬೆಳಗ್ಗೆ ೬-೩೦ಕ್ಕೇ ಕಲಾಪದ ಆರಂಭ. ಘನಪಾಠಿಗಳು ಗಣಪತಿಯ ಪ್ರಾರ್ಥನೆ ಮಾಡಿ ಯಾಗ ನಿರ್ವಿಘ್ನವಾಗಿ ನಡೆಯಲು ಸಕಲದೋಷನಿವೃತ್ತ್ಯರ್ಥವಾಗಿ ಹಿರಣ್ಯದಾನ ಮಾಡುವುದಾಗಿ ಸಂಕಲ್ಪಿಸಿದರು. ಸಂಕಲ್ಪದಂತೆ ತಮಗೆ ಮೊದಲನೆಯ ದಿನ ಮಧುಪರ್ಕ ಸತ್ಕಾರದಲ್ಲಿ ಸತ್ಕಾರಕರ್ತರು ನೀಡಿದ್ದ ಘನವಾದ ಪವಿತ್ರದ ಉಂಗುರವನ್ನು ವಾಧ್ಯಾರಿಗೆ ನಮಸ್ಕಾರಪೂರ್ವಕವಾಗಿ ಸಮರ್ಪಿಸಿದರು; "ಯಾಗ ಕಾರ್ಯ ನಿರ್ವಿಘ್ನವಾಗಿ ಲೋಪವಿಲ್ಲದೆ ನಡೆಯುವಂತೆ ಅನುಗ್ರಹಿಸಬೇಕು" ಎಂದು ಪ್ರಾರ್ಥಿಸಿದರು.

ವಾಧ್ಯಾರಿಗೆ ದಿಗ್ಭ್ರಮೆಯಾಯಿತು. ಕಣ್ಣೀರು ಉಕ್ಕಿತು. "ಇಂಥ ವ್ಯಕ್ತಿಯನ್ನೇ ನಾನು ಎಲ್ಲಿಯೂ ಈ ವರೆಗೆ ನೋಡಿಲ್ಲ" ಎಂದು ಹೇಳಿ ದಾನವನ್ನು ಸ್ವೀಕರಿಸಿದರು. ಹೋಮ ಸಾಂಗವಾಗಿ ನಡೆಯಿತು. ಜಗದ್ಗುರುಗಳು ಸಂತುಷ್ಟರಾಗಿ ಘನಪಾಠಿಗಳಿಗೆ ಶಾಲುಜೋಡಿ ಹೊದಿಸಿ ಅನುಗ್ರಹಿಸಿದರು. ಪ್ರಧಾನಾಚಾರ್ಯರಾಗಿದ್ದರೆಂದು ಆ ಹೋಮದ ಕೊನೆಗೆ, ಘನಪಾಠಿಗಳಿಗೆ ಒಂದು ದೊಡ್ಡ ಬೆಳ್ಳಿಬಿಂದಿಗೆಯನ್ನು ಅಲ್ಲಿಯವರು ಗೌರವಪೂರ್ವಕವಾಗಿ ಕೊಟ್ಟರು.

ಘನಪಾಠಿಗಳು ಈ ವೃತ್ತಾಂತದ ನಿರೂಪಕರೂ ಯಾಗದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರೂ ಆದ ಪ್ರೊ. ಶ್ರೀಕಂಠ ಕುಮಾರಸ್ವಾಮಿಗಳನ್ನು ಉದ್ದೇಶಿಸಿ, "ಕುಮಾರಸ್ವಾಮಿ, ಇದನ್ನಿಟ್ಟುಕೊಂಡು ನಾನೇನು ಮಾಡಲಿ?" ಎಂಬುದಾಗಿ ಪ್ರಶ್ನಿಸಿದರಂತೆ. ಬಳಿಕ ಕೆಲವು ದಿನಗಳು ಕಳೆದ ಮೇಲೆ, ಕುಮಾರ ಸ್ವಾಮಿಗಳು ಶಿವಮೊಗ್ಗೆಯ ಭೀಮೇಶ್ವರ ದೇವಾಲಯಕ್ಕೆ ಹೋದಾಗ ಅಲ್ಲಿ ದೇವತಾಸನ್ನಿಧಿಯಲ್ಲಿ ಆ ಬಿಂದಿಗೆಯನ್ನು ನೋಡಿದರಂತೆ. ಅದಕ್ಕೆ ಅವರು 'ಕುಮಾರಸ್ವಾಮಿ, ಆ ಬಿಂದಿಗೆ ಇಟ್ಟುಕೊಂಡು ನಾನೇನು ಮಾಡಲಿ? ಆ ದೇವಾಲಯದಲ್ಲಿ ಅನೇಕ ವರ್ಷ ಕಾಲ ನಾನು ವೇದಪಾಠ ಹೇಳಿದ್ದೇನೆ. ಈಶ್ವರನ ಅನುಗ್ರಹದಿಂದ ಈಗ ನಾನು ಚೆನ್ನಾಗಿದ್ದೇನೆ. ಆ ಈಶ್ವರನ ಸೇವೆಗೇ ಅದು ವಿನಿಯೋಗವಾಗಲಿ ಎಂದು ನಾನು ಅದನ್ನು ಕೊಟ್ಟುಬಿಟ್ಟೆ" ಎಂದರಂತೆ.

ಆರ್. ಕೆ. ಶ್ರೀಕಂಠ ಕುಮಾರಸ್ವಾಮಿ, 'ಹೃದಯಸಂಪನ್ನತೆ', ಸಮುದಾಯ ಅಧ್ಯಯನ ಕೇಂದ್ರ, ಮೈಸೂರು ೨೦೦೦, ಪು. ೧೦-೧೨

೯೬. 'ವೆಂಕಣ್ಣಯ್ಯ, ನೀನು ಮನುಷ್ಯನಲ್ಲ!'

೧೯೩೧ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮೈಸೂರಿನಲ್ಲಿ ಜರುಗಲಿದ್ದು, ಏರ್ಪಾಡಿನಲ್ಲಿ ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರು ಟಿ. ಎಸ್. ವೆಂಕಣ್ಣಯ್ಯನವರು ಮಹತ್ವದ ಪಾತ್ರ ವಹಿಸಬೇಕಾಗಿತ್ತು. ಸಮ್ಮೇಳನದ ಅಂಗವಾಗಿ ನಡೆಯಬೇಕಾಗಿದ್ದ ಗಮಕದ ಕಾರ್ಯಕ್ರಮದ ಬಗೆಗೆ ಚರ್ಚಿಸಲು ಬಿಂದುರಾವ್, ಕೃಷ್ಣರಾವ್ ಮುಂತಾದವರೆಲ್ಲ ವೆಂಕಣ್ಣಯ್ಯನವರ ಮನೆಯ ಮಹಡಿಯ ಮೇಲಿನ ಕೊಠಡಿಯಲ್ಲಿ ಸೇರಿದ್ದರು. ಬೇರೆ ಕೆಲವರು ಗಣ್ಯ ಆಹ್ವಾನಿತರೂ ಇದ್ದರು. ಅವರಲ್ಲಿ ನಂಜನಗೂಡು ಹೈಸ್ಕೂಲು ಮುಖ್ಯೋಪಾಧ್ಯಾಯರೂ ಗೆಳೆಯರೂ ಆದ ರಾಜೀವಲೋಚನಂ ಅವರೂ ಸೇರಿದ್ದರು. ಆಹ್ವಾನಿತರಿಗೆಲ್ಲ ಅಲ್ಲಿಯೇ ಭೋಜನದ ಆಹ್ವಾನವೂ ಇದ್ದು, ಅಡಿಗೆಮನೆಯಲ್ಲಿ ಅಡಿಗೆ ಕೆಲಸವೂ ಭರದಿಂದ ನಡೆದಿತ್ತು. ವಾಚನ ವ್ಯಾಖ್ಯಾನಗಳೂ ಸರಸ ಸಲ್ಲಾಪವೂ ನಡೆದಿದ್ದವು.

ಇದ್ದಕ್ಕಿದ್ದಂತೆ ಕೆಳಮನೆಯಿಂದ 'ಅಯ್ಯೋ' ಎಂದು ಕೂಗು ಕೇಳಿಸಿತು. ವೆಂಕಣ್ಣಯ್ಯನವರು ರಾಜೀವಲೋಚನಂ ಅವರನ್ನು ತಮ್ಮ ಪ್ರತಿನಿಧಿಯಾಗಿರಿಸಿ, ತಾವು ಆ ಕೂಡಲೇ ಕೆಳಗಿಳಿದು ಹೋದರು. ಎರಡು ನಿಮಿಷಗಳ ಬಳಿಕ, ಮಹಡಿಯ ಕೋಣೆಯಲ್ಲಿದ್ದ ತಮ್ಮ ಅಳಿಯ ವೆಂಕಟೇಶಯ್ಯನವರನ್ನೂ ತಮ್ಮ ಶಾಮರಾಯರನ್ನೂ ಕೆಳಗಿಳಿದು ಬರುವಂತೆ ಕೂಗಿ ಕರೆದರು. ಅಲ್ಲಿಗೆ ಇವರು ಹೋಗಿ ನೋಡಿದರೆ, ಅದೊಂದು ಹೃದಯವಿದ್ರಾವಕ ದೃಶ್ಯ! ವೆಂಕಣ್ಣಯ್ಯನವರ ಚೊಚ್ಚಲ ಕೂಸು ಕಡೆಯುಸಿರು ಎಳೆದಿತ್ತು; ಅವರ ಪತ್ನಿ ರೋದಿಸುತ್ತಿದ್ದರು. ವೆಂಕಣ್ಣಯ್ಯನವರ ಕಣ್ಣಲ್ಲಿಯೂ ನೀರು ತುಂಬಿತ್ತು. ಆದರೆ ತಕ್ಷಣವೇ ಕಣ್ಣೀರು ಒರೆಸಿಕೊಂಡರು, ಹೆಂಡತಿಯನ್ನು ಸಮಾಧಾನಪಡಿಸಿದರು; ಶವವನ್ನು ಒಪ್ಪಮಾಡಿ ಬರುವಂತೆ ತಮ್ಮನಿಗೂ ಅಳಿಯನಿಗೂ ತಿಳಿಸಿದರು. ಅವರ ಮುಖದಲ್ಲಿ ಈಗ ವಿಷಾದದ ಛಾಯೆ ಅಳಿದು, ಪ್ರಶಾಂತತೆ ಆವರಿಸಿತ್ತು.

ವೆಂಕಣ್ಣಯ್ಯನವರು ಈಗ ಮಹಡಿಯ ಕೋಣೆಗೆ ಮರಳಿ ಅಲ್ಲಿಯ ಗಮಕ ವ್ಯಾಖ್ಯಾನಾದಿಗಳ ಚಟುವಟಿಕೆಗಳೊಂದಿಗೆ ಸೇರಿಕೊಂಡರು. ಬಳಿಕ ಔತಣಕೂಟದಲ್ಲಿ ಎಲ್ಲರೊಡನೆ ಊಟಕ್ಕೆ ಕುಳಿತರು. ಇತರರಿಗೆ ಉಪಚಾರೋಕ್ತಿ ಹೇಳುತ್ತ, ಹಾಸ್ಯದ ಚಟಾಕಿ ಹಾರಿಸುತ್ತ, ಊಟವನ್ನೂ ಮಾಡಿದರು. ಊಟವಾದ ಮೇಲೆ ತಾಂಬೂಲ ಸೇವನೆಯಾಯಿತು, ಲೋಕಾಭಿರಾಮದ ಮಾತುಕತೆಯಾಯಿತು. ಕಾಫಿ ಕುಡಿದಾದ ಮೇಲೆ ಆಹ್ವಾನಿತರೂ ಕಲಾವಿದರೂ ಹೊರಟುಹೋದರು. ಆಪ್ತಮಿತ್ರರಾದ ರಾಜೀವಲೋಚನಂ ಒಬ್ಬರು ಉಳಿದುಕೊಂಡರು.

ಮನೆಯ ಸಂತೋಷ ಸಂಭ್ರಮಗಳಲ್ಲಿ ಆತಿಥ್ಯ ಮಾಡುತ್ತಿದ್ದ ಗೃಹಿಣಿಯ ಸುಳಿವು ಅಂದು ಎಲ್ಲಿಯೂ ಕಾಣದೆ ಹೋದುದು ರಾಜೀವಲೋಚನಂ ಅವರ ಗಮನಕ್ಕೆ ಬಂದಿತ್ತು. ಅವರು 'ನಿಮ್ಮ ಶ್ರೀಮತಿ ಊರಿನಲ್ಲಿಲ್ಲವೇ ?" ಎಂದು ವೆಂಕಣ್ಣಯ್ಯನವರನ್ನು ಪ್ರಶ್ನಿಸಿದರು. ಅವರು ಆ ಪ್ರಶ್ನೆಗೆ ನೇರವಾಗಿ ಉತ್ತರಕೊಡದೆ ಹೀಗೆ ಹೇಳಿದರು: "ವೃಷಭನಾಥನ

ಸಭೆಯಲ್ಲಿ ನೀಲಾಂಜನೆ ನರ್ತನಮಾಡುತ್ತ ಆಯುಸ್ಸು ತೀರಿ ಹಾಗೆಯೇ ಕರಗಿಹೋದಳು. ಆಗ ದೇವೇಂದ್ರ ಏನು ಮಾಡಿದ ಗೊತ್ತೆ? ಅಂತಹವಳೇ ಒಬ್ಬ ಸುಂದರಿಯನ್ನು ಸೃಷ್ಟಿಸಿ ನರ್ತನ ಮುಂದುವರಿಯುವಂತೆ ಮಾಡಿದ. ಯಾಕೆ ಗೊತ್ತೆ? ರಸಾಭಾಸವಾಗದಿರಲಿ ಎಂದು. ಅದು ಯಾರ ಗಮನಕ್ಕೂ ಬಂದಿರಲಿಲ್ಲ. ಆದರೆ ವೃಷಭನಾಥನಿಗೆ ಮಾತ್ರ ಗೋಚರವಾಯಿತು. ನಾನು ಇಂದು ದೇವೇಂದ್ರನ ಪಾತ್ರ ವಹಿಸಿದ್ದೆ. ನಡೆದ ಅಚಾತುರ್ಯ ಯಾರಿಗೂ ಗೊತ್ತಾಗಲಿಲ್ಲ. ಆದರೆ ನೀನು ವೃಷಭನಾಥನಂತೆ ಪುಣ್ಯಜೀವಿ. ನಿನ್ನ ಕಣ್ಣಿಗೆ ಆಭಾಸ ಗೋಚರವಾಗಿದೆ."

ಹೀಗೆ ಹೇಳಿ ನಡೆದ ದುಃಖದ ಸಂಗತಿಯನ್ನು ವೆಂಕಣ್ಣಯ್ಯನವರು ರಾಜೀವ ಲೋಚನಂ ಅವರಿಗೆ ತಿಳಿಸಿದರು. ಅದನ್ನು ಕೇಳಿ ರಾಜೀವಲೋಚನಂ ತಮ್ಮ ಕೋಪವನ್ನು ಹತ್ತಿಕ್ಕಲಾರದೆ, "ವೆಂಕಣ್ಣಯ್ಯ! ನೀನು ಮನುಷ್ಯನಲ್ಲ" ಎಂದು ಆಕ್ಷೇಪಿಸಿದರು. ಆಗ ವೆಂಕಣ್ಣಯ್ಯನವರು, "ಅಯ್ಯ, ಈ ಸಂದರ್ಭದಲ್ಲಿ ನಾನು ಇನ್ನೇನು ಮಾಡಬೇಕಾಗಿತ್ತು? ಮಗು ಇರುವ ವರೆಗೆ ನನ್ನ ಕರ್ತವ್ಯವನ್ನು ನಾನು ಮಾಡಿದ್ದೆ. ಡಾಕ್ಟರು ಬಂದು ನಿತ್ಯವೂ ನೋಡಿಕೊಂಡು ಹೋಗುತ್ತಿದ್ದರು. ಈ ದಿನ ಬೆಳಗ್ಗೆ ನೋಡಿದಾಗ, ಮಗು ಗುಣಮುಖ ವಾಗುತ್ತದೆ ಎಂದು ತಿಳಿಸಿದ್ದರು. ಇದ್ದಕ್ಕಿದ್ದಂತೆ ಅದು ಪ್ರಾಣಬಿಟ್ಟಿತು. ಮುಂದೇನು ಮಾಡಬೇಕು? ನಾನೂ ನೀನೂ ಇಬ್ಬರೂ ಒಬ್ಬರೇ ಗುರುಗಳ ಶಿಷ್ಯರು. ಅವರ ಉಪದೇಶ ಕೇಳಿದ್ದೇವೆ, ಭಗವದ್ಗೀತೆ ಓದಿದ್ದೇವೆ. 'ಶಾಸ್ತ್ರ ಓದುವುದಕ್ಕೆ, ಬದನೇಕಾಯಿ ತಿನ್ನುವುದಕ್ಕೆ' ಎಂದು ಆಗಬೇಕೇನು? ನಮ್ಮ ವೇದಾಂತ ಕರ್ಣನ ಅಸ್ತ್ರವಾದರೆ ಹೇಗೆ?"

ರಾಜೀವಲೋಚನಂ ಮತ್ತೊಮ್ಮೆ ಹೇಳಿದರು: "ವೆಂಕಣ್ಣಯ್ಯ, ನೀನು ಮನುಷ್ಯನಲ್ಲ!"

ಪ್ರ. ಸಂ. ಕುವೆಂಪು, 'ಸವಿನೆನಪು' (ದಿ. ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕಗ್ರಂಥ), ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೧೯೭೦, ಪು. ೨೭೮-೮೦

೯೭. 'ಶ್ರೀರಾಮಾರ್ಪಣ'

ವೆಂಕಟರಾಮ ಶಾಸ್ತ್ರಿಗಳು ಕವಿಗಳು, ವಿದ್ವಾಂಸರು; ಮಾತಾಡುವಾಗ ಉಗ್ಗು ಕಾರಣವಾಗಿ ಅವರನ್ನು ನತ್ತಿ ಶಾಸ್ತ್ರಿಗಳು ಎನ್ನುತ್ತಿದ್ದರು, ಜನ. ಮಣ್ಣಿನ ಮಾಳಿಗೆ ಮನೆ, ಒಂದು ಸಣ್ಣ ಹೊಲ, ಕೆಲವು ಓಲೆಗರಿ ಪುಸ್ತಕಗಳು ಅವರ ಆಸ್ತಿ. ಮೂವರು ಮಕ್ಕಳು. ಶಾಸ್ತ್ರಿಗಳು ಸಂಸಾರದ ಯೋಚನೆಯನ್ನು ಹೆಂಡತಿ ಮಕ್ಕಳಿಗೆ ಬಿಟ್ಟು ತಾವೂ ಮನೆಗೆ ಒಬ್ಬ ಅತಿಥಿ ಎನ್ನುವಂತಿದ್ದರು.

ಶಾಸ್ತ್ರಿಗಳು ರಾಮಭಕ್ತರು. ಪ್ರತಿ ವರ್ಷ ಚೈತ್ರಮಾಸದಲ್ಲಿ ರಾಮೋತ್ಸವ ನಡಸಿ

ಪಟ್ಟಾಭಿಷೇಕದ ದಿವಸ ಸಾವಿರಜನರ ಸಂತರ್ಪಣೆ ನಡೆಸುತ್ತಿದ್ದರು. ಜನ ಇನ್ನೂ ಹೆಚ್ಚಾಗಿಯೇ ಸೇರುತ್ತಿದ್ದರು. ಯಾರು ಏನು ಕೊಟ್ಟರೂ 'ಶ್ರೀರಾಮಾರ್ಪಣ' ಎಂದು ಹೇಳಿಕೊಂಡು ಒಂದು ಗೋಣಿಚೀಲವನ್ನೊಡ್ಡಿ ಅದರಲ್ಲಿ ಹಾಕಿಸಿಕೊಂಡು ಊರಿನ ಸೋಮೇಶ್ವರ ದೇವಸ್ಥಾನದ ಬಳಿಯ ಮಂಟಪಕ್ಕೆ ತರುತ್ತಿದ್ದರು. ಸಂಗ್ರಹದಲ್ಲಿ ಬತ್ತ, ಅಕ್ಕಿ, ಬೇಳೆ, ಗೋಧಿಹಿಟ್ಟು, ಬೆಲ್ಲ, ದಿನಸುಗಳು, ಸೌದೆ, ತರಕಾರಿ, ದೊನ್ನೆಕಟ್ಟು, ಹಚ್ಚೆದೆಲೆ, ತೆಂಗಿನ ಕಾಯಿ ಹೀಗೆ ಪದಾರ್ಥಗಳಿರುತ್ತಿದ್ದುವು. ಕೆಲವರು ಶಾಸ್ತ್ರಿಗಳು ಬರುವುದನ್ನು ಕಾದಿದ್ದು, ಪದಾರ್ಥಗಳನ್ನು ಮೂಟೆ ಕಟ್ಟಿರಿಸಿ, ಒಂದಿಷ್ಟು ದಕ್ಷಿಣೆಸಹಿತ ಕಾದಿರುತ್ತಿದ್ದರು.

ಸಂತರ್ಪಣೆಗೆ ಅಡಿಗೆಯವರು ತಮ್ಮ ಮಾಮೂಲು ಸಂಭಾವನೆ ಪಡೆಯದೆ ಶಾಸ್ತ್ರಿಗಳು ಕೊಟ್ಟಷ್ಟು ತೆಗೆದುಕೊಳ್ಳುತ್ತಿದ್ದರು. ಕೆಲವರು ಬಡಿಸಲು ಸಿದ್ಧರಾಗುತ್ತಿದ್ದರು. ೩-೪ ಪಂಕ್ತಿ ಭೋಜನವಾಗುತ್ತಿತ್ತು. ಅದು ಹೋಳಿಗೆ ಪಾಯಸ ಚಿತ್ರಾನ್ನ ಸಹಿತ ಒಳ್ಳೆಯ ಭೋಜನ. ಶಾಸ್ತ್ರಿಗಳೇ ಸಾಲುಸಾಲಿಗೂ ಹೋಗಿ ಅತಿಥಿಗಳಿಗೆ ಉಪಚಾರ ಹೇಳುತ್ತಿದ್ದರು. ಭೋಜನಾನಂತರ ಗುಡಿಯ ಹೊರಗಡೆ ತಾಂಬೂಲಕ್ಕೆ ಆಹ್ವಾನಿಸುತ್ತಿದ್ದರು. ಅದು ಪ್ರಾರ್ಥನೆ. ಬಂದವರಿಗೆಲ್ಲ, ದೊಡ್ಡವರಿಗೆ ತಾಂಬೂಲದೊಂದಿಗೆ ತಲಾ ಅರ್ಧಾಣೆ ದಕ್ಷಿಣೆ; ಹುಡುಗರಿಗೆ ತಲಾ ಕಾಲಾಣೆ ದಕ್ಷಿಣೆ.

ಈ ಕಲಾಪ ಮುಗಿದ ಮೇಲೆ ಶಾಸ್ತ್ರಿಗಳು ತಮ್ಮ ಉಗ್ರಾಣದ ಕೊಠಡಿಯಲ್ಲಿ ಉಳಿದಿದ್ದ ಸಾಮಾನು ಎಲ್ಲವನ್ನೂ ಹೊರಗೆ ತಂದಿರಿಸಿಕೊಳ್ಳುತ್ತಿದ್ದರು.

"ಬೆಲ್ಲ ಒಂದು ಮುದ್ದೆ ಮಿಕ್ಕಿದೆ, ಬೇಕಾದರೆ ಯಾರಾದರೂ ತೆಗೆದುಕೊಳ್ಳಬಹುದು" ಎನ್ನುವರು. "ತೆಗೆದುಕೊಳ್ಳಲು ಮುಂದಾದವರಿಗೆ, ದಕ್ಷಿಣೆ ಕಾಲಾಣೆಯನ್ನು ಇಟ್ಟು 'ಶ್ರೀರಾಮಾರ್ಪಣ' ಎನ್ನುವರು. 'ದೊನ್ನೆಕಟ್ಟು ಅರ್ಧ ಮಿಕ್ಕಿದೆ. ೧೦-೧೨ ದೊನ್ನೆ ಇರಬಹುದು. ಬೇಕಾದರೆ...." ಎನ್ನುವರು. ಅಪೇಕ್ಷಿಸಿದವರಿಗೆ ದಕ್ಷಿಣೆ ಸಹಿತ 'ಶ್ರೀರಾಮಾರ್ಪಣ' ಎನ್ನುವರು. ಕಡ್ಡಿ ಮುರಿದ ಹಳೆಯ ಛತ್ರಿ ಇರಬಹುದು, ಮಿಕ್ಕ ಹತ್ತು ಬೆರಣಿ ಇರಬಹುದು. ಅದಕ್ಕೂ ಹೀಗೆಯೇ ದಾನದ ವಿಲೇವಾರಿ.

ಶಾಸ್ತ್ರಿಗಳು ಹೀಗೆ ಉಳಿದು ಹೋದ ಎಲ್ಲ ಸಾಮಾನುಗಳನ್ನೂ ಕೈಯಲ್ಲಿ ಉಳಿದ ಎಲ್ಲ ದಕ್ಷಿಣೆ ಕಾಸುಗಳನ್ನೂ ಅಲ್ಲಿಯೇ ಹಂಚಿಬಿಟ್ಟು ಹೊರಟುಬಿಡುವುದೇ ಪದ್ಧತಿ.

ಒಂದು ವರ್ಷ ಸಂತರ್ಪಣೆಯ ದಿವಸ ಶಾಸ್ತ್ರಿಗಳ ಪತ್ನಿ ಪಾರ್ವತಮ್ಮನವರು ಉಗ್ರಾಣದಲ್ಲಿದ್ದ ಒಂದು ಬೆಲ್ಲದ ಉಂಡೆಯನ್ನು ಒಡೆದು ತಮ್ಮ ಮೊಮ್ಮಗುವಿಗೆ ಕೊಟ್ಟರು. ಅದು ಶಾಸ್ತ್ರಿಗಳ ಕಣ್ಣಿಗೆ ಬಿತ್ತು. ಅವರು ಕೂಡಲೇ "ಇದೇನು, ಯಾಚನೆಮಾಡಿ ತಂದು ಮುಡುಪಾಗಿಟ್ಟಿದ್ದ ಪದಾರ್ಥವನ್ನು ಹಾಗೆ ಸ್ವಂತಕ್ಕೆ ಉಪಯೋಗಿಸಿಕೊಳ್ಳಬಹುದೇ?" ಎಂದು ಆಕ್ಷೇಪಿಸಿದರು. ಆಕೆ, "ನೀವಂತೂ ಮಕ್ಕಳ ಕೈಯಲ್ಲಿ ಒಂದು ಕಾಸಿಟ್ಟ ಪಾಪಕ್ಕೆ ಹೋಗಲಿಲ್ಲ. ಒಂದು ಚೂರು ತಿಂಡಿ ಕೊಟ್ಟವರಲ್ಲ. ಯಾರೋ ಕೊಟ್ಟದ್ದನ್ನು ನಾನು ಮಗುವಿಗೆ ಕೊಟ್ಟರೆ ನಿಮಗೇನು ನಷ್ಟವಾದದ್ದು? ಮಕ್ಕಳು ದೇವರ ಹಾಗಲ್ಲವೇ?" ಎಂದು ಕೇಳಿದರು.

ಆಗ ಶಾಸ್ತ್ರಿಗಳು ಮಾಡಿದ್ದೇನು? ತಮ್ಮ ಸುತ್ತ ಮುತ್ತ ಇದ್ದ ೧೦-೧೫ ಹುಡುಗರನ್ನು ಕಲೆಹಾಕಿ, ತಮ್ಮ ಪತ್ನಿಯನ್ನು ಉದ್ದೇಶಿಸಿ ಹೇಳಿದರು: "ನಿನ್ನ ಮೊಮ್ಮಕ್ಕಳು ಮಾತ್ರವೇ ದೇವರೋ? ಇವರು ದೇವರಲ್ಲವೋ?" ಎಂಬುದಾಗಿ ಆ ಮಕ್ಕಳನ್ನು ತೋರಿಸಿ ಕೇಳಿದರು.

ಡಿ.ವಿ.ಜಿ. 'ಸಾಹಿತಿ ಸಜ್ಜನ ಸಾರ್ವಜನಿಕರು', ಜ್ಞಾಪಕ ಚಿತ್ರಶಾಲೆ, ಸಂಪುಟ ೧, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೬೯, ೧೯೮೨ (ದ್ವಿ. ಮು.), ಪು. ೧೧೪-೧೮

೯೮. 'ಸಮುದ್ರದ ಅಲೆಯಂತೆ ಒಂದರ ನಂತರ ಒಂದು'

ವಿ. ಸೀತಾರಾಮಯ್ಯನವರಿಗೆ ಲಂಡನ್ ನೋಡಬೇಕೆಂಬ ಅಪೇಕ್ಷೆ ಹಿಂದಿನಿಂದಲೂ ಇತ್ತು. ಅಲ್ಲಿಯ ಭಾರತೀಯ ವಿದ್ಯಾಭವನದ ಶಾಖೆಯ ಆಹ್ವಾನದ ಮೇಲೆ ೧೯೭೫ರಲ್ಲಿ ಅವರು ಲಂಡನ್‌ಗೆ ಹೋಗಿ ಬರುವುದು ಸಾಧ್ಯವಾಯಿತು. ಆಗ ಅವರ ವಯಸ್ಸು ೭೧-೭೨. ವಿದ್ಯಾಭವನದ ಶಾಖಾಧಿಕಾರಿ ಮತ್ತೂರು ಕೃಷ್ಣಮೂರ್ತಿಗಳ ಆತಿಥ್ಯ ಇಲ್ಲಿ ದೊರೆಯಿತು. ಬಂದ ದಿನವೇ ಪ್ರಯಾಣದ ಆಯಾಸವನ್ನೂ ಲಕ್ಷಿಸದೆ, ಸೌಥಾಂಪ್ಟನ್ ಪಟ್ಟಣದಲ್ಲಿ ಏರ್ಪಾಡಾಗಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೃಷ್ಣಮೂರ್ತಿಗಳೊಂದಿಗೆ ತೆರಳಿದರು.

ಕಾರ್ಯಕ್ರಮ ಸಂಜೆ ೬-೩೦ಗೆ ಆರಂಭವಾಗುವುದರಲ್ಲಿತ್ತು. ಸೌಥಾಂಪ್ಟನ್ ಪಟ್ಟಣದ ಮೇಯರ್ ಮುಖ್ಯ ಅತಿಥಿ. ೪೫ ನಿಮಿಷ ಮೊದಲೇ ಸ್ಥಳ ತಲುಪಿದ್ದ ಕಾರಣ, ಮೇಯರ್ ಅವರಿಗೆ ವಿ. ಸೀ. ಅವರನ್ನು ಕೃಷ್ಣಮೂರ್ತಿಗಳು ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮ ನಡೆಯಲಿದ್ದ ಪುರಸಭೆಯ ಕಟ್ಟಡದಲ್ಲಿ ಮೇಯರ್ ಮತ್ತು ವಿ.ಸೀ. ಸ್ವಲ್ಪಕಾಲ ಲೋಕಾಭಿರಾಮದ ಮಾತುಕತೆ ನಡಸಿದ್ದರು.

ಸಕಾಲಕ್ಕೆ ಕಾರ್ಯಕ್ರಮ ಆರಂಭವಾಯಿತು. ಕೃಷ್ಣಮೂರ್ತಿಗಳ ಏರ್ಪಾಡಿನಂತೆ ವಿ.ಸೀ. ಅವರೂ ವೇದಿಕೆಯಲ್ಲಿದ್ದರು. ಮೇಯರ್ ಅವರ ಮಾತು ಮುಗಿದ ಮೇಲೆ ಅವರು ಸಹ ಮಾತನಾಡಬೇಕಾಗಿತ್ತು. ಸಭೆಗೆ ವಿ.ಸೀ. ಅವರನ್ನು ಪರಿಚಯಿಸುತ್ತ ಮೇಯರ್ ಹೇಳಿದರು: "ಇವರು ಭಾರತದಿಂದ ಇಂದು ಬೆಳಗ್ಗೆ ಬಂದರು. ಇವರೊಂದಿಗೆ ನಾನು ೪೦-೪೫ ನಿಮಿಷ ಮಾತಾಡಿದೆ. ೪೦-೪೫ ವರ್ಷ ಸ್ನೇಹ ಆದಂತೆ ಆಗಿದೆ. ನಾನು ಸೌಥಾಂಪ್ಟನ್ನಿನಲ್ಲಿಯೇ ಹುಟ್ಟಿ ಬೆಳೆದವನು. ಈಗ ನನಗೆ ೬೦ ವರ್ಷ. ಆದರೆ ಈ ಮಹನೀಯರ ಜೊತೆ ೩-೪ ದಿನಗಳಿದ್ದು ಈ ಪಟ್ಟಣದ ಬಗ್ಗೆ ನಾನು ಇನ್ನೂ ತಿಳಿದುಕೊಳ್ಳಬೇಕಾಗಿದೆ. ಸಭಾಸದರಲ್ಲಿ ೪೦ ಜನಕ್ಕಿಂತ ಹೆಚ್ಚು ಆಂಗ್ಲರೇ ಇದ್ದರು. ೩-೪ ನಿಮಿಷ ಒಂದೇ ಸಮನೆ ಚಪ್ಪಾಳೆ ತಟ್ಟಿದರು, ಆ ಮಾತು ಕೇಳಿ.

ವಯಸ್ಸು, ಪ್ರಯಾಣದ ಆಯಾಸ ಎಲ್ಲ ಸೇರಿ ಮಾರನೆಯ ಬೆಳಗಿನ ಜಾವ ವಿ.ಸೀ. ಅವರಿಗೆ ಲಘುವಾಗಿ ಪಾರ್ಶ್ವವಾಯು ಬಡಿಯಿತು. ವಿ. ಸೀ. ಕುಸಿದು ಹೋದರು. ತಕ್ಷಣವೇ ಅವರನ್ನು ಲಂಡನ್ ಆಸ್ಪತ್ರೆಗೆ ಸೇರಿಸಲಾಯಿತು. ಡಾ. ನಾರ್ಮನ್ ಚಿಕಿತ್ಸೆ ನೀಡಿದರು. ಚಿಕಿತ್ಸೆ ಫಲಕಾರಿಯಾಗಿ ಮೂರನೆಯ ದಿನಕ್ಕೆ ವಿ. ಸೀ. ಚೇತರಿಸಿಕೊಂಡರು. ತಮ್ಮ ಆಹ್ವಾನದ ಮೇಲೆ ಇಂಗ್ಲೆಂಡಿಗೆ ಬರುತ್ತಿದ್ದಂತೆಯೇ ಹೀಗಾಯಿತಲ್ಲ ಎನ್ನುವ ಕೊರಗು ಕೃಷ್ಣಮೂರ್ತಿಗಳಿಗೆ; ಸಭೆಯಲ್ಲಿ ದೊರೆತ ಪ್ರಶಂಸೆಯಿಂದ ವಿ.ಸೀ. ಅವರಿಗೆ ದೃಷ್ಟಿಯಾಗಿರಬಹುದೇ ಎಂಬ ಹೆದರಿಕೆ. ಆಗ ವಿ.ಸೀ. ಅವರೇ 'ಸುಖಸ್ಯಾದನಂತರಂ ದುಃಖಂ, ದುಃಖಸ್ಯಾದನಂತರಂ ಸುಖಂ; ಸಮುದ್ರದ ಅಲೆಯಂತೆ ಒಂದರ ನಂತರ ಒಂದಪ್ಪ; ಅದಕ್ಕೆ ಎದೆಗುಂದಬಾರದು" ಎಂದು ಕೃಷ್ಣಮೂರ್ತಿಗಳಿಗೆ ಸಮಾಧಾನ ಹೇಳಿದರು.

ಆಮೇಲೆ ಕೆಲವು ದಿನಗಳು ಸಂವಾದ ಪ್ರವಚನಗಳು ನೆಮ್ಮದಿಯಿಂದ ನಡೆದು ವಿ. ಸೀ. ಭಾರತಕ್ಕೆ ಹಿಂದಿರುಗುವ ದಿನ ಸಮೀಪಿಸಿತು. ತಮ್ಮ ಅನಾರೋಗ್ಯದ ಚಿಕಿತ್ಸೆಗಾಗಿ ಕೃಷ್ಣಮೂರ್ತಿಗಳಿಗೆ ತುಂಬ ಖರ್ಚು ತಗುಲಿರಬೇಕು ಎಂಬ ಸಂಕೋಚ ಅವರನ್ನು ಕಾಡುತ್ತಿತ್ತು. "ನಿಮ್ಮ ಮೇಲೆ ಈ ಭಾರ ಹೊರಿಸಿಬಿಟ್ಟೆನಲ್ಲಾ ನಾನು" ಎಂದು ಅದನ್ನು ಬಾಯಿಬಿಟ್ಟೇ ಹೇಳಿದರು. ಆಗ ತಕ್ಷಣವೇ ಅವರಿಗೆ, ಲಂಡನ್ ಹಾಸ್ಪಿಟಲ್ ವೈದ್ಯ ಡಾ. ನಾರ್ಮನ್ ಅವರು ಬರೆದಿದ್ದ ಪತ್ರವನ್ನು, ತಮ್ಮ ಜೇಬಿನಲ್ಲಿಯೇ ಇಟ್ಟು ಕೊಂಡಿದ್ದುದನ್ನು, ಕೃಷ್ಣಮೂರ್ತಿಗಳು ತೆಗೆದು ತೋರಿಸಿದರು. ಅದರ ಒಕ್ಕಣೆ ಹೀಗಿತ್ತು:

Dear Mathoor,

My colleagues and myself are very pleased to know that Prof. V. Sitaramaiah has fully recovered. The progress was remarkable, beyond our expectation.

It was my privilege to have met such a noble person. He is a gentleman. You have such a Guru. I envy you!

I hope you will be pleased to know that we treated him as our honoured guest.

Please convey our regards to Prof. Sitaramiah. The nurses and my fellow colleagues join me.

Yours sincerely,

ವಿ. ಸೀ. ಅವರ ಕಣ್ಣುಗಳಿಂದ ನೀರ ಹನಿಗಳು ಉದುರಿ ಪತ್ರದ ಮೇಲೆ ಬಿದ್ದುವು.

ಸಂ. ಎಲ್. ಎಸ್. ಶೇಷಗಿರಿ ರಾವ್, ಎಂ. ವಿ. ವೆಂಕಟೇಶ ಮೂರ್ತಿ, 'ವಿ.ಸೀ. ನೂರರ ನೆನಪು', ವಿ.ಸೀ. ಸಂಪದ, ಬೆಂಗಳೂರು-೮೫, ಪು. ೧೬೨-೭೧

೯೯. 'ಸ್ವಾಮಿಗಳು ಹೆದರಿದರು, ಬಹಿಷ್ಕಾರ ಹಿಂತೆಗೆದುಕೊಂಡರು'

ತಗಡೂರು ರಾಮಚಂದ್ರ ರಾಯರು ಖಾದಿ ಪ್ರಚಾರದಲ್ಲಿಯೂ ಅಸ್ಪೃಶ್ಯತೆಯ ನಿವಾರಣೆಯಲ್ಲಿಯೂ ಸಾಮಾಜಿಕವಾಗಿ ಕೆಳಸ್ತರದ ಜನರನ್ನು ಮೇಲೆತ್ತುವಲ್ಲಿಯೂ ಹಳೆಯ ಮೈಸೂರು ಪ್ರಾಂತದಲ್ಲಿ ಅನ್ಯಾದೃಶವಾಗಿ ದುಡಿದವರು; ತುಂಬ ಸಾಹಸಮಾಡಿ, ತಮ್ಮ ಸಣ್ಣ ಗ್ರಾಮವಾದ ತಗಡೂರಿಗೆ ಗಾಂಧೀಜಿಯವರು ಭೇಟಿಕೊಡುವಂತೆ ಮಾಡಿದವರು.

ರಾಯರ ಹೋರಾಟದಿಂದಲೇ ಸರಕಾರ ಕಣಿಯರ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ಅನುಮತಿ ಕೊಡುವುದು ಸಾಧ್ಯವಾಯಿತು. ಆದರೆ ಇದನ್ನು ಆಗಗೊಡದಂತೆ ಸವರ್ಣೀಯರು ಅಡ್ಡಿ ಆತಂಕಗಳನ್ನು ಒಡ್ಡಿದರು. ಶಿಕ್ಷಕರನ್ನು ಬೆದರಿಸಿದರು. ರಾಯರು ಜಗ್ಗಲಿಲ್ಲ. ತಮ್ಮ ಧ್ಯೇಯಸಾಧನೆಗೆ ನರಸೀಪುರದ ಬಳಿಯ ಸೋಸಲೆ ಗ್ರಾಮವನ್ನು ಆರಿಸಿಕೊಂಡರು. ಒಂದು ದಿವಸ ನಿಗದಿ ಮಾಡಿಕೊಂಡು ನಾಲ್ವರು ಕಣಿಯರ ಮಕ್ಕಳನ್ನು ಕರೆದುಕೊಂಡು ಶಾಲೆಗೆ ಸೇರಿಸಲು ಹೊರಟರು. ಮೊದಲೇ ವಿಷಯ ತಿಳಿದಿದ್ದ ಸವರ್ಣೀಯರಲ್ಲಿ ಕೆಲವರು ತಮ್ಮ ಪ್ರಬಲ ವಿರೋಧವನ್ನು ಪ್ರಕಟಿಸಿದರು. ಅವರು ಕಣಿಯರ ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ಬೀದಿಗಳಲ್ಲಿ ಜನ ತುಂಬಿ ನಿಂತಿದ್ದರು.

ಜನ ರಾಮಚಂದ್ರ ರಾಯರನ್ನು ಬಾಯಿಗೆ ಬಂದಂತೆ ಹೊಲಸು ಬೈಗುಳಗಳಿಂದ ಬಯ್ದರು. ಅವರ ಮೇಲೆ ಉಗುಳಿದರು, ಹೇಸಿಗೆ ಎಸೆದರು. ಅವರು ಹೊದ್ದಿದ್ದ ಕಂಬಳಿ, ನಿಲುವಂಗಿಯೆಲ್ಲಾ ಉಗುಳು ಹೇಸಿಗೆಗಳಿಂದಲೇ ತೊಯ್ದಿತು. ಆದರೆ ಅವರು ಅಸಹ್ಯ ಪಡಲಿಲ್ಲ, ಕೊಡವಿಕೊಳ್ಳಲಿಲ್ಲ. ಶಾಲೆಗೆ ಮಕ್ಕಳೊಂದಿಗೆ ಹೋದರು. ಸರಕಾರದ ಆಜ್ಞೆ ತೋರಿಸಿ ಕಣಿಯರ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವಂತೆ ಕೋರಿದರು. ಮಾಧ್ವರಾದ ಉಪಾಧ್ಯಾಯರಿಗೆ ಇದು ಇಕ್ಕಟ್ಟಿನ ಸಂದರ್ಭ. ಸರಕಾರದ ಆಜ್ಞೆಯನ್ನು ಮೀರುವಂತಿಲ್ಲ, ಸವರ್ಣೀಯರ ಪರವಾದ ಊರಿನ ಮಠದ ಸ್ವಾಮಿಗಳ ಆಗ್ರಹವನ್ನು ತಪ್ಪಿಸಿಕೊಳ್ಳುವಂತಿಲ್ಲ.

ಉಪಾಧ್ಯಾಯರೇನೋ ಸರಕಾರದ ಆದೇಶ ಪಾಲಿಸಿ ಕಣಿಯರ ಮಕ್ಕಳನ್ನು ಶಾಲೆಗೆ ಸೇರಿಸಿಕೊಂಡರು. ನಿರೀಕ್ಷಿಸಿದ್ದಂತೆ, ಸ್ವಾಮಿಗಳು ಹಾಕಿದ ಬಹಿಷ್ಕಾರಕ್ಕೂ ತಲೆ ಕೊಟ್ಟರು. ಈ ವಿಷಯ ತಿಳಿದ ರಾಮಚಂದ್ರರಾಯರು ಸ್ವಾಮಿಗಳಿಗೆ ಒಂದು ಪತ್ರ ಬರೆದು, ಅವರ ನಿಲವನ್ನು ಖಂಡಿಸಿದರು. ಮಠದ ನಿಯಮಗಳ ಪ್ರಕಾರ ಆಗ ಮುಸಲ್ಮಾನರಿಗೆ ಮಠದೊಳಗೆ ಪ್ರವೇಶದ ಅವಕಾಶವಿರಲಿಲ್ಲವಾದರೂ ದಿವಾನ್ ಮಿರ್ಜಾ ಇಸ್ಮಾಯಿಲರು ಪಂಚೆಕಚ್ಚೆ ಹಾಕಿ ಧೋತ್ರ ಹೊದ್ದು ಹೋದಾಗ ಅವರಿಗೆ ಪ್ರಸಾದ ಮಂತ್ರಾಕ್ಷತೆಗಳನ್ನು ಅನುಗ್ರಹಿಸಿದ್ದನ್ನು ಅವರಿಗೆ ಜ್ಞಾಪಿಸಿದರು. ಆ ಪತ್ರದಲ್ಲಿ ಮಠದ ನಿಯಮ ಅಧಿಕಾರಿಗಳ ವಿಷಯದಲ್ಲಿ ಸಡಿಲಗೊಳ್ಳಬಹುದಾದರೆ, ಸರಕಾರದ ಅಪ್ಪಣೆ ಪಾಲಿಸಿದ ಒಬ್ಬ ಬಡ ಉಪಾಧ್ಯಾಯನ ವಿಷಯದಲ್ಲಿ ಏಕೆ ವ್ಯತಿರಿಕ್ತವಾಗಿ ವರ್ತಿಸಬೇಕು ಎಂದೂ ವಿರೋಧಿಸುವ ಶಕ್ತಿಯಿಲ್ಲದ ಉಪಾಧ್ಯಾಯನನ್ನು ಆ ರೀತಿ ಹಿಂಸೆಮಾಡುವುದು ತರವಲ್ಲವೆಂದೂ ಆ ಬಗ್ಗೆ ತಾವು ನ್ಯಾಯಾಲಯದಲ್ಲಿ ದೂರು ಸಲ್ಲಿಸುವುದಾಗಿಯೂ ಸ್ಪಷ್ಟವಾಗಿ ತಿಳಿಸಿದರು.

ಈಗ ಸ್ವಾಮಿಗಳು ಹೆದರಿದರು, ಬಹಿಷ್ಕಾರ ಹಿಂತೆಗೆದುಕೊಂಡರು.

ರಾಮಚಂದ್ರ ರಾಯರು ತಾವೇ ಬಹಿಷ್ಕೃತರಾಗಿದ್ದ ಕಾರಣ, ಅವರು ಕಣಿಯರ ಮಕ್ಕಳನ್ನು ಶಾಲೆಗೆ ಸೇರಿಸುವ ತಮ್ಮ ಸಾಮಾಜಿಕಕಾರ್ಯವನ್ನು ಮುನ್ನಡಸುವಾಗ ಹಲವು ತೊಂದರೆಗಳನ್ನು ಅನುಭವಿಸಿದರು. ಅವರಿಗೆ ಯಾರೂ ಆಶ್ರಯ ಕೊಡುತ್ತಿರಲಿಲ್ಲ. ತಿಂಡಿ ತೀರ್ಥ ಕೊಡುತ್ತಿರಲಿಲ್ಲ. ಕಣಿಯರ ವಸತಿಗಳಲ್ಲಿ ಇಳಿದುಕೊಳ್ಳುತ್ತಿದ್ದರು. ಪುರಿಯನ್ನೋ ಕಡಲೆಕಾಯಿಯನ್ನೋ ತಿಂದು, ನೀರು ಕುಡಿದು, ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ಎಚ್. ಪಿ. ವೆಂಕಟಸುಬ್ಬಯ್ಯ, 'ಧನ್ಯಜೀವಿ', ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು-೨, ೧೯೮೪, ಪು. ೩೮-೪೧

೧೦೦. 'ಹುಚ್ಚರ ಸಂತ್ಯಾಗೆ ತಲೆ ನೆಟ್ಟಗಿದ್ದೋನೆ ದಡ್ಡ'

ಶತೋತ್ತರ ವರ್ಷದ ದೀರ್ಘಾಯುಷಿ, ಯೋಗಪುರುಷ ಮುಕುಂದೂರ ಸ್ವಾಮಿಗಳಿಗೂ ಸಾಹಿತಿ ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೂ ನಡೆದ ಸಂವಾದವಿದು. ಸಂದರ್ಭ: ಇಬ್ಬರೂ ರೈಲುಹಳಿಗಳ ಮೇಲೆ ಅರಸೀಕೆರೆಯಿಂದ ಬಾಣಾವರದ ಕಡೆಗೆ ನಡೆದು ಹೋಗುತ್ತಿದ್ದರು. ವಿನೋದವಾಗಿ ಮಾತು ಸಾಗಿತ್ತು.

ಸ್ವಾಮಿಗಳು : ನೋಡೋ! ಈ ಬಡ್ಡೀಹೈದ ಒಳ್ಳೇ ಜೋರಾಗಿದ್ದ. ಈ ರೈಲುದಾರಿ ಮಾಡುವಾಗ ಈ ಏರಿಗೆ ಮಣ್ಣು ಹೊತ್ತ. ಒಳ್ಳೇ ಕಟ್ಟುಮಸ್ತಾಗಿದ್ದ ಇವನು. ತಟ್ಟೆ ತುಂಬಿ ತುಳಿದು ತುಳಿದು ವೊರುಸ್ತಾ ಇದ್ರು. 'ನೀವೆಂಗನ್ನ ತುಂಬಿ' ಅಂತಿದ್ದ ನೋಡು. ಅವತ್ತು ಕಷ್ಟ ಮಾಡಿದ್ದು ಇವತ್ತು ಸಾವಿರಾರು ಜನ ಸುಖವಾಗಿ ರೈಲಾಗೆ ಕುಂತ್ಕೊಂಡು ಎಲ್ಲಿಗೆ ಬೇಕಾದ್ರು ವೋಗ್ತಾರೆ. (ನಗುತ್ತಾ) ಹಿಂಗೇ ಅಲ್ವೇ. ಕಷ್ಟ ಮಾಡಿದ್ದು ವೆರ್ತ ಆಗಲ್ಲ (ಒಂದು ಸಾರ್ಥಕವನ್ನು ಅನುಭವಿಸಿದರು).

ಶಾಸ್ತ್ರಿಗಳು : (ಆಶ್ಚರ್ಯದಿಂದ) ಹೌದೇ ಸ್ವಾಮಿ, ನೀವ್ ಕೂಲಿ ಮಾಡ್ತಿದ್ರಾ?

ಸ್ವಾಮಿಗಳು : ಹೂಂ ಕಣೋ, ಕೂಲಿ ಮಾಡ್ತಿದ್ದ. ವಾರಕ್ಕೆ ಒಂದು ಕೂಲಿ ಹಂಚ್ತಿದ್ರು.

ಶಾಸ್ತ್ರಿಗಳು : ಎಷ್ಟು ಕೊಡ್ತಿದ್ರೂ?

ಸ್ವಾಮಿಗಳು : ಎಷ್ಟೋ ಕಣೋ. ಇವನಿಗೆ ಎಣಸಕ್ಕೆ ಬರ್ತಿತ್ತೇ? ಆವಾಗಿನ ದುಡ್ಡೇ ಬೇರೆ. ಈಗಿನಂಗೆ ಆಣೆ, ಅರ್ಧಾಣೆ, ಪಾವಲಿ, ಬಿಲ್ಲೆ ಇರಲಿಲ್ಲ. ಎಲ್ಲ ಬೆಳ್ಳೀವು. ಅದೆಂತಾವೋ ಈಗಲೂ ಹೇಳಾಕ್ ಬರಲ್ಲ. ಆಗಂತೂ ಇವಾಗಿನಂಗೆ ದುಡ್ಡು ಬಾಳ ಇರಲಿಲ್ಲ. ಏನಾದರೂ ಬೇಕಿದ್ರೆ ಯಾರ್ನ ಕೇಳಿದ್ರೂ ಕೊಡೋರು. ಇಲ್ಲಾಂದ್ರೆ ಪಕ್ಕದ್ಮನೆಯಾಗೆ

ತಂದ್ರಾಯ್ತು. ಅವರಿಗೆ ನವಣೇನೋ ರಾಗೀನೋ ಜೋಳಾನೋ ಕೊಟ್ರಾಯ್ತು. ಬಟ್ಟೇನೂ ಅಷ್ಟೆ. ಕಾಳು ಕೊಟ್ರೆ ನೇಕಾರ್ರು ಬಟ್ಟೆ ಕೊಡ್ತಿದ್ರು. ಇನ್ನು ಎಣ್ಣೆ: ಅವರವರ ಮನೆಗಳಾಗೇ ಹರಳೆಣ್ಣೆ ಬೇವಿನೆಣ್ಣೆ ಎಲ್ಲ ಮಾಡ್ಕಂಬೋದು. ದೀಪಕ್ಕೂ ಅದೇ ಎಣ್ಣೆ. ಯಾವುದಕ್ಕೂ ಕೊರತೇನೇ ಇರಲಿಲ್ಲ. ದುಡ್ಡಿನ್ನ್ಯಾಕೆ ಬೇಕು (ನಗುತ್ತಾರೆ).

ಶಾಸ್ತ್ರಿಗಳು : ಅದು ಸರಿ. ಆಗ ನಿಮಗೆ ವಯಸ್ಸು ಎಷ್ಟಾಗಿರಬಹುದು?

ಸ್ವಾಮಿಗಳು : ಯಾವನ್ ಬಲ್ನೋ..... ಯಾವ ನಮ್ ತಾಯಿ ಯಾವಾಗ ಹಡದ್ಲೋ, ಎಲ್ಲೋದ್ಲೋ, ಯಾರ್ ಬೆಳಸಿದ್ರೋ, ಎಲ್ಲಿ ಬಿದ್ನೋ ಎಲ್ಲಿ ಎದ್ನೋ! ವಯಸ್ಸು ಕೇಳಿದರೆ... ಇದಕ್ಕೆ ಜಾತ್ಕ ಬರೆದಿಟ್ಟೋರ್‍ಯಾರೋ (ಗಟ್ಟಿಯಾಗಿ ನಗುತ್ತಾರೆ).

ಶಾಸ್ತ್ರಿಗಳು : ಈಗ ನಿಮ್ಮ ವಯಸ್ಸು ಸುಮಾರು ಎಪ್ಪತ್ತೈದು ಇರಬಹುದೇ?

ಸ್ವಾಮಿಗಳು : (ತಟ್ಟನೆ) ಇದ್ದೀತು.

ಶಾಸ್ತ್ರಿಗಳು : (ನಗುತ್ತ) ನೂರು ಅಂತಾರೇ ಕೆಲವರು.

ಸ್ವಾಮಿಗಳು : ಇರ್ಲೂಬೌದು ಹೇಳು, ಅದೇನ್ ದೊಡ್ಡ ಮಾತು.

ಶಾಸ್ತ್ರಿಗಳು : ನೂರಿಪ್ಪತ್ತು, ನೂರ ಮೂವತ್ತು ಅಂತಾರಲ್ಲ ಸ್ವಾಮಿ!

ಸ್ವಾಮಿಗಳು : (ನಕ್ಕು) ಆಗ್ಲೇಳೋ, ಇವ್ನೇನು ನಿನ್ನೆ ಮೊನ್ನಿನವನಲ್ಲ. ವಯಸ್ಸಿಂದೇನು ದೊಡ್ಡಮಾತು. ಈ ಬೆಟ್ಟ ಗುಡ್ಡ, ಹಳ್ಳ ಕೊಳ್ಳ, ಇವಕ್ಕೆಲ್ಲ ಎಷ್ಟ್ ವಯಸ್ಸು? ಹೇಳೋರ್‍ಯಾರು? ಜನ ಸುಮ್ಕೆ ಕೇಳ್ತಾರೆ, ಹೇಳ್ತಾರೆ. ಊರು ಕೇರಿ, ಕುಲ ಗೋತ್ರ, ಹೆಣ್ಣು ಗಂಡು ಎಲ್ಲ ಇಂಗಡಿಸ್ತಾರೆ. ನಾವು ಶಿವಾಚಾರದೋರು, ನಾವು ದೇವಾಂಗದೋರು, ನಾವ್ ಬ್ರಾಮಣರು, ಅದರಾಗ್ ಮತ್ತೆ ನಾಮ್‌ದೋರು, ಅಡ್ಡಗಂದದೋರು, ಮುದ್ರೇವ್ರು. ಅವ್ರು ಇವ್ರು ಒಬ್ಬರನ್ನು ಕಂಡ್ರೆ ಒಬ್ರು ಮಾರ್‌ದೂರ ಹೋಗ್ತಾರೆ. ಮಡಿ ಮೈಲಿಗೆ ಅಂತಾರೆ. ನಗು ಬರ್ತೈತೆ; ನಕ್ಕರೆ ಬೈತಾರೆ. ಎಲ್ಲ ಹುಚ್ಚರಾಟ. ಹುಚ್ಚರ ಸಂತ್ಯಾಗೆ ತಲೆ ನೆಟ್ಟಗಿದ್ದೋನೆ ದಡ್ಡ. (ನಗುತ್ತಾ) ಈಗ ನೋಡು: ಶಿವಾಚಾರ ಅಂದ್ರೆ ಅವ್ರ ಆಚಾರ ಶಿವನಿಗಾಗಿ ಇರಬೇಕು. ಅದೇ ರೀತಿ ದೇವಾಂಗದೋರು ಅಂದ್ರೆ, ಎಲ್ಲ ದೇವಾಂಗದೋರೇ! ಈ ಅಂಗ ದೇವರದೇ ಅಲ್ವೇ? ಅದರಂತೆ ನಾಮ, ಅಡ್ಡಗಂದ, ಮುದ್ರೆ, ಈಬೂತಿ ಎಲ್ಲ ಅಷ್ಟೆ; ಬರೇ ಹೊರಗಳ ಯಾಪಾರ ಹಿಡಿದು ಬಡಿದಾಡ್ತಾರೆ.

ಬೆಳಗೆರೆ ಕೃಷ್ಣಶಾಸ್ತ್ರಿ, 'ಯೇಗ್ದಾಗೆಲ್ಲಾ ಐತೆ', ಪ್ರಕರಣ-೧೨, ಬೆಳಗೆರೆ, ೧೯೯೫, ಪು. ೨೧-೨೨

೧೦೧. 'ಹೆಂಡತಿ ಮಕ್ಕಳ ಸೇವೆಯನ್ನೂ ಸರ್ಕಾರಕ್ಕೆ ಬರೆದುಕೊಟ್ಟಿಲ್ಲ'

ಪದ್ಮಭೂಷಣ ಎಚ್. ವೈ. ಶಾರದಾ ಪ್ರಸಾದ್ ಅವರು ೧೯೪೨ರ ಸ್ವಾತಂತ್ರ್ಯ ಚಳವಳಿಯಲ್ಲಿ ವಿದ್ಯಾರ್ಥಿನಾಯಕರು. ಅವರಿಗೆ ಆಗ ಇನ್ನೂ ೧೮ ವರ್ಷದ ಪ್ರಾಯ. ಈ ಚಳವಳಿಗೆ ಸೇರುವ ಬಗ್ಗೆ ಅವರ ನಿರ್ಧಾರ ಅವರೇ ತೆಗೆದುಕೊಂಡದ್ದಾಗಿತ್ತು. 'ಹೀಗೇಕೆ ಮಾಡಿದೆ' ಎಂದು ಅವರ ಅಪ್ಪ ಅಮ್ಮ ಪ್ರಶ್ನೆ ಮಾಡಲಿಲ್ಲ, ಆಕ್ಷೇಪಿಸಲಿಲ್ಲ. ಪ್ರತಿಯಾಗಿ ಒತ್ತಾಸೆಯನ್ನೇ ಕೊಟ್ಟರು.

ತಂದೆ ಎಚ್. ಯೋಗನರಸಿಂಹಂ ಮೈಸೂರು ಶಿಕ್ಷಣ ಇಲಾಖೆಯ ಉದ್ಯೋಗಿಗಳು. "ಸರ್ಕಾರಿ ಉದ್ಯೋಗಿಗಳು ತಮ್ಮ ಮಕ್ಕಳನ್ನು ಈ ರೀತಿ ಹೋಗಲು ಬಿಡಬಾರದು, ಸರ್ಕಾರದ ವಿರುದ್ಧವಾದ ಚಳುವಳಿಯಲ್ಲಿ ಸೇರದಂತೆ ಅವರನ್ನು ಹದ್ದುಬಸ್ತಿನಲ್ಲಿಟ್ಟು ಕೊಳ್ಳಬೇಕು" ಎಂಬುದಾಗಿ ಅವರ ಮೇಲೆ ಒತ್ತಾಯ ಹಾಕಿತು. ಯೋಗನರಸಿಂಹಂ ಅದನ್ನು ಪ್ರತಿಭಟಿಸಿದರು. "ನನ್ನ ಸೇವೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆಯೆ ಹೊರತು, ಹೆಂಡತಿ ಮಕ್ಕಳ ಸೇವೆಯನ್ನೂ ಸರ್ಕಾರಕ್ಕೆ ಬರೆದು ಕೊಟ್ಟಿಲ್ಲ" ಎಂಬುದಾಗಿ ಆಗ್ಗೆ ಡಿಪಿಐ ಆಗಿದ್ದ ಎ. ಆರ್. ವಾಡಿಯಾ ಅವರಿಗೆ ಹೇಳಿದರು. ವಾಡಿಯಾ ಅವರು, "ಇದರ ಪರಿಣಾಮ ಏನಾಗುವುದು, ಬಲ್ಲೆಯಾ?" ಎಂದರು. ಯೋಗನರಸಿಂಹಂ "ಬಲ್ಲೆ, ಎಲ್ಲಕ್ಕೂ ಸಿದ್ಧವಾಗಿದ್ದೇನೆ" ಎಂದರು.

ವಾಡಿಯಾ ಯೋಗನರಸಿಂಹಂ ಅವರ ಧೈರ್ಯವನ್ನು ಮೆಚ್ಚಿಕೊಂಡರು; ಒಳ್ಳೆಯ ಮಾತನ್ನು ಆಡಿದರು. ಆದರೆ ಪರಿಣಾಮ ಕಷ್ಟವೇ ಆಯಿತು. ಯೋಗನರಸಿಂಹಂ ಅವರಿಗೆ ಬರಬೇಕಾದ ಬಡ್ತಿಗಳು ಬರಲಿಲ್ಲ. ವರ್ಷಗಟ್ಟಲೆ ಸಂಬಳ ಕೂಡ ಹೆಚ್ಚುತ್ತಿರಲಿಲ್ಲ. ಒಂದೊಂದು ಸಲ, "ಸಂಬಳ ಕಡಮೆ ಮಾಡಿ; ಆ ರೀತಿಯಾದರೂ ಅದು ಮತ್ತೆ ಏರುವ ಸಂತೋಷ ಕಾಣಬಹುದು" ಎಂದು ಅಧಿಕಾರಿಗಳಿಗೆ ಹೇಳಬೇಕು ಎನ್ನಿಸಿತು, ಯೋಗ ನರಸಿಂಹಂ ಅವರಿಗೆ.

ಸಂ. ಎಚ್. ವೈ. ಶಾರದಾಪ್ರಸಾದ್, 'ಸಂಗೀತದ ಸಿರಿ ಎಚ್. ಯೋಗನರಸಿಂಹಂ', ಬೆಂಗಳೂರು, ೧೯೯೮, ಪು. ೯೧



'ಉದಾರಚರಿತರು ಉದಾತ್ತಪ್ರಸಂಗಗಳು' ಒಂದು ಪ್ರಸಂಗ ಸಂಕಲನ. "ಈ ಸಂಕಲನದಲ್ಲಿಯ ಪ್ರಸಂಗಗಳಿಗೆ ಕಾರಣರಾದ ವ್ಯಕ್ತಿಗಳೆಲ್ಲ ಮಹನೀಯರು; ಇವರಲ್ಲಿ ಹಲವರು ಪರಿಚಿತರು, ಪ್ರಸಿದ್ಧರು; ಕೆಲವರು ಅಪರಿಚಿತರು, ಅಪ್ರಸಿದ್ಧರು. ಇಲ್ಲಿ ವ್ಯಕ್ತಿಗಳ ವಯಸ್ಸು ವಿದ್ಯೆ ಸ್ಥಾನ ಸಾಧನೆ ಖ್ಯಾತಿ ಇಂಥವುಗಳಿಗಿಂತ ಉದಾತ್ತ ಮಾನವೀಯ ಮೌಲ್ಯಗಳಿಗೆ ಪ್ರಾಶಸ್ತ್ಯ ದೊರೆತಿರುವ ಪ್ರಸಂಗಗಳೇ ಮುಖ್ಯವಾದವು. ಈ ಮೌಲ್ಯಗಳು ಪ್ರೀತಿ ವಿಶ್ವಾಸಗಳು, ಭಕ್ತಿ ವಾತ್ಸಲ್ಯಗಳು, ಶೀಲ ಶಿಸ್ತುಗಳು, ಪರಾನುಕಂಪೆ, ಕಷ್ಟಸಹಿಷ್ಣುತೆ, ಧರ್ಮಸಾಮರಸ್ಯ, ಸಹಾಯಬುದ್ಧಿ, ಸಭ್ಯತೆ, ಸಾತ್ತ್ವಿಕತೆ, ಸ್ನೇಹಪರತೆ, ಪ್ರಸನ್ನತೆ, ಸಂಯಮ, ಗುರು ಹಿರಿಯರಲ್ಲಿ ವಿನಯ ವಿಧೇಯತೆಗಳು, ಕಾಲನಿಷ್ಠೆ, ಸಾಮಾಜಿಕ ತತ್ತ್ವಬದ್ಧತೆ, ನಿರ್ಮೋಹಿತ್ವ, ನೈಚ್ಯಾನುಸಂಧಾನ, ವಿವಿಕ್ತತೆ, ಐಹಿಕ ಸುಖಲಾಲಸೆಗಳ ಜಿಹಾಸೆ, ವಿರಕ್ತಿ, ಆತ್ಮನಿಗ್ರಹ, ಪರೋಪಕಾರ ಹೀಗೆ ಹಲವು ಮುಖಗಳಲ್ಲಿ ಪ್ರಕಟವಾಗುತ್ತವೆ. ಈ ಮುಖಗಳಲ್ಲಿ ಯಾವುದೊಂದನ್ನಾಗಲಿ ಹಲವನ್ನಾಗಲಿ, ಏಕಕಾಲದಲ್ಲಿ ಆಗಲಿ ಬೇರೆಬೇರೆ ಸಂದರ್ಭಗಳಲ್ಲಿ ಆಗಲಿ ಬೆಳಗಿದ ಗುಣಸಂಪನ್ನರಾದ ಮಹನೀಯರು ಕರ್ನಾಟಕದ ಸುಪುತ್ರರಾಗಿದ್ದಾರೆ, ಭಾರತೀಯ ಸಂಸ್ಕೃತಿಯ ದೀಪಶಿಖೆಗಳಾಗಿದ್ದಾರೆ. ಅವರ ನಡೆ ನುಡಿಗಳನ್ನು ಪರಿಚಯ ಮಾಡಿಕೊಳ್ಳುವುದು ನಮ್ಮ ಶ್ರೇಯಸ್ಸಿಗೆ ಸಹಕಾರಿಯಾದುದಾಗಿದೆ. ಅದರಿಂದ ಬಹುವಾಗಿ ಪ್ರಯೋಜನವಿದೆ."

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

('ಅರಿಕೆ'ಯಿಂದ)

ವಿ. ಸೀ. ಸಂಪದ (ವಿ. ಸೀ. ಸಂಸ್ಮರಣ ವೇದಿಕೆ)

ನಂ.25, 'ವಸುಂಧರಾ', ಸಿಕ್ರಾಸ್, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು -85.